ಬುಧವಾರ, ಮಾರ್ಚ್ 27, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 87 | ಪುಟ 16
• www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ ಬಳಕೆದಾರರ ಮಾಹಿತಿಯನ್ನು ಡಿಫಾಲ್ಟ್ ಆಗಿ ಸಂಗ್ರಹಿಸುವಂಥ ಕುಕೀಗಳಿಗೆ ಗೂಗಲ್ ನಿರ್ಬಂಧ ಹೇರಲಿದೆ

ಆಳ-ಅಗಲ
'ಶುದ್ಧಹಸ್ತ'ರಾಗಲು ಬಿಜೆಪಿ ಸೇರಿದ ನಾಯಕರು

ಪ್ರಧಾನಿ ನಿವಾಸಕ್ಕೆ ಘೇರಾವ್ ಯತ್ನ 11

ಬೆಳೆ ಧಾರಣೆ ಏರಿಳಿತದಲ್ಲೂ 'ಮತ ಫಸಲು' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,470	22,004	₹68,440 (ಬೆಂಗಳೂರು)	₹76,300 (ಬೆಂಗಳೂರು)	83.29

ಸರ್ಕಾರದ ಕಾಮಗಾರಿ ಗುತ್ತಿಗೆ ಪಡೆಯಲು ಬಳಕೆ • ಎನ್‌ಇಎಸ್‌ಎಲ್ ಅಧಿಕಾರಿಗಳು ನೀಡಿದ್ದ ದೂರು

₹168 ಕೋಟಿಯ ಗ್ಯಾರಂಟಿ ನಕಲಿ

ಪ್ರಜಾವಾಣಿ ವಾರ್ತೆ

ಆಶೀಷ್ ಸಕ್ಸೇನಾ

ಬೆಂಗಳೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಕಾಮಗಾರಿಗಳನ್ನು ಗುತ್ತಿಗೆ ಪಡೆಯಲು ನಕಲಿ ಎಲೆಕ್ಟ್ರಾನಿಕ್ ಬ್ಯಾಂಕ್ ಗ್ಯಾರಂಟಿ (ಇ-ಬಿಜಿ) ನೀಡುತ್ತಿದ್ದ ಜಾಲ ಭೇದಿಸಿರುವ ಸಿಸಿಬಿ ಸೈಬರ್ ಕ್ರೈಂ ಪೊಲೀಸರು, ಲೆಕ್ಕ ಪರಿಶೋಧಕ (ಸಿಎ) ಆಶೀಷ್ ಸಕ್ಸೇನಾ ಅಲಿಯಾಸ್ ರಾಯ್ (45) ಎಂಬುವವರನ್ನು ಬಂಧಿಸಿದ್ದಾರೆ.

'ಉತ್ತರ ಪ್ರದೇಶದ ಆಶೀಷ್, ದೇಶದ ವಿವಿಧ ಗುತ್ತಿಗೆದಾರರಿಗೆ ನಕಲಿ ಇ-ಬ್ಯಾಂಕ್ ಗ್ಯಾರಂಟಿ ಮಾಡಿಕೊಡುತ್ತಿದ್ದರು. ಅದೇ ಮಾಹಿತಿಯನ್ನು ಗುತ್ತಿಗೆದಾರರು, ನ್ಯಾಷನಲ್ ಇ-ಗವರ್ನೆನ್ಸ್ ಸರ್ವೀಸಸ್ ಲಿಮಿಟೆಡ್ (ಎನ್‌ಇಎಸ್‌ಎಲ್) ಜಾಲತಾಣದಲ್ಲಿ ಅಪ್‌ಲೋಡ್ ಮಾಡುತ್ತಿದ್ದರು' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಬ್ಯಾಂಕ್ ಗ್ಯಾರಂಟಿಗಳನ್ನು ಪರಿಶೀಲಿಸಿ ಪ್ರಮಾಣೀಕರಿಸುವ ಜವಾಬ್ದಾರಿ ಎನ್‌ಇಎಸ್‌ಎಲ್ ಅಧಿಕಾರಿಗಳ ಮೇಲಿದೆ. ಇತ್ತೀಚೆಗೆ ದೇಶದ 11 ಗುತ್ತಿಗೆದಾರರು ಅಪ್‌ಲೋಡ್ ಮಾಡಿದ್ದ ₹168.13 ಕೋಟಿ ಮೌಲ್ಯದ ಇ-ಬ್ಯಾಂಕ್ ಗ್ಯಾರಂಟಿಯನ್ನು ಅಧಿಕಾರಿಗಳು ಪರಿಶೀಲಿಸಿದ್ದರು. ಐಸಿಐಸಿಐ ಬ್ಯಾಂಕ್ ಹಾಗೂ ಸೌತ್ ಇಂಡಿಯಾ ಬ್ಯಾಂಕ್ ಹೆಸರಿನಲ್ಲಿದ್ದ ಇ-ಬ್ಯಾಂಕ್ ಗ್ಯಾರಂಟಿಗಳು ನಕಲಿ ಎಂಬುದು ಗೊತ್ತಾಗಿತ್ತು. ಗುತ್ತಿಗೆದಾರರ ಪಟ್ಟಿ ಸಮೇತ ಫೆಬ್ರುವರಿ 7ರಂದು ಸೈಬರ್ ಕ್ರೈಂ ಠಾಣೆಗೆ ಅಧಿಕಾರಿಗಳು ದೂರು ನೀಡಿದ್ದರು' ಎಂದು ಹೇಳಿದರು.

ದೆಹಲಿ ವಿಮಾನ ನಿಲ್ದಾಣದಲ್ಲಿ ಬಂಧನ: 'ನಕಲಿ ಇ-ಬ್ಯಾಂಕ್ ಗ್ಯಾರಂಟಿ ಜಾಲದ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಕುವೈತ್‌ನಲ್ಲಿದ್ದ ಆರೋಪಿ ಆಶೀಷ್ ಸಕ್ಸೇನಾ ಬಂಧನಕ್ಕೆ ಲುಕ್ ಔಟ್ ನೋಟಿಸ್ ಹೊರಡಿಸಲಾಗಿತ್ತು. ಅವರು, ಮಾರ್ಚ್ 13ರಂದು ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ವಲಸೆ ಅಧಿಕಾರಿಗಳ ಸಹಾಯದಿಂದ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಲಾಗಿದೆ' ಎಂದು ಬಿ. ದಯಾನಂದ್ ತಿಳಿಸಿದರು.

'ಆರೋಪಿಯಿಂದ 2 ಲ್ಯಾಪ್‌ಟಾಪ್, 6 ಮೊಬೈಲ್, 1 ಪೆನ್‌ಡ್ರೈವ್, 10 ಬ್ಯಾಂಕ್ ಚೆಕ್ ಪುಸ್ತಕಗಳನ್ನು ಜಪ್ತಿ ಮಾಡಲಾಗಿದೆ. ಜಾಲದ ಇನ್ನೊಬ್ಬ ಆರೋಪಿ ತಲೆಮರೆಸಿಕೊಂಡಿದ್ದಾನೆ. ಇದೊಂದು ವ್ಯವಸ್ಥಿತ ಜಾಲವಾಗಿದ್ದು, ಈ ಬಗ್ಗೆ ಮತ್ತಷ್ಟು ಮಾಹಿತಿ ಸಂಗ್ರಹಿಸಲು ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಲೆಕ್ಕ ಪರಿಶೋಧಕರ ಮೂಲಕ ಪರಿಚಯ: 'ಆರೋಪಿ ಆಶೀಷ್, ದೇಶದ ವಿವಿಧ ಲೆಕ್ಕ ಪರಿಶೋಧಕರ ಜೊತೆ ಒಡನಾಟ ಹೊಂದಿದ್ದರು. ಅವರ ಮೂಲಕ ಗುತ್ತಿಗೆದಾರರನ್ನು ಪರಿಚಯ ಮಾಡಿಕೊಳ್ಳುತ್ತಿದ್ದರು.

5ನೇ ಪುಟ ನೋಡಿ

'₹100 ಕೋಟಿ ಗ್ಯಾರಂಟಿ ನೀಡಿದ್ದ ಗುತ್ತಿಗೆದಾರ'

'ಕೇಂದ್ರ ಸರ್ಕಾರದ ಕಾಮಗಾರಿಯೊಂದನ್ನು ಗುತ್ತಿಗೆ ಪಡೆಯಲು ಮುಂದಾಗಿದ್ದ ಕೇರಳದ ಗುತ್ತಿಗೆದಾರರೊಬ್ಬರು ಆರೋಪಿ ಆಶೀಷ್ ಅವರನ್ನು ಸಂಪರ್ಕಿಸಿದ್ದರು. ಅವರಿಗೆ ಕಮಿಷನ್ ನೀಡಿ, ₹ 100 ಕೋಟಿ ಮೌಲ್ಯದ ಇ-ಬ್ಯಾಂಕ್ ಗ್ಯಾರಂಟಿ ಪಡೆದಿದ್ದರು. ಅದನ್ನೇ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಇದೀಗ, ಅವರಿಂದಲೂ ಹೇಳಿಕೆ ಪಡೆಯಲಾಗಿದೆ. ಆಶೀಷ್ ತಮ್ಮನ್ನು ವಂಚಿಸಿರುವುದಾಗಿ ಅವರು ಹೇಳಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಏನಿದು ಇ–ಬ್ಯಾಂಕ್ ಗ್ಯಾರಂಟಿ?

'ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯಾವುದೇ ಕಾಮಗಾರಿಗಳ ಗುತ್ತಿಗೆ ಪಡೆಯಬೇಕಾದರೆ ಗುತ್ತಿಗೆದಾರರು ಕಡ್ಡಾಯವಾಗಿ ಇ–ಬ್ಯಾಂಕ್ ಗ್ಯಾರಂಟಿ ನೀಡಬೇಕು. ದೇಶದ 22 ಬ್ಯಾಂಕ್‌ಗಳಲ್ಲಿ ಇ–ಬ್ಯಾಂಕ್ ಗ್ಯಾರಂಟಿ ಸೇವೆ ಲಭ್ಯವಿದೆ. ಗುತ್ತಿಗೆದಾರ, ನಿಗದಿತ ಸಮಯಕ್ಕೆ ಕಾಮಗಾರಿ ಮುಗಿಸದಿದ್ದರೆ ಅಥವಾ ಕೆಲಸ ಪೂರ್ಣಗೊಳಿಸದಿದ್ದರೆ ಇ–ಬ್ಯಾಂಕ್ ಗ್ಯಾರಂಟಿ ಮೂಲಕ ಹಣ ಜಪ್ತಿ ಮಾಡಲು ಸರ್ಕಾರಕ್ಕೆ ಅವಕಾಶವಿರುತ್ತದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮಂಡ್ಯಕ್ಕೆ ಎಚ್‌ಡಿಕೆ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ಕುಮಾರಸ್ವಾಮಿ

ಬೆಂಗಳೂರು/ ಹಾಸನ: ಮಂಡ್ಯ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರೇ ಕಣಕ್ಕಿಳಿಯಲಿದ್ದಾರೆ. ಹಾಸನ ಕ್ಷೇತ್ರದಲ್ಲಿ ಪ್ರಜ್ವಲ್ ರೇವಣ್ಣ ಮತ್ತೊಮ್ಮೆ ಸ್ಪರ್ಧಿಸಲಿದ್ದು, ಕೋಲಾರ ಕ್ಷೇತ್ರದಲ್ಲಿ ಎಂ. ಮಲ್ಲೇಶ್ ಬಾಬು ಅವರನ್ನು ಕಣಕ್ಕಿಳಿಸಲಾಗುತ್ತಿದೆ.

ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಪಕ್ಷದ 'ಕೋರ್ ಕಮಿಟಿ' ಅಧ್ಯಕ್ಷರು ಮತ್ತು ಸದಸ್ಯರ ಜತೆ ಕುಮಾರಸ್ವಾಮಿ ಅವರು ಬೆಂಗಳೂರಿನಲ್ಲಿ ಮಂಗಳವಾರ ಮಧ್ಯಾಹ್ನ ಸಭೆ ನಡೆಸುತ್ತಿದ್ದಾಗಲೇ ಹಾಸನ ಪ್ರವಾಸದಲ್ಲಿದ್ದ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರು ಮೂರೂ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ಬಹಿರಂಗ ಸಭೆಯಲ್ಲಿ ಪ್ರಕಟಿಸಿದರು.

4Aನೇ ಪುಟ ನೋಡಿ

ಜೆಡಿಎಸ್ ಟಿಕೆಟ್

- ಹಾಸನಕ್ಕೆ ಪ್ರಜ್ವಲ್, ಕೋಲಾರಕ್ಕೆ ಮಲ್ಲೇಶ್ ಬಾಬು
- ಕುಟುಂಬಸ್ಥರಿಗೆ ಎರಡು, ಕಾರ್ಯಕರ್ತರಿಗೆ ಒಂದು

ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ: ಇಬ್ಬರು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆಯಲ್ಲಿ ನಡೆದಿದ್ದ ಬಾಂಬ್ ಸ್ಫೋಟದ ತನಿಖೆ ನಡೆಸುತ್ತಿರುವ ಎನ್‌ಐಎ ಅಧಿಕಾರಿಗಳು, ನಗರದ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಮಾರ್ಚ್ 1ರಂದು ನಡೆದಿದ್ದ ಸ್ಫೋಟದಲ್ಲಿ ಭಾಗಿಯಾಗಿರುವ ಶಂಕಿತನ ಬಗ್ಗೆ ಮಾಹಿತಿ ಸಂಗ್ರಹಿಸಿರುವ ಅಧಿಕಾರಿಗಳು, ಆತನ ಜೊತೆ ಒಡನಾಟ ಹೊಂದಿದ್ದ ವ್ಯಕ್ತಿಗಳನ್ನು ಒಬ್ಬೊಬ್ಬರಾಗಿ ಪತ್ತೆ ಮಾಡುತ್ತಿದ್ದಾರೆ.

'ಬಾಂಬ್ ಇರಿಸಿದ್ದ ಶಂಕಿತನ ಜೊತೆ ನಂಟು ಹೊಂದಿದ್ದ ಆರೋಪದಡಿ ನಗರದ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ಆದರೆ, ಇವರಿಂದ ಸದ್ಯಕ್ಕೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಇನ್ನು ಹಲವರ ಪಟ್ಟಿ ಸಿದ್ಧಪಡಿಸಲಾಗಿದೆ. ಎಲ್ಲರಿಂದಲೂ ಹೇಳಿಕೆ ಪಡೆಯಲಾಗುವುದು' ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

'ಸಂಚು ರೂಪಿಸಿ ಕೃತ್ಯ ಎಸಗಲಾಗಿದೆ. ಬಾಂಬ್ ಸ್ಫೋಟದ ನಂತರ ಶಂಕಿತ, ತಾನು ಅಂದುಕೊಂಡಂತೆ ನಿರ್ದಿಷ್ಟ ಜಾಗಕ್ಕೆ ತಲುಪಿದ್ದಾನೆ. ಹೀಗಾಗಿ, ಆತನ ಜೊತೆ ಒಡನಾಟ ಹೊಂದಿರುವ ವ್ಯಕ್ತಿಗಳ ಮೇಲೆ ನಿಗಾ ವಹಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

VIT
Vellore Institute of Technology
(Deemed to be University under section 3 of UGC Act, 1956)
WELCOME TO THE
UNIVERSITY DAY
OF VIT, VELLORE
27TH MARCH, 2024 - WEDNESDAY
CHIEF GUEST

Prof. T. G. SITHARAM
Chairman, All India Council for Technical Education (AICTE)
DR. G. VISWANATHAN
Founder & Chancellor
will preside
www.vit.ac.in

ಹಣ ಸಂದಾಯದ ಅತ್ಯುತ್ತಮ ಉಪಾಯ...
ಇಂದೇ ಡಿಜಿಟಲ್ ಆಗಿರಿ !
LIC
ಲೈಫ್ ಇನ್ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ

ತ್ವರಿತ ಹಾಗೂ ಸುಲಭ ಪ್ರೀಮಿಯಮ್ ವಹಿವಾಟುಗಳು

ಎಲ್‌ಐಸಿ ಕಸ್ಟಮರ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ
www.licindia.in: ಈ ಸೇವೆಗಳು ಲಭ್ಯವಿವೆ – ರಿನ್ಯೂವಲ್ ಪ್ರೀಮಿಯಂ, ಅಡ್ವಾನ್ಸ್ ಪ್ರೀಮಿಯಂ, ಸಾಲದ ಬಡ್ಡಿ, ಸಾಲ ಮರುಪಾವತಿ ಇವುಗಳನ್ನು ಇಂಟರ್‌ನೆಟ್ ಬ್ಯಾಂಕಿಂಗ್, ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್, BHIM UPI ಮೂಲಕ ಸಂದಾಯ ಮಾಡಬಹುದು.

ಮೊಬೈಲ್ ಅಪ್ಲಿಕೇಶನ್ಸ್
ನಿಮ್ಮ ಎಲ್‌ಐಸಿ ಪ್ರೀಮಿಯಂ ಅನ್ನು ಎಲ್‌ಐಸಿಯ ಮೊಬೈಲ್ ಆ್ಯಪ್ ''ಎಲ್‌ಐಸಿ ಡಿಜಿಟಲ್'' ಮೂಲಕ ಮತ್ತು BHIM, ಕ್ರೆಡ್, ಗೂಗಲ್ ಪೇ, ಅಮೆಝೋನ್ ಪೇ, ಫೋನ್ ಪೇ, ಪೇಟಿಎಮ್, ಟಾಟಾ ನಿಯೂ, ಫ್ರೀ ಚಾರ್ಜ್, ಮೊಬಿಕ್ವಿಕ್, ಇತರ ಮೊಬೈಲ್ ಆ್ಯಪ್ಸ್ ಮತ್ತು ಕಲೆಕ್ಟಿಂಗ್ ಯುನಿಟ್‌ಗಳನ್ನು ಬಳಸಿಕೊಂಡು ಇಂಟಿಗ್ರೇಟೆಡ್ ಬಿಬಿಪಿಎಸ್ ಪ್ಲ್ಯಾಟ್‌ಫಾರ್ಮ್ ಮೂಲಕ ಸಂದಾಯ ಮಾಡಬಹುದು.
ಬಿಲ್‌ಡೆಸ್ಕ್ ಮೂಲಕ ಶಕ್ತಿಯುತ ಬಿಬಿಪಿಎಸ್ ಪೇಮೆಂಟ್ಸ್

LIC/P1/2023-24/26/KAN

ವಿವರಗಳಿಗಾಗಿ ನಿಮ್ಮ ಏಜಂಟರನ್ನು/ಸಮೀಪದ ಎಲ್‌ಐಸಿ ಶಾಖೆಯನ್ನು ಸಂಪರ್ಕಿಸಿರಿ ಅಥವಾ ನಿಮ್ಮ ನಗರದ ಹೆಸರನ್ನು 56767474ಗೆ SMS ಮಾಡಿ | IRDAI Regn No.: 512
ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ LIC digital | ಸಂದರ್ಶಿಸಿರಿ: licindia.in | ಕಾಲ್ ಸೆಂಟರ್ ಸರ್ವಿಸ್ (022) 6827 6827 | ನಮ್ಮ ವಾಟ್ಸ್‌ಆ್ಯಪ್ ನಂ. 8976862090 'Hi' ಹೇಳಿರಿ | ನಮ್ಮನ್ನು ಫಾಲೋ ಮಾಡಿರಿ: LIC India Forever

ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಇನ್ಶೂರನ್ಸ್ ಪಾಲಿಸಿಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆಗಳಂತ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಇಂಥ ಫೋನ್ ಕಾಲ್‌ಗಳನ್ನು ಪಡೆಯುವ ಸಾರ್ವಜನಿಕರು ಪೊಲೀಸರಲ್ಲಿ ದೂರು ನೀಡಬೇಕಾಗಿ ವಿನಂತಿ. ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಎಚ್ಚರಿಕೆಯಿಂದ ಓದಿರಿ.

₹ 50 ಸಾವಿರ ಲಂಚ: ಲೋಕಾಯುಕ್ತ ಬಲೆಗೆ ಚಾಲಕ, ಹೆಡ್‌ಕಾನ್‌ಸ್ಟೆಬಲ್

ಗಂಗ ಹನುಮಯ್ಯ

ನಾಗರಾಜ್

ಬೆಂಗಳೂರು: ಗ್ಯಾಸ್ ಏಜೆನ್ಸಿಯೊಂದರ ಮಾಲೀಕರನ್ನು ಬೆದರಿಸಿ ₹ 50,000 ಲಂಚ ಪಡೆದ ಪೀಣ್ಯ ಉಪ ವಿಭಾಗದ ಎಸಿಪಿ ವಾಹನ ಚಾಲಕ ನಾಗರಾಜ್ ಮತ್ತು ಪೀಣ್ಯ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಗಂಗಹನುಮಯ್ಯ ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಸಂಜೆ ಬಂಧಿಸಿದ್ದಾರೆ.

ಸುಂಕದಕಟ್ಟೆಯ ಮಾರುತಿನಗರ ನಿವಾಸಿ ಚೇತನ್ ಎಂಬುವವರು ಪೀಣ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗ್ಯಾಸ್ ಏಜೆನ್ಸಿ ಹೊಂದಿದ್ದರು. ಗ್ಯಾಸ್ ಸಿಲಿಂಡರ್ ವಿತರಣೆ ಮುಂದುವರಿಸಲು ₹2 ಲಕ್ಷ ಲಂಚ ಕೊಡುವಂತೆ ಹಾಗೂ ಮಾಸಿಕ ಲಂಚವನ್ನೂ ನೀಡುವಂತೆ ಆರೋಪಿಗಳು ಬೇಡಿಕೆ ಇಟ್ಟಿದ್ದರು.

ದೂರುದಾರರು ಆರೋಪಿಗಳ ಜತೆ ಮಾತುಕತೆ ನಡೆಸಿದ್ದರು. ಆಗ, ಮೊದಲ ಕಂತಿನಲ್ಲಿ ₹ 50,000 ನೀಡುವಂತೆ ಆರೋಪಿಗಳು ಸೂಚಿಸಿದ್ದರು. ಈ ಬಗ್ಗೆ ಚೇತನ್ ಲೋಕಾಯುಕ್ತದ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ-2ಕ್ಕೆ ದೂರು ನೀಡಿದ್ದರು.

ಯಶವಂತಪುರದ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆ ಸಮೀಪದ ಟೀ ಅಂಗಡಿಯೊಂದರ ಬಳಿ ಮಂಗಳವಾರ ಸಂಜೆ ಆರೋಪಿಗಳನ್ನು ಭೇಟಿಮಾಡಿದ ದೂರುದಾರರು, ₹ 50,000 ನಗದು ತಲುಪಿಸಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಆರೋಪಿಗಳನ್ನು ಬಂಧಿಸಿದರು.

ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ-2 ಕೋನ ವಂಶಿ ಕೃಷ್ಣ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಡಿವೈಎಸ್‌ಪಿ ಉಮಾದೇವಿ, ಇನ್‌ಸ್ಪೆಕ್ಟರ್ ವಿಜಯ್ ಕೃಷ್ಣ ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಬಿಇ-ಟಿಎಲ್‌ಎಸಿ-ಆರ್‌ಎಂಪಿಯು-ಸಿಎಎಂಸಿ-24-27-1

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಮೂರು ವರ್ಷಗಳಿಗೆ	ರೂ. 56,41,01,326.06

ನೈಋತ್ಯ ರೈಲ್ವೆಯ ಬೆಂಗಳೂರು, ಹುಬ್ಬಳ್ಳಿ ಮತ್ತು ಮೈಸೂರು ವಿಭಾಗಗಳ ಎಸಿ ಕೋಚ್‌ಗಳು (ಸಾಂಪ್ರದಾಯಿಕ ಮತ್ತು ಎಲ್‌ಹೆಚ್‌ಬಿ ವಿಧ) ಮತ್ತು ಹುಬ್ಬಳ್ಳಿ ದಕ್ಷಿಣ ಮತ್ತು ಮೈಸೂರು ದಕ್ಷಿಣ ಇಲ್ಲಿ ಎಸಿ ಕೋಚ್‌ಗಳ ಪಿಓಹೆಚ್/ಎಸ್‌ಎಸ್-2/ಎಸ್‌ಎಸ್-3 ಮತ್ತು ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಟರ್ಮಿನಲ್ ಡಿಪೋದಲ್ಲಿ ಪ್ರಾಥಮಿಕ ರೈಲುಗಳ ಎಸಿ ಕೋಚ್‌ಗಳ ಎಸ್ಕಾರ್ಟಿಂಗ್ ಮತ್ತು ಬೆಂಗಳೂರು ವಿಭಾಗದಲ್ಲಿನ ವಿಶೇಷ ರೈಲುಗಳ ಆರ್‌ಎಂಪಿಯು ಮತ್ತು ಅದರ ಕಂಟ್ರೋಲ್ ಪ್ಯಾನೆಲ್‌ನ ಕೇಂದ್ರೀಕೃತ ಸಮಗ್ರ ನಿರ್ವಹಣಾ ಗುತ್ತಿಗೆ

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **12-04-2024 ರಂದು 15:00 ಗಂಟೆಯವರೆಗೆ**

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್
ಪಿಯುಬಿ/776/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24 ಬೆಂಗಳೂರು

South Western Railway - SWR | SWRRLY | SWRRLY

ಐಸಿಎಆರ್-ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ

ಆಡುಗೋಡಿ, ಬೆಂಗಳೂರು-560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ

ಎನ್‌ಐಎಎನ್‌ಪಿ/ಎಡಿವಿ-ಪ್ರಾಜೆಕ್ಟ್-3-ಎಸ್ಟಾ/2024 ದಿನಾಂಕ: 25-03-2024

ಐಸಿಎಆರ್ - ರಾಷ್ಟ್ರೀಯ ಯೋಜನೆ ಅಡಿಯಲ್ಲಿನ **"ಸ್ಪರ್ಮ್ ಟ್ರಾನ್ಸಿಸ್ಕ್ರಿಪ್ಟ್ಸ್ ಸಿಗ್ನೇಚರ್ಸ್ ಆಧಾರದಲ್ಲಿ ಬಫೆಲೊ ಬುಲ್ ಸಂತನೋತ್ಪತ್ತಿ ಡಯಾಗ್ನೋಸ್ಟಿಕ್ ಚಿಪ್ ಅಭಿವೃದ್ಧಿ"** ಎಂಬ ಶೀರ್ಷಿಕೆಯುಳ್ಳ ಯೋಜನೆಯಲ್ಲಿರುವ ಒಂದು ಸೀನಿಯರ್ ರಿಸರ್ಚ್ ಫೆಲೊ ಹುದ್ದೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹತೆ, ಸಂಭಾವನೆ ಮುಂತಾದ ವಿವರಗಳು ಸಂಸ್ಥೆಯ **www.nianp.res.in** ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತವೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು, ಐಸಿಎಆರ್-ನ್ಯಾಷನಲ್ ಫೆಲೋ ಮತ್ತು ಯೋಜನೆಯ ಪ್ರಭಾರಿಯೂ ಆಗಿರುವ ಡಾ. ಎಸ್. ಸೆಲ್ವರಾಜು ಇವರ **selvaraju.s@icar.gov.in** ಇಮೇಲ್ ವಿಳಾಸಕ್ಕೆ 16-04-2024 ರೊಳಗೆ ರವಾನಿಸಬಹುದು.

ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಇಮೇಲ್/ ಟೆಲಿಫೋನ್ ಮುಖಾಂತರ ಐಸಿಎಆರ್-ಎನ್‌ಐಎಎನ್‌ಪಿ, ಬೆಂಗಳೂರು ಇಲ್ಲಿ ಸಂದರ್ಶನಕ್ಕೆ ಹಾಜರಾಗಲು ಮಾಹಿತಿ ನೀಡಲಾಗುತ್ತದೆ.

ಸಹಿ/- ಎಸ್ ಶಶಿಕಲಾ, ಆಡಳಿತಾಧಿಕಾರಿ

ಟಿಕೆಟ್ ವಿಚಾರಕ್ಕೆ ಜಗಳ: ಕರ್ತವ್ಯದಿಂದ ಅಮಾನತುಗೊಳಿಸಿ ಬಿಎಂಟಿಸಿ ಆದೇಶ

ಯುವತಿ ಮೇಲೆ ಹಲ್ಲೆ: ನಿರ್ವಾಹಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಯುವತಿ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆ ಯೊಡ್ಡಿದ್ದ ಆರೋಪದಡಿ ನಿರ್ವಾಹಕ ಹೊನ್ನಪ್ಪ ಅಗಸರ ಅವರನ್ನು ಸಿದ್ದಾಪುರ ಪೊಲೀಸರು ಬಂಧಿಸಿದ್ದಾರೆ.

ಈ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿದ್ದ ಬಿಎಂಟಿಸಿ ಅಧಿಕಾರಿಗಳು, ಹೊನ್ನಪ್ಪ ಅವರನ್ನು ಸೇವೆಯಿಂದ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

'ಮಂಗಳವಾರ ಬೆಳಿಗ್ಗೆ ನಡೆದಿರುವ ಘಟನೆ ಸಂಬಂಧ ಸಂತ್ರಸ್ತೆ ತಂಜುಮ್ (24) ಅವರು ದೂರು ನೀಡಿದ್ದಾರೆ. ಲೈಂಗಿಕ ಕಿರುಕುಳ (ಐಪಿಸಿ 354), ಹಲ್ಲೆ (ಐಪಿಸಿ 323), ಜೀವ ಬೆದರಿಕೆ (ಐಪಿಸಿ 506) ಹಾಗೂ ಅಶ್ಲೀಲ ಪದ ಅಥವಾ ಸಂಜ್ಞೆ ಮೂಲಕ ಮಹಿಳೆಯ ಗೌರವಕ್ಕೆ ಧಕ್ಕೆ ತಂದ (ಐಪಿಸಿ 509) ಆರೋಪದಡಿ ನಿರ್ವಾಹಕ ಹೊನ್ನಪ್ಪ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ದಕ್ಷಿಣ ವಿಭಾಗದ ಡಿಸಿಪಿ (ಪ್ರಭಾರ) ಶಿವಪ್ರಕಾಶ್ ದೇವರಾಜ್ ತಿಳಿಸಿದರು.

ಅಪರಾಧ ಸುದ್ದಿ

ಟಿಕೆಟ್ ನೀಡಲು ನಿರಾಕರಿಸಿದ್ದ ನಿರ್ವಾಹಕ: 'ತಂಜುಮ್, ಕಮರ್ಷಿಯಲ್ ಸ್ಟ್ರೀಟ್‌ನ ಮಳಿಗೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಬಿಳೇಕಹಳ್ಳಿಯ ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ವಾಸವಿದ್ದಾರೆ. ನಿತ್ಯವೂ ಬಿಳೇಕಹಳ್ಳಿಯಿಂದ ಶಿವಾಜಿನಗರ ನಿಲ್ದಾಣಕ್ಕೆ ಬಿಎಂಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನದಿಂದ ಶಿವಾಜಿನಗರಕ್ಕೆ (ಮಾರ್ಗಸಂಖ್ಯೆ 368) ಬಸ್ ಹೊರಟಿತ್ತು. ಬಿಳೇಕಹಳ್ಳಿ ತಂಗುದಾಣದಲ್ಲಿ ಯುವತಿ ಬಸ್ ಹತ್ತಿದ್ದರು. ಟಿಕೆಟ್ ನೀಡುವಂತೆ ಯುವತಿ ಕೋರಿದ್ದರು. ಟಿಕೆಟ್ ನೀಡಲು ನಿರಾಕರಿಸಿದ್ದ ನಿರ್ವಾಹಕ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದನೆಂಬ ಆರೋಪವಿದೆ. ನಿರ್ವಾಹಕನ ವರ್ತನೆಯನ್ನು ಪ್ರಶ್ನಿಸಿದ್ದ ಯುವತಿ ಆತನ ಕಪಾಳಕ್ಕೆ ಹೊಡೆದಿದ್ದರು ಎಂದು ಗೊತ್ತಾಗಿದೆ. ಇದರಿಂದ ಸಿಟ್ಟಾಗಿದ್ದ ನಿರ್ವಾಹಕ, ಯುವತಿ ಮೇಲೆ ಹಲ್ಲೆ ಮಾಡಿದ್ದ. ತಳ್ಳಾಡಿ ಲೈಂಗಿಕ ಕಿರುಕುಳ ನೀಡಿದ್ದ. ಯುವತಿ ರಕ್ಷಣೆಗೆ ಹೋಗಿದ್ದ ಸಹ ಪ್ರಯಾಣಿಕರ ಮೇಲೂ ಹರಿಹಾಯ್ದಿದ್ದ. ಈ ದೃಶ್ಯವನ್ನು ಪ್ರಯಾಣಿಕರೊಬ್ಬರು ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿದ್ದರು. ಅದೇ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು' ಎಂದು ಪೊಲೀಸರು ತಿಳಿಸಿದರು.

'ನಿರ್ವಾಹಕ ಹೊನ್ನಪ್ಪ, ಕೊತ್ತನೂರು ದಿಣ್ಣೆ ಡಿಪೊದ ಬಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದನೆಂದು ಗೊತ್ತಾಗಿದೆ. ಈತನ ಹಿನ್ನೆಲೆ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸಹ ಪ್ರಯಾಣಿಕರನ್ನೂ ಪತ್ತೆ ಮಾಡಿ ಹೇಳಿಕೆ ಪಡೆಯಬೇಕಿದೆ' ಎಂದರು.

'ಮಹಿಳೆಯರ ಸುರಕ್ಷತೆಗೆ ಕ್ರಮ'

'ಬಿಎಂಟಿಸಿ ಬಸ್‌ಗಳಲ್ಲಿ ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಯುವತಿ ಮೇಲಿನ ಹಲ್ಲೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಹಲ್ಲೆಯ ವಿಡಿಯೊ ಆಧರಿಸಿ ನಿರ್ವಾಹಕ ಹೊನ್ನಪ್ಪನನ್ನು ಸೇವೆಯಿಂದ ಅಮಾನತು ಮಾಡಲಾಗಿದೆ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅಧಿಕಾರಿಗಳು, 'ಹೊರ ರಾಜ್ಯದ ಯುವತಿ ಹಾಗೂ ನಿರ್ವಾಹಕ ನಡುವೆ ಟಿಕೆಟ್ ನೀಡುವ ವಿಚಾರದಲ್ಲಿ ಮಾತಿನ ಚಕಮಕಿ ನಡೆದಿದೆ. ಇದೇ ಸಂದರ್ಭದಲ್ಲಿ ನಿರ್ವಾಹಕ, ಯುವತಿ ಮೇಲೆ ಹಲ್ಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದಿದ್ದಾರೆ.

'ಬಸ್‌ಗಳಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಆಸನಗಳಿವೆ. ಪ್ರತ್ಯೇಕ ಬಾಗಿಲು, ಪ್ಯಾನಿಕ್ ಬಟನ್ ಸೌಲಭ್ಯವಿದೆ. ಸಿ.ಸಿ.ಟಿ.ವಿ ಕ್ಯಾಮೆರಾ ಸಹ ಅಳವಡಿಸಲಾಗಿದೆ. ಸಹಾಯವಾಣಿ ಸಹ ಇದೆ. ಮಹಿಳಾ ಪ್ರಯಾಣಿಕರ ಸುರಕ್ಷತೆಗೆ ಸಂಬಂಧಪಟ್ಟಂತೆ 27 ಸಾವಿರ ಸಿಬ್ಬಂದಿಗೆ ಲಿಂಗ ಸಂವೇದನಾ ತರಬೇತಿ ನೀಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

₹ 17 ಲಕ್ಷ ಮೌಲ್ಯದ 65 ಮೊಬೈಲ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಾರ್ವಜನಿಕ ಸ್ಥಳ ಹಾಗೂ ಬಸ್‌ಗಳಲ್ಲಿ ಜನರ ಮೊಬೈಲ್ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಂಧಿಸಿರುವ ಎಚ್‌ಎಎಲ್ ಠಾಣೆ ಪೊಲೀಸರು, ಅವರಿಂದ ₹ 17 ಲಕ್ಷ ಮೌಲ್ಯದ 65 ಮೊಬೈಲ್ ಜಪ್ತಿ ಮಾಡಿದ್ದಾರೆ.

'ಬಸ್ ಪ್ರಯಾಣಿಕರ ಮೊಬೈಲ್ ಕಳ್ಳತನ ಬಗ್ಗೆ ದೂರು ದಾಖಲಾಗಿತ್ತು. ತನಿಖೆ ಕೈಗೊಂಡು ಮೂವರನ್ನು ಬಂಧಿಸಲಾಗಿದೆ. ನಗರದ ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಗಳು, ಪ್ರಯಾಣಿಕರು ಹೆಚ್ಚಿರುತ್ತಿದ್ದ ಬಸ್ ಹತ್ತುತ್ತಿದ್ದರು. ನೂಕುನುಗ್ಗಲಿನಲ್ಲಿ ಪ್ರಯಾಣಿಕರ ಮೊಬೈಲ್ ಕದ್ದು ಪರಾರಿಯಾಗುತ್ತಿದ್ದರು. ಸಿಮ್ ಕಾರ್ಡ್ ತೆಗೆದು ಎಸೆಯುತ್ತಿದ್ದರು. ನಂತರ, ಮೊಬೈಲ್‌ಗಳನ್ನು ಕಡಿಮೆ ಬೆಲೆಗೆ ಮಾರುತ್ತಿದ್ದರು. ಬಂದ ಹಣವನ್ನು ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದರು. ಹಣ ಖಾಲಿಯಾಗುತ್ತಿದ್ದಂತೆ ಪುನಃ ಕಳ್ಳತನಕ್ಕೆ ಇಳಿಯುತ್ತಿದ್ದರು' ಎಂದು ತಿಳಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

NIRMAN INTERNATIONAL PUBLIC SCHOOL- CBSE,7th Block, Vishweshwaraiah Layout, Bangalore-91 Requires qualified TAECHERS for all subjects from Nursery to Grade-X. Contact: 8123030731/ 9986055970.

ELITE PUBLIC SCHOOL Kempegowda layout Laggere Bengaluru requires MSc (Phy) B Ed, BA B Ed (Social), MCA/ BCA qualified Teachers. 9447727526/ 9980200444

Vidya Sanskaar International Public School
(Affiliated to Central Board of Secondary Education)
Machohalli Gate, Magadi Main Road, Bengaluru - 91
Recruitment: 2024-25
- Coordinators (Pre-Primary & Primary): PG + B.Ed
- High School Teachers (Female):
  - Computer Science - BE/BCA/MCA/M.Sc
  - Social Science - BA/MA + B.Ed
  - Mathematics - B.Sc/M.Sc + B.Ed
  - English - BA/MA + B.Ed
  - Science (Phy, Chem, Bio) - B.Sc/M.Sc + B.Ed
- Primary Teachers (Female):
  - Mathematics - B.Sc/M.Sc + B.Ed
  - Science - B.Sc/M.Sc + B.Ed
  - English - BA/MA + B.Ed

Eligible Candidates can send their resumes before 30th of April 2024
shr@vidyasanskaar.edu.in

ARVIND Residential School & PU College, Kunigal
Ph: 08132-210000/ 01. Mob: 9945210041/ 9483683002.
Website: www.arvindinternationalschool.com www.arvindpucollege.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
- PRINCIPAL (School and PU College)
- PU LECTURER (Science, PCMB, CS)
- RESIDENTIAL CO-ORDINATOR
  Sound knowledge of Hostel Administration
- Nursery/ Primary/ Middle School/ High school Teachers (ICSE/ CBSE & STATE)
- Warden (M/F), Nurse (F), Cooks, PE Teachers

Experienced in all streams with desired qualification
Send your resume with recent passport size photo to airsjobs@gmail.com within 7 days
THOSE WHO HAVE ALREADY APPLIED NEED NOT APPLY AGAIN

WALK-IN INTERVIEW CNC OPERATORS
Candidates with 1-2 years experience on any CNC Turning and Machining Centre can appear for a walk in interview with all details on 30.03.2024 @ 11:00 am at
M/s VINAYAKA CNC CENTRE PVT LTD.,
A-347 , 9th Main, 2nd Stage, Peenya Indl., Estate, Bangalore-560 058. Ph: 080 4149 2661

Multiple Vacancy

INDIRANAGAR CLUB
9th Main, 4th Cross
HAL 2nd Stage, Bangalore -08
REQUIRES
GENERAL MANAGER
Eligibility: 1. Minimum Degree Holder, 2. Experience in Management, 3. Liasoning with Government Agencies. 4. Communication in local language (Kannada)
EXECUTIVE
Accounts, Office and Reception
Eligibility: Minimum Degree Holder - B Com / BA
SECURITY SERVICES
Prescribed tender forms can be obtained from the Club Office from 28.03.2024 to 07.04.2024 between 10am to 5pm. Cost of the tender formRs. 500/-
Sd/- B.N.S. Reddy IPS (R)
President, Indiranagar Club

WANTED RECEPTIONIST and Marketing Executive for a Realestate company @ Hebbal. Salary 15-20K +Incentive. Contact:9538000065

विश्व वेंकटेश्वर — ವಿಶ್ವ ವೆಂಕಟೇಶ್ವರ ಇಂಟರ್‌ನ್ಯಾಷನಲ್ ಸ್ಕೂಲ್
V.V.INTERNATIONAL SCHOOL
Affiliated to CBSE upto Senior Secondary, New Delhi, Affiliation Number 830685
V. V. PU & DEGREE COLLEGE
Invites applications for Principal/ Vice Principal (School), Principal/Vice Principal (PU & Degree College), Co-ordinators (Pre-Primary, Primary & Secondary), Trained Graduates, Post Graduate Teachers & Lecturers for PU & Degree - (English, Kannada, Sanskrit, Social Science, Hindi, Physics, Chemistry, Mathematics, Biology, Economics, Business Studies, Accountancy, Computer Science, Statistics, Art & Craft, Music, Dance, Physical Instructor, Librarian), Primary Teachers (all subjects), Pre-Primary - NTT/ ECC. Ed / Montessori.
Call: 9448 516 410 / 9141 300 990 / 9141 300 991 / 9035 050 017
Sy. No. 72, Tirumala Garden, Kodipalya, Kengeri, Bengaluru - 560 060
E-mail: tirumalabalaji75@gmail.com | kbcpucollege@gmail.com
www.vishwavenkateswaracollege.com | www.vvinternationalschool.com | www.kbcpucollege.com

SREE SARASWATHI VIDYA MANDIRA
No.9, Vani Vilas Road, VV Puram, Bangalore-04
Ph:080 41277700/ 41324223
Website: www.ssvm.ac.in
Walk-in Interview on 1st April 2024 (Mon) betn 9.30 am & 2 pm
REQUIRE qualified, trained & experienced TEACHERS for
CBSE
1. ALL SUBJECTS & P.E. TEACHERS
STATE
1. ALL SUBJECTS & P.E. TEACHERS
For SOMANAHALLI(State Board)
Maths, Physics, Chemistry Biology, Computer Science, Hindi & P.E. Teacher

CAMLIN HIGH SCHOOL
ESTD. 1981
State Board Nursery to X
6th 'C' Main, 4th Cross, Near 7th Main Bus Stop Hampinagar, Vijayanagar 2nd Stage, Bengaluru-560104
Phone : 080-23301363
REQUIRED
TRAINED HEADMISTRESS / PRINCIPAL
10 Years of Teaching Experience.
WALK IN INTERVIEW BETWEEN 11.00 am to 12.30 pm on 31st MARCH 2024

KARNATAKA CHINMAYA SEVA TRUST
CHINMAYA VIDYALAYA
#16 St. John's Road Cross, Ulsoor, Bengaluru – 560 042.
Serving society since 1982
A school to train children with good academics & character
THE VIDYALAYA IS LOOKING FOR THE FOLLOWING
PRINCIPAL/VICE PRINCIPAL
A teacher with over ten years of relevant experience to provide leadership to 40 teachers & 1000 students
TEACHERS
Graduates / Post graduates with professional qualification & teaching experience to teach High and Middle school students in
Mathematics, Computer Science, Social Science
Hindi, Kannada, English & Science
FINANCE MANAGER
M Com/ B Com with accounting & Finance experience
OFFICE ASSISTANT
Graduate
Upper age limit 50 years for all posts except
Principal / Vice Principal - 55 years
Excellent working conditions and good remuneration.
Apply with full details within 15th April 2024
chinmayavidyalayablr@gmail.com
Phone: 9483398818, 9141082149

AKSHOBHYA PUBLIC SCHOOL
Hosakerehalli, Bangalore-560085.
Ph:080-26423292, 8884449038
WE ARE HIRING
Experienced, Qualified Teachers for the following Posts:
ENGLISH-04, HINDI-02, SANSKRIT-02, MATHS-02, SOCIAL SCIENCE-02, ACCOUNTANT-02, SCIENCE-02, P.E.-02,
Qualification: Degree+B.Ed. (Compulsory) / B.P.Ed., Salary: 18000/- Per Month
Interested Candidates can mail their resumes to: akshobhyapublicschool@gmail.com

JYOTI NIVAS PRE- UNIVERSITY COLLEGE
HOSUR ROAD, BANGALORE– 95
Ph: 25506100
E-Mail Id:info@jnpuc.org
Requires:
Lecturers in Chemistry, Psychology, English and Kannada .
Qualification: PG First Class with B.Ed Preferred
Electrician:
Minimum qualification - PUC with Certification in Electricals
Apply to the principal on or before 12.04.2024

SVR PRE-UNIVERSITY COLLEGE
HSR Layout Sector 2, Bangalore 560102
www.svrinstitutions.com
Requires **LECTURER in Economics** with prior experience.
Call: 9886461664 / 9448883586
Send Resume to: svrfaculty@gmail.com

REQUIRES
- PRINCIPAL
- PROFESSORS
- ASSO.PROFESSORS
- ASST.PROFESSOR
- P.G. GUIDES
- LECTURERS

K.T.G COLLEGE OF PHYSIOTHERAPY
Hegganahalli Cross, Sunkadakatte, Peenya Road, Bangalore-91
9845051023, 7089226714
8148606859
ktgcolleges@gmail.com

GURUKULA INTERNATIONAL School Requires Nursery, English, Social, Maths, Science, Kannada and Computer teachers for Primary and High School, 9th Cross, Near Magadi Road Metro Station, Bangalore-23. 7829338292 7676676629

ACADEMIC SUPERVISOR required with 5 years Experience. Also Trained Teachers to handle Nursery, Primary, High-School and Receptionist for Academic Year 2024-25. Qualification: NTT, D.Ed, B.A/B.Sc.,B.Ed, M.A/M.Sc.,M.Ed. Only English Medium Candidates need apply. Contact Max Muller Public School, Mahalakshmi Layout, B'lore-96. Ph: 23376049/23376050. E-mail: maxmullerpublicschool .mlayout@gmail.com

WANTED EXPERIENCED PCM & CBZ + Arts English Medium trained Graduates + Computer faculty + Smart PE Teachers. Apply/ Contact immediately within ten days to Secretary, K.V.V. Public School, behind BMTC, Subbanna Garden, Vijayanagar, Bengaluru-40.

WANTED QUALIFIED TEACHERS For Primary and High School, PMS Public School, Bettahalasur, Bangalore 9632329017/ 9880113895.

"ST. MARTIN'S HIGH SCHOOL' 7th cross Behind Anjan Theatre, Magadi Road, Bengaluru-23. Requires: Head Mistress, Academic Advisor, Accountant/ Clerk qualified and Trained Teachers for Nursery, Primary High School to teach all the subjects including Computer, PE, and Drawing. Preferably ladies. Contact Office- Phone: 080-23101999, 9916184299, 9591990199

Accounts & Finance

WANTED LADY Accountant preferably BCom graduate, knowledge of Excel, Tally, Bank Reconciliation must with 3- 4 years experience. Interested please reply/ call Lakshman : 9845249184

General

EMPLOYEE NEEDED! Business Development Officer for property developer company No investment, age above 30 years No experienced required. Earning Rs. 50,000/- per month Retired persons are eligible. Contact:- 9845334751.

Security & Detectives

ALL TIME Alert Security Services, Required FIELD OFFICER 3 Years Experience, Working Area: Bangalore City and Electronic City, Salary Rs. 30000, and DRIVER 2 years experience. Office: Basavanagudi, Bangalore -560004. 9739530301, 9964072624, 080-41632211

Hospital & Medical Jobs

"DENTIST- ENDODONTIST and PROSTHODONTIST Required at Banashankari 3rd-Stage Bangalore: Full-time or Part-time. Call: 9844016274"

Marketing & Sales

WANTED: AGM / GM for marketing of reputed Welding Electrodes Brand. Email:jobs.nwipl@yahoo.com

Engg/ Production Technical

WANTED CIVIL Engineer for a construction firm, having 2- 3 experience in the construction field. Interested please reply/ call on 9845249184- Lakshman

ADVENT POWER TECHNOLOGIES,Bangalore. Hiring ITI Electrical and ITI Fitter Salary+ESI,PF,BONUS provided.Mail Resume to: info@adventpowertech.com

Wanted

WANTED MALE/ Female Office Assistant Known Accounts with Tally Having Fluency English & Hindi In and Around Rajajinagar Contact: 9108458798/ 080-23384085

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

REAL ESTATE BUYING

Farm House/ Land/ Resorts

Devanahalli

WANTED LAND in Bangalore North DEVANAHALLI- NANDI HILLS. We are looking for 2 to 5 acres of top-notch property for school with atleast 40-feet wide attractive access road and frontage of 300 feet. Clear Titles & Real Owners. Contact: Sumanth Narayan of Eduweft Services Pvt Ltd, Mobile: 9606353036 Email: info@eduweft.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Flat

Jayanagar

2BHK APT. SALE Jayanagar, Floor 1, behind Lalbagh, lift, Balcony, car park, security, brokers excuse, Buyers only, 65 lakhs, Whatsapp: +91-9284538248

BUSINESS

Business Offers

General

DRYFRUITS, FLAVOURED Cashews, Gift Boxes, Free Home Delivery Throughout Bengaluru. Irresistible Prices Impeccable Quality and Immaculate Taste Contact 'Farms India' 8095059460/ 6360940295

PERSONAL

Lost

DOCUMENT LOST
I, **Kishore Khubnani** Residing at #2, Usha Comforts, #1891/A, 25th 'A" Cross, 19th Main Road, 2nd Sector, HSR Layout, Bangalore, have lost my **original Sale Deed of Property Identification No. INR-1-084443-2013-14,** Flat no. 109, Kethana Eternal Panathur Main Road, Bangalore - 560103, while travelling. Finders please Contact: **9108367512.**

LOST
I, HEMALATHA residing No. 29, 5th Main, 6th Cross, KEB Layout, Geddalahalli, Bangalore North- 560094 have lost Original Sale Deed, Registered Contract & amp Document No. 2302/89-90. While shifting house in KEB Layout, Sanjaynagar., Bangalore
If found contact nearest police station or Call: 9945703979

Change of Name

CHANGE OF NAME
I, **SATYARANJAN NAYAK MANGALORE SHAMARANJAN NAYAK** Residing at Flat 203, Block 2, Harsha Landmark, 11th Cross, Brindavan Layout, Horamavu, Bengaluru-560043, have changed my name to **SATYARANJAN NAYAK** vide affidavit dated 26.3.2024 before notary Y.R. Chandrasekar, Bengaluru. Henceforth I shall be called **SATYARANJAN NAYAK** only.

CHANGE OF NAME
I, **MEENAKSHI BONGALE** W/o Laxman Rao Mahendrakar R/a #109, Varas Jacaranda Apartment, Ferns City Road, Doddanekundi, Marathahalli Post, Bengaluru- 560037 have changed my Name to **MEENAKSHI MAHENDRAKAR** vide Affidavit dated 25.03.2024 sworn before Notary J. Anand Kumar, Bangalore. Henceforth I Shall be Known as **MEENAKSHI MAHENDRAKAR** only.

I, MOHAMMED MUHTASHIM have changed my name as MOHAMMAD MOHTASHHIM Vide affidavit dated 24/03/2024 Before Notary R.J. Solanki, Bangalore

I, BAHDURNNISA, residing at Bengaluru-21 have changed my name as BADDARUNNISA vide-affidavit dated 26/3/2024 before Notary K.S. Bammappanavar, Bengaluru

I, UMESHA DASHARATHA S/o.Dasharatha Amruthur Muddurenga Shetty R/o#272, Amruthur-3, Kunigal Taluk, Tumkur District- 572111 have changed my name to UMESH DASHARATHA vide`affidavit dated:26.3.2024 before Notary L.Puttaraju, Bangalore

WE, PAVALURU PRABHAKAR NAIDU and RUPA PRABHAKAR, Residng at Bengaluru-67 have changed our Daughter name from JANYA PRABHAKAR NAIDU to JANYA PAVALURU vide affidavit dated 26/3/2024 before Notary- K.S. Bammappanavar Bengaluru

I, Ramanarayana Gouda/ Malipatil R.M./ Mali Patil R.M./ R.M. Malipatil S/o Mahadevappa Gouda, residing at-47 Sadapur Taluk Manvi Raichur District- 584123 presently residing at-563 Sneha Building 4th Main Meenakshinagar Kamakshipalya Extension Basaveshwaranagar Bengaluru- 560079,have changed my name to RAMANARAYANA GOUDA vide affidavit dated 23-03-2024 sworn before Notary H.S.Sakalesh Aradhya Bengaluru.

PUBLIC NOTICE

PUBLIC NOTICE
This is for notice of the general publicthat a political party is proposed to beregistered by the name of BAHUJANJANASHAKTHI PARTY. The office of the party is located at#No. 136/A. UZHAIPAVAR MAIYAM, 8th MAIN, NEW BAGALUR LAYOUT, D.DEVARAJ URS NAGAR, St THOMASTOWN, Bangalore. 560084. Thisparty has submitted application tothe Election Commission of India, New Delhi. For its registration aspolitical party under section 29A of therepresentation of people Act, 1951.Name/ address of the office-bearers of theparty are as follows; National president: ADISATHYANARAYAN, S/o ADIMOOLAM Residing at No. 15, JV Shrtty Road,Ramasamy playa, Bangalore. 560033. National Secretary- General- Mr. JAMES No. 27/A, 5th cross, 5th main, BSV Reddy layout, RM Nagar Main Road, Bengaluru- 560016. National Treasurer: Mrs. MOKSHA MARY No. 27/A, 5th cross, 5th main, BSV Reddy layout, RM NagarMain Road, Bengaluru- 560016. If anyonehas any objection to the registration of BAHUJAN JANASHAKTHI PARTY Theymay send their Objection with reasonsthereof, to the Secretary (political party)Election Commission of India, Nirvanchansadan, Ashka Road, New Delhi-110001. Within 30 days of the publication of this notice.

DH DECCAN HERALD **Classifieds** More value, more impact | ಪ್ರಜಾವಾಣಿ

RECRUITMENT
BOOK YOUR JOB ADS IN DECCAN HERALD
ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036 | +91 9731810277 | +91 9886213331 | 080- 45557163/164

ಗೃಹ ಸಚಿವಾಲಯದ ‘ಸೈಬರ್ ದೋಸ್ತ್’ಗೆ ವಂಚಕರ ಸವಾಲು ● ಇ–ಮೇಲ್ ಕಳುಹಿಸಿ ಹಣಕ್ಕಾಗಿ ಬ್ಲ್ಯಾಕ್‌ಮೇಲ್

ಸೈಬರ್ ಕ್ರೈಂ: ಜಾಲತಾಣಕ್ಕೆ ‘ನಕಲಿ’ ಕಾಟ

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಸೈಬರ್ ಅಪರಾಧಗಳ ಕುರಿತು ದೂರು ದಾಖಲಿಸಲು ಕೇಂದ್ರ ಗೃಹ ಸಚಿವಾಲಯ ಅಭಿವೃದ್ಧಿಪಡಿಸಿರುವ ಜಾಲತಾಣದ ಹೆಸರಿನಲ್ಲಿ ನಕಲಿ ಜಾಲತಾಣ ಸೃಷ್ಟಿಸಿರುವ ವಂಚಕರು, ಜನರನ್ನು ಬ್ಲ್ಯಾಕ್‌ಮೇಲ್ ಮಾಡಿ ಹಣ ದೋಚುತ್ತಿದ್ದಾರೆ.

ನಕಲಿ ಜಾಲತಾಣದಿಂದ ಬಂದಿದ್ದ ಬ್ಲ್ಯಾಕ್‌ಮೇಲ್ ಇ–ಮೇಲ್ ಕುರಿತು ಬೆಂಗಳೂರಿನ ಕಂಪನಿಯೊಂದರ ಉದ್ಯೋಗಿ ಸೈಬರ್ ಕ್ರೈಂ ವಿಭಾಗಕ್ಕೆ ಮಾಹಿತಿ ನೀಡಿದ್ದಾರೆ. ಇದನ್ನು ಆಧರಿಸಿ ಪೊಲೀಸರು ತನಿಖೆ ಕೈಗೊಂಡಿದ್ದು, ನಕಲಿ ಜಾಲತಾಣ ಸೃಷ್ಟಿಸಿದ್ದು ಯಾರು ? ಎಂಬುದನ್ನು ಪತ್ತೆ ಮಾಡುತ್ತಿದ್ದಾರೆ.

ಸೈಬರ್ ಕ್ರೈಂ ಪ್ರಕರಣಗಳನ್ನು ಭೇದಿಸಲು ಅಭಿವೃದ್ಧಿಪಡಿಸಲಾಗಿರುವ ಕೇಂದ್ರ ಸಚಿವಾಲಯದ ಜಾಲತಾಣದ ಹೆಸರನ್ನೇ ವಂಚಕರು ದುರುಪಯೋಗಪಡಿಸಿಕೊಂಡಿದ್ದು, ಇನ್ನು ಜನಸಾಮಾನ್ಯರ ಪಾಡೇನು ಎಂಬ ಪ್ರಶ್ನೆ ಮೂಡಿದೆ.

‘ಸೈಬರ್ ವಂಚಕರು, ಜನರಿಂದ ಹಣ ದೋಚಲು ಕೇಂದ್ರ ಸಚಿವಾಲಯದ ಜಾಲತಾಣದ ಹೆಸರು ಬಳಕೆ ಮಾಡುತ್ತಿದ್ದಾರೆ. ಇದೊಂದು ವ್ಯವಸ್ಥಿತ ಜಾಲವೆಂಬುದು ಗೊತ್ತಾಗುತ್ತಿದೆ. ಈ ಬಗ್ಗೆ ಕೇಂದ್ರ ಗೃಹ ಸಚಿವಾಲಯಕ್ಕೂ ಮಾಹಿತಿ ಇದೆ. ರಾಷ್ಟ್ರ ಮಟ್ಟದಲ್ಲಿಯೂ ಹಲವು ತನಿಖಾ ಸಂಸ್ಥೆಗಳು ಆರೋಪಿಗಳಿಗಾಗಿ ಹುಡುಕಾಟ ನಡೆಸುತ್ತಿವೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವಂಚಕರು ಕಳುಹಿಸುವ ಆದೇಶ, ನೋಟಿಸ್‌ಗಳ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು. ವೈಯಕ್ತಿಕ ಮಾಹಿತಿ ಹಂಚಿಕೊಳ್ಳಬಾರದು
ಸಿಐಡಿ ಸೈಬರ್ ಕ್ರೈಂ ವಿಭಾಗ

ಅಸಲಿ ಹೆಸರು ಹೋಲುವಂತೆ ನಕಲಿ ಹೆಸರು: ‘ದೇಶದ ಯಾವುದೇ ಭಾಗದಲ್ಲಿ ಸೈಬರ್ ಅಪರಾಧಗಳು ನಡೆದರೆ, ಈ ಬಗ್ಗೆ ದೂರು ದಾಖಲಿಸಲು ಕೇಂದ್ರ ಸಚಿವಾಲಯದ https://cybercrime.gov.in ಜಾಲತಾಣವಿದೆ. ಇದೇ ಜಾಲತಾಣದ ಹೆಸರು ಹೋಲುವಂತೆ www.cybercrimegovin.in ನಕಲಿ ಜಾಲತಾಣ ಸೃಷ್ಟಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘www.cybercrimegovin.in ನಕಲಿ ಜಾಲತಾಣದಲ್ಲಿ ಸೈಬರ್ ದೋಸ್ತ್ (cyberdost@cybercrimegovin.in) ಹೆಸರಿನಲ್ಲಿ ಇ–ಮೇಲ್ ಐಡಿ ಸೃಷ್ಟಿಸಲಾಗಿದೆ. ಇದೇ ಇ–ಮೇಲ್‌ನಿಂದ ಜನರಿಗೆ ಬೆದರಿಕೆ ಸಂದೇಶ ಕಳುಹಿಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ನ್ಯಾಯಾಲಯದ ನೋಟಿಸ್ ರವಾನೆ: ‘ನ್ಯಾಯಾಲಯ ನೋಟಿಸ್’ ಶೀರ್ಷಿಕೆಯಡಿ ಕಂಪನಿ ಉದ್ಯೋಗಿಯೊಬ್ಬರಿಗೆ ವಂಚಕರು ಇತ್ತೀಚೆಗೆ ಇ–ಮೇಲ್ ಕಳುಹಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ನಿಮ್ಮ ಮೊಬೈಲ್‌ನಲ್ಲಿ ಮಕ್ಕಳಿಗೆ ಸಂಬಂಧಪಟ್ಟ ನಗ್ನ ವಿಡಿಯೊಗಳನ್ನು ನೋಡಿದ್ದೀರಾ? ಐಪಿ (ಇಂಟರ್‌ನೆಟ್ ಪ್ರೊಟೊಕಾಲ್) ಅಡ್ರೆಸ್ ಮೂಲಕ ನಮಗೆ ಪುರಾವೆ ಸಿಕ್ಕಿದೆ. ಹೀಗಾಗಿ, ನಿಮಗೆ ನ್ಯಾಯಾಲಯ ನೋಟಿಸ್ ಕಳುಹಿಸುತ್ತಿದ್ದೇವೆ. ನೋಟಿಸ್ ತಲುಪಿದ 24 ಗಂಟೆಯೊಳಗೆ ನಮಗೆ ಪ್ರತಿಕ್ರಿಯೆ ನೀಡಬೇಕು. ಇಲ್ಲದಿದ್ದರೆ, ನಿಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು– ಪೊಲೀಸ್ ಮುಖ್ಯಸ್ಥ ಪ್ರಶಾಂತ್ ಗೌತಮ್’ ಎಂಬುದಾಗಿ ಇ–ಮೇಲ್‌ನಲ್ಲಿ ಬರೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪತ್ರದ ಬಗ್ಗೆ ಅನುಮಾನಗೊಂಡ ಉದ್ಯೋಗಿ, ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಂಡಿದ್ದರು. ಆದರೆ, ಸೈಬರ್ ಕ್ರೈಂ ವಿಭಾಗದಲ್ಲಿ ಪ್ರಶಾಂತ್ ಗೌತಮ್ ಎಂಬ ಅಧಿಕಾರಿಯೇ ಇಲ್ಲವೆಂಬುದು ಗೊತ್ತಾಗಿದೆ. ಬಳಿಕವೇ ಅವರು ಪೊಲೀಸರಿಗೆ ದೂರು ನೀಡಿದ್ದಾರೆ’ ಎಂದು ಹೇಳಿವೆ.

‘ವಂಚಕರ ಬ್ಲ್ಯಾಕ್‌ಮೇಲ್‌ಗೆ ಹೆದರಿ ಹಲವರು ₹ 20 ಸಾವಿರದಿಂದ ₹ 5 ಲಕ್ಷದವರೆಗೂ ಹಣ ನೀಡಿರುವುದು ಗೊತ್ತಾಗಿದೆ. ಆದರೆ, ಕೆಲವರು ಇ–ಮೇಲ್‌ಗೆ ಪ್ರತಿಕ್ರಿಯಿಸಿಲ್ಲ’ ಎಂದು ಮೂಲಗಳು ಹೇಳಿವೆ.

‘ಜನರು ಠಾಣೆಗೆ ಅಲೆಯುವುದನ್ನು ತಪ್ಪಿಸಲು ಹಾಗೂ ಸೈಬರ್ ಅಪರಾಧಗಳನ್ನು ಹತ್ತಿಕ್ಕಲು ಕೇಂದ್ರ ಸಚಿವಾಲಯ ಈ ಜಾಲತಾಣ ತೆರೆದಿದೆ. ಆದರೆ, ಸೈಬರ್ ವಂಚಕರು ನಕಲಿ ಜಾಲತಾಣ ತೆರೆದು ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಜೊತೆಗೆ, ಹಲವರನ್ನು ಸುಲಿಗೆ ಮಾಡುತ್ತಿದ್ದಾರೆ. ಇಂಥವರ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು’ ಎಂದು ತಿಳಿಸಿವೆ.

ನಕಲಿ ಜಾಲತಾಣ ನಿಷ್ಕ್ರಿಯ: ‘ಮಾಹಿತಿ ತಿಳಿಯುತ್ತಿದ್ದಂತೆ ನಕಲಿ ಜಾಲತಾಣವನ್ನು ನಿಷ್ಕ್ರಿಯಗೊಳಿಸಲಾಗಿದೆ. ಇದನ್ನು ಸೃಷ್ಟಿಸಿದವರು ಯಾರು ? ಯಾವ ಪ್ರದೇಶದಲ್ಲಿ ನಿರ್ವಹಣೆ ಮಾಡಲಾಗುತ್ತಿತ್ತು? ಎಂಬ ಬಗ್ಗೆ ತಾಂತ್ರಿಕ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

‘ಮಾಹಿತಿ ದಾಖಲಿಸಲು – 1930’

‘ದೇಶದಲ್ಲಿ ಯಾವುದೇ ಸೈಬರ್ ಅಪರಾಧಗಳು ನಡೆದರೆ, ತುರ್ತು ಸ್ಪಂದನೆಗೆಂದು ಸಹಾಯವಾಣಿ–1930 ಆರಂಭಿಸಲಾಗಿದೆ. ಈ ಸಹಾಯವಾಣಿ ಸಹ ಕೇಂದ್ರ ಗೃಹ ಸಚಿವಾಲಯದ ಅಧೀನದಲ್ಲಿದೆ. https://cybercrime.gov.in ಜಾಲತಾಣದ ಜೊತೆಯಲ್ಲಿ ಈ ಸಹಾಯವಾಣಿ ನಿರ್ವಹಣೆ ಮಾಡಲಾಗುತ್ತಿದೆ. ಸಾರ್ವಜನಿಕರು ಸೈಬರ್ ಅಪರಾಧಗಳು ನಡೆದಾಗ, 1930ಕ್ಕೆ ಕರೆ ಮಾಡಿ ಮಾಹಿತಿ ನೀಡಬಹುದು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಕಾರು ಗುದ್ದಿಸಿ ಚಾಲಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರು ಗುದ್ದಿಸಿ ಗೋಪಿ (55) ಎಂಬುವವರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿ ಮುನಿಕೃಷ್ಣ (56) ಅವರನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೋಣನಕುಂಟೆ ಹರಿನಗರದ ಗೋಪಿ, ಆಟೊ ಚಾಲಕ. ವಾಜರಹಳ್ಳಿ 100 ಅಡಿ ರಸ್ತೆಯಲ್ಲಿ ಮೃತದೇಹ ಪತ್ತೆಯಾಗಿತ್ತು. ಕಾರು ಗುದ್ದಿದ್ದರಿಂದ ಅವರು ಮೃತಪಟ್ಟಿರುವುದಾಗಿ ಕೆಲವರು ಹೇಳಿದ್ದರು. ಅಪಘಾತ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಾಗ, ಕೊಲೆ ಎಂಬುದು ಗೊತ್ತಾಯಿತು’ ಎಂದು ದಕ್ಷಿಣ ವಿಭಾಗದ ಡಿಸಿಪಿ ಶಿವಪ್ರಕಾಶ್ ದೇವರಾಜ್ ತಿಳಿಸಿದರು.

‘ಅಪಘಾತ ಪ್ರಕರಣವನ್ನು ಕೊಲೆ ಪ್ರಕರಣವಾಗಿ ಬದಲಾಯಿಸಲಾಗಿದೆ. ಸಂಚಾರ ಪೊಲೀಸರು ನಡೆಸುತ್ತಿದ್ದ ತನಿಖೆಯನ್ನು, ಕಾನೂನು ಸುವ್ಯವಸ್ಥೆ ಠಾಣೆಗೆ ವರ್ಗಾಯಿಸಲಾಗಿದೆ’ ಎಂದರು.

ಬಾರ್ ಮುಂದೆ ಜಗಳ: ‘ಗೋಪಿ ಮಾರ್ಚ್ 23ರಂದು ರಾತ್ರಿ ಬಾರ್‌ಗೆ ಹೋಗಿದ್ದರು. ಅಲ್ಲಿಯೇ ಆರೋಪಿ ಕೋಣನಕುಂಟೆಯ ಮುನಿಕೃಷ್ಣ ಹಾಗೂ ಅವರ ಸ್ನೇಹಿತ, ಮದ್ಯ ಕುಡಿಯುತ್ತಿದ್ದರು. ಅವರಿಬ್ಬರಿಗೆ ಅಲ್ಲಿ ಗೋಪಿ ಪರಿಚಯವಾಗಿತ್ತು. ನಂತರ, ಮೂವರು ಒಟ್ಟಿಗೆ ಮದ್ಯ ಕುಡಿದಿದ್ದರು’ ಎಂದು ಪೊಲೀಸರು ತಿಳಿಸಿದರು.



ಮುನಿಕೃಷ್ಣ

‘ಬಾರ್‌ನಿಂದ ಹೊರಬಂದಿದ್ದ ಗೋಪಿ ಹಾಗೂ ಮುನಿಕೃಷ್ಣ ನಡುವೆ ಕ್ಷುಲ್ಲಕ ಕಾರಣಕ್ಕಾಗಿ ಜಗಳ ಶುರುವಾಗಿತ್ತು. ಇಬ್ಬರೂ ಕೈ ಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದರು. ಜಗಳ ಬಿಡಿಸಿದ್ದ ಸ್ನೇಹಿತ, ಇಬ್ಬರನ್ನೂ ಕಾರಿನತ್ತ ಕರೆದೊಯ್ದಿದ್ದರು’ ಎಂದು ಹೇಳಿದರು.

‘ಮುನಿಕೃಷ್ಣ ಅವರಿಗೆ ಚಪ್ಪಲಿಯಿಂದ ಹೊಡೆಯಲು ಗೋಪಿ ಮುಂದಾಗಿದ್ದರು. ಅದನ್ನು ತಡೆದಿದ್ದ ಸ್ನೇಹಿತ, ಗೋಪಿಯನ್ನು ಕರೆದುಕೊಂಡು ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದ. ಆರೋಪಿ, ಕಾರಿನಲ್ಲಿ ಹಿಂಬಾಲಿಸಿದ್ದ. ಮಾರ್ಗಮಧ್ಯೆ ಗೋಪಿಗೆ ಕಾರು ಗುದ್ದಿಸಿದ್ದ. ಗೋಪಿ ಮೃತಪಡುತ್ತಿದ್ದಂತೆ ಆರೋಪಿ ಸ್ಥಳದಿಂದ ಪರಾರಿಯಾಗಿದ್ದ. ಸ್ನೇಹಿತ ಸಹ ಓಡಿ ಹೋಗಿದ್ದ’ ಎಂದರು.

‘ಅಂಗಿಯ ಮೇಲಿದ್ದ ಟೈಲರ್ ಸ್ಟಿಕ್ಕರ್ ಮೂಲಕ ಗೋಪಿ ಹೆಸರು, ವಿಳಾಸ ಗೊತ್ತಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದಾಗ, ಕಾರು ಗುದ್ದಿಸಿ ಕೊಲೆ ಮಾಡಿದ್ದು ಕಂಡುಬಂದಿತ್ತು. ಮಾಲೂರಿನಲ್ಲಿದ್ದ ಸ್ನೇಹಿತನನ್ನು ವಿಚಾರಿಸಿದಾಗ, ಗಲಾಟೆ ವಿಷಯ ತಿಳಿಯಿತು’ ಎಂದು ಹೇಳಿದರು.

24 ಲ್ಯಾಪ್‌ಟಾಪ್ ಕಳ್ಳತನ ಸಿಕ್ಕಿಬಿದ್ದ ಪದವೀಧರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪೇಯಿಂಗ್ ಗೆಸ್ಟ್ ಕಟ್ಟಡಗಳಲ್ಲಿ ಲ್ಯಾಪ್‌ಟಾಪ್ ಕಳ್ಳತನ ಮಾಡುತ್ತಿದ್ದ ಆರೋಪದಡಿ ಜಶು ಅಗರವಾಲ್ (29) ಎಂಬುವವರನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಜಸ್ಥಾನ್‌ದ ಜಶು, ಎಂಜಿನಿಯರಿಂಗ್ ಪದವೀಧರೆ. ಮೂರು ವರ್ಷಗಳಿಂದ ಕೃತ್ಯ ಎಸಗುತ್ತಿದ್ದರು. ಇತ್ತೀಚೆಗೆ ಇವರನ್ನು ಬಂಧಿಸಿ, ₹ 10 ಲಕ್ಷ ಮೌಲ್ಯದ 24 ಲ್ಯಾಪ್‌ಟಾಪ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು. ‘ಆರೋಪಿ ಜಶು, ವಿದ್ಯಾಭ್ಯಾಸ ಮುಗಿಯುತ್ತಿದ್ದಂತೆ ನೋಯ್ಡಾದ ಬ್ಯಾಂಕ್‌ವೊಂದರಲ್ಲಿ ಕೆಲಸಕ್ಕೆ ಸೇರಿದ್ದರು. ವೇತನ ಕಡಿಮೆ ಇದ್ದಿದ್ದರಿಂದ, ಕೆಲಸಕ್ಕೆ ರಾಜೀನಾಮೆ ನೀಡಿದ್ದರು. ಬೆಂಗಳೂರಿನ ಕಂಪನಿಗಳಲ್ಲಿ ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. ಹಲವು ಕಡೆ ಸಂದರ್ಶನ ನೀಡಿದರೂ ಕೆಲಸ ಸಿಕ್ಕಿರಲಿಲ್ಲ’ ಎಂದು ತಿಳಿಸಿದರು.

‘ಸಂದರ್ಶನಕ್ಕೆಂದು ವಿಮಾನದಲ್ಲಿ ಆಗಾಗ ನಗರಕ್ಕೆ ಬರುತ್ತಿದ್ದ ಆರೋಪಿ, ಬೆಳ್ಳಂದೂರು, ವೈಟ್‌ಫೀಲ್ಡ್, ಸಿಲ್ಕ್ ಬೋರ್ಡ್, ಮಹದೇವಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಪೇಯಿಂಗ್ ಗೆಸ್ಟ್ ಕಟ್ಟಡಗಳಲ್ಲಿ ವಾಸವಿರುತ್ತಿದ್ದರು. ಯುವತಿಯರು ಊಟಕ್ಕೆ ಹೋಗುತ್ತಿದ್ದ ಸಂದರ್ಭದಲ್ಲಿ ಕೊಠಡಿಗೆ ಹೋಗಿ ಲ್ಯಾಪ್‌ಟಾಪ್ ಕದಿಯುತ್ತಿದ್ದರು.’

ಜಪ್ತಿ ಮಾಡಿರುವ ಲ್ಯಾಪ್‌ಟಾಪ್‌ಗಳು

‘ಕದ್ದ ಲ್ಯಾಪ್‌ಟಾಪ್‌ಗಳನ್ನು ಸ್ಥಳೀಯ ಮಳಿಗೆಗಳಲ್ಲಿ ಮಾರುತ್ತಿದ್ದರು. ಅದರಿಂದ ಬಂದ ಹಣವನ್ನು ತಮ್ಮ ಖರ್ಚಿಗೆ ಬಳಸಿಕೊಳ್ಳುತ್ತಿದ್ದರು. ಆರೋಪಿ ಇತ್ತೀಚೆಗೆ ನಗರಕ್ಕೆ ಪುನಃ ಬಂದಿದ್ದರು. ಹುಣಸಮಾರನಹಳ್ಳಿ ಬಳಿ ಅವರನ್ನು ಬಂಧಿಸಲಾಯಿತು. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

21 ಸ್ಪಾಗಳ ಮೇಲೆ ಪೊಲೀಸ್ ದಾಳಿ: 118 ಮಹಿಳೆಯರ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಚಟುವಟಿಕೆ ನಡೆಸುತ್ತಿದ್ದ ಆರೋಪದಡಿ 21 ಸ್ಪಾಗಳ ಮೇಲೆ ಪೊಲೀಸರು ದಾಳಿ ಮಾಡಿದ್ದು, 118 ಮಹಿಳೆಯರನ್ನು ರಕ್ಷಿಸಿದ್ದಾರೆ.

‘ಜನವರಿ 1ರಿಂದ ಮಾರ್ಚ್ 25ರವರೆಗೆ 21 ಸ್ಪಾಗಳ ಮೇಲೆ ದಾಳಿ ಮಾಡಲಾಯಿತು. ಮಾಲೀಕರು, ವ್ಯವಸ್ಥಾಪಕರು ಸೇರಿದಂತೆ 39 ಮಂದಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ತಿಳಿಸಿದರು.

‘ಎರಡು ಸ್ಪಾಗಳ ಮಾಲೀಕರು ಹಾಗೂ ಇತರರ ಮೇಲೆ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸ್ಪಾಗಳ ಮೇಲೆ ಇದೇ ಮೊದಲ ಬಾರಿಗೆ ಈ ಕಾಯ್ದೆ ಪ್ರಯೋಗಿಸಲಾಗಿದೆ’ ಎಂದು ಹೇಳಿದರು.

ಪ್ರಯಾಣಿಕರ ಪ್ರಜ್ಞೆ ತಪ್ಪಿಸಿ ಕಳ್ಳತನ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ್ತು ಬರುವ ಔಷಧಿ ಬೆರೆಸಿರುತ್ತಿದ್ದ ಬಾದಾಮಿ ಹಾಲು ಕುಡಿಸಿ ರೈಲು ಪ್ರಯಾಣಿಕರ ಪ್ರಜ್ಞೆ ತಪ್ಪಿಸಿ ಕಳ್ಳತನ ಮಾಡುತ್ತಿದ್ದ ಮೂವರು ಆರೋಪಿಗಳನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

‘ಕೊಲ್ಕತ್ತಾದ ಮೊಹಮ್ಮದ್ ಶೌಕತ್ ಅಲಿ (55), ಮೊಹಮ್ಮದ್ ಸತ್ತಾರ್ ಅಲಿಯಾಸ್ ಅಜಾದ್ (51) ಹಾಗೂ ಉತ್ತರ ಪ್ರದೇಶದ ಮೊಹಮ್ಮದ್ ಅವದ್ (58) ಬಂಧಿತರು. ಅರಸೀಕೆರೆ ರೈಲ್ವೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಕೈಗೊಂಡು ಮೂವರನ್ನು ಸೆರೆ ಹಿಡಿಯಲಾಗಿದೆ. ಇವರಿಂದ 120 ಗ್ರಾಂ ಚಿನ್ನದ ಗಟ್ಟಿ ಜಪ್ತಿ ಮಾಡಲಾಗಿದೆ’ ಎಂದು ರೈಲ್ವೆ ಎಸ್ಪಿ ಸೌಮ್ಯಲತಾ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಅಪರಾಧ ಸುದ್ದಿ

‘ರಾಜಸ್ಥಾನದ ವೃದ್ಧ ದಂಪತಿ, ಜೋಧಪುರದಿಂದ ಬೆಂಗಳೂರಿಗೆ ರೈಲಿನಲ್ಲಿ 2023ರ ಡಿಸೆಂಬರ್ 16ರಂದು ಬರುತ್ತಿದ್ದರು. ಇದೇ ರೈಲು ಹತ್ತಿದ್ದ ಆರೋಪಿಗಳು, ದಂಪತಿಯನ್ನು ಪರಿಚಯ ಮಾಡಿಕೊಂಡಿದ್ದರು. ಆತ್ಮೀಯವಾಗಿ ಮಾತನಾಡಿದ್ದರು. ಪ್ರಯಾಣದ ವೇಳೆಯಲ್ಲಿ, ಮತ್ತು ಬರುವ ಔಷಧಿ ಬೆರೆಸಿದ್ದ ಬಾದಾಮಿ ಹಾಲನ್ನು ದಂಪತಿಗೆ ಕುಡಿಸಿದ್ದರು.’

‘ಹಾಲು ಕುಡಿದಿದ್ದ ದಂಪತಿ ಪ್ರಜ್ಞೆ ತಪ್ಪಿದ್ದರು. ನಂತರ, ದಂಪತಿ ಬಳಿಯ ₹ 20 ಸಾವಿರ ನಗದು ಹಾಗೂ 120 ಗ್ರಾಂ ಚಿನ್ನಾಭರಣ ಕದ್ದೊಯ್ದಿದ್ದರು. ಈ ಬಗ್ಗೆ ದಂಪತಿ ದೂರು ನೀಡಿದ್ದರು’ ಎಂದು ಹೇಳಿದರು.

ತತ್ಕಾಲ್ ಟಿಕೆಟ್, ನಕಲಿ ದಾಖಲೆ ಬಳಕೆ: ‘ಬಂಧಿತ ಮೊಹಮ್ಮದ್ ಶೌಕತ್ ಅಲಿ ವಿರುದ್ಧ ಕೊಲ್ಕತ್ತಾ ಹಾಗೂ ಕೇರಳ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು. ಈತ ಜೈಲಿಗೂ ಹೋಗಿ ಬಂದಿದ್ದ. ಸಂಬಂಧಿಕರೇ ಆಗಿದ್ದ ಆಟೊ ಚಾಲಕ ಮೊಹಮ್ಮದ್ ಸತ್ತಾರ್ ಹಾಗೂ ಬಟ್ಟೆ ವ್ಯಾಪಾರಿ ಮೊಹಮ್ಮದ್ ಅವದ್ ಜೊತೆ ಸೇರಿ ರೈಲಿನಲ್ಲಿ ಕಳ್ಳತನ ಮಾಡಲಾರಂಭಿಸಿದ್ದ’ ಎಂದು ಪೊಲೀಸರು ಹೇಳಿದರು.

ಮೊಹಮ್ಮದ್ ಶೌಕತ್



ಮೊಹಮ್ಮದ್ ಅವದ್



ಮೊಹಮ್ಮದ್ ಸತ್ತಾರ್

‘ಉತ್ತರ ಭಾರತದಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಸಂಚರಿಸುವ ರೈಲುಗಳಲ್ಲಿ ಪ್ರಯಾಣಿಸಲು ಆರೋಪಿಗಳು ತತ್ಕಾಲ್ ಮೂಲಕ ಟಿಕೆಟ್ ಕಾಯ್ದಿರಿಸುತ್ತಿದ್ದರು. ನಕಲಿ ದಾಖಲೆ ಬಳಸಿ ಖರೀದಿಸಿದ್ದ ಮೊಬೈಲ್ ಸಂಖ್ಯೆ ಹಾಗೂ ನಕಲಿ ಆಧಾರ್ ನೀಡುತ್ತಿದ್ದರು’ ಎಂದರು.

ರೈಲಿನಲ್ಲಿ ಪರಿಚಯ: ‘ರೈಲು ಬೋಗಿಯಲ್ಲಿ ಸಹ ಪ್ರಯಾಣಿಕರನ್ನು ಆರೋಪಿಗಳು ಪರಿಚಯ ಮಾಡಿಕೊಳ್ಳುತ್ತಿದ್ದರು. ಯಾರ ಬಳಿ ಹಣವಿದೆ ? ಚಿನ್ನಾಭರಣವಿದೆ ? ಎಂಬುದನ್ನು ತಿಳಿದುಕೊಳ್ಳುತ್ತಿದ್ದರು. ನಂತರ, ಅವರ ಜೊತೆ ಆತ್ಮೀಯವಾಗಿ ಮಾತನಾಡಿ ವಿಶ್ವಾಸ ಗಳಿಸುತ್ತಿದ್ದರು. ತಿಂಡಿ–ತಿನಿಸುಗಳನ್ನು ಪರಸ್ಪರ ಹಂಚಿಕೊಳ್ಳುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಮತ್ತು ಬರುವ ಔಷಧಿ ಬೆರೆಸಿಟ್ಟುಕೊಂಡಿದ್ದ ಬಾದಾಮಿ ಹಾಲನ್ನು ಪ್ರಯಾಣಿಕರಿಗೆ ನೀಡುತ್ತಿದ್ದರು. ಅದನ್ನು ಕುಡಿದ ನಂತರ ಪ್ರಯಾಣಿಕರು ಪ್ರಜ್ಞೆ ತಪ್ಪಿ ಬೀಳುತ್ತಿದ್ದರು. ಆರೋಪಿಗಳು, ಕಳ್ಳತನ ಮಾಡಿ ನಿಲ್ದಾಣದಲ್ಲಿ ಇಳಿದು ಪರಾರಿಯಾಗುತ್ತಿದ್ದರು’ ಎಂದು ತಿಳಿಸಿದರು.

‘ಇದೊಂದು ಅಂತರ ರಾಜ್ಯಗಳ ತಂಡ. ಬೆಂಗಳೂರಿನಲ್ಲಿ ಒಂದು ಪ್ರಕರಣ ಮಾತ್ರ ಪತ್ತೆಯಾಗಿದೆ. ಹಲವು ರಾಜ್ಯಗಳಲ್ಲಿ ಆರೋಪಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ’ ಎಂದರು.

‘ಮೊಬೈಲ್ ಜಾಡು: ರೈಲಿನಲ್ಲೇ ಆರೋಪಿಗಳ ಬಂಧನ’

‘ಆರೋಪಿಗಳು ಪದೇ ಪದೇ ಮೊಬೈಲ್ ನಂಬರ್ ಬದಲಾಯಿಸುತ್ತಿದ್ದರು. ನಕಲಿ ವಿಳಾಸದ ಗುರುತಿನ ಚೀಟಿ ನೀಡುತ್ತಿದ್ದರು. ಸಿಸಿಟಿವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿದ್ದ ಪೊಲೀಸರ ವಿಶೇಷ ತಂಡ, ಮೊಬೈಲ್ ಜಾಡು ಹಿಡಿದು ರೈಲಿನಲ್ಲಿಯೇ ಆರೋಪಿಗಳನ್ನು ಬಂಧಿಸಿದೆ’ ಎಂದು ಎಸ್ಪಿ ಸೌಮ್ಯಲತಾ ಹೇಳಿದರು.

ನಾಪತ್ತೆಯಾಗಿದ್ದ ಬಾಲಕಿಯನ್ನು ರಕ್ಷಿಸಿ ಪೋಷಕರಿಗೆ ಒಪ್ಪಿಸಿದ್ದ ದಾವಣಗೆರೆಯ ಕಾನ್‌ಸ್ಟೆಬಲ್‌ಗಳಾದ ಚನ್ನಮ್ಮ ಬಿ. ಹಾಗೂ ಸವಿತಾ ಎಚ್‌.ಬಿ, ಬಂಗಾರಪೇಟೆ ನಿಲ್ದಾಣದಲ್ಲಿ ರೈಲಿನಿಂದ ಆಯತಪ್ಪಿ ಬೀಳುತ್ತಿದ್ದ ವೃದ್ಧರೊಬ್ಬರನ್ನು ಕಾಪಾಡಿದ್ದ ಹೆಡ್‌ಕಾನ್‌ಸ್ಟೆಬಲ್ ಬಿ.ವಿ. ಅಶೋಕ ಹಾಗೂ ಮಂಡ್ಯ ರೈಲು ನಿಲ್ದಾಣದಲ್ಲಿ ತಮ್ಮ ಮೇಲೆ ಹಲ್ಲೆಯಾದರೂ ಕಿಡಿಗೇಡಿಗಳನ್ನು ಬೆನ್ನಟ್ಟಿ ಹಿಡಿದಿದ್ದ ಕಾನ್‌ಸ್ಟೆಬಲ್ ಸತೀಶ್ ಚಂದ್ರ ಅವರಿಗೆ ರೈಲ್ವೆ ಪೊಲೀಸ್ ವತಿಯಿಂದ ‘ಮಾರ್ಚ್ ತಿಂಗಳ ಮಾದರಿ ವ್ಯಕ್ತಿ’ ಪ್ರಶಂಸನಾ ಪತ್ರ ನೀಡಿ ಎಸ್ಪಿ ಎಸ್‌.ಕೆ. ಸೌಮ್ಯಲತಾ ಗೌರವಿಸಿದರು ಪ್ರಜಾವಾಣಿ ಚಿತ್ರ

‘ಓಜಿ ಕುಪ್ಪಂ’ ಮಹಿಳೆಯರಿಬ್ಬರ ಸೆರೆ

ಬೆಂಗಳೂರು: ರೈಲು ಹಾಗೂ ಬಸ್‌ಗಳಲ್ಲಿ ಪ್ರಯಾಣಿಕರ ಸೋಗಿನಲ್ಲಿ ಸಂಚರಿಸಿ ಕಳ್ಳತನ ಮಾಡುತ್ತಿದ್ದ ಆರೋಪದಡಿ ಇಬ್ಬರು ಮಹಿಳೆಯರನ್ನು ಮಂಗಳೂರು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

‘ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಕುಪ್ಪಂನ ಗಾಯತ್ರಿ ಅಲಿಯಾಸ್ ರೂಪಾ (38) ಮತ್ತು ತಮಿಳುನಾಡಿನ ಸಂಧ್ಯಾ ಅಲಿಯಾಸ್ ಶರಣ್ಯಾ (25) ಬಂಧಿತರು. ಇವರಿಬ್ಬರು, ಕಳ್ಳತನ ಪ್ರಕರಣದಲ್ಲಿ ಪದೇ ಪದೇ ಭಾಗಿಯಾಗುವ ಕುಪ್ಪಂ ತಂಡದ ಸದಸ್ಯರು. ಇವರಿಂದ 402 ಗ್ರಾಂ ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ರೈಲ್ವೆ ಎಸ್ಪಿ ಎಸ್‌.ಕೆ. ಸೌಮ್ಯಲತಾ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಮುರುಡೇಶ್ವರದಿಂದ ಬೆಂಗಳೂರಿಗೆ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರ ಬ್ಯಾಗ್‌ನಲ್ಲಿದ್ದ ಚಿನ್ನಾಭರಣ ಕಳ್ಳತನ ಆಗಿತ್ತು. ಈ ಬಗ್ಗೆ ದಾಖಲಾದ ಪ್ರಕರಣದ ತನಿಖೆ ಕೈಗೊಂಡು, ಆರೋಪಿಗಳನ್ನು ಬಂಧಿಸಲಾಗಿದೆ’ ಎಂದರು.

‘ಜನರು ಹೆಚ್ಚು ಓಡಾಡುವ ರಜಾ ದಿನಗಳಂದು ಆರೋಪಿಗಳು, ಮಗುವನ್ನು ಎತ್ತಿಕೊಂಡು ರೈಲು ಹಾಗೂ ಬಸ್‌ಗಳಲ್ಲಿ ಸಂಚರಿಸುತ್ತಿದ್ದರು. ಕೆಲವು ಬಾರಿ ಟಿಕೆಟ್ ಕಾಯ್ದಿರಿಸುತ್ತಿದ್ದರು. ಹಲವು ಬಾರಿ, ಸಾಮಾನ್ಯ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದರು.’

‘ಚಿನ್ನಾಭರಣ ಇರುತ್ತಿದ್ದ ಮಹಿಳೆಯರನ್ನು ಗುರುತಿಸುತ್ತಿದ್ದ ಆರೋಪಿಗಳು, ಅವರ ಗಮನ ಬೇರೆಡೆ ಸೆಳೆದು ಕಳ್ಳತನ ಮಾಡುತ್ತಿದ್ದರು. ನಿಲ್ದಾಣ ಬರುತ್ತಿದ್ದಂತೆ ರೈಲಿನಿಂದ ಇಳಿದು ಪರಾರಿಯಾಗುತ್ತಿದ್ದರು. ಬೇಸಿಗೆಯಲ್ಲಿ ಹೆಚ್ಚಾಗಿ ಕಳ್ಳತನ ಮಾಡುತ್ತಿದ್ದ ಆರೋಪಿಗಳು, ನಂತರ ಏಳು ತಿಂಗಳು ತಮ್ಮೂರಿಗೆ ಹೋಗುತ್ತಿದ್ದರು. ಬಳಿಕ ಪುನಃ ನಗರಕ್ಕೆ ಬಂದು ಕಳ್ಳತನ ಮಾಡುತ್ತಿದ್ದರು. ಬಸ್‌ಗಳಲ್ಲಿಯೂ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಸೌಮ್ಯಲತಾ ಹೇಳಿದರು.

ಆಭರಣ ಕಳವು: ಇಬ್ಬರ ಬಂಧನ

ಬೆಂಗಳೂರು: ಜಾತ್ರೆ, ದೇವರ ಉತ್ಸವ, ವಿವಿಧ ಸಮಾರಂಭಗಳಲ್ಲಿ ಜನರ ಚಿನ್ನಾಭರಣ ಕದಿಯುತ್ತಿದ್ದ ಆರೋಪದಡಿ ಇಬ್ಬರು ಮಹಿಳೆಯರನ್ನು ರಾಜಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಜಾಜಿನಗರದ ಆಶಾ ಹಾಗೂ ಜ್ಯೋತಿ ಬಂಧಿತರು. ಇವರಿಂದ 233 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ಕಳ್ಳತನ ಪ್ರಕರಣದಲ್ಲಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದರು. ಜನ ಸಂದಣಿ ಸ್ಥಳಗಳಲ್ಲಿ ಆರೋಪಿಗಳು, ಜನರ ಗಮನ ಬೇರೆಡೆ ಸೆಳೆದು ಚಿನ್ನಾಭರಣ ಕದಿಯುತ್ತಿದ್ದರು. ಇವರ ಬಂಧನದಿಂದ 7 ಪ್ರಕರಣಗಳು ಪತ್ತೆಯಾಗಿವೆ’ ಎಂದರು.

ಜೀವ ವಿಮೆ ಸೋಗು: ₹ 4.51 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳ ಹೆಸರಿನಲ್ಲಿ ಜೀವ ವಿಮೆ ಮಾಡಿಸಿಕೊಡುವುದಾಗಿ ಹೇಳಿ ಜನರಿಂದ ₹ 4.51 ಕೋಟಿ ಪಡೆದು ವಂಚಿಸಿದ್ದ ಆರೋಪದಡಿ ಮನೋಜ್ ಸಿಂಗ್ ಅಲಿಯಾಸ್ ಮನ್ವೀರ್‌ಸಿಂಗ್ (40) ಎಂಬುವವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಉತ್ತರ ಪ್ರದೇಶದ ಗಾಜಿಯಾಬಾದ್‌ನ ಮನೋಜ್‌ಸಿಂಗ್, ದೇಶದ ಹಲವು ರಾಜ್ಯಗಳ ಜನರನ್ನು ವಂಚಿಸಿದ್ದ. ಈತನನ್ನು ಉತ್ತರ ಪ್ರದೇಶದಲ್ಲಿ ಬಂಧಿಸಿ ನಗರಕ್ಕೆ ಇತ್ತೀಚೆಗೆ ಕರೆತರಲಾಗಿದೆ’ ಎಂದು ಪೊಲೀಸ್ ಕಮಿಷನರ್ ಬಿ.ದಯಾನಂದ್ ಹೇಳಿದರು.

ಮನೋಜ್‌ಸಿಂಗ್

‘ಆರೋಪಿ ಕೃತ್ಯದ ಬಗ್ಗೆ ನಗರದ ವಿವಿಧ ಸೈಬರ್ ಕ್ರೈಂ ಠಾಣೆಗಳಲ್ಲಿ 34 ಪ್ರಕರಣಗಳು ದಾಖಲಾಗಿದ್ದವು. ತನಿಖೆ ಕೈಗೊಂಡಾಗ, ₹ 4.51 ಕೋಟಿ ವಂಚನೆ ಆಗಿರುವುದು ಗೊತ್ತಾಗಿದೆ. ಆದಿತ್ಯ ಬಿರ್ಲಾ ಸನ್ ಲೈಫ್ ಇನ್ಶೂರೆನ್ಸ್, ಎಚ್‌ಡಿಎಫ್‌ಸಿ ಹಾಗೂ ಐಸಿಐಸಿಐ ಇನ್ಶೂರೆನ್ಸ್ ಕಂಪನಿ ಹೆಸರಿನಲ್ಲಿ ಆರೋಪಿ ಜನರನ್ನು ವಂಚಿಸುತ್ತಿದ್ದ’ ಎಂದು ತಿಳಿಸಿದರು.

ವಿಡಿಯೊ ನೋಡಿ ಸಂಚು: ‘ಆರೋಪಿ ಮನೋಜ್‌ಸಿಂಗ್, ಬಿ.ಎಸ್ಸಿ ಪದವೀಧರ. ನೋಯ್ಡಾದಲ್ಲಿರುವ ಕಂಪನಿಯೊಂದರಲ್ಲಿ ಕೆಲ ತಿಂಗಳು ಕೆಲಸ ಮಾಡಿದ್ದ. ವೇತನ ಕಡಿಮೆ ಇದ್ದಿದ್ದರಿಂದ ಕೆಲಸಕ್ಕೆ ರಾಜೀನಾಮೆ ನೀಡಿದ್ದ. ರಿಯಲ್ ಎಸ್ಟೇಟ್ ಏಜೆಂಟ್ ಕೆಲಸ ಮುಂದುವರಿಸಿ, ಸಾಕಷ್ಟು ನಷ್ಟ ಅನುಭವಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಹೆಚ್ಚು ಹಣ ಸಂಪಾದಿಸಬೇಕು ಎಂದುಕೊಂಡಿದ್ದ ಆರೋಪಿ, ಜೀವ ವಿಮೆಗೆ ಸಂಬಂಧಪಟ್ಟ ವಿಡಿಯೊಗಳನ್ನು ಯೂಟ್ಯೂಬ್‌ನಲ್ಲಿ ವೀಕ್ಷಿಸಿದ್ದ. ಗ್ರಾಹಕರನ್ನು ಹೇಗೆ ಸಂಪರ್ಕಿಸಬೇಕು ? ಅವರ ಜೊತೆ ಹೇಗೆ ಮಾತನಾಡಬೇಕು ? ಜೀವ ವಿಮೆ ನಕಲಿ ದಾಖಲೆ ಸೃಷ್ಟಿ ಹೇಗೆ ? ಎಂಬುದನ್ನು ತಿಳಿದಿದ್ದ. ಜೀವ ವಿಮೆ ಹೆಸರಿನಲ್ಲಿ ಜನರನ್ನು ವಂಚಿಸಲು ಸಂಚು ರೂಪಿಸಿದ್ದ’ ಎಂದು ತಿಳಿಸಿದರು.

ಕಿಸಾನ್ ಸೇವಾ ಕೇಂದ್ರ ನಿರ್ವಹಣೆ: ‘ಆರಂಭದಲ್ಲಿ ವ್ಯಕ್ತಿಯೊಬ್ಬರಿಗೆ ಕರೆ ಮಾಡಿದ್ದ ಆರೋಪಿ, ನಯವಾಗಿ ಮಾತನಾಡಿದ್ದ. ಜೀವ ವಿಮೆ ಮಾಡಿಸುವುದಾಗಿ ಹೇಳಿ ಹಣ ಪಡೆದು ವಂಚಿಸಿದ್ದ. ನಂತರ, ಆನ್‌ಲೈನ್ ಮೂಲಕ ಹಲವರ ಮೊಬೈಲ್ ನಂಬರ್ ಸಂಗ್ರಹಿಸಿದ್ದ. ಅವರೆಲ್ಲರಿಗೂ ಕರೆ ಮಾಡಿ, ವಂಚನೆ ಮಾಡಿದ್ದ’ ಎಂದು ಪೊಲೀಸರು ಹೇಳಿದರು.

‘ವಂಚನೆಯಿಂದ ಬಂದ ಹಣದಲ್ಲಿ ಆರೋಪಿ, ತನ್ನೂರಿನಲ್ಲಿ ಕಿಸಾನ್ ಸೇವಾ ಕೇಂದ್ರ ತೆರೆದಿದ್ದ. ಕೃಷಿ ಉಪಕರಣ ಹಾಗೂ ರಸಗೊಬ್ಬರ ಮಾರುತ್ತಿದ್ದ. ಆರೋಪಿ ವಂಚನೆ ಸಂಗತಿ ಯಾರಿಗೂ ಗೊತ್ತಿರಲಿಲ್ಲ. ಆದಿತ್ಯ ಬಿರ್ಲಾ ಸನ್ ಲೈಫ್ ಇನ್ಶೂರೆನ್ಸ್ ಹಾಗೂ ಐಸಿಐಸಿಐ ಇನ್ಶೂರೆನ್ಸ್ ಹೆಸರಿನಲ್ಲಿ ನಕಲಿ ಜಾಲತಾಣವನ್ನೂ ಆರೋಪಿ ಸೃಷ್ಟಿಸಿದ್ದ’ ಎಂದು ತಿಳಿಸಿದರು.

ಅಪಘಾತ: ಲಾರಿ ಚಕ್ರ ಹರಿದು ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಗೇರಿ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಲಾರಿ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಹಿಂಬದಿ ಸವಾರ ಶೇಖ್ ಅನ್ವರ್ (34) ಮೃತಪಟ್ಟಿದ್ದಾರೆ.

‘ಬಿಹಾರದ ಶೇಖ್ ಅನ್ವರ್, ಹಲವು ವರ್ಷಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಕೆಂಗೇರಿಯಲ್ಲಿ ವಾಸವಿದ್ದರು’ ಎಂದು ಪೊಲೀಸರು ಹೇಳಿದರು.

‘ಶೇಖ್ ಅನ್ವರ್ ಹಾಗೂ ಸ್ನೇಹಿತ ಮೊಹಮ್ಮದ್ ನಾದೀರ್ ಅವರು ಸೋಮವಾರ ರಾತ್ರಿ ಬೈಕ್‌ನಲ್ಲಿ ಹೊರಟಿದ್ದರು. ಅನ್ವರ್ ಅವರು ಹಿಂಬದಿಯಲ್ಲಿ ಕುಳಿತಿದ್ದರು. ಮೈಸೂರು ಮುಖ್ಯರಸ್ತೆ ಮಧು ಜಂಕ್ಷನ್ ಬಳಿ ಅತೀ ವೇಗವಾಗಿ ಹೊರಟಿದ್ದ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದಿತ್ತು.’

‘ಬೈಕ್ ಸಮೇತ ಉರುಳಿ ರಸ್ತೆಗೆ ಬಿದ್ದಿದ್ದ ಶೇಖ್ ಅನ್ವರ್ ಮೈ ಮೇಲೆ ಲಾರಿಯ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ಅವರು ಮೃತಪಟ್ಟಿದ್ದಾರೆ. ಸವಾರ ನಾದೀರ್ ಅವರೂ ಗಾಯಗೊಂಡಿದ್ದಾರೆ. ಲಾರಿ ಚಾಲಕನ ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತ ಸಂಭವಿಸಿರುವುದು ತನಿಖೆಯಿಂದ ಗೊತ್ತಾಗಿದೆ. ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ತಿಳಿಸಿದರು.



ಮಿಕ್ಸೆಡ್ ರಿಯಾಲಿಟಿಯ ಮಿಶ್ರ ವಾಸ್ತವ!

ಕೃಷ್ಣ ಭಟ್

'ಮಿಕ್ಸೆಡ್ ರಿಯಾಲಿಟಿ'ಯ ವಿಷಯಕ್ಕೆ ಬಂದರೆ ಸದ್ಯಕ್ಕೆ ಎಲ್ಲರೂ ಕುತೂಹಲದಿಂದ, ಎರಡೂ ಕಣ್ಣು ಬಿಟ್ಟು ನೋಡುವಂಥ ವಿದ್ಯಮಾನವೊಂದು ಜರುಗುತ್ತಿದೆ. ಹಿಂದೆ ಹೀಗಾಗಿರಲಿಲ್ಲವೇ – ಎಂದು ಕೇಳಿದರೆ, ಇಷ್ಟು ಕುತೂಹಲ ಹುಟ್ಟಿಸುವಂಥ ಘಟನೆ ನಡೆದಿರಲಿಲ್ಲ ಎನ್ನಬಹುದೇನೋ? ಆದರೆ, ತಂತ್ರಜ್ಞಾನ ವಲಯದಲ್ಲಿ ಇದೊಂದು ಹೊಸ ವಿದ್ಯಮಾನವಲ್ಲ. ಆದರೆ, ಮಿಕ್ಸೆಡ್ ರಿಯಾಲಿಟಿ ಮಾರುಕಟ್ಟೆಯಲ್ಲಿ ಇದೊಂದು ಈ ಶತಮಾನದಲ್ಲಿ ತಂತ್ರಜ್ಞಾನದ ದಿಕ್ಕನ್ನು ಸೂಚಿಸುವ ಬೆಳವಣಿಗೆ ಎಂದೇನಾದರೂ ಹೇಳಬಹುದು. ಅಂಥದ್ದೊಂದು ಕುತೂಹಲಕ್ಕೆ ಕಾರಣವಾಗಿದ್ದು 'ಆ್ಯಪಲ್ ವಿಷನ್ ಪ್ರೋ' ಎಂಬ ಪ್ರಾಡಕ್ಟ್!

'ಮಿಕ್ಸೆಡ್ ರಿಯಾಲಿಟಿ' ಎಂಬುದು ವರ್ಚುವಲ್ ರಿಯಾಲಿಟಿಗಿಂತ ಸ್ವಲ್ಪ ಭಿನ್ನ. ಈ ಮಿಕ್ಸೆಡ್ ರಿಯಾಲಿಟಿಯಲ್ಲಿ ಡಿಜಿಟಲ್ ಕಂಟೆಂಟ್ ಅನ್ನು ನಮ್ಮ ಸುತ್ತಲಿನ ಪರಿಸರದ ಮೇಲೆಯೇ ಇಟ್ಟು ತೋರಿಸಲಾಗುತ್ತದೆ. ಇದರಲ್ಲಿ ನಾವು ನಮ್ಮ ಮನೆಯ ಹಾಲ್‌ನಲ್ಲಿ ಕುಳಿತರೆ, ಎದುರಿನ ಖಾಲಿ ಗೋಡೆಯೇ ಸಿನಿಮಾ ಥಿಯೇಟರ್‌ನಷ್ಟು ದೊಡ್ಡ ಸ್ಕ್ರೀನ್ ಆಗುತ್ತದೆ. ಅಲ್ಲಿ ಸಿನಿಮಾ ನೋಡಬಹುದು, ಗೇಮ್ ಪ್ಲೇ ಮಾಡಬಹುದು. ಇದರ ಪಕ್ಕದಲ್ಲೇ, ನಮ್ಮ ವರ್ಕ್ ಸ್ಪೇಸ್ ಅನ್ನೂ ಮಾಡಿಕೊಳ್ಳಬಹುದು. ಅಲ್ಲಿ ನಮಗೆ ಬೇಕಾದ ಫೇಸ್ಟೈಮ್, ಪ್ರೊಡಕ್ಟಿವಿಟಿ ಆ್ಯಪ್‌ಗಳು ಇರುತ್ತವೆ. ಎರಡು ಕೈ ಬೆರಳಲ್ಲಿ ಸನ್ನೆ ಮಾಡಿ ಅವುಗಳನ್ನು ಬಳಕೆ ಮಾಡಬಹುದು. ಎಂದರೆ, ಈಗಿರುವ ಅಪ್ಲಿಕೇಶನ್‌ಗಳನ್ನೇ ನಾವು ಬಳಸುವ ರೀತಿ ವಿಭಿನ್ನವಾಗಿದೆ.

ಆ್ಯಪಲ್ ವಿಷನ್ ಪ್ರೋ ಈಗ ಮಾರುಕಟ್ಟೆಯಲ್ಲಿರುವ ಸಾಧನಗಳಿಗಿಂತ ಅತ್ಯಂತ ಅದ್ಭುತ ಅನುಭವವನ್ನು ಕಟ್ಟಿಕೊಡುತ್ತದೆ. ನಮ್ಮನ್ನು ಪ್ರೊಡಕ್ಟಿವಿಟಿ, ಮನೋರಂಜನೆ ಸೇರಿದ ಹಾಗೆ ಎಲ್ಲದರಲ್ಲೂ ಮುಳುಗಿಸಿಬಿಡುವಷ್ಟು ಆಕರ್ಷಕವಾಗಿದೆ. ಹೀಗಾಗಿ ಇದು ಈ ಕ್ಷೇತ್ರದಲ್ಲಿ ಹೀರೋ ಆಗಿದೆ. ಹಾಗೆ ನೋಡಿದರೆ, ಮೆಟಾ ಸಂಸ್ಥೆಯ ಮೆಟಾ ಕ್ವೆಸ್ಟ್ 3 ಮಾರುಕಟ್ಟೆಯಲ್ಲಿ ಸ್ವಲ್ಪ ಕಾಲದಿಂದಲೂ ಇದೆ. ಇದು ಗೇಮರ್‌ಗಳಲ್ಲಿ ಹೆಚ್ಚು ಜನಪ್ರಿಯವಾಗಿದೆ. ಮಿಕ್ಸೆಡ್ ರಿಯಾಲಿಟಿ ಎಂದರೆ ಈವರೆಗೆ ಮೆಟಾ ಕ್ವೆಸ್ಟ್ 3 ಎಂದೇ ಜನರು ಎಂದುಕೊಳ್ಳುವಷ್ಟು ಈವರೆಗೆ ಅದು ಮಾರುಕಟ್ಟೆಯಲ್ಲಿ ತನ್ನ ಆಧಿಪತ್ಯವನ್ನು ಸ್ಥಾಪಿಸಿದೆ.

ಆದರೆ, ಆ್ಯಪಲ್ ಈ ಕ್ಷೇತ್ರಕ್ಕೆ ಕಾಲಿಟ್ಟಿತು. ವಿಶೇಷವೆಂದರೆ ಈ ಆ್ಯಪಲ್ ವಿಷನ್ ಪ್ರೋ ಅನ್ನು ಬಿಡುಗಡೆ ಮಾಡುವುದಕ್ಕೆ ಆ್ಯಪಲ್ ಅಷ್ಟೇನೂ ಜನಪ್ರಿಯ ವಿಧಾನಗಳನ್ನು ಬಳಸಲಿಲ್ಲ. ತನ್ನ ಫೋನ್ ಹಾಗೂ ಇತರ ಉತ್ಪನ್ನಗಳನ್ನು ಬಿಡುಗಡೆ ಮಾಡುವಾಗ ಮಾಡಿದ ಹಾಗೆ ಗ್ರಾಹಕರಿಗೆ ಡೆಮಾನ್ಸ್ಟ್ರೇಶನ್ ನೀಡಲಿಲ್ಲ. ಪ್ರಚಾರವನ್ನೂ ಮಾಡಲಿಲ್ಲ. ಆದರೆ, ಅದು ಮಾರುಕಟ್ಟೆಗೆ ಬರುತ್ತಿದ್ದಂತೆಯೇ ಅದನ್ನು ಖರೀದಿಸಿ ಅದರ ಅನುಭವವನ್ನು ಪಡೆದುಕೊಳ್ಳಬೇಕು ಎಂಬುವವರ ಕುತೂಹಲಕ್ಕೇನೂ ಕಡಿಮೆ ಇರಲಿಲ್ಲ. ಮಾರಾಟವಾಯಿತು, ಜನಪ್ರಿಯವೂ ಆಯಿತು.

ಆದರೆ, ಈ ಮಿಕ್ಸೆಡ್ ರಿಯಾಲಿಟಿಯ ಸಮಸ್ಯೆಯಿರುವುದು ಇದನ್ನು ದೈನಂದಿನ ಅಗತ್ಯಕ್ಕೆ ಬಳಸುವುದು ಹೇಗೆ ಎಂಬುದು! ನಾವು ತಂತ್ರಜ್ಞಾನವನ್ನು ಮನೋರಂಜನೆಯಿಂದ ಹೊರತುಪಡಿಸಿ, ದೈನಂದಿನ ಕೆಲಸಗಳಿಗೆ, ಫಲಪ್ರದವಾಗಿ ಬಳಸುವುದಕ್ಕೆ ಎರಡು ಮುಖ್ಯ ಕಾರಣಗಳಿರುತ್ತವೆ. ಒಂದು, ನಮ್ಮ ಕೆಲಸವನ್ನು ಸುಲಭವಾಗಿಸುವುದು; ಇನ್ನೊಂದು, ಸಮಸ್ಯೆಗಳ ಪರಿಹಾರಕ್ಕೆ. ಈ ಎರಡಕ್ಕೂ ಮಿಕ್ಸೆಡ್ ರಿಯಾಲಿಟಿ ಉಪಯುಕ್ತವಲ್ಲ!

ಹೀಗಾಗಿ, ಮಿಕ್ಸೆಡ್ ರಿಯಾಲಿಟಿ ಎಂಬುದು ಸದ್ಯದ ಮಟ್ಟಿಗೆ ಪ್ರಶ್ನೆಯಿಲ್ಲದ ಉತ್ತರವಿದ್ದಂತೆ! ಎಲ್ಲ ಕಂಪನಿಗಳೂ ಇದರ ಯೂಸ್ ಕೇಸ್‌ಗಳನ್ನು ಅಂದರೆ, ಇದನ್ನು ಎಲ್ಲಿ ದೈನಂದಿನ ಬಳಕೆಗೆ ಅನ್ವಯಿಸಬಹುದು ಎಂಬುದರ ಹುಡುಕಾಟದಲ್ಲಿವೆ. ಎಂದರೆ, ತಂತ್ರಜ್ಞಾನ ಕಂಪನಿಗಳು ಉತ್ತರವನ್ನು ಕಂಡುಕೊಂಡಿವೆ. ಪ್ರಶ್ನೆಗಾಗಿ ಹುಡುಕಾಡುತ್ತಿವೆ.

ಬಹುಶಃ ಇದೇ ಉದ್ದೇಶಕ್ಕೇ ಏನೋ, ಮೈಕ್ರೋಸಾಫ್ಟ್ ತುಂಬ ಹಿಂದೆಯೇ ತನ್ನ ವಿಂಡೋಸ್ ಮಿಕ್ಸೆಡ್ ರಿಯಾಲಿಟಿಯಲ್ಲಿ ಆಸಕ್ತಿ ಕಳೆದುಕೊಂಡಿದೆ. ಅದರದ್ದೇ ಇನ್ನೊಂದು ಉತ್ಪನ್ನದ ಶೋಧ ಹೋಲೋಲೆನ್ಸ್ 3 ಕೂಡ ರದ್ದಾಗಿದೆ. ಇನ್ನು ಎಚ್ಟಿ ಸಂಸ್ಥೆಯ ರಿವರ್ಬ್ ಕೂಡ ಆಸಕ್ತಿ ಕಳೆದುಕೊಂಡು ನಿಂತಿದೆ. ಸದ್ಯ, ಮಿಕ್ಸೆಡ್ ರಿಯಾಲಿಟಿ ವಿಷಯದಲ್ಲಿ ಎಲ್ಲ ಕಂಪನಿಗಳ ಊಹೆಯೇನೆಂದರೆ, ಇದು ಶಿಕ್ಷಣ ಮತ್ತು ಇತರ ಅತ್ಯಂತ ಕಡಿಮೆ ಬಳಕೆಯ ವಲಯದಲ್ಲಿ ಮಾತ್ರ ಬಳಸಬಹುದು. ಅದನ್ನು ಬಿಟ್ಟರೆ, ಗೇಮಿಂಗ್ ವಲಯ ಇದನ್ನು ಅಪ್ಪಿಕೊಳ್ಳಬಹುದು. ಈ ನಿಟ್ಟಿನಲ್ಲಿ, ಮೆಟಾ ಈಗ ಕನ್ನಡಕಗಳ ತಯಾರಕ ಕಂಪನಿ ರೇಬಾನ್ ಜೊತೆಗೆ ಒಪ್ಪಂದ ಮಾಡಿಕೊಂಡು, ಆ ಕಂಪನಿಯ ಕನ್ನಡಕಗಳಲ್ಲಿ ಮೆಟಾ ತನ್ನ ಸಾಫ್ಟ್‌ವೇರ್ ಅನ್ನು ಅಳವಡಿಸಿ, ರೇಬಾನ್ ಕನ್ನಡಕಗಳನ್ನು ಸ್ಮಾರ್ಟ್ ಆಗಿಸಬಹುದೇ ಎಂದು ನೋಡುತ್ತಿದೆ.

ಮಿಕ್ಸೆಡ್ ರಿಯಾಲಿಟಿ ಉತ್ಪನ್ನಗಳ ಬಳಕೆ ಒಂದಷ್ಟು ಕಡೆ ಆಗಿದೆ. ಉದಾಹರಣೆಗೆ, ಅಮೆರಿಕದ ಕಟ್ಟಡ ನಿರ್ಮಾಣ ಕಂಪನಿಯೊಂದು, ತನ್ನ ಕೆಲಸಗಾರರಿಗೆ, ಎಂಜಿನಿಯರುಗಳಿಗೆ ಕಟ್ಟಡದ ಪ್ಲಾನ್ ಅನ್ನು ಹೇಳುವುದಕ್ಕೆ ಮೈಕ್ರೋಸಾಫ್ಟ್ ಹಾಲೋಲೆನ್ಸ್ ಬಳಸಿದೆ. ಇನ್ನು ಎಚ್ಟಿಸಿ ಕಂಪನಿಯ ವಿಆರ್ ಹೆಡ್ಸೆಟ್ ವಿವ್ ಫೋಕಸ್ 3 ಅನ್ನು ಕಳುಹಿಸಿಕೊಡಲಾಗಿತ್ತು. ಅಲ್ಲಿ ಅದು ಗಗನಯಾನಿಗಳಿಗೆ ಹಲವು ಅನುಕೂಲಗಳನ್ನು ಒದಗಿಸಿದೆಯಂತೆ. ಇನ್ನು, ಲಂಡನ್‌ನ ಆಸ್ಪತ್ರೆಯೊಂದರಲ್ಲಿ ರೋಗಿಯ ಸರ್ಜರಿ ಸಮಯದಲ್ಲಿ ಆ್ಯಪಲ್ ವಿಷನ್ ಪ್ರೋ ಬಳಸಿದ್ದರಂತೆ. ಆದರೆ, ಒಂದು ಉತ್ಪನ್ನ ವ್ಯಾಪಕವಾಗಿ ಬಳಕೆಗೆ ಬರುವುದಕ್ಕೆ, ಇಷ್ಟು ಸಾಲದು ಎನ್ನುತ್ತದೆ ತಂತ್ರಜ್ಞಾನ ಮಾರ್ಕೆಟಿಂಗ್ ವಲಯ.

ಯಾಕೆ ಈ ಮಿಕ್ಸೆಡ್ ರಿಯಾಲಿಟಿ ಎಂಬ ಕಲ್ಪನೆ ರೂಪತಳೆದು ಇಷ್ಟು ವರ್ಷವಾದರೂ ಜನರ ದೈನಂದಿನ ಬಳಕೆಯಲ್ಲಿ ಸೇರಿಹೋಗುವುದಕ್ಕೆ ಸಾಧ್ಯವಾಗಲಿಲ್ಲ ಎಂಬುದಕ್ಕೆ ಕಾರಣಗಳು ಹಲವು. ಮೊದಲನೆಯದಾಗಿ, ಇದರಲ್ಲಿ ಕಾಲಕಾಲಕ್ಕೆ ಅಂದರೆ, ವರ್ಷಕ್ಕೋ, ಎರಡು ವರ್ಷಕ್ಕೋ ಹೊಸ ಹೊಸ ಸಂಶೋಧನೆಗಳು ಆಗಿ, ಅದು ಮಾರುಕಟ್ಟೆಗೆ ಬರಲಿಲ್ಲ. ಇನ್ನು, ತಂತ್ರಜ್ಞಾನ ಕುತೂಹಲಿಗಳಲ್ಲಿ ಇತ್ತೀಚೆಗೆ ಎರಡು ಗೋಡೆಯ ಮಧ್ಯೆಯೇ ತಂತ್ರಜ್ಞಾನವನ್ನು ಅನ್ವೇಷಿಸುವ ಕುತೂಹಲ ಕಡಿಮೆಯಾಗಿದ್ದು, ಈ ಸಾಧನ ಕೂಡ ಬಳಸುವವರನ್ನು ಕೋಣೆಯಲ್ಲೇ ಕೂಡಿ ಹಾಕುತ್ತದೆ. ಇದರಲ್ಲಿ ಎಷ್ಟೇ ಸಂಶೋಧನೆ ನಡೆದರೂ, ಮಾನವನ ಕಣ್ಣಿನ ದೃಷ್ಟಿಯಷ್ಟೇ ಪರಿಣಾಮಕಾರಿಯಾಗಿ ಈ ಸಾಧನಗಳನ್ನು ರೂಪಿಸಲು ಸಾಧ್ಯವಾಗಿಲ್ಲ. ಅದೆಲ್ಲದರ ಜೊತೆಗೆ, ಈ ಸಾಧನವನ್ನು ಈಗಿಂದೀಗಲೇ ಬಳಸಬೇಕು ಎಂಬಂತಹ ಆಕರ್ಷಣೆ ಹುಟ್ಟಿಸುವ 'ಅದ್ಭುತ ಆ್ಯಪ್‌ಗಳೂ' ಇನ್ನೂ ಹುಟ್ಟಿಕೊಂಡಿಲ್ಲ.

ಹೀಗಾಗಿ, ಸದ್ಯಕ್ಕೆ ಮಿಕ್ಸೆಡ್ ರಿಯಾಲಿಟಿ ಹೆಡ್‌ಸೆಟ್‌ಗಳು ಗೇಮರ್‌ಗಳ ಮೆಚ್ಚಿನ ಸಾಧನವಾಗಿಯೇ ಮುಂದುವರಿಯಲಿದೆ. ಆ್ಯಪಲ್ ಇದರಲ್ಲಿ ಕೋಟ್ಯಂತರ ಡಾಲರ್ ಸುರಿಯುವುದರಿಂದ ಮುಂದಿನ ದಿನಗಳಲ್ಲಿ ಇದಕ್ಕೆ ಬೇಕಾದ ಇನ್ನಷ್ಟು ಕಂಟೆಂಟ್ ಸೃಷ್ಟಿಯಾಗಬಹುದು. ಅದು ಈ ವಲಯದಲ್ಲಿ ಇನ್ನಷ್ಟು ಹೊಸ ಸಂಶೋಧನೆಗೆ ಕಾರಣವಾಗಬಹುದು. ❖

ಕುಕೀ: ಅಂತರ್ಜಾಲದಲ್ಲಿ ಹೆಜ್ಜೆಗುರುತುಗಳ ಪತ್ತೆದಾರಿ

ಅವಿನಾಶ್ ಬಿ.

ನಿಮಗೊಂದು ಒಳ್ಳೆಯ ಶೂ ಬೇಕು, ಅದರ ಖರೀದಿಗೆ ಆಸಕ್ತಿ ತೋರಿಸಿ ನೀವು ಬ್ರೌಸರ್‌ನಲ್ಲಿ ಗೂಗಲ್ ಸರ್ಚ್ ಎಂಜಿನ್ ಮೂಲಕ ಜಾಲಾಡುತ್ತೀರಿ. ನಿಮಗೆ ಬೇಕಾದ ಮಾಹಿತಿ ಸಿಕ್ಕ ಬಳಿಕ ನೀವು ಬ್ರೌಸರ್ ಮುಚ್ಚುತ್ತೀರಿ. ಮುಂದಿನ ಬಾರಿ ನಿಮ್ಮ ಸಾಮಾಜಿಕ ಜಾಲತಾಣ ಫೇಸ್‌ಬುಕ್ ಅಥವಾ 'ಎಕ್ಸ್' (ಟ್ವಿಟರ್) ತೆರೆಯುತ್ತೀರಿ. ಇಲ್ಲವೇ ನೀವು ಪ್ರತಿ ದಿನ ನೋಡುವ ಜಾಲತಾಣ ತೆರೆಯುತ್ತೀರಿ. ಆದರೆ ನಿಮಗೇ ಆಶ್ಚರ್ಯವಾಗುತ್ತದೆ, ವಿಭಿನ್ನ ಬ್ರ್ಯಾಂಡ್‌ಗಳ ಶೂಗಳ ಜಾಹೀರಾತುಗಳೇ ಕಾಣಿಸುತ್ತವೆ. ಅದರಲ್ಲಿ ಕೊಡುಗೆಗಳು, ಕಡಿತಗಳು (ಡಿಸ್ಕೌಂಟ್) ಎಲ್ಲವೂ ಇರುತ್ತದೆ. ಮಾತ್ರವಲ್ಲ, ನೀವದನ್ನು ಕ್ಲಿಕ್ ಮಾಡುವಂತೆ ಆಮಿಷವೊಡ್ಡಲಾಗುತ್ತದೆ.

ನೀವು ಶೂ ಖರೀದಿಸಬೇಕೆಂದಿದ್ದೀರಿ ಎನ್ನುವುದು ಈ ಜಾಲತಾಣಗಳಿಗೆ ಹೇಗೆ ಗೊತ್ತಾಯಿತು? ಹೀಗೆಂದು ಚಕಿತರಾಗಿದ್ದೀರಾ? ಇದು ಕುಕೀಗಳ (Cookies) ಕರಾಮತ್ತು.

ಏನಿವು ಕುಕೀಗಳು?

ಇದೇನೂ ಬಿಸ್ಕತ್ತಲ್ಲ; ಆದರೆ ಬಿಸ್ಕತ್ತು ನೀಡಿ ತಮ್ಮ ವ್ಯಾಪಾರ ಹೆಚ್ಚಿಸಿಕೊಳ್ಳಲು ವಿವಿಧ ವಾಣಿಜ್ಯ ಕಂಪನಿಗಳಿಗೆ ನೆರವಾಗುತ್ತವೆ ಇವು. ತಂತ್ರಜ್ಞಾನದ ಪರಿಭಾಷೆಯಲ್ಲಿ ಕುಕೀಗಳು ಎಂದರೆ ಬಳಕೆದಾರರ ದತ್ತಾಂಶವನ್ನು ಫೈಲ್ ರೂಪದಲ್ಲಿ ಸಂಗ್ರಹಿಸುವ ವ್ಯವಸ್ಥೆ. ಕಂಪನಿಗಳು ಕುಕೀಗಳನ್ನು ಇರಿಸಿ, ಅವುಗಳಲ್ಲಿ ಲಭ್ಯವಾಗುವ ದತ್ತಾಂಶವನ್ನು ಸಂಗ್ರಹಿಸುತ್ತವೆ. ಬ್ರೌಸರ್‌ನಲ್ಲಿ ನೀವು ಯಾವುದಾದರೂ ಜಾಲತಾಣಗಳಿಗೆ ಲಾಗ್ ಇನ್ ಆಗಿದ್ದರೆ, ಸ್ವಯಂಚಾಲಿತವಾಗಿ ನಿಮ್ಮ ವಿವರಗಳನ್ನು ಈ ಕುಕೀಗಳು ಬ್ರೌಸರ್‌ನ ಕ್ಯಾಶ್ (Cache) ಮೆಮೊರಿಯಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತವೆ. ಉದಾಹರಣೆಗೆ, ನಿಮ್ಮ ಲಾಗಿನ್ ಹೆಸರು, ಪಾಸ್‌ವರ್ಡ್, ಅದಕ್ಕೆ ಸಂಬಂಧಿಸಿದ ಫೋನ್ ನಂಬರ್, ಇಮೇಲ್ ವಿಳಾಸ, ಯಾವ ಸ್ಥಳದಿಂದ ಲಾಗಿನ್ ಆಗಿದ್ದೀರಿ, ನೀವು ಯಾವುದೆಲ್ಲಾ ವೆಬ್ ಸೈಟುಗಳಿಗೆ ಭೇಟಿ ನೀಡುತ್ತೀರಿ? ಅಂತರ್ಜಾಲದಲ್ಲಿ ನಿಮ್ಮ ಆಸಕ್ತಿಯೇನು? ನೀವು ನೋಡುವ ವಿಡಿಯೊಗಳು ಯಾವುವು? ನಿಮಗೆ ಶೈಕ್ಷಣಿಕ ತಾಣಗಳು ಇಷ್ಟವೋ, ಸುದ್ದಿ ಜಾಲತಾಣಗಳೋ, ಆರೋಗ್ಯಕ್ಕೆ ಸಂಬಂಧಿಸಿದವುಗಳೋ ಅಥವಾ ಜ್ಯೋತಿಷ್ಯದಲ್ಲಿ ನಿಮಗೆ ಆಸಕ್ತಿಯಿದೆಯೋ? ಅಥವಾ ಪೋರ್ನ್ ಸೈಟುಗಳು ನಿಮಗಿಷ್ಟವೋ ಎಂಬುದನ್ನೂ ಈ ಕುಕೀಗಳು ಟ್ರ್ಯಾಕ್ ಮಾಡುತ್ತವೆ. ಎಂದರೆ ಅಂತರ್ಜಾಲದಲ್ಲಿ ನಮ್ಮ ಚಟುವಟಿಕೆಗಳೆಲ್ಲವೂ ಟ್ರ್ಯಾಕ್ ಆಗುತ್ತವೆ.ಈ ಕುಕೀಗಳನ್ನು ಬಳಸಿ, ನಿಮ್ಮ ಆಸಕ್ತಿಗೆ ಅನುಗುಣವಾಗಿ ಕಂಪನಿಗಳು ಸಂಬಂಧಿತ ಜಾಹೀರಾತನ್ನು ನಿಮಗಾಗಿ ತಳ್ಳುತ್ತವೆ. ಇದರ ಪರಿಣಾಮವಾಗಿಯೇ, ನಿಮ್ಮನ್ನು ಇಂಟರ್‌ನೆಟ್ ಸುಲಭವಾಗಿ ಅರ್ಥ ಮಾಡಿಕೊಳ್ಳುವುದು!

ಕುಕೀಗಳ ಬಗ್ಗೆ ಈಗ ಯಾಕೆ ಮಾತು?

ಸುಮಾರು ಮೂರು ದಶಕಗಳಿಂದ ನಮ್ಮ ಇಂಟರ್ನೆಟ್ ಜೀವನದ ಅವಿಭಾಜ್ಯ ಅಂಗವಾಗಿದ್ದ ಕುಕೀಗಳಿಗೆ ತಂತ್ರಜ್ಞಾನ ದಿಗ್ಗಜ ಸಂಸ್ಥೆ ಗೂಗಲ್ ಈಗ ಕಡಿವಾಣ ಹಾಕಲು ಹೊರಟಿದೆ. ಈಗಾಗಲೇ ಹಲವಾರು ಜಾಲತಾಣಗಳನ್ನು ತೆರೆದಾಗ 'ಕುಕೀಗಳನ್ನು ಅನುಮತಿಸಿ' ಎಂಬರ್ಥದ ಪಾಪ್-ಅಪ್ ವಿಂಡೋ ಹೆಚ್ಚಿನವರಿಗೆ ಕಾಣಿಸಿದೆ. ಬಳಕೆದಾರರ ಹಿತದೃಷ್ಟಿಯಿಂದ, ಖಾಸಗಿತನದ ರಕ್ಷಣೆಗಾಗಿ ಹಂತಹಂತವಾಗಿ ಕುಕೀಗಳನ್ನು ನಿವಾರಿಸಲಾಗುತ್ತಿದ್ದು, 2024 ಅಂತ್ಯದೊಳಗೆ ತನ್ನ ಬ್ರೌಸರ್ ತಂತ್ರಾಂಶವಾಗಿರುವ ಕ್ರೋಮ್‌ನಲ್ಲಿ ಡೀಫಾಲ್ಟ್ ಆಗಿ ಕುಕೀಗಳು ಬಳಕೆದಾರರ ಮಾಹಿತಿಯನ್ನು ಸಂಗ್ರಹಿಸುವುದಿಲ್ಲ ಎಂದು ಗೂಗಲ್ ಹೇಳಿಕೊಂಡಿದೆ. ಇತರ ಪ್ರಮುಖ ಬ್ರೌಸರುಗಳಾದ ಮೋಜಿಲ್ಲಾದ ಫೈರ್‌ಫಾಕ್ಸ್ 2019ರಲ್ಲಿ ಹಾಗೂ ಆ್ಯಪಲ್‌ನ ಸಫಾರಿ 2020ರಲ್ಲಿ ಕುಕೀಗಳಿಗೆ ಕಡಿವಾಣ ಹಾಕಿದ್ದವು. ಆದರೆ ಗೂಗಲ್‌ನ ಕ್ರೋಮ್ ಬ್ರೌಸರ್ ಹೆಚ್ಚು ಜನಪ್ರಿಯ. ಭಾರತದಲ್ಲಿ ಶೇ. 88 ಮಂದಿ ಹಾಗೂ ಜಗತ್ತಿನಾದ್ಯಂತ ಶೇ. 64 ಮಂದಿ ವೆಬ್ ಜಾಲಾಟಕ್ಕೆ ಇದೇ ಬ್ರೌಸರ್ ಅವಲಂಬಿತರಾಗಿದ್ದಾರೆ ಎನ್ನುತ್ತದೆ 'ಸಿಮಿಲರ್‌ವೆಬ್' ಜಾಲತಾಣದ ವರದಿ. ಕಳೆದ ಜನವರಿ 4ರಂದು ಶೇ.1ರಷ್ಟು ಬಳಕೆದಾರರ ಜಾಡು (ಟ್ರ್ಯಾಕ್) ಹಿಡಿಯದಂತೆ ಕುಕೀಗಳಿಗೆ ನಿರ್ಬಂಧ ವಿಧಿಸಿತ್ತು. ಜಾಗತಿಕವಾಗಿ 300 ಕೋಟಿಗೂ ಹೆಚ್ಚು ಬಳಕೆದಾರರು ಕ್ರೋಮ್ ಬಳಸುತ್ತಿದ್ದು, 2024ರ ಉತ್ತರಾರ್ಧದಲ್ಲಿ ಎಲ್ಲ ಬಳಕೆದಾರರಿಗೂ ಡೀಫಾಲ್ಟ್ ಕುಕೀಗಳನ್ನು ತಡೆಯಲಾಗುತ್ತದೆ.

ಯಾರಿಗೆ ಸಮಸ್ಯೆ?

ಎಲ್ಲಕ್ಕೂ ಮಿಗಿಲಾಗಿ, ಜಾಹೀರಾತು ಉದ್ಯಮಕ್ಕಿದು ದೊಡ್ಡ ಸವಾಲು. ಅಂತರ್ಜಾಲ ಬಳಕೆದಾರರ ಸಂಖ್ಯೆ ಹೆಚ್ಚುತ್ತಲೇ ಇದೆ ಮತ್ತು ಡಿಜಿಟಲ್ ಜಾಹೀರಾತು ಉದ್ಯಮವೂ ಬೃಹತ್ತಾಗಿ ಬೆಳೆಯುತ್ತಿದೆ. ಬಹುತೇಕ ಕುಕೀಗಳ ಆಧಾರದಲ್ಲೇ ಡಿಜಿಟಲ್ ಜಾಹೀರಾತು ಲೋಕ ನಿಂತಿದ್ದು, ವಾರ್ಷಿಕವಾಗಿ ಕೋಟ್ಯಂತರ ರೂಪಾಯಿ ವಹಿವಾಟು ನಡೆಯುತ್ತಿದೆ. ಕುಕೀಗಳಲ್ಲಿ ಬಳಕೆದಾರರ ಮಾಹಿತಿ ದೊರಕುತ್ತದೆ ಮತ್ತು ಇದನ್ನು ಅವಲಂಬಿಸಿಯೇ ಜಾಹೀರಾತುಗಳನ್ನು ಅವರು ನೋಡುವ ಪುಟಗಳಿಗೆ ತಳ್ಳಲಾಗುತ್ತದೆ. ಕುಕೀಗಳಿಲ್ಲದಿದ್ದರೆ ಕಂಪನಿಗಳಿಗೆ ಬಳಕೆದಾರರ ಮಾಹಿತಿ ಸುಲಭವಾಗಿ ದೊರೆಯಲಾರದು. ಕಂಪನಿಗಳು, ಜಾಹೀರಾತುದಾರರು ಅಥವಾ ವೆಬ್ ಸೈಟುಗಳು ಬಳಕೆದಾರರನ್ನು ಸೆಳೆಯಬೇಕಿದ್ದರೆ ಇನ್ನು ಮುಂದೆ ತಮ್ಮದೇ ತಾಣದಲ್ಲಿ ಸೈನ್-ಇನ್ ಆಗುವುದನ್ನು ಕಡ್ಡಾಯಗೊಳಿಸಬೇಕಾಗಬಹುದು. ಸುಲಭವಾಗಿ ನಮ್ಮ ಮಾಹಿತಿಯು ಬೇರೊಬ್ಬರಿಗೆ ಸಿಗುವಂತಿಲ್ಲ ಎಂಬುದು ನಮಗೆ ಖುಷಿಯ ವಿಚಾರವಾದರೆ, ಜಾಲತಾಣ ಬಳಸಬೇಕಿದ್ದರೆ 'ಸೈನ್ ಇನ್' ಆಗಲೇಬೇಕಾಗಬಹುದು ಎಂಬ ಆತಂಕವೂ ಇದ್ದೇ ಇದೆ. ಜೊತೆಗೆ, ಅವರಿಗಿಷ್ಟವಿಲ್ಲದ, ಆಸಕ್ತಿಯಿಲ್ಲದ ಜಾಹೀರಾತುಗಳೂ ಕಾಣಿಸಿಕೊಳ್ಳಬಹುದು.

ಗೂಗಲ್‌ನಿಂದ ಪರಿಹಾರ

ಹೀಗೆಂದು, ಕುಕೀಗಳಿಗೆ ಗೂಗಲ್ ಸಂಪೂರ್ಣ ನಿಷೇಧ ಹೇರಿದೆ ಎಂದೇನಿಲ್ಲ. ಡೀಫಾಲ್ಟ್ ಆಗಿ ಬಳಕೆದಾರರ ಮಾಹಿತಿ ಸಂಗ್ರಹಿಸುವುದಕ್ಕೆ ಕುಕೀಗಳಿಗೆ ನಿರ್ಬಂಧ ವಿಧಿಸಲಾಗುತ್ತದೆ ಅಷ್ಟೆ. ಬಳಕೆದಾರರಿಗೆ ಅಗತ್ಯವಿದೆಯೆಂದಾದರೆ ಅಥವಾ ಥರ್ಡ್-ಪಾರ್ಟಿ ಕುಕೀಗಳಿಲ್ಲದೆ ಜಾಲತಾಣವು ಸರಿಯಾಗಿ ತೆರೆಯುವುದಿಲ್ಲ ಎಂದಾದರೆ ಮತ್ತು ಆಗಾಗ್ಗೆ ಲಾಗಿನ್ ಆಗುವಂತಹ ಸೈಟುಗಳಿಗಾಗಿ, ಗೂಗಲ್ ತನ್ನ ಕ್ರೋಮ್ ಬ್ರೌಸರಿನಲ್ಲೊಂದು ಸ್ವಿಚ್ ಒದಗಿಸಿದೆ. ಅದನ್ನು ಸ್ಲೈಡ್ ಮಾಡಿದರೆ, ತಾತ್ಕಾಲಿಕವಾಗಿ ಕುಕೀಗಳನ್ನು ಅನುಮತಿಸಬಹುದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

71) ಕಾರಣ ಕೊಡಿ

ಎ) ಆಮ್ಲವನ್ನು ಸಾರಯುಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು.

ಉತ್ತರ: ನೀರನ್ನು ಸಾರೀಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣದಿಂದ ಮಿಶ್ರಣ ಹೊರಸಿಡಿದು ಸುಟ್ಟ ಗಾಯಗಳಾಗುವ ಅಪಾಯವಿದೆ, ಹಾಗೂ ಅತಿಯಾದ ತಾಪದಿಂದ ಗಾಜಿನ ಸಂಗ್ರಾಹಕ ಒಡೆಯುವ ಸಾಧ್ಯತೆ ಇದೆ, ಆದ್ದರಿಂದ ಆಮ್ಲವನ್ನು ಸಾರಯುಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು.

ಬಿ) ಪ್ಲಾಸ್ಟಿಕ್ ಉತ್ಪನ್ನಗಳ ಮರುಬಳಕೆಯು ಮರುಚಕ್ರೀಕರಣ ವಿಧಾನಕ್ಕಿಂತಲೂ ಉತ್ತಮ

ಉತ್ತರ:– ಮರುಚಕ್ರೀಕರಣದಲ್ಲಿ ಶಕ್ತಿಯ ಬಳಕೆಯಾಗುತ್ತದೆ, ಮರು ಬಳಕೆಯಲ್ಲಿ ಶಕ್ತಿಯ ಉಪಯೋಗವಾಗುವುದಿಲ್ಲ.

72) ಲೈಂಗಿಕ ರೀತಿಯ ಸಂತಾನೋತ್ಪತ್ತಿ ಏಕೆ ಅಗತ್ಯ?

ಉತ್ತರ:– ಒಂದು ಜೀವಕೋಶದಿಂದ ಎರಡು ಜೀವಕೋಶಗಳ ಉಂಟಾಗುವಿಕೆಯು ಡಿಎನ್‌ಎ ಮತ್ತು ಕೋಶೀಯ ರಚನೆಗಳ ಪ್ರತೀಕರಣವನ್ನು ಒಳಗೊಂಡಿದೆ. ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಯು ನಾವು ಗಮನಿಸಿರುವಂತೆ ಸಂಪೂರ್ಣವಾಗಿ ನಿಖರವಾಗಿರುವುದಿಲ್ಲ ಮತ್ತು ಇದರಲ್ಲುಂಟಾಗುವ ದೋಷಗಳು ಜೀವಿಸಂದಣಿಯಲ್ಲಿನ ಭಿನ್ನತೆಗಳ ಆಕರವಾಗಿರುತ್ತದೆ. ಭಿನ್ನತೆಗಳು ಉಂಟಾಗದಂತೆ ಪ್ರತಿಯೊಂದು ಜೀವಿಯನ್ನು ರಕ್ಷಿಸಲಾಗುವುದಿಲ್ಲ. ಆದರೆ ಒಂದು ಸಮುದಾಯದಲ್ಲಿ ಪ್ರಭೇದಗಳ ಉಳಿಯುವಿಕೆಯನ್ನು ಖಚಿತಪಡಿಸಿಕೊಳ್ಳಲು ಭಿನ್ನತೆಗಳು ಉಪಯುಕ್ತವಾಗಿರುತ್ತವೆ. ಆದ್ದರಿಂದ ಹೆಚ್ಚು ಹೆಚ್ಚು ಭಿನ್ನತೆಗಳನ್ನು ಉಂಟು ಮಾಡಲು ಸಾಧ್ಯವಾಗುವ ಸಂತಾನೋತ್ಪತ್ತಿ ವಿಧಾನಗಳೊಂದಿಗೆ ಜೀವಿಗಳು ಸಜ್ಜುಗೊಂಡವು, ಅದರಲ್ಲಿ ಹೆಚ್ಚು ಸಂಕೀರ್ಣ ಜೀವಿಗಳಲ್ಲಿ ಲೈಂಗಿಕ ಸಂತಾನೋತ್ಪತ್ತಿ ಉತ್ತಮವಾದದ್ದು

ಡಿಎನ್‌ಎ ಸ್ವಪ್ರತೀಕರಣವು ಸಂಪೂರ್ಣ ನಿಖರವಾಗಿಲ್ಲದಿದ್ದರೂ ನಿಧಾನಗತಿಯಲ್ಲಿ ಭಿನ್ನತೆಗಳು ಉಂಟಾಗುವಷ್ಟರ ಮಟ್ಟಿಗೆ ಅವು ನಿಖರವಾಗಿರುತ್ತವೆ. ಒಂದು ವೇಳೆ ಡಿಎನ್‌ಎ ಸ್ವಪ್ರತೀಕರಣ ಪ್ರಕ್ರಿಯೆಗಳು ಕಡಿಮೆ ನಿಖರತೆಯನ್ನು ಹೊಂದಿದ್ದರೆ ಅನೇಕ ಫಲಿತ ಡಿಎನ್‌ಎ ಪ್ರತಿಗಳು ಕೋಶೀಯ ರಚನೆಗಳೊಂದಿಗೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ ಮತ್ತು ಅವು ಸಾಯುತ್ತವೆ. ಆದ್ದರಿಂದ, ರೂಪಾಂತರಗಳನ್ನು ಉಂಟು ಮಾಡುವ ಪ್ರಕ್ರಿಯೆಯ ವೇಗವನ್ನು ಹೆಚ್ಚು ಅನಿವಾರ್ಯ.

ಈಗಾಗಲೇ ಹಿಂದಿನ ಪೀಳಿಗೆಗಳಿಂದ ಸಂಗ್ರಹಿತವಾದ ಭಿನ್ನತೆಗಳನ್ನು ಹೊಂದಿರುವ ಡಿಎನ್‌ಎ ತನ್ನ ಪ್ರತಿಯೊಂದು ಜೀವಿಸಂದಣಿಯ ಪ್ರತಿಯಲ್ಲಿ ಹೊಸ ಭಿನ್ನತೆಯನ್ನು ಉಂಟು ಮಾಡುತ್ತದೆ. ಹೀಗೆ, ಎರಡು ವಿಭಿನ್ನ ಜೀವಿಗಳು ಸಂಗ್ರಹಿತ ಭಿನ್ನತೆಗಳ ಸಾಕಷ್ಟು ವಿಭಿನ್ನ ಮಾದರಿಗಳನ್ನು ಹೊಂದಿರುತ್ತವೆ. ಈ ಎಲ್ಲಾ ಭಿನ್ನತೆಗಳು ಜೀವಂತ ಜೀವಿಗಳಲ್ಲಿರುವುದರಿಂದ ಅವು ಯಾವುದೇ ಕೆಟ್ಟ ಪರಿಣಾಮಗಳನ್ನು ಹೊಂದಿಲ್ಲ. ಹೀಗೆ ಎರಡು ಅಥವಾ ಹೆಚ್ಚು ಜೀವಿಗಳಲ್ಲಿನ ಭಿನ್ನತೆಗಳನ್ನು ಒಟ್ಟುಗೂಡಿಸುವುದರಿಂದ ರೂಪಾಂತರಗಳ ಹೊಸ ಸಂಯೋಜನೆಗಳು ಉಂಟಾಗುತ್ತವೆ.

ಪ್ರತಿ ಸಂಯೋಜನೆಯೂ ಅಪೂರ್ವವಾಗಿರುತ್ತದೆ. ಏಕೆಂದರೆ ಅಲ್ಲಿ ಎರಡು ವಿಭಿನ್ನ ಜೀವಿಗಳ ಒಳಗೊಳ್ಳುವಿಕೆ ಇದೆ. ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್‌ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ. ಆದರೆ ಇದು ದೊಡ್ಡ ತೊಂದರೆಯನ್ನು ಉಂಟುಮಾಡುತ್ತದೆ. ಪ್ರತಿ ಹೊಸ ಪೀಳಿಗೆಯು ಈ ಮೊದಲೇ ಅಸ್ತಿತ್ವದಲ್ಲಿರುವ ಜೀವಿಗಳ ಡಿಎನ್‌ಎ ಪ್ರತಿಗಳ ಸಂಯೋಜನೆಯಿಂದ ಉಂಟಾದ ಪಕ್ಷದಲ್ಲಿ ಪ್ರತಿ ಹೊಸ ಪೀಳಿಗೆಯು ಹಿಂದಿನ ಪೀಳಿಗೆ ಹೊಂದಿರುವುದಕ್ಕಿಂತ ಎರಡು ಪಟ್ಟು ಹೆಚ್ಚು ಪ್ರಮಾಣದ ಡಿಎನ್‌ಎಯನ್ನು ಹೊಂದಿರಬೇಕಾಗುತ್ತದೆ. ಇದು ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ತಗೊಳಿಸುವ ಸಂಭವವಿದೆ. ಈ ತೊಂದರೆಯನ್ನು ನಿವಾರಿಸಲು ಎಷ್ಟೋ ಮಾರ್ಗೋಪಾಯಗಳಿವೆ.

ಜೀವಿಗಳು ಹೆಚ್ಚು ಸಂಕೀರ್ಣವಾದಂತೆಲ್ಲ ಅಂಗಾಂಶಗಳ ವೈಶಿಷ್ಟ್ಯತೆಯು ಹೆಚ್ಚುತ್ತಾ ಹೋಗುತ್ತದೆ. ಸಂತಾನೋತ್ಪತ್ತಿ ನಡೆಸದ ದೇಹದಲ್ಲಿನ ಜೀವಕೋಶಗಳಿಗೆ ಹೋಲಿಸಿದರೆ ಕೇವಲ ಅರ್ಧದಷ್ಟು ಸಂಖ್ಯೆಯ ಕ್ರೋಮೋಸೋಮ್‌ಗಳನ್ನು ಮತ್ತು ಅರ್ಧದಷ್ಟು ಪ್ರಮಾಣದ ಡಿಎನ್‌ಎಯನ್ನು ಹೊಂದಿರುವ ಭಿನ್ನವಾದ ವಂಶಾವಳಿಯನ್ನು ಹೊಂದಿರುವ ಜೀವಕೋಶಗಳನ್ನು ವಿಶಿಷ್ಟ ಅಂಗಗಳಲ್ಲಿ ಹೊಂದುವುದು. ಮಿಯಾಸಿಸ್ ಕೋಶವಿಭಜನೆಯ ಮೂಲಕ ಇದನ್ನು ಸಾಧಿಸಲಾಗುತ್ತದೆ. ಲೈಂಗಿಕ ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ಜೀವಿಗಳ ಲಿಂಗ ಕೋಶಗಳು ಸಂಯೋಜಿಸಿ ಹೊಸ ಜೀವಿ ಉಂಟಾಗುತ್ತದೆ. ಇದರ ಪರಿಣಾಮವಾಗಿ ಹೊಸ ಪೀಳಿಗೆಯಲ್ಲಿ ಕ್ರೋಮೋಸೋಮ್‌ಗಳ ಸಂಖ್ಯೆಯಲ್ಲಿ ಮತ್ತು ಡಿಎನ್‌ಎ ಪ್ರಮಾಣದಲ್ಲಿ ಮರುಹೊಂದಾಣಿಕೆ ಉಂಟಾಗುತ್ತದೆ.

ಒಂದು ಯುಗ್ಮಜವು ಬೆಳೆದು ಹೆಚ್ಚು ವೈಶಿಷ್ಟ್ಯತೆಯನ್ನು ಹೊಂದಿರುವ ಅಂಗಾಂಶಗಳು ಮತ್ತು ಅಂಗಗಳಿರುವ ಜೀವಿಯಾಗಿ ಬೆಳವಣಿಗೆ (ಅಭಿವರ್ಧನೆ) ಹೊಂದಬೇಕಾದರೆ ಅದು ಸಾಕಷ್ಟು ಸಂಗ್ರಹಿತ ಶಕ್ತಿಯನ್ನು ಇದಕ್ಕಾಗಿ ಹೊಂದಿರಬೇಕು. ಅತ್ಯಂತ ಸರಳ ಜೀವಿಗಳಲ್ಲಿ ಎರಡು ಲಿಂಗಾಣುಗಳು ಪರಸ್ಪರ ಹೆಚ್ಚು ಭಿನ್ನತೆಯನ್ನು ಅಥವಾ ಸಾಮ್ಯತೆಯನ್ನು ಹೊಂದಿರುವುದು ಕಂಡುಬರುತ್ತದೆ. ಆದರೆ ದೇಹ ವಿನ್ಯಾಸ ಹೆಚ್ಚು ಸಂಕೀರ್ಣವಾದಂತೆ, ಲಿಂಗಾಣುಗಳೂ ಕೂಡಾ ವೈಶಿಷ್ಟ್ಯತೆಯನ್ನು ಪಡೆಯುತ್ತವೆ. ಒಂದು ಲಿಂಗಾಣುವು ದೊಡ್ಡದಾಗಿದ್ದು ಸಂಗ್ರಹಿತ ಆಹಾರ ಹೊಂದಿದ್ದರೆ ಇನ್ನೊಂದು ಚಿಕ್ಕದಾಗಿದ್ದು ಚಲನಶೀಲವಾಗಿರುತ್ತದೆ. ಸಾಂಪ್ರದಾಯಿಕವಾಗಿ ಚಲನಶೀಲ ಲಿಂಗಾಣುವನ್ನು ಗಂಡುಲಿಂಗಾಣು ಮತ್ತು ಸಂಗ್ರಹಿತ ಆಹಾರವನ್ನು ಹೊಂದಿರುವ ಲಿಂಗಾಣುವನ್ನು ಹೆಣ್ಣು ಲಿಂಗಾಣು ಎಂದು ಕರೆಯಲಾಗುತ್ತದೆ. ಇದರ ಮೂಲಕ ಹೊಸ ಜೀವಿಯ ಸೃಷ್ಟಿ ಕಾರ್ಯ ನಡೆಯುತ್ತದೆ.

73) ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವುದಕಿಂತಲೂ ಸಮಾಂತರವಾಗಿ ಜೋಡಿಸುವುದು ಅನುಕೂಲಕರ ಏಕೆ?

ಉತ್ತರ:–

* ಸರಣಿ ಕ್ರಮದಲ್ಲಿ ಜೋಡಿಸಿದ ಉಪಕರಣಗಳು ಕಾರ್ಯನಿರ್ವಹಿಸಲು ವ್ಯಾಪಕವಾದ ವಿಭಿನ್ನ ಮೌಲ್ಯದ ವಿದ್ಯುತ್ ಪ್ರವಾಹ ಅಗತ್ಯವಿದೆ.
* ಸರಣಿ ಕ್ರಮದಲ್ಲಿ ಜೋಡಿಸಿದಾಗ ಯಾವುದಾದರೂ ಘಟಕ ವಿಫಲವಾದರೆ ಮಂಡಲವು ಮುರಿದುಹೋಗುತ್ತದೆ. ಮತ್ತು ಉಳಿದ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ. ಆದರೆ
* ಸಮಾಂತರ ಮಂಡಲವು ವಿದ್ಯುತ್ ಉಪಕರಣಗಳ ಮೂಲಕ ವಿದ್ಯುತ್ ಪ್ರವಾಹವನ್ನು ವಿಭಜಿಸುತ್ತದೆ.
* ನಿರ್ದಿಷ್ಟವಾಗಿ ಪ್ರತಿಯೊಂದು ವಿದ್ಯುತ್ ಉಪಕರಣವು ವಿಭಿನ್ನ ರೋಧವನ್ನು ಹೊಂದಿರುವಾಗ ಮತ್ತು ಸರಿಯಾಗಿ ಕಾರ್ಯ ನಿರ್ವಹಿಸಲು ವಿಭಿನ್ನ ಪ್ರವಾಹದ ಅಗತ್ಯವಿರುವ ಸಂದರ್ಭದಲ್ಲಿ ಸಮಾನ್ತರ ಜೋಡಣೆ ಸಹಕಾರಿಯಾಗಿವೆ.

(ಮುಂದುವರಿಯುವುದು)

II PUC CET MATHS

MULTIPLE CHOICE QUESTIONS

19) $\int_1^e \log x \, dx =$

(A) 1 (B) e – 1
(C) e + 1 (D) 0

Ans: (A) 1

Expln:-

$$\int_1^e \underset{u}{\log x}\, \underset{dv}{dx} = uv - \int v\,du = (\log x)\,x - \int x.\frac{1}{x}\,dx$$
$$= [x \log x - x]_1^e$$
$$= e \log e - e - 1.\log 1 + 1$$
$$= e - e - 0 + 1 = 1.$$

20) The shortest distance between the lines $\frac{x-3}{3} = \frac{y-8}{-1} = \frac{z-3}{1}$ and $\frac{x+3}{-3} = \frac{y+7}{2} = \frac{z-6}{4}$ is

(A) $\sqrt{30}$ (B) $2\sqrt{30}$
(C) $5\sqrt{30}$ (D) $3\sqrt{30}$

Ans: (D) $3\sqrt{30}$

Expln:-The line (1) passes through (3, 8, 3) and has direction ratios proportional to 3, -1, 1.

$\therefore$ Its vector equation is $\vec{r} = \vec{a_1} + \lambda \vec{b_1}$

where $\vec{a_1} = 3\hat{i} + 8\hat{j} + 3k$

$\vec{b_1} = 3\hat{i} - \hat{j} + k.$

||| rly for line (2), $\vec{r} = \vec{a_2} + \mu \vec{b_2}$ where

$\vec{a_2} = -3\hat{i} - 7\hat{j} + 6k, \vec{b_2}$

$= -3\hat{i} + 2\hat{j} + 4k$

$$S.D. = \left[\frac{(\vec{a_2} - \vec{a_1}).(\vec{b_1} \times \vec{b_2})}{|\vec{b_1} \times \vec{b_2}|}\right]$$

$\vec{a_2} - \vec{a_1} = -6\hat{i} - 15\hat{j} + 3k$

$$\vec{b_1} \times \vec{b_2} = \begin{vmatrix} \hat{i} & \hat{j} & k \\ 3 & -1 & 1 \\ -3 & 2 & 4 \end{vmatrix}$$

$= \hat{i}(-4-2) - \hat{j}(12+3) + k(6-3)$

$= -6\hat{i} - 15\hat{j} + 3k$

$|\vec{b_1} \times \vec{b_2}| = \sqrt{36+225+9} = \sqrt{270}$

$$S.D. = \frac{36+225+9}{\sqrt{270}}$$
$$= \sqrt{270} = \sqrt{9 \times 30} = 3\sqrt{30}$$

21) In a simultaneous throw of a pair dice the probability of getting a total more than 7 is

A) $\frac{7}{12}$ B) $\frac{5}{36}$
C) $\frac{5}{12}$ D) $\frac{7}{36}$

Ans:-C

Expln:- The sample space consists of 36 numbers

Let X be the sum of the numbers on two dice which takes the values

2, 3, 4, 6, 7, 8, 9, 10, 11, or 12

P(x=8) P(2,6), (3,5), (4,4), (5,3), (6,2) (i.e. sum more than 7 which is 8)

$\frac{5}{36}$

$P(x=9) = P\{(3,6),(4,5),(5,4)(6,3)\} = \frac{4}{36}$

$P(x=10) = P\{(4,6),(5,5),(6,4)\} = \frac{3}{36}$

$P(x=11) = P\{(5,6),(6,5)\} = \frac{2}{36}$

$P(x=12) = P\{(6,6),\} = \frac{1}{36}$

$\text{Required Probability} = \frac{5}{36}, \frac{4}{36}, \frac{3}{36}, \frac{2}{36}, \frac{1}{36} = \frac{15}{36} = \frac{5}{12}$

22) If in the expansion of $(1 + px)^n$, $n \in N$, the coefficients of x and x^2 are 8 and 24, then the values of n and p are

(A) n = 3, p = 2 (B) n = 5, p = 3
(C) n = 4, p = 3 (D) n = 4, p = 2

Ans: (D) n = 4, p = 2

$(1+px)^n = 1^n + nC_1 px + nC_2 p^2 x^2 + ... + p^n x^n$

Coeff. of $x = np$, coeff. of $x^2 = nC_2 p^2$

$= \frac{n(n+1)}{2}.p^2$

Given $np = 8$, $\frac{n(n-1)}{2}p^2 = 24$

$np = 8$ $(n^2 - n)p^2 = 48$

$n^2p^2 - np.\,p = 48$

$64 - 8p = 48$

$\therefore 8p = 16 \quad \therefore p = 2. \quad \therefore n = 4.$

23) If $A = \begin{bmatrix} 1 & 0 \\ 1 & 1 \end{bmatrix}$ and $A^8 = aA + bI$, then (a, b)

(A) (8, 7) (B) (-7, 8)
(C) (8, -7) (D) (-8, -7)

Ans: (C) (8, -7)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ವರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಬ್ಲೂಮ್‌ಬರ್ಗ್ ವರದಿ ಪ್ರಕಟಣೆಗೆ ತಡೆ ವಿಚಾರವಾಗಿ 'ಸುಪ್ರೀಂ' ಅಭಿಮತ

ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಪೆಟ್ಟು

ನವದೆಹಲಿ(ಪಿಟಿಐ): ಅಸಾಮಾನ್ಯ ಸಂದರ್ಭಗಳನ್ನು ಹೊರತುಪಡಿಸಿ, ಸಂಬಂಧಪಟ್ಟ ಎಲ್ಲರ ವಾದ ಆಲಿಸದೆ ಸುದ್ದಿ, ಲೇಖನದ ಪ್ರಕಟಣೆಗೆ ನ್ಯಾಯಾಲಯಗಳು ತಡೆ ನೀಡಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಆ ರೀತಿ ಮಾಡುವುದು ಲೇಖಕನ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಾಗೂ ಮಾಹಿತಿ ಪಡೆಯುವ ಸಾರ್ವಜನಿಕರ ಹಕ್ಕಿನ ಮೇಲೆ ಪರಿಣಾಮ ಉಂಟುಮಾಡುತ್ತದೆ ಎಂದು ಕೋರ್ಟ್ ವಿವರಿಸಿದೆ.

ಜೀ ಎಂಟರ್‌ಟೇನ್ಮೆಂಟ್ ಸಂಸ್ಥೆಯ ವಿರುದ್ಧ ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆ ಬ್ಲೂಮ್‌ಬರ್ಗ್ ಮಾನಹಾನಿಕರ ಎನ್ನಲಾದ ರೀತಿಯಲ್ಲಿ ಪ್ರಕಟಿಸಿದ್ದ ವರದಿಯನ್ನು ತೆಗೆದುಹಾಕುವಂತೆ ವಿಚಾರಣಾ ನ್ಯಾಯಾಲಯವೊಂದು ಆದೇಶಿಸಿತ್ತು. ಈ ಆದೇಶವನ್ನು ರದ್ದುಪಡಿಸಿರುವ ಸುಪ್ರೀಂ ಕೋರ್ಟ್, ವರದಿಗಳ ಪ್ರಕಟಣೆಗೆ ತಡೆ ನೀಡುವ ಮೊದಲು ಪೂರ್ಣ ಪ್ರಮಾಣದಲ್ಲಿ

ವಿಚಾರಣೆ ನಡೆಸಬೇಕು ಎಂದು ಸೂಚಿಸಿದೆ.

'ಲೇಖನವೊಂದರ ಪ್ರಕಟಣೆಗೆ ವಿಚಾರಣೆಗೆ ಮೊದಲೇ ತಡೆ ನೀಡುವುದರಿಂದ ಲೇಖಕನ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಾಗೂ ಸಾರ್ವಜನಿಕರಿಗೆ ಇರುವ ಮಾಹಿತಿ ಪಡೆಯುವ ಹಕ್ಕಿನ ಮೇಲೆ ಪರಿಣಾಮ ಉಂಟಾಗುತ್ತದೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠವು ಹೇಳಿದೆ.

ತಡೆ ನೀಡಲು ಕೋರಲಾಗಿರುವ ಬರಹದಲ್ಲಿ ಇರುವ ವಿಷಯವು 'ದುರುದ್ದೇಶದಿಂದ ಕೂಡಿದೆ', ಅದು 'ಸ್ಪಷ್ಟವಾಗಿ ತಪ್ಪು' ಎಂಬುದು ಸಾಬೀತಾಗದ ಹೊರತು ತಡೆಯಾಜ್ಞೆ ನೀಡಬಾರದು, ಅದರಲ್ಲೂ ಮುಖ್ಯವಾಗಿ, ಎಲ್ಲರ ವಾದ ಆಲಿಸದೆ ತಡೆ ನೀಡಬಾರದು ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಕೂಡ ಇದ್ದ ಪೀಠವು ನಿರ್ದೇಶನ ನೀಡಿದೆ.

'ವಿಚಾರಣೆ ಆರಂಭವಾಗುವ ಮೊದಲೇ ಮಧ್ಯಂತರ ತಡೆಯಾಜ್ಞೆಯನ್ನು ವಿವೇಚನೆ ಬಳಸದೆ ನೀಡುವುದರಿಂದ ಸಾರ್ವಜನಿಕ ಚರ್ಚೆಗಳನ್ನು ಹತ್ತಿಕ್ಕಿದಂತಾಗುತ್ತದೆ' ಎಂದು ಪೀಠವು ಎಚ್ಚರಿಸಿದೆ.

ವಿಚಾರಣಾ ನ್ಯಾಯಾಲಯ ನೀಡಿದ್ದ ತಡೆಯಾಜ್ಞೆ ಪ್ರಶ್ನಿಸಿ 'ಬ್ಲೂಮ್‌ಬರ್ಗ್' ದೆಹಲಿ ಹೈಕೋರ್ಟ್ ಮೊರೆ ಹೋಗಿತ್ತು. ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಹೈಕೋರ್ಟ್ ಕ್ರಮವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ಸುಪ್ರೀಂ ಕೋರ್ಟ್ ಹೇಳಿದ್ದು...

- ವಿಚಾರಣೆ ಆರಂಭವಾಗುವ ಮೊದಲೇ ಬರಹದ ಪ್ರಕಟಣೆಗೆ ಮಧ್ಯಂತರ ತಡೆ ನೀಡುವುದರಿಂದ, ಆರೋಪಗಳು ಸಾಬೀತಾಗುವ ಮುನ್ನವೇ ಆ ಬರಹಕ್ಕೆ 'ಮರಣದಂಡನೆ' ವಿಧಿಸಿದಂತೆ ಆಗುತ್ತದೆ.
- ಮಾನಹಾನಿ ಪ್ರಕರಣಗಳಲ್ಲಿ ಮಧ್ಯಂತರ ತಡೆ ನೀಡುವಾಗ, ಪ್ರಕರಣವನ್ನು ಲಂಬಿಸಿ ಅದನ್ನು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಹಾಗೂ ಸಾರ್ವಜನಿಕ ಚರ್ಚೆಯನ್ನು ಇಲ್ಲವಾಗಿಸಲು ಬಳಸಿಕೊಳ್ಳುವ ಸಾಧ್ಯತೆಯ ಬಗ್ಗೆಯೂ ಕೋರ್ಟ್‌ಗಳು ಆಲೋಚಿಸಬೇಕು.

ಅಧಿಕಾರ ದುರ್ಬಳಕೆ ಸಲ್ಲ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಧಿಕಾರವನ್ನು ಅಗತ್ಯಕ್ಕಿಂತ ಅತಿಯಾಗಿ ಬಳಕೆ ಮಾಡಿಕೊಳ್ಳುವ ಹಾಗೂ ಅಧಿಕಾರದ ದುರ್ಬಳಕೆ ಮಾಡಿಕೊಳ್ಳುವ ಮೂಲಕ ನ್ಯಾಯದಾನ ವ್ಯವಸ್ಥೆಯೇ ನಾಚಿಕೆ ಪಟ್ಟುಕೊಳ್ಳುವಂತೆ ಮಾಡುವ ಪೊಲೀಸ್ ಅಧಿಕಾರಿಗಳ ವಿಚಾರವಾಗಿ ಸ್ವಲ್ಪವೂ ಸಂಯಮ ತೋರಿಸಬೇಕಿಲ್ಲ ಎಂಬ ಅಭಿಪ್ರಾಯವನ್ನು ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಂ ನಾಥ್ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರು ಇರುವ ವಿಭಾಗೀಯ ಪೀಠವು, ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪೊಲೀಸರಿಗೆ, ಬಂಧಿಸುವ ಅಧಿಕಾರ ಇರುವ ಎಲ್ಲ ಸಂಸ್ಥೆಗಳಿಗೆ ನೀಡುವ ಸೂಚನೆಯಲ್ಲಿ, ವ್ಯಕ್ತಿಯೊಬ್ಬನನ್ನು ಬಂಧಿಸಿದ ಸಂದರ್ಭದಲ್ಲಿ ಎಲ್ಲ ಸಾಂವಿಧಾನಿಕ ನಿಯಮಗಳನ್ನು ಹಾಗೂ ಸುಪ್ರೀಂ ಕೋರ್ಟ್ ರೂಪಿಸಿರುವ ಎಲ್ಲ ನಿಯಮಗಳನ್ನು ಪಾಲಿಸಬೇಕು ಎಂದು ಹೇಳಿದೆ. ವ್ಯಕ್ತಿಯೊಬ್ಬನನ್ನು ತಮ್ಮ ವಶಕ್ಕೆ ನೀಡಿದ ಸಂದರ್ಭದಲ್ಲಿಯೂ ಈ ನಿಯಮಗಳ ಪಾಲನೆ ಆಗಬೇಕು ಎಂದು ಸೂಚಿಸಿದೆ.

ಪೊಲೀಸರ ವಶದಲ್ಲಿ ಇದ್ದಾಗ ಸೋಮನಾಥ್ ಎನ್ನುವವರಿಗೆ ಕೈಕೋಳ ಹಾಕಲಾಗಿತ್ತು, ಚಪ್ಪಲಿಹಾರ ಹಾಕಿ ಅರೆಬೆತ್ತಲೆಯಾಗಿ ಅವರ ಮೆರವಣಿಗೆ ಮಾಡಿಸಲಾಗಿತ್ತು ಹಾಗೂ ಅವರ ಜಾತಿಯನ್ನು ಉಲ್ಲೇಖಿಸಿ ನಿಂದಿಸಲಾಗಿತ್ತು.

ಮಹಾರಾಷ್ಟ್ರದ ಔರಂಗಾಬಾದ್‌ನ ಪೈಠಣ್‌ನಲ್ಲಿ 2015ರಲ್ಲಿ ಕಿಸೆಗಳ್ಳತನದ ಆರೋಪದ ಅಡಿಯಲ್ಲಿ ಅರ್ಜಿದಾರ ಸೋಮನಾಥ್ ಅವರನ್ನು ಬಂಧಿಸಲಾಗಿತ್ತು. ಜಾಮೀನು ದೊರೆತ ನಂತರವೂ ಪೊಲೀಸ್ ಇನ್‌ಸ್ಪೆಕ್ಟರ್ ಸಿ.ಪಿ. ಕಾಕಡೆ ಅವರು ಬಿಡುಗಡೆಗೆ ವಿಳಂಬ ಮಾಡಿದರು ಎಂದು ಸೋಮನಾಥ್ ದೂರಿದ್ದರು.

ಅಧಿಕಾರವನ್ನು ಅಗತ್ಯಕ್ಕಿಂತ ಅತಿಯಾಗಿ ಬಳಸಿಕೊಂಡಿರುವುದನ್ನು ಖಂಡಿಸುವಲ್ಲಿ ಕೋರ್ಟ್‌ಗೆ ಯಾವ ಹಿಂಜರಿಕೆಯೂ ಇಲ್ಲ ಎಂದು ಪೀಠವು ಹೇಳಿದೆ. ಈ ಪೊಲೀಸ್ ಅಧಿಕಾರಿಯು ತಮ್ಮ ಅಧಿಕಾರವನ್ನು ಪೂರ್ತಿಯಾಗಿ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಪೀಠವು ಹೇಳಿದೆ.

ಆದರೆ ಆ ಅಧಿಕಾರಿಯು ಈಗಾಗಲೇ ನಿವೃತ್ತರಾಗಿರುವ ಕಾರಣ, ಅವರು ಸೋಮನಾಥ್ ಅವರಿಗೆ ಈಗಾಗಲೇ ₹1.75 ಲಕ್ಷ ಪಾವತಿಸಿರುವ ಕಾರಣ ಈ ವಿಚಾರವನ್ನು ಅಲ್ಲಿಯೇ ಕೈಬಿಡಲು ಪೀಠವು ತೀರ್ಮಾನಿಸಿದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಆದೇಶದ ಅನುಸಾರ ಅಧಿಕಾರಿಯು ಹೆಚ್ಚುವರಿಯಾಗಿ ₹25 ಸಾವಿರ ಪಾವತಿಸಿದ್ದಾರೆ ಎಂಬುದನ್ನು ಪೀಠವು ದಾಖಲಿಸಿದೆ.

'ಇಂತಹ ಪ್ರಕರಣಗಳಲ್ಲಿ ನ್ಯಾಯಾಲಯವು ಅತ್ಯಂತ ಕಠಿಣವಾದ ನಿಲುವನ್ನು ತಾಳಬೇಕಾಗುತ್ತದೆ. ಅಧಿಕಾರದ ಅತಿಯಾದ ಬಳಕೆಯ ಪ್ರಕರಣಗಳ ವಿಚಾರದಲ್ಲಿ ಸಹನೆ ಪ್ರದರ್ಶಿಸುವ ಅಗತ್ಯ ಇಲ್ಲ' ಎಂದು ಪೀಠ ಹೇಳಿದೆ.

ಸಿಹಿ ಹಂಚಿಕೆ

ಭಾರತದ ಗಡಿ ಭದ್ರತಾ ಪಡೆಯ ಯೋಧರು ಮತ್ತು ಬಾಂಗ್ಲಾದೇಶದ ಗಡಿ ರಕ್ಷಣಾ ಪಡೆಯ (ಬಿಜಿಬಿ) ಯೋಧರು ಬಾಂಗ್ಲಾದೇಶದ 53ನೆಯ ಸ್ವಾತಂತ್ರ್ಯೋತ್ಸವದ ಅಂಗವಾಗಿ ಪಶ್ಚಿಮ ಬಂಗಾಳದ ಸಿಲಿಗುರಿಯ ಸಮೀಪ ಸಿಹಿ ಹಂಚಿಕೊಂಡರು. –ಪಿಟಿಐ ಚಿತ್ರ

ಸೆಕೆ: ಸಜ್ಜಾಗಲು ಆಯೋಗ ಸೂಚನೆ

ನವದೆಹಲಿ(ಪಿಟಿಐ): ದೇಶದಲ್ಲಿ ಈ ಬಾರಿ ಬೇಸಿಗೆಯ ಅವಧಿಯಲ್ಲಿ ಸೆಕೆ ತೀವ್ರವಾಗಿರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಸಿರುವ ಹಿನ್ನೆಲೆಯಲ್ಲಿ, ಮತಗಟ್ಟೆಗಳಲ್ಲಿ ಕನಿಷ್ಠ ಸೌಲಭ್ಯಗಳು, ಕುಡಿಯುವ ನೀರು, ನೆರಳು ಮತ್ತು ವೈದ್ಯಕೀಯ ಉಪಕರಣಗಳನ್ನು ಒದಗಿಸಲೇಬೇಕು ಎಂದು ಚುನಾವಣಾ ಆಯೋಗ ಖಡಕ್ ಸೂಚನೆ ನೀಡಿದೆ.

ಉಷ್ಣ ಗಾಳಿಯ ಪರಿಣಾಮಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಎನ್‌ಡಿಎಂಎ) ಹೊರಡಿಸಿರುವ ಸೂಚನೆಗಳನ್ನು ಆಯೋಗವು ವಿವಿಧ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ (ಸಿಇಒ) ರವಾನಿಸಿದೆ.

2023ರ ಜೂನ್‌ನಲ್ಲಿ ಹೊರಡಿಸಿದ್ದ ಸೂಚನೆಯಲ್ಲಿ, ಪ್ರತಿ ಮತಗಟ್ಟೆಯಲ್ಲಿಯೂ ಒಆರ್‌ಎಸ್ ಲಭ್ಯವಿರಬೇಕು, ಮತಗಟ್ಟೆಯ ಸಿಬ್ಬಂದಿಗೆ ಹಾಗೂ ಯಾವುದೇ ಮತದಾರನಿಗೆ ಅಗತ್ಯ ಎದುರಾದರೆ ನೀಡಲು ಇದನ್ನು ಇರಿಸಿಕೊಳ್ಳಬೇಕು ಎಂದು ಹೇಳಲಾಗಿತ್ತು. ಅದೇ ಸೂಚನೆಯನ್ನು ಈಗ ಮತ್ತೆ ನೀಡಲಾಗಿದೆ.

'ಸನ್ ಸ್ಟ್ರೋಕ್ ಸಂದರ್ಭದಲ್ಲಿ ಪಾಲಿಸಬೇಕಾದ ನಿಯಮಗಳನ್ನು ಎಲ್ಲ ಮತಗಟ್ಟೆಗಳಿಗೆ ರವಾನಿಸಬಹುದು. ನಿರ್ಜಲೀಕರಣದ ಅಪಾಯದಿಂದ ರಕ್ಷಿಸಿಕೊಳ್ಳಲು ಒದ್ದೆ ಟವೆಲ್ ತರುವಂತೆ ಮತದಾರರಿಗೆ ಸೂಚಿಸಬಹುದು, ಉಷ್ಣಾಂಶ ಹೆಚ್ಚಿದ್ದಾಗ ಮತಗಟ್ಟೆಗಳಿಗೆ ಮಕ್ಕಳನ್ನು ಕರೆತರದಂತೆ ಮಹಿಳಾ ಮತದಾರರಿಗೆ ಸೂಚಿಸಬಹುದು' ಎಂದು ತಿಳಿಸಲಾಗಿದೆ.

ಸಿಯುಇಟಿ–ಯುಜಿ: ಅರ್ಜಿಗೆ ಮಾ. 31 ಕಡೇ ದಿನ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಯುಇಟಿ–ಯುಜಿ) ಅರ್ಜಿ ಸಲ್ಲಿಸುವ ಕಡೆಯ ದಿನವನ್ನು ಮಾರ್ಚ್ 31ಕ್ಕೆ ವಿಸ್ತರಿಸಲಾಗಿದೆ ಎಂದು ಯುಜಿಸಿ ಅಧ್ಯಕ್ಷ ಎಂ. ಜಗದೇಶ್ ಕುಮಾರ್ ತಿಳಿಸಿದರು. 'ಅಭ್ಯರ್ಥಿಗಳು ಮತ್ತು ಸಂಬಂಧಪಟ್ಟ ಇತರರ ಮನವಿ ಮೇರೆಗೆ ಸಿಯುಇಟಿ– ಯುಜಿ– 2024 ಪರೀಕ್ಷೆಗೆ ಅರ್ಜಿ ಸಲ್ಲಿಸಲು ಕಡೆಯ ದಿನಾಂಕವನ್ನು 2024ರ ಮಾರ್ಚ್ 31ರ ರಾತ್ರಿ 9.50ರವರೆಗೆ ವಿಸ್ತರಿಸಲಾಗಿದೆ' ಎಂದು ಜಗದೇಶ್ ಅವರು ತಿಳಿಸಿದರು.

ಪ್ರವೇಶ ಪರೀಕ್ಷೆಗಳು ಮೇ 15ರಿಂದ 31ರವರೆಗೆ ನಡೆಯಲಿವೆ.

ಸಿಬಿಎಸ್‌ಸಿಇ ಮನಃಶಾಸ್ತ್ರ ಪರೀಕ್ಷೆ ಮುಂದಕ್ಕೆ

ನವದೆಹಲಿ (ಪಿಟಿಐ): ಪರೀಕ್ಷಾ ಕೇಂದ್ರವೊಂದರಲ್ಲಿ ಪ್ರಶ್ನೆ ಪತ್ರಿಕೆಯ ಬಂಡಲ್‌ಗಳು ಕಳೆದುಹೋಗಿರುವ ಕಾರಣ 12ನೇ ತರಗತಿಯ ಮನಃಶಾಸ್ತ್ರ ಪರೀಕ್ಷೆಯನ್ನು ಮುಂದೂಡಲಾಗಿದೆ ಎಂದು ಸಿಬಿಎಸ್‌ಸಿಇ ತಿಳಿಸಿದೆ.

ಮಾರ್ಚ್ 27ರಂದು ನಡೆಯಬೇಕಿದ್ದ ಪರೀಕ್ಷೆಯನ್ನು ಏಪ್ರಿಲ್ 4ರಂದು ಮಧ್ಯಾಹ್ನ 2 ಗಂಟೆಗೆ ನಡೆಸಲಾಗುವುದು ಎಂದು ಮಂಡಳಿಯು ಮಂಗಳವಾರ ಘೋಷಿಸಿದೆ. ಇದಕ್ಕೂ ಮುನ್ನ ಫೆಬ್ರುವರಿ 26ರಂದು ರಸಾಯನ ವಿಜ್ಞಾನ ಪರೀಕ್ಷೆಯನ್ನೂ ಸಿಬಿಎಸ್‌ಸಿಇ ಮುಂದೂಡಿತ್ತು

ಭೋಜಶಾಲಾದಲ್ಲಿ ಪೂಜೆ

ಧರ್ (ಪಿಟಿಐ): ವಿವಾದಿತ ಭೋಜಶಾಲಾ–ಕಮಲ ಮೌಲಾ ಮಸೀದಿ ಸಂಕೀರ್ಣದಲ್ಲಿ ಹಿಂದೂಗಳು ಮಂಗಳವಾರ ಪೂಜೆ ಸಲ್ಲಿಸಿದರು. ಈ ನಡುವೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ತಂಡವೊಂದು ಸ್ಥಳದಲ್ಲಿ ಸಮೀಕ್ಷಾ ಕಾರ್ಯವನ್ನು ಮುಂದುವರಿಸಿದೆ.

2003ರ ಏಪ್ರಿಲ್ 7ರಂದು ಎಎಸ್‌ಐ ಹೊರಡಿಸಿದ ಆದೇಶವೊಂದರ ಅನ್ವಯ ಹಿಂದೂಗಳಿಗೆ ಈ ಸಂಕೀರ್ಣದಲ್ಲಿ ಪ್ರತಿ ಮಂಗಳವಾರ ಪೂಜೆ ಸಲ್ಲಿಸಲು ಅವಕಾಶ ಇದೆ. ಮುಸ್ಲಿಮರಿಗೆ ಪ್ರತಿ ಶುಕ್ರವಾರ ನಮಾಜ್ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಹಿಂದೂ ಭಕ್ತರು ಮಂಗಳವಾರ ಸಮೀಕ್ಷೆ ಆರಂಭಕ್ಕೂ ಮುನ್ನ, ಬೆಳಿಗ್ಗೆ 7.15ರ ಸುಮಾರಿಗೆ ಈ ಸ್ಥಳಕ್ಕೆ ಬಂದರು. ಈ ಸ್ಥಳದಲ್ಲಿ ಇರುವುದು ವಾಗ್ದೇವಿ ದೇವಸ್ಥಾನ ಎಂದು ಹಿಂದೂಗಳು ನಂಬುತ್ತಾರೆ. ಆದರೆ ಇದು ಮಸೀದಿ ಎಂಬುದು ಮುಸ್ಲಿಮರಲ್ಲಿನ ನಂಬಿಕೆ.

ಮಧ್ಯಪ್ರದೇಶ ಹೈಕೋರ್ಟ್ ಆದೇಶದ ಅನುಸಾರ ಎಎಸ್‌ಐ ಅಧಿಕಾರಿಗಳು ಇಲ್ಲಿ ಸಮೀಕ್ಷೆ ಕಾರ್ಯ ಕೈಗೊಂಡಿದ್ದಾರೆ. ಎಎಸ್‌ಐ ನಡೆಸುತ್ತಿರುವ ಸಮೀಕ್ಷೆಯಿಂದಾಗಿ ಈ ವಿವಾದಕ್ಕೆ ಪರಿಹಾರ ಸಿಗುತ್ತದೆ ಎಂದು ಭೋಜ ಉತ್ಸವ ಸಮಿತಿಯ ಉಪಾಧ್ಯಕ್ಷ ಬಲವೀರ್ ಸಿಂಗ್ ಹೇಳಿದ್ದಾರೆ.

ಇದು ಸರಸ್ವತಿಯ ದೇವಸ್ಥಾನ ಆಗಿತ್ತು, ಇದನ್ನು ಹಿಂದೂಗಳಿಗೆ ಮರಳಿಸಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಮಂಡ್ಯ ಕ್ಷೇತ್ರಕ್ಕೆ ಎಚ್‌ಡಿಕೆ ಅಭ್ಯರ್ಥಿ

ಒಂದನೇ ಪುಟದಿಂದ...

ಹಾಸನದಲ್ಲಿ ಆಯೋಜಿಸಿದ್ದ ಜೆಡಿಎಸ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕದ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ದೇವೇಗೌಡ, 'ಹಾಸನದಿಂದ ಪ್ರಜ್ವಲ್, ಮಂಡ್ಯದಿಂದ ಕುಮಾರಸ್ವಾಮಿ ಹಾಗೂ ಕೋಲಾರದಿಂದ ಮಲ್ಲೇಶ ಬಾಬು ಜೆಡಿಎಸ್ ಅಭ್ಯರ್ಥಿಗಳಾಗಿ ಕಣಕ್ಕಿಳಿಯಲಿದ್ದಾರೆ' ಎಂದು ಪ್ರಕಟಿಸಿದರು.

'ನನ್ನ ಕೊನೆಗಾಲದಲ್ಲಿ ಬಂದು ಪ್ರಚಾರ ಮಾಡುತ್ತಿದ್ದೇನೆ. ಅಪಪ್ರಚಾರಕ್ಕೆ ಮಣಿಯದೇ ಪ್ರಜ್ವಲ್ ಅವರನ್ನು ಗೆಲ್ಲಿಸಿ ಕೊಡಬೇಕು ಎಂದು ಕೈಮುಗಿದು ಮನವಿ ಮಾಡುತ್ತೇನೆ' ಎಂದರು.

ಮಂಡ್ಯದಲ್ಲಿ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರನ್ನು ಕಣಕ್ಕಿಳಿಸಲು ಜೆಡಿಎಸ್ ನಾಯಕರು ಯೋಚಿಸಿದ್ದರು. ಆದರೆ, ಕುಮಾರಸ್ವಾಮಿ ಅವರನ್ನೇ ಕಣಕ್ಕಿಳಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿಯ ವರಿಷ್ಠರು ಒತ್ತಡ ಹೇರಿದ್ದರು. ತಾವು ಪ್ರತಿನಿಧಿಸುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಮುಖಂಡರ ಜತೆ ಸರಣಿ ಸಭೆಗಳನ್ನು ನಡೆಸಿದ್ದ ಕುಮಾರಸ್ವಾಮಿ, ಅವರ ಅಭಿಪ್ರಾಯ ಆಲಿಸಿದ್ದರು. ಬಳಿಕ ಸ್ಪರ್ಧೆಯ ನಿರ್ಧಾರವನ್ನು ಅಂತಿಮಗೊಳಿಸಿದರು.

ಹಾಸನದಲ್ಲಿ ಪ್ರಜ್ವಲ್ ಬದಲಿಗೆ ಬೇರೊಬ್ಬರನ್ನು ಕಣಕ್ಕಿಳಿಸಬೇಕೆಂಬ ಬೇಡಿಕೆ ಬಿಜೆಪಿಯ ಕೆಲವು ನಾಯಕರಿಂದ ಬಂದಿತ್ತು. ಆದರೆ, ಅದಕ್ಕೆ ಜೆಡಿಎಸ್ ಮಣಿದಿಲ್ಲ. ಕೋಲಾರದಲ್ಲಿ ಶಾಸಕ ಸಮೃದ್ಧಿ ಮಂಜುನಾಥ್, ಮಾಜಿ ಶಾಸಕ ನಿಸರ್ಗ ನಾರಾಯಣ ಸ್ವಾಮಿ ಮತ್ತು ಮಲ್ಲೇಶ್ ಬಾಬು ಹೆಸರುಗಳು ಪರಿಶೀಲನೆಯಲ್ಲಿದ್ದವು. ಮಲ್ಲೇಶ್ ಬಾಬು ಅವರನ್ನೇ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸುವ ತೀರ್ಮಾನವನ್ನು ಜೆಡಿಎಸ್ ಕೈಗೊಂಡಿದೆ.

ಮಲ್ಲೇಶ್ ಬಂಗಾರಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 2018 ಮತ್ತು 2023ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಸೋತಿದ್ದರು. ಅವರ ತಾಯಿ ಮಂಗಮ್ಮ ಮುನಿಸ್ವಾಮಿ ಅವರು ಎರಡು ಬಾರಿ ಕೋಲಾರ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದರು. ಒಮ್ಮೆ ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದು ಸೋಲು ಕಂಡಿದ್ದರು.

ಸಮನ್ವಯಕ್ಕೆ ನಿರ್ಧಾರ: ಜೆಡಿಎಸ್ ರಾಜ್ಯ 'ಕೋರ್ ಕಮಿಟಿ' ಅಧ್ಯಕ್ಷ ಜಿ.ಟಿ. ದೇವೇಗೌಡ ಸೇರಿದಂತೆ ಹಲವು ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು. ಬಿಜೆಪಿ–ಜೆಡಿಎಸ್ ಸಮನ್ವಯದಲ್ಲಿ ರಾಜ್ಯದಾದ್ಯಂತ ಚುನಾವಣಾ ಪ್ರಚಾರ ನಡೆಸುವ ನಿರ್ಧಾರವನ್ನು ಸಭೆಯಲ್ಲಿ ಕೈಗೊಳ್ಳಲಾಗಿದೆ.

ರಾಜ್ಯದ ಯಾವುದೇ ಕ್ಷೇತ್ರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳ ಪರವಾಗಿ ಪ್ರಚಾರ ಸಭೆ ನಡೆದರೂ ಹಾಜರಾಗಬೇಕು. ಜಿಲ್ಲೆ ಮತ್ತು ತಾಲ್ಲೂಕು ಹಂತದ ಎಲ್ಲ ಮುಖಂಡರು, ಕಾರ್ಯಕರ್ತರು ಪ್ರಚಾರದಲ್ಲಿ ಮಿತ್ರಪಕ್ಷದ ಜತೆ ಕೈಜೋಡಿಸಬೇಕು ಎಂಬ ಸೂಚನೆಯನ್ನು ಕುಮಾರಸ್ವಾಮಿ ಅವರು ನೀಡಿದ್ದಾರೆ ಎಂದು ಜೆಡಿಎಸ್‌ನ ಉನ್ನತ ಮೂಲಗಳು ಮಾಹಿತಿ ನೀಡಿವೆ.

'ಬಿಜೆಪಿ–ಜೆಡಿಎಸ್ ಸರ್ಕಾರ ಬರಬೇಕು'

'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಹೋಗಿ, ಬಿಜೆಪಿ–ಜೆಡಿಎಸ್ ಸರ್ಕಾರ ಬರಬೇಕು. ಮುಖ್ಯಮಂತ್ರಿ ಯಾರಾದರೂ ಆಗಲಿ, ಅದು ಆಮೇಲೆ. ಅವರಿಂದ ನಿಮ್ಮ ಕೆಲಸ ಮಾಡಿಸುತ್ತೇನೆ. ಅದು ನನ್ನ ಬದ್ಧತೆ' ಎಂದು ಎಚ್.ಡಿ. ದೇವೇಗೌಡ ಹಾಸನದಲ್ಲಿ ಹೇಳಿದರು.

'ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನ ಮಂತ್ರಿಯಾಗಬೇಕು. ಅವರನ್ನು ಬಿಟ್ಟರೆ ಬೇರೆ ನಾಯಕರು ಯಾರಿದ್ದಾರೆ? ಭಾರತದ ಆರ್ಥಿಕ ಶಕ್ತಿ ಐದರಿಂದ ಮೂರನೇ ಸ್ಥಾನಕ್ಕೆ ಬಂದಿದೆ. ಮಲ್ಲಿಕಾರ್ಜುನ ಖರ್ಗೆ ಹೆಸರು ಹೇಳಿದರೆ, ಸಿದ್ದರಾಮಯ್ಯ ವಿರೋಧಿಸುತ್ತಾರೆ. ಮಮತಾ ಬ್ಯಾನರ್ಜಿಯವರೂ ವಿರೋಧಿಸುತ್ತಾರೆ' ಎಂದರು.

'ಬೆಂಗಳೂರಿನಲ್ಲಿ ಶೋಭಾ ಕರಂದ್ಲಾಜೆ, ತುಮಕೂರಿನಲ್ಲಿ ವಿ.ಸೋಮಣ್ಣ, ಚಿಕ್ಕಮಗಳೂರಿನಲ್ಲಿ ಕೋಟ ಶ್ರೀನಿವಾಸ ಪೂಜಾರಿ, ಶಿವಮೊಗ್ಗದಲ್ಲಿ ಬಿ.ಎಸ್.ಯಡಿಯೂರಪ್ಪ ಮಗ ಬಿ.ವೈ.ರಾಘವೇಂದ್ರ ಹೀಗೆ... ಎಲ್ಲೆಲ್ಲಿ ನಾನು ಹೋಗಬೇಕು ಎನ್ನುತ್ತಾರೋ ಅಲ್ಲಿಗೆ ಪ್ರಚಾರಕ್ಕೆ ಹೋಗುತ್ತೇನೆ. 28 ಕ್ಷೇತ್ರಗಳಲ್ಲೂ ಹೋರಾಟ ಮಾಡುತ್ತೇನೆ' ಎಂದು ಹೇಳಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕೆ

ಎಪಿವೈ ಅತಿ ಕೆಟ್ಟ ಯೋಜನೆ


ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ರೂಪಿಸಿರುವ ಅಟಲ್ ಪಿಂಚಣಿ ಯೋಜನೆ (ಎಪಿವೈ) ಅತ್ಯಂತ ಕೆಟ್ಟದ್ದಾಗಿದ್ದು, ಜನರನ್ನು ವಂಚಿಸುವ ಉದ್ದೇಶ ಹೊಂದಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಇದು ನರೇಂದ್ರ ಮೋದಿ ಸರ್ಕಾರದ ನೀತಿ ನಿರೂಪಣೆಗೆ ಸೂಕ್ತ ನಿದರ್ಶನವಾಗಿದ್ದು, ವಾಸ್ತವವಾಗಿ ಕೆಲವೇ ಜನರಿಗೆ ತಲುಪುವ ಯೋಜನೆಯಾಗಿದೆ' ಎಂದು ದೂರಿದ್ದಾರೆ.

ಕೇಂದ್ರ ಸರ್ಕಾರವು ಅಸಂಘಟಿತ ವಲಯದ ಕಾರ್ಮಿಕರಿಗಾಗಿ ಅಟಲ್ ಪಿಂಚಣಿ ಯೋಜನೆ ಜಾರಿಗೊಳಿಸಿದೆ. ಈ ಯೋಜನೆಯಿಂದ ಪ್ರತಿ ಮೂರು ಚಂದಾದಾರರ ಪೈಕಿ ಒಬ್ಬರು ಹೊರಬಿದ್ದಿದ್ದಾರೆ. ಈ ಚಂದಾದಾರರ ಅನುಮತಿಯಿಲ್ಲದೆ ಖಾತೆಗಳನ್ನು ತೆರೆದಿದ್ದೇ ಇದಕ್ಕೆ ಕಾರಣ ಎಂದು ಮಾಧ್ಯಮವೊಂದರ ವರದಿಯನ್ನು ಉಲ್ಲೇಖಿಸಿ ಅವರು ಕೇಂದ್ರದ ವಿರುದ್ಧ ಕಿಡಿಕಾರಿದ್ದಾರೆ. ಭಾರತೀಯ ಸಾಮಾಜಿಕ ವಿಜ್ಞಾನ ಅನುಸಂಧಾನ ಪರಿಷತ್ತಿನ (ಐಸಿಎಸ್‌ಎಸ್‌ಆರ್). ಅಧ್ಯಯನವನ್ನು ವರದಿ ಪ್ರಸ್ತಾಪಿಸಿದೆ.

ಇದರಲ್ಲಿ ಶೇ 83ರಷ್ಟು ಚಂದಾದಾರರು ಕಡಿಮೆ ಸ್ಲ್ಯಾಬ್ ಅಂದರೆ ₹ 1,000 ಪಿಂಚಣಿಯವರು. ಏಕೆಂದರೆ ಇದಕ್ಕೆ ಮಾಸಿಕ ಕೊಡುಗೆ ಕಡಿಮೆ ಇದೆ ಮತ್ತು ಅದು ಫಲಾನುಭವಿಗಳ ಗಮನಕ್ಕೂ ಬಂದಿಲ್ಲ ಎಂದು ಅವರು ಹೇಳಿದ್ದಾರೆ.

ಇದು ಸ್ಥಿರ ಆದಾಯದ ಪಿಂಚಣಿ ಆಗಿರುವುದರಿಂದ, ಆದಾಯದ ಮೊತ್ತವೂ ಆಕರ್ಷಕವಾಗಿಲ್ಲ. ಅಲ್ಲದೆ ಏರುತ್ತಿರುವ ಬೆಲೆಗಳೊಂದಿಗೆ ಅದು ಮೌಲ್ಯವನ್ನು ಕಳೆದುಕೊಳ್ಳುತ್ತದೆ ಎಂದು ರಮೇಶ್ ದೂರಿದ್ದಾರೆ.

ಎಪಿವೈ ಭಾರತದ ಅಸಂಘಟಿತ ವಲಯದ ಕಾರ್ಮಿಕರನ್ನು ಕೇಂದ್ರೀಕರಿಸಿ ರೂಪಿಸಿರುವ ಯೋಜನೆ. ಇದರಡಿ ಖಾತರಿಪಡಿಸಿದ ಕನಿಷ್ಠ ಪಿಂಚಣಿ ತಿಂಗಳಿಗೆ ₹1,000ದಿಂದ ₹5,000ದವರೆಗೆ 60 ವರ್ಷ ಮೀರಿದ ಚಂದಾದಾರರಿಗೆ ನೀಡಲಾಗುತ್ತದೆ. ಇದು, ಅತ್ಯಂತ ಕೆಟ್ಟ ರೀತಿ ರೂಪಿಸಲಾಗಿರುವ ಯೋಜನೆ. ಕೆಲವೇ ಜನ ಫಲಾನುಭವಿಗಳಿಗೆ ಈ ಯೋಜನೆಯ ಪ್ರಯೋಜನ ಸಿಗುತ್ತಿದೆ ಎಂದು ಅವರು ಹೇಳಿದ್ದಾರೆ.

'ದುರುದ್ದೇಶಪೂರಿತ ಹೇಳಿಕೆ'

ನವದೆಹಲಿ (ಪಿಟಿಐ): ಸತ್ಯಗಳನ್ನು ತಮ್ಮ ಕುತಂತ್ರದ ಮಾತುಗಳ ಮೂಲಕ ಮರೆಮಾಚುವುದರಲ್ಲಿ ನಿಸ್ಸೀಮರಾದ ಕಾಂಗ್ರೆಸ್‌ನ ಜೈರಾಮ್ ರಮೇಶ್ ಅವರು, ಉತ್ತಮ ಪಿಂಚಣಿ ಯೋಜನೆಯ ಕುರಿತು ದುರುದ್ದೇಶಪೂರಿತವಾಗಿ ಹೇಳಿಕೆ ನೀಡಿದ್ದಾರೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿರುಗೇಟು ನೀಡಿದ್ದಾರೆ.

ನಿರ್ಮಲಾ ಸೀತಾರಾಮನ್

ಅಟಲ್ ಪಿಂಚಣಿ ಯೋಜನೆ ಅತ್ಯುತ್ತಮವಾದುದಾಗಿದ್ದು, ಇದು ಪ್ರಚಲಿತದಲ್ಲಿರುವ ಅತ್ಯುತ್ತಮ ಅಭ್ಯಾಸಗಳನ್ನು ಆಧರಿಸಿ ರೂಪಿಸಲಾಗಿದೆ. ಚಂದಾದಾರರು ಆಯ್ಕೆಯಿಂದ ಹೊರಗುಳಿಯದಿದ್ದರೆ ಸ್ವಯಂ ಚಾಲಿತವಾಗಿ ಪ್ರೀಮಿಯಂ ಪಾವತಿ ಮುಂದುವರಿಯುತ್ತದೆ ಎಂದು ನಿರ್ಮಲಾ ತಿಳಿಸಿದ್ದಾರೆ. ಅದಾಗ್ಯೂ ಈ ವಿಧಾನವನ್ನು ಹಲವು ಆರ್ಥಿಕ ತಜ್ಞರು ಪ್ರತಿಪಾದಿಸಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ಇದು ಪ್ರಯೋಜನಕಾರಿ ಆಗಿದ್ದು, ಚಂದಾದಾರರ ಹಿತದೃಷ್ಟಿಯಿಂದ ಕೂಡಿದೆ. ಜನರು ಪ್ರತಿ ವರ್ಷವೂ ಮುಂದುವರಿಯಲು ನಿರ್ಧರಿಸುವ ಬದಲು, ಅದನ್ನು ಸ್ಥಗಿತಗೊಳಿಸುವ ನಿರ್ಧಾರವನ್ನೂ ತೆಗೆದುಕೊಳ್ಳಲು ಅವಕಾಶವಿದೆ ಎಂದಿದ್ದಾರೆ.

'ಈ ಯೋಜನೆ ಮೂಲಕ ಜನರನ್ನು ವಂಚಿಸಿ, ಬಲವಂತವಾಗಿ ತೊಡಗಿಸಿಕೊಳ್ಳಲಾಗುತ್ತಿದೆ ಎಂದು ಜೈರಾಮ್ ರಮೇಶ್ ಹೇಳಿದ್ದಾರೆ! ಆದರೆ ಮತ ಬ್ಯಾಂಕ್ ರಾಜಕೀಯಕ್ಕಾಗಿ ಅಲ್ಪಸಂಖ್ಯಾತರ ಓಲೈಕೆ ಹೆಸರಿನಲ್ಲಿ ಕಾಂಗ್ರೆಸ್ ಯಾವಾಗಲೂ ವಂಚನೆ ಮಾಡಿದೆ. ತಮ್ಮ ಕುಟುಂಬಕ್ಕೆ ಬೇಕಾದವರಿಗೆ ಸಾಲ ನೀಡಲು ನಿರಾಕರಿಸಿದರು ಎಂಬ ಕಾರಣಕ್ಕೆ ದಬ್ಬಾಳಿಕೆ ನಡೆಸಿ, ಎಸ್‌ಬಿಐನ ಮಾಜಿ ಅಧ್ಯಕ್ಷ ಆರ್.ಕೆ.ತಲ್ವಾರ್ ಅವರನ್ನು ರಾಜೀನಾಮೆ ನೀಡುವಂತೆ ಮಾಡಿದರು' ಎಂದು ನಿರ್ಮಲಾ ಅವರು ಪೋಸ್ಟ್ ಮಾಡಿದ್ದಾರೆ.

'ಬಡವರಿಗೆ ಪಿಂಚಣಿ ನೀಡಬಾರದು ಎಂದು ಬಯಸುವ ಕಾಂಗ್ರೆಸ್, ಜನರು ನಿರ್ದಿಷ್ಟ ಕುಟುಂಬದ ರಾಜಕಾರಣಿಗಳನ್ನು ಅವಲಂಬಿಸುವಂತೆ ಮಾಡುವ ಉದ್ದೇಶ ಹೊಂದಿದೆ' ಎಂದು ಅವರು ದೂರಿದ್ದಾರೆ.

'ಉದ್ಯೋಗ ಸೃಷ್ಟಿ; ಬಿಜೆಪಿ ಸುಳ್ಳು'

ಯುವಜನರು ಭ್ರಮೆಯಿಂದ ಹೊರಬರಲಿ –ರಾಹುಲ್

ರಾಹುಲ್‌ಗಾಂಧಿ

ನವದೆಹಲಿ (ಪಿಟಿಐ): 'ವಾರ್ಷಿಕ ಎರಡು ಕೋಟಿ ಉದ್ಯೋಗಾವಕಾಶ ಸೃಷ್ಟಿ ಕುರಿತಂತೆ ಬಿಜೆಪಿಯು ದೇಶದ ಯುವಜನರನ್ನು ತಪ್ಪುದಾರಿಗೆ ಎಳೆಯುತ್ತಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಂಗಳವಾರ ಆರೋಪಿಸಿದರು.

ಉದ್ಯೋಗ ಸೃಷ್ಟಿ ಕುರಿತಂತೆ ಬಿಜೆಪಿ ಸೃಷ್ಟಿಸಿದ ಭ್ರಮೆಯ ಚೌಕಟ್ಟಿನಿಂದ ಹೊರಬಂದು ಯುವಜನರು ತಮ್ಮದೇ ಗುರಿ ನಿಗದಿಪಡಿಸಿ ಕೊಳ್ಳಬೇಕು. ಕಾಂಗ್ರೆಸ್ 'ಯುವ ನ್ಯಾಯ' ಭರವಸೆ ಮೂಲಕ ದೇಶದಲ್ಲಿ ಉದ್ಯೋಗ ಕ್ರಾಂತಿ ಕೈಗೊಳ್ಳಲು ತೀರ್ಮಾನಿಸಿದೆ ಎಂದರು.

'ಮೋದಿಯವರೇ, ಉದ್ಯೋಗಾವಕಾಶ ಕುರಿತು ನಿಮಗೆ ಸ್ಪಷ್ಟ ಯೋಜನೆಗಳಿವೆಯೇ ಎಂಬುದು ಯುವಜನರ ಪ್ರಶ್ನೆಯಾಗಿದೆ. ಪ್ರತಿ ಗ್ರಾಮ, ರಸ್ತೆಯಲ್ಲಿ ಬಿಜೆಪಿಯವರಿಗೆ ಈ ಪ್ರಶ್ನೆ ಕೇಳಲಾಗುತ್ತಿದೆ. ಉದ್ಯೋಗ ಸೃಷ್ಟಿ ಕುರಿತಂತೆ ಸುಳ್ಳು ಹೇಳಿದ್ದೇಕೆ?' ಎಂದು ಪ್ರಶ್ನಿಸಿದ್ದಾರೆ.

ಯುವ ನ್ಯಾಯ ಯೋಜನೆಯಡಿ ಉದ್ಯೋಗ ಕ್ರಾಂತಿಗೆ ಕಾಂಗ್ರೆಸ್ ನಿರ್ಧರಿಸಿದೆ. ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ 30 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಪ್ರತಿ ಪದವೀಧರ ಯುವಜನರಿಗೆ 'ಮೊದಲ ಉದ್ಯೋಗ ಖಚಿತ' ಯೋಜನೆಯಡಿ ವಾರ್ಷಿಕ ₹1 ಲಕ್ಷ ನೀಡಲಾಗುತ್ತದೆ. ಕಾಯ್ದೆ ರೂಪಿಸುವ ಮೂಲಕ ಪ್ರಶ್ನೆಪತ್ರಿಕೆ ಸೋರಿಕೆ ಸಮಸ್ಯೆ ಬಗೆಹರಿಸಲಾಗುವುದು ಎಂದು ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ.

ಎರಡು ಭಿನ್ನ ಸಿದ್ಧಾಂತಗಳ ನಡುವಣ ವ್ಯತ್ಯಾಸ ಗುರುತಿಸಲು ಈಗ ಸಕಾಲ. ಕಾಂಗ್ರೆಸ್ ಯುವಜನರ ಭವಿಷ್ಯ ಭದ್ರಪಡಿಸಲು ಬಯಸುತ್ತದೆ. ಬಿಜೆಪಿಯು ಅವರನ್ನು ತಪ್ಪುದಾರಿಗೆ ಎಳೆಯಲು ಬಯಸುತ್ತಿದೆ ಎಂದು ರಾಹುಲ್‌ಗಾಂಧಿ ಅವರು ಹೇಳಿದ್ದಾರೆ.

ನಿರುದ್ಯೋಗ ಸಮಸ್ಯೆ ಕುರಿತಾಗಿ ಬಿಜೆಪಿ ಸರ್ಕಾರವನ್ನು ಕಾಂಗ್ರೆಸ್ ಪಕ್ಷವು ನಿರಂತರವಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದು, ಇದನ್ನು ಚುನಾವಣಾ ವಸ್ತುವಾಗಿಸಿದೆ.

ಮ್ಯಾನ್ಮಾರ್ ರಾಯಭಾರಿಯಾಗಿ ಅಭಯ್ ಠಾಕೂರ್

ನವದೆಹಲಿ (ಪಿಟಿಐ): ಹಿರಿಯ ರಾಜತಾಂತ್ರಿಕ ಅಭಯ್ ಠಾಕೂರ್ ಅವರನ್ನು ಮ್ಯಾನ್ಮಾರ್‌ನಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಮಂಗಳವಾರ ತಿಳಿಸಿದೆ.

ಪ್ರಸ್ತುತ ಠಾಕೂರ್ ಅವರು, ವಿದೇಶಾಂಗ ಸಚಿವಾಲಯದ ವಿಶೇಷ ಕರ್ತವ್ಯ ಅಧಿಕಾರಿಯಾಗಿದ್ದರೆ. ಸದ್ಯದಲ್ಲೇ ತಮ್ಮ ಹೊಸ ಹೊಣೆ ವಹಿಸಿಕೊಳ್ಳಲಿದ್ದಾರೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಪ್ರಜಾಪ್ರಭುತ್ವದ ಮರು ಸ್ಥಾಪನೆಗೆ ಆಗ್ರಹಿಸಿ ಮ್ಯಾನ್ಮಾರ್ ಜನರು 2021ರ ಫೆಬ್ರುವರಿ 1ರಿಂದಲೂ ಹಿಂಸಾತ್ಮಕ ಪ್ರತಿಭಟನೆಯಲ್ಲಿ ತೊಡಗಿದ್ದಾರೆ. ಪ್ರತಿಭಟನೆ ಮಹತ್ತರ ಘಟ್ಟ ತಲುಪಿರುವ ಹೊತ್ತಿನಲ್ಲೇ ಈ ನೇಮಕಾತಿ ನಡೆದಿದೆ.

ಪ್ರತಿ ಹೆಣ್ಣೂ ಗೌರವಕ್ಕೆ ಅರ್ಹಳು: ಕಂಗನಾ

ಚಂಡೀಗಢ/ ನವದೆಹಲಿ (ಪಿಟಿಐ): 'ಕೌಟುಂಬಿಕ ಹಿನ್ನೆಲೆ, ವೃತ್ತಿಯ ಹೊರತಾಗಿ ಪ್ರತಿಯೊಬ್ಬ ಮಹಿಳೆಯೂ ಘನತೆಗೆ ಅರ್ಹಳು' ಎಂದು ನಟಿ, ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಮಂಗಳವಾರ ಹೇಳಿದ್ದಾರೆ.

ಮಂಡಿ ಕ್ಷೇತ್ರದ ಬಗ್ಗೆ ಕಾಂಗ್ರೆಸ್ ನಾಯಕರ ಹೇಳಿಕೆ ವಿವಾದದ ಸ್ವರೂಪ ಪಡೆದ ಬೆನ್ನಲ್ಲೇ ಈ ಹೇಳಿಕೆ ನೀಡಿದ್ದಾರೆ.

ಚಂಡೀಗಢ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಶಿಕ್ಷಕಿಯಾಗಿರಲಿ, ನಟಿಯಾಗಿರಲಿ, ಪತ್ರಕರ್ತೆಯಾಗಿರಲಿ, ರಾಜಕಾರಣಿಯಾಗಿರಲಿ ಅಥವಾ ಲೈಂಗಿಕ ಕಾರ್ಯಕರ್ತೆಯಾಗಿರಲಿ ಎಲ್ಲರೂ ಗೌರವಕ್ಕೆ ಅರ್ಹರು. 'ಚೋಟಾ ಕಾಶಿ' ಎಂದು ಪ್ರಸಿದ್ಧಿ ಪಡೆದಿರುವ 'ಮಂಡಿ' ಬಗ್ಗೆ ಅವಹೇಳನಕಾರಿ ಹೇಳಿಕೆಯು ನೋವುಂಟು ಮಾಡಿದೆ' ಎಂದರು.

ಕಾಂಗ್ರೆಸ್ ನಾಯಕರಾದ ಸುಪ್ರಿಯಾ ಶ್ರೀನೇತ್ ಮತ್ತು ಎಚ್.ಎಸ್.ಅಹೀರ್ ವಿರುದ್ಧ ಕ್ರಮ ಕೈಗೊಳ್ಳುವ ಯೋಚನೆ ಇದೆಯೇ ಎಂಬ ಪ್ರಶ್ನೆಗೆ, 'ಬಿಜೆಪಿ ಅಧ್ಯಕ್ಷ ಜೆ.ಪಿ ನಡ್ಡಾ ಅವರು ದೆಹಲಿಗೆ ಕರೆದಿದ್ದಾರೆ. ಅವರೊಂದಿಗಿನ ಸಭೆ ನಂತರ ಈ ಬಗ್ಗೆ ಪ್ರತಿಕ್ರಿಯೆ ನೀಡುತ್ತೇನೆ' ಎಂದರು.

'ಮಹಿಳೆಯಾಗಿ ಸುಪ್ರಿಯಾ ಇಂಥ ಹೇಳಿಕೆ ನೀಡಿದ್ದು ಅಚ್ಚರಿ ಮೂಡಿಸಿದೆ. ತಾವು ನೀಡಿರುವ ಹೇಳಿಕೆ ಕುರಿತು ಸುಪ್ರಿಯಾ ಕ್ಷಮೆ ಯಾಚಿಸಿದ್ದಾರೆ.

ಜೈ ರಾಮ್ ಠಾಕೂರ್
ಹಿಮಾಚಲ ಪ್ರದೇಶ ಮಾಜಿ ಮುಖ್ಯಮಂತ್ರಿ

ಸಾರ್ವಜನಿಕವಾಗಿ ಅವಾಚ್ಯ ಭಾಷೆ ಬಳಕೆಗೆ ಪಕ್ಷದಲ್ಲಿ ಜಾಗವಿಲ್ಲ ಎಂಬ ತತ್ವವನ್ನು ಪಕ್ಷವು ನಂಬುತ್ತದೆ. ಈ ಪೋಸ್ಟ್ ಮಾಡಿದವರನ್ನು ಪತ್ತೆ ಹಚ್ಚಲಾಗುತ್ತದೆ

ಸಂದೀಪ್ ದೀಕ್ಷಿತ್
ಕಾಂಗ್ರೆಸ್ ಪಕ್ಷದ ನಾಯಕ

ವಿವಾದಾತ್ಮಕ ಪೋಸ್ಟ್: ಕೆಲ ಕಾಂಗ್ರೆಸ್ ನಾಯಕರು ಕಂಗನಾ ಗುರಿಯಾಗಿಸಿ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಮಾಡಿದ್ದ ಪೋಸ್ಟ್‌ಗಳು ವಿವಾದಕ್ಕೆ ಕಾರಣವಾಗಿದ್ದವು. ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ಈ ಪೋಸ್ಟ್‌ಗಳನ್ನು ಕಾಂಗ್ರೆಸ್ ಮುಖಂಡರು ಜಾಲತಾಣದಿಂದ ತೆಗೆದು ಹಾಕಿದ್ದಾರೆ.

'ಭಾವ್ ಇನ್ ಮಂಡಿ' ಎಂಬ ಒಕ್ಕಣೆಯ ಕಂಗನಾ ಚಿತ್ರವನ್ನು ಸುಪ್ರಿಯಾ ಶ್ರೀನೇತ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಈಗ ಅದನ್ನು ತೆಗೆದು ಹಾಕಲಾಗಿದೆ. 'ಮಂಡಿ' ಎಂಬುದು ಸಗಟು ಮಾರುಕಟ್ಟೆಯನ್ನು ಸೂಚಿಸಿದರೆ, 'ಭಾವ್' ಪದ ಪದಾರ್ಥದ ಬೆಲೆ ಸೂಚಿಸುತ್ತದೆ.

'ಫಿಲಿಪ್ಪೀನ್ಸ್ ಸಹಭಾಗಿತ್ವ ವಿಸ್ತರಣೆ ಪರಿಶೀಲನೆ'

ಮನಿಲಾ (ಪಿಟಿಐ): 'ದೇಶದ ಸಾರ್ವಭೌಮತ್ವ ಎತ್ತಿಹಿಡಿಯಲು ಭಾರತ ಎಂದಿಗೂ ಫಿಲಿಪ್ಪೀನ್ಸ್‌ಗೆ ನೆರವಾಗಲಿದೆ. ಇನ್ನಷ್ಟು ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳು ಸಹಭಾಗಿತ್ವ ಹೊಂದುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

ದಕ್ಷಿಣ ಚೀನಾ ಸಮುದ್ರ ವ್ಯಾಪ್ತಿಯಲ್ಲಿ ಜಲಗಡಿ ಕುರಿತಂತೆ ಚೀನಾದ ಜತೆಗೆ ವಿವಾದ ಇರುವ ಸಂದರ್ಭದಲ್ಲಿಯೇ ಅವರು ಈ ಮಾತು ಹೇಳಿದ್ದಾರೆ.

ಫಿಲಿಪ್ಪೀನ್ಸ್ ಜತೆಗೆ ಉತ್ಪಾದಕತೆಗೆ ಪೂರಕವಾದ ಚರ್ಚೆ ನಡೆದಿದೆ. ರಾಜಕೀಯ, ರಕ್ಷಣೆ, ನೌಕಾನೆಲೆ, ವಾಣಿಜ್ಯ ಮತ್ತು ಹೂಡಿಕೆ, ಮೂಲಸೌಕರ್ಯ, ಅಭಿವೃದ್ಧಿಗೆ ಸಹಕಾರ–ಈ ಕ್ಷೇತ್ರಗಳಲ್ಲಿ ಪರಸ್ಪರ ಬೆಂಬಲ ನೀಡುವ ಕುರಿತು ವಿಸ್ತೃತ ಚರ್ಚೆ ನಡೆಯಿತು ಎಂದು ತಿಳಿಸಿದರು.

ಜಾಗತಿಕ, ಪ್ರಾದೇಶಿಕ ನೆಲೆಯ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಯಿತು. ಉಭಯ ದೇಶಗಳು ನಿಯಮಗಳಿಗೆ ಅನುಗುಣವಾಗಿ ಪರಸ್ಪರ ಸಹಕಾರ ವಿಸ್ತರಿಸಲು ಬದ್ಧವಾಗಿವೆ ಎಂದು ಅವರು ಹೇಳಿದ್ದಾರೆ.

ವಿದೇಶಾಂಗ ಸಚಿವ ಎಸ್‌.ಜೈಶಂಕರ್ ಅವರು ಮಂಗಳವಾರ ಮನಿಲಾದಲ್ಲಿ ಫಿಲಿಪ್ಪೀನ್ಸ್ ಅಧ್ಯಕ್ಷ ಫರ್ಡಿನಾಂಡ್ ಮಾರ್ಕೊಸ್ ಜೂನಿಯರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ದಕ್ಷಿಣ ಚೀನಾ ವಿವಾದದ ನಡುವೆಯೂ ಫಿಲಿಪ್ಪೀನ್ಸ್ ಜತೆಗೆ ರಕ್ಷಣಾ ಸಹಕಾರ ಹೊಂದುವ ಚಿಂತನೆ ಕುರಿತ ಪ್ರಶ್ನೆಗೆ, 'ನಮ್ಮ ಅರ್ಹತೆಗಳ ಆಧಾರದಲ್ಲಿಯೇ ಸಹಕಾರ ಸಾಧ್ಯತೆಯನ್ನು ಪರಿಶೀಲಿಸಬೇಕು. ನಿರ್ದಿಷ್ಟ ಸ್ಥಿತಿಗೆ, ಸಂದರ್ಭವನ್ನು ತಾಳೆಹಾಕುವ ಅಗತ್ಯವಿಲ್ಲ' ಎಂದರು.

'ಜೈಶಂಕರ್ ಭೇಟಿ ಫಲಪ್ರದ': ಸಿಂಗಪುರ ವರದಿ (ಪಿಟಿಐ): ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರ ಉನ್ನತ ನಾಯಕರ ಜತೆಗಿನ ಭೇಟಿ ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಹೊಂದಲು ಇರುವ ಸಾಧ್ಯತೆಗಳನ್ನು ಅರಿಯಲು ನೆರವಾಗಿದೆ ಎಂದು ಸರ್ಕಾರ ತಿಳಿಸಿದೆ.

ಸಾರ್ವಭೌಮತ್ವ ಗೌರವಿಸಿ – ಚೀನಾ ಆಗ್ರಹ

ಬೀಜಿಂಗ್ (ಪಿಟಿಐ): 'ದಕ್ಷಿಣ ಚೀನಾ ಸಾಗರದಲ್ಲಿನ ಜಲಗಡಿ ಕುರಿತ ವಿವಾದ ಎರಡು ದೇಶಗಳಿಗೆ ಸಂಬಂಧಿಸಿದ ವಿಷಯವಾಗಿದೆ. ಈ ಬಗ್ಗೆ ಮೂರನೆಯವರ ಹಸ್ತಕ್ಷೇಪ ಅನಗತ್ಯ' ಎಂದು ಚೀನಾ ಮಂಗಳವಾರ ಪ್ರತಿಕ್ರಿಯಿಸಿದೆ.

'ದಕ್ಷಿಣ ಚೀನಾ ಸಾಗರ ಕುರಿತು ತನ್ನ ಹಕ್ಕು ಪ್ರತಿಪಾದಿಸಿರುವ ಚೀನಾದ ನಿಲುವನ್ನು ಭಾರತ ಗೌರವಸಬೇಕು' ಎಂದೂ ಚೀನಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಲಿನ್ ಜಿಯಾನ್ ಹೇಳಿದ್ದಾರೆ. ಸಚಿವ ಎಸ್. ಜೈಶಂಕರ್ ಹೇಳಿಕೆಗೆ ಈ ಪ್ರತಿಕ್ರಿಯೆ ನೀಡಿದ್ದಾರೆ.

ಮಮತಾ ಬ್ಯಾನರ್ಜಿ ಕೌಟುಂಬಿಕ ಹಿನ್ನೆಲೆ ಕುರಿತ ಮಾತು

ವಿವಾದ ಸೃಷ್ಟಿಸಿದ ಬಿಜೆಪಿ ಸಂಸದ ಹೇಳಿಕೆ

ಕೋಲ್ಕತ್ತ (ಪಿಟಿಐ): ಬಿಜೆಪಿ ಹಿರಿಯ ನಾಯಕ ಮತ್ತು ಸಂಸದ ದಿಲೀಪ್ ಘೋಷ್ ಅವರು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕೌಟುಂಬಿಕ ಹಿನ್ನೆಲೆಯನ್ನು ಅಣಕಿಸಿದ್ದಾರೆ ಎನ್ನಲಾದ ವಿಡಿಯೊ ತುಣುಕು ವಿವಾದಕ್ಕೆ ಕಾರಣವಾಗಿದೆ.

'ಬಂಗಾಳವು ತನ್ನ ಮಗಳನ್ನು ಬಯಸುತ್ತದೆ' ಎಂಬ ಟಿಎಂಸಿ ಘೋಷವಾಕ್ಯವನ್ನು ಘೋಷ್ ಅಣಕಿಸಿದ್ದರು. 'ಮಮತಾ ಬ್ಯಾನರ್ಜಿ ಗೋವಾಗೆ ಹೋದಾಗ, ತಾನು ಗೋವಾದ ಮಗಳು ಎನ್ನುತ್ತಾರೆ. ತ್ರಿಪುರಾದಲ್ಲಿ 'ತ್ರಿಪುರಾದ ಮಗಳು' ಎನ್ನುತ್ತಾರೆ. ಮೊದಲು... ಸ್ಪಷ್ಟಪಡಿಸಲಿ' ಎಂದು ಹೇಳಿದ್ದರು.


ದಿಲೀಪ್ ಘೋಷ್

ಇದಕ್ಕೆ ಟಿಎಂಸಿ ತೀಕ್ಷ್ಣ ತಿರುಗೇಟು ನೀಡಿದ್ದು, 'ಬಿಜೆಪಿ ಸಂಸದ ಘೋಷ್ ಹೇಳಿಕೆಯು ಅವರ ದೇಹದಲ್ಲಿ 'ಕೇಸರಿ ಪಾಳಯದ ಡಿಎನ್‌ಎ' ಇದೆ ಎನ್ನುವುದನ್ನು ತೋರಿಸುತ್ತದೆ' ಎಂದು ಹೇಳಿದೆ.

'ದಿಲೀಪ್ ಘೋಷ್ ರಾಜಕೀಯ ನಾಯಕತ್ವಕ್ಕೆ ಕಪ್ಪುಚುಕ್ಕಿ ತಾಯಿ ದುರ್ಗೆಯ ವಂಶಪರಂಪರೆಗೆ ಸವಾಲು ಹಾಕುವುದರಿಂದ ಹಿಡಿದು, ಮಮತಾ ಬ್ಯಾನರ್ಜಿ ಅವರ ಪೂರ್ವಜರನ್ನು ಪ್ರಶ್ನಿಸುವವರೆಗೆ ಅವರು ನೈತಿಕ ದಿವಾಳಿತನದ ಅತ್ಯಂತ ಕೊಳಕು ಆಳದಲ್ಲಿ ಮುಳುಗಿದ್ದಾರೆ' ಎಂದು ಟಿಎಂಸಿ 'ಎಕ್ಸ್'ನಲ್ಲಿ ಆಕ್ರೋಶ ಹೊರಹಾಕಿದೆ.

'ಹಿಂದೂ ಧರ್ಮದ ದೇವತೆಗಳಾಗಿರಲಿ ಅಥವಾ ರಾಜ್ಯದ ಮುಖ್ಯಮಂತ್ರಿಯಾಗಿರಲಿ; ಬಂಗಾಳದ ಮಹಿಳೆಯರ ಬಗ್ಗೆ ಘೋಷ್ ಅವರಿಗೆ ಎಳ್ಳಷ್ಟೂ ಗೌರವವಿಲ್ಲ ಎಂಬುದು ಸ್ಪಷ್ಟ' ಎಂದಿದೆ. .

ಘೋಷ್ ಅವರು ಕ್ಷಮೆಯಾಚಿಸಬೇಕು ಎಂದು ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿ ಪಂಜಾ ಆಗ್ರಹಿಸಿದ್ದಾರೆ.

ಆಯೋಗಕ್ಕೆ ದೂರು: ಘೋಷ್ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ಚುನಾವಣಾ ಆಯೋಗಕ್ಕೆ ದೂರು ನೀಡಿದೆ. 'ಘೋಷ್ ಹೇಳಿಕೆಯು ಶಿಸ್ತಿನ ಎಲ್ಲೆ ಮೀರಿರುವುದು ಮಾತ್ರವಲ್ಲದೆ, ಸ್ತ್ರೀದ್ವೇಷ ಸಂಸ್ಕೃತಿಯನ್ನು ಪ್ರತಿಪಾದಿಸುವಂತಿದೆ ಮತ್ತು ಅಧಿಕಾರದಲ್ಲಿರುವ ಮಹಿಳೆ ಬಗ್ಗೆ ಅಗೌರವವನ್ನು ಹೊಂದಿದೆ' ಎಂದು ದೂರಿನಲ್ಲಿ ತಿಳಿಸಿದೆ.

ನೀರಿನ ಕೊರತೆ ಪರಿಣಾಮ ನಿರೀಕ್ಷಿತ ಪ್ರಮಾಣದಲ್ಲಿ ಹಸಿರು ಮೇವು ಬೆಳೆದಿಲ್ಲ; ಜಾನುವಾರುಗಳಿಗೂ ಸಂಕಷ್ಟ

ಮಳೆಯಾಗದಿದ್ದರೆ ಕಾಡಲಿದೆ ಮೇವಿನ ಸಮಸ್ಯೆ

• ಕಲಾವತಿ ಬೈಚಬಾಳ

ಹುಬ್ಬಳ್ಳಿ: ಒಂದೆಡೆ ತಾಪಮಾನ ಏರುಗತಿಯಲ್ಲಿದ್ದರೆ, ಮತ್ತೊಂದೆಡೆ ಕೆರೆಕುಂಟೆ ಬತ್ತುತ್ತಿವೆ. ರಾಜ್ಯದ ಜಾನುವಾರುಗಳಿಗೆ ಸದ್ಯಕ್ಕೆ ಮೇವು ಲಭ್ಯವಿದ್ದರೂ ಸಕಾಲಕ್ಕೆ ಮಳೆಯಾಗದಿದ್ದರೆ, 10 ಜಿಲ್ಲೆಗಳಲ್ಲಿ ತೀವ್ರವಾದ ಮೇವಿನ ಕೊರತೆಯನ್ನು ಅನುಭವಿಸಲಿವೆ.

ಬಹುತೇಕ ಕಡೆ ಮೇವಿನ ಬೀಜಗಳ ಮಿನಿ ಕಿಟ್‌ಗಳನ್ನು ಈಗಾಗಲೇ ವಿತರಿಸಿದ್ದರೂ ಮಳೆ, ನೀರಿನ ಕೊರತೆ ಪರಿಣಾಮ ನಿರೀಕ್ಷಿತ ಪ್ರಮಾಣದಲ್ಲಿ ಹಸಿರು ಮೇವು ಬೆಳೆದಿಲ್ಲ. ಕೆಲ ದಿನಗಳಿಂದ ರಾಜ್ಯದ ಕೆಲ ಕಡೆ ಅಲ್ಪಸ್ವಲ್ಪ ಮಳೆಯಾಗಿದೆ. ಆದರೆ, ಸಮೃದ್ಧವಾಗಿ ಮೇವು ಬೆಳೆಯಲು ಇನ್ನೂ ಸಮಯ ಬೇಕು.

10 ಜಿಲ್ಲೆಗಳಲ್ಲಿ ಮೇವಿನ ಸಮಸ್ಯೆ: ಜನವರಿಯಿಂದ ಈವರೆಗೆ 7.63 ಲಕ್ಷ ಮೇವಿನ ಬೀಜದ ಕಿಟ್‌ಗಳನ್ನು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯು ರೈತರಿಗೆ ವಿತರಿಸಿದೆ.

ಧಾರವಾಡ ಜಿಲ್ಲೆಯಲ್ಲಿ ಇನ್ನೂ 12 ವಾರ ಸಾಕಾಗುವಷ್ಟು ಮೇವು ರೈತರ ಬಳಿ ಇದೆ. ಮಾದನಬಾವಿಯಲ್ಲಿ ಎರಡು ಟನ್ ಮೇವು ಸಂಗ್ರಹ ಇದೆ. ಮೇವು ಖರೀದಿಗೆ ವ್ಯವಸ್ಥೆ ಮಾಡಲಾಗಿದೆ

ದಿವ್ಯಪ್ರಭು ಜಿಆರ್‌ಜೆ, ಜಿಲ್ಲಾಧಿಕಾರಿ, ಧಾರವಾಡ

ಇದರಿಂದ 4 ಲಕ್ಷ ಟನ್ ಮೇವು ಬೆಳೆಯುವ ನಿರೀಕ್ಷೆ ಇದೆ. ಮೇ ತಿಂಗಳ ವೇಳೆಗೆ ಉತ್ತಮ ಮಳೆ ಆಗದಿದ್ದರೆ, ಅಂದಾಜು 10 ಜಿಲ್ಲೆಗಳಲ್ಲಿ ಮೇವಿನ ಸಮಸ್ಯೆ ಆಗಬಹುದು.

‘ಧಾರವಾಡ, ಗದಗ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಸದ್ಯ ನಾಲ್ಕೈದು ವಾರಗಳಿಗೆ ಆಗುವಷ್ಟು ಮಾತ್ರ ಮೇವು ದಾಸ್ತಾನಿದೆ. ಮುಂದಿನ ದಿನಗಳಲ್ಲಿ ಕೊರತೆ ತಲೆದೋರಬಹುದು’ ಎಂದು ಮೂಲಗಳು ತಿಳಿಸಿವೆ.

3.93 ಲಕ್ಷ ಮೇವಿನ ಬೀಜಗಳ ಮಿನಿ ಕಿಟ್‌ಗೆ ಬೇಡಿಕೆ: ‘ತುಮಕೂರು ಜಿಲ್ಲೆಯಲ್ಲಿ 1.8 ಲಕ್ಷ ಮೇವಿನ ಬೀಜಗಳ ಕಿಟ್ ವಿತರಿಸಲಾಗಿದೆ. ಹಾಸನ, ಮೈಸೂರು, ವಿಜಯಪುರ, ಧಾರವಾಡ, ಬೆಳಗಾವಿ, ಜಿಲ್ಲೆಗಳ ರೈತರಿಗೆ ಮೇವಿನ ಬೀಜಗಳ ಕಿಟ್ ವಿತರಿಸಲಾಗಿದೆ’ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಮೇವು ಸಂಗ್ರಹಿಸುತ್ತಿರುವ ರೈತರು– ಸಾಂದರ್ಭಿಕ ಚಿತ್ರ

18 ಮೇವು ಬ್ಯಾಂಕ್ ಆರಂಭ

ನಾಲ್ಕು ವಾರ ಅಥವಾ ಅದಕ್ಕೂ ಕಡಿಮೆ ಅವಧಿಗೆ ಮಾತ್ರ ಮೇವು ಲಭ್ಯ ಇರುವ ಜಿಲ್ಲೆಗಳಲ್ಲಿ ಮೇವು ಬ್ಯಾಂಕ್ ಆರಂಭಿಸಲು ಸರ್ಕಾರ ಸೂಚಿಸಿದೆ. ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಈಗಾಗಲೇ ಬಳ್ಳಾರಿ, ವಿಜಯನಗರ, ಗದಗ, ಬೆಳಗಾವಿ ಮತ್ತು ಧಾರವಾಡದಲ್ಲಿ ಒಟ್ಟು 18 ಮೇವು ಬ್ಯಾಂಕ್ ಆರಂಭಿಸಿದೆ.

ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಕಾರಣ ಈ ಬಾರಿ ಮೆಕ್ಕೆಜೋಳ, ಭತ್ತ ಸರಿಯಾಗಿ ಬೆಳೆದಿಲ್ಲ. ದನ, ಕರು ಇದ್ದವರಿಗೆ ಮೇವು ಸಿಗುತ್ತಿಲ್ಲ. ಅದೇ ದೊಡ್ಡ ಚಿಂತೆಯಾಗಿದೆ

ಬಸವರಾಜ ಬೆಳವಟಗಿ, ರೈತ, ಹುಬ್ಬಳ್ಳಿ

‘ರಾಜ್ಯಕ್ಕೆ ಒಂದು ವಾರಕ್ಕೆ 5.4 ಲಕ್ಷ ಟನ್ ಒಣ ಮೇವು ಬೇಕು. 132 ಲಕ್ಷ ಟನ್ ಮೇವು ಲಭ್ಯವಿದೆ. 3.93 ಲಕ್ಷ ಮೇವಿನ ಬೀಜಗಳ ಮಿನಿ ಕಿಟ್‌ಗೆ ಬೇಡಿಕೆ ಬಂದಿದ್ದು, ವಿತರಣೆಗೆ ಆದೇಶ ನೀಡಲಾಗಿದೆ. 16 ಜಿಲ್ಲೆಗಳಲ್ಲಿ ಅಗತ್ಯ ಮೇವು ಖರೀದಿ ಪ್ರಕ್ರಿಯೆ ನಡೆದಿದೆ’ ಎಂದರು.

ಅಂಕಿ ಅಂಶಗಳು

3 ಕೋಟಿ
ರಾಜ್ಯದಲ್ಲಿನ ಜಾನುವಾರುಗಳು

1.14 ಕೋಟಿ
ದನ, ಕರು, ಎಮ್ಮೆಗಳ ಸಂಖ್ಯೆ

2.49 ಕೋಟಿ ಟನ್
ವರ್ಷಕ್ಕೆ ಸರಾಸರಿ ಬೇಕಾಗುವ ಮೇವು

ಅಕ್ರಮ ‘ಡಾಕ್ಟರೇಟ್’: ತನಿಖೆಗೆ ಸಮಿತಿ ರಚಿಸಿದ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲಯನ್ಸ್ ವಿಶ್ವವಿದ್ಯಾಲಯದಿಂದ ಕೆಪಿಎಸ್‌ಸಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಶಿವಣ್ಣ ಅವರಿಗೆ ಅಕ್ರಮವಾಗಿ ಡಾಕ್ಟರೇಟ್ ಪದವಿ ನೀಡಿದ ಆರೋಪದ ಕುರಿತು ತನಿಖೆ ನಡೆಸಲು ಮೂವರು ತಜ್ಞರ ಸಮಿತಿ ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಚಂದ್ರಶೇಖರ್ ಶೆಟ್ಟಿ, ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶರತ್ ಅನಂತಮೂರ್ತಿ, ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಜಿ. ಚಂದ್ರಶೇಖರ್ ಈ ಸಮಿತಿಯಲ್ಲಿದ್ದಾರೆ.

ಆರೋಪದ ಕುರಿತಂತೆ ವಿವರವಾದ ತನಿಖೆ ನಡೆಸಿ ಮೂರು ತಿಂಗಳ ಒಳಗೆ ವರದಿ ನೀಡುವಂತೆ ಸಮಿತಿಗೆ ಸೂಚಿಸಲಾಗಿದೆ ಎಂದು ಉನ್ನತ ಶಿಕ್ಷಣ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಬಿ.ಎಸ್. ಶಿವಣ್ಣ ಅವರು ಅಲಯನ್ಸ್ ವಿಶ್ವವಿದ್ಯಾಲಯದಿಂದ ಅಕ್ರಮವಾಗಿ ಡಾಕ್ಟರೇಟ್ ಪದವಿ ಪಡೆದಿದ್ದು, ಈ ಬಗ್ಗೆ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವಿಜಯನಗರದ ಎಲ್. ಜಯಲಿಂಗೇಗೌಡ 2019ರ ಅ. 10ರಂದು ಸರ್ಕಾರಕ್ಕೆ ದೂರು ನೀಡಿದ್ದರು. ಸೂಕ್ತ ತನಿಖಾ ಸಂಸ್ಥೆಯಿಂದ ತನಿಖೆ ನಡೆಸುವುದರಿಂದ ಉನ್ನತ ಶಿಕ್ಷಣ ಪರಿಷತ್‌ನ ಕಾರ್ಯನಿರ್ವಾಹಕ ನಿರ್ದೇಶಕರು ಸರ್ಕಾರಕ್ಕೆ 2019ರ ಡಿ. 13ರಂದು ವರದಿ ನೀಡಿದ್ದರು.

₹168 ಕೋಟಿಯ ಗ್ಯಾರಂಟಿ ನಕಲಿ

ಒಂದನೇ ಪುಟದಿಂದ...

ಸರ್ಕಾರದ ಕಾಮಗಾರಿ ಗುತ್ತಿಗೆ ಪಡೆಯಲು ಪ್ರಯತ್ನಿಸುತ್ತಿದ್ದ ಗುತ್ತಿಗೆದಾರರಿಗೆ, ‘ಯಾವುದೇ ದಾಖಲೆ ಹಾಗೂ ಮುಂಗಡ ಹಣವಿಲ್ಲದೇ ‘ಇ-ಬ್ಯಾಂಕ್ ಗ್ಯಾರಂಟಿ’ ಕೊಡಿಸುವುದಾಗಿ ಆಮಿಷವೊಡ್ಡುತ್ತಿದ್ದರು. ₹ 25 ಲಕ್ಷದಿಂದ ₹ 50 ಲಕ್ಷ ಕಮಿಷನ್ ನೀಡುವಂತೆ ಬೇಡಿಕೆ ಇರಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ಮಾತು ನಂಬುತ್ತಿದ್ದ ಗುತ್ತಿಗೆದಾರರು, ವೈಯಕ್ತಿಕ ಮಾಹಿತಿಯನ್ನು ಆಶೀಷ್‌ಗೆ ಕಳುಹಿಸುತ್ತಿದ್ದರು. ಆರೋಪಿ ಸೃಷ್ಟಿಸಿಕೊಟ್ಟ ನಕಲಿ ಇ-ಬ್ಯಾಂಕ್ ಗ್ಯಾರಂಟಿ ದಾಖಲೆಗಳ ನೆರವಿನಿಂದ ಗುತ್ತಿಗೆದಾರರು ಎಸ್‌ಎಫ್‌ಎಂಎಸ್ ಜಾಲತಾಣದಲ್ಲಿ ತಮ್ಮ ಹೆಸರಿನಲ್ಲಿ ಖಾತೆ ತೆರೆಯುತ್ತಿದ್ದರು. ಗ್ಯಾರಂಟಿ ಮಾಹಿತಿಯನ್ನೂ ‘ಅಪ್‌ಲೋಡ್’ ಮಾಡುತ್ತಿದ್ದರು’ ಎಂದು ಹೇಳಿದರು.

ಬ್ಯಾಂಕ್ ಅಧಿಕಾರಿಗಳು, ಸಿ.ಎ.ಗಳ ವಿಚಾರಣೆ: ‘ಪ್ರಕರಣದಲ್ಲಿ ಕೆಲ ಬ್ಯಾಂಕ್ ಅಧಿಕಾರಿಗಳು ಹಾಗೂ ಲೆಕ್ಕ ಪರಿಶೋಧಕರು (ಸಿ.ಎ) ಶಾಮೀಲಾಗಿರುವ ಮಾಹಿತಿ ಇದೆ. ಅವರನ್ನೂ ವಿಚಾರಣೆ ಮಾಡಲಾಗುವುದು’ ಎಂದು ಪೊಲೀಸರು ತಿಳಿಸಿದರು.

ರಥೋತ್ಸವ... ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿಯ ತಿಪ್ಪೇರುದ್ರಸ್ವಾಮಿ ರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಮಂಗಳವಾರ ವಿಜೃಂಭಣೆಯಿಂದ ನೆರವೇರಿತು ಪ್ರಜಾವಾಣಿ ಚಿತ್ರ– ವಿ.ಚಂದ್ರಪ್ಪ

ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಅಕ್ರಮದ ಆರೋಪ

ತಕ್ಷಣ ಕ್ರಮಕ್ಕೆ ಆಯೋಗ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅವರು ಮತದಾರರಿಗೆ ಉಚಿತ ಕೊಡುಗೆಗಳನ್ನು ನೀಡಲು ಯೋಜನೆ ರೂಪಿಸುತ್ತಿದ್ದಾರೆ. ಈ ಬಗ್ಗೆ ರಾಜ್ಯ ಚುನಾವಣಾ ಆಯೋಗ ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ಆರೋಪಿಸಿ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ಸಲ್ಲಿಸಿದ ದೂರಿನ ಕುರಿತು ತಕ್ಷಣ ಸೂಕ್ತ ಕ್ರಮ ಕೈಗೊಳ್ಳುವಂತೆ ಕರ್ನಾಟಕದ ಮುಖ್ಯ ಚುನಾವಣಾಧಿಕಾರಿಯವರಿಗೆ ಕೇಂದ್ರ ಚುನಾವಣಾ ಆಯೋಗ ಸೂಚಿಸಿದೆ.

ಈ ಸಂಬಂಧ ಮುಖ್ಯ ಚುನಾವಣಾಧಿಕಾರಿಯವರಿಗೆ ಮಾರ್ಚ್ 21ರಂದು ಪತ್ರ ಬರೆದಿರುವ ಆಯೋಗವು ಮಾದರಿ ನೀತಿ ಸಂಹಿತೆ ಹಾಗೂ ಸಂಬಂಧಿತ ಕಾನೂನುಗಳ ನಿಬಂಧನೆಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮ ಕೈಗೊಳ್ಳಬೇಕು ಹಾಗೂ ಆದಷ್ಟು ಶೀಘ್ರದಲ್ಲಿ ಅನುಸರಣಾ ವರದಿ ಸಲ್ಲಿಸಬೇಕು ಎಂದು ಹೇಳಿದೆ.

‘ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಭ್ರಷ್ಟ ಚಟುವಟಿಕೆಗಳನ್ನು ನಿಯಂತ್ರಿಸಲು ರಾಜ್ಯ ಚುನಾವಣಾಧಿಕಾರಿಗಳು ವಿಫಲರಾಗಿದ್ದಾರೆ. ಅಧಿಕಾರಿಗಳಿಂದ ಕರ್ತವ್ಯ ಲೋಪ ಆಗಿದೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹೋದರರಾಗಿರುವ ಸುರೇಶ್ ವಿರುದ್ಧ ಕ್ರಮ ಕೈಗೊಳ್ಳಲು ಅಧಿಕಾರಿಗಳು ಹೆದರುತ್ತಿದ್ದಾರೆ’ ಎಂದು ದೇವೇಗೌಡರು ದೂರಿನಲ್ಲಿ ತಿಳಿಸಿದ್ದರು.

ಕಾಂಗ್ರೆಸ್: ಬಾಕಿ ಅಭ್ಯರ್ಥಿಗಳು ಇಂದು ಆಖೈರು

ನವದೆಹಲಿ: ಲೋಕಸಭಾ ಚುನಾವಣೆಗೆ ಇನ್ನಷ್ಟು ಅಭ್ಯರ್ಥಿಗಳ ಹೆಸರನ್ನು ಅಂತಿಮಗೊಳಿಸಲು ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿಯ ಸಭೆ ಬುಧವಾರ ಸಂಜೆ 6 ಗಂಟೆಗೆ ನಡೆಯಲಿದೆ.

ಕರ್ನಾಟಕದ 24 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪಕ್ಷ ಪ್ರಕಟಿಸಿದೆ. ಉಳಿದ ನಾಲ್ಕು ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಸಭೆಯಲ್ಲಿ ಅಂತಿಮಗೊಳಿಸುವ ಸಂಭವ ಇದೆ. ಬಳ್ಳಾರಿಗೆ ಸಂಡೂರು ಶಾಸಕ ಇ.ತುಕಾರಾಮ್, ಚಾಮರಾಜನಗರಕ್ಕೆ ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಪುತ್ರ ಸುನೀಲ್ ಬೋಸ್ ಹೆಸರು ಬಹುತೇಕ ಅಂತಿಮಗೊಂಡಿದೆ.

ಕೋಲಾರ ಕ್ಷೇತ್ರದಲ್ಲಿ ತಮ್ಮ ಅಳಿಯ ಕೆ.ಜಿ. ಚಿಕ್ಕಪೆದ್ದಯ್ಯ ಅವರಿಗೆ ಟಿಕೆಟ್ ನೀಡಬೇಕು ಎಂದು ಆಹಾರ ಸಚಿವ ಕೆ.ಎಚ್‌.ಮುನಿಯಪ್ಪ ಪಟ್ಟು ಹಿಡಿದಿದ್ದಾರೆ. ಮುಖಂಡ ಸಿ.ಎಂ. ಮುನಿಯಪ್ಪ ಅವರಿಗೆ ಅವಕಾಶ ನೀಡಬೇಕು ಎಂದು ಮಾಜಿ ಸಚಿವ ಕೆ.ಆರ್‌.ರಮೇಶ್ ಕುಮಾರ್ ಬಣ ಒತ್ತಾಯಿಸಿದೆ. ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ರಕ್ಷಾ ರಾಮಯ್ಯ, ಎಚ್‌.ಎನ್‌.ಶಿವಶಂಕರ ರೆಡ್ಡಿ ಹಾಗೂ ಎಂ. ವೀರಪ್ಪ ಮೊಯಿಲಿ ನಡುವೆ ಪೈಪೋಟಿ ಇದೆ. ಈ ಕ್ಷೇತ್ರಗಳಲ್ಲಿ ಕಗ್ಗಂಟು ಬಗೆಹರಿದಿಲ್ಲ.

ನದಿಯಲ್ಲಿ ಮುಳುಗಿ ತಂದೆ, ಮಗ ಸೇರಿ ನಾಲ್ವರ ಸಾವು

ಪ್ರಜಾವಾಣಿ ವಾರ್ತೆ

ಹಲಗೂರು (ಮಂಡ್ಯ ಜಿಲ್ಲೆ): ಇಲ್ಲಿನ ಮುತ್ತತ್ತಿ ಅರಣ್ಯ ಪ್ರದೇಶದ ಕಾವೇರಿ ನದಿಯಲ್ಲಿ ಮಂಗಳವಾರ ಈಜಾಡಲು ತೆರಳಿದ್ದ ತಂದೆ, ಮಗ ಸೇರಿ ನಾಲ್ವರು ಮಡುವಿನಲ್ಲಿ ಮುಳುಗಿ ಮೃತಪಟ್ಟರು.

ಮೈಸೂರಿನ ಗುಂಡೂರಾವ್ ನಗರ ನಿವಾಸಿಗಳಾದ ನಾಗೇಶ್ (45), ಅವರ ಪುತ್ರ ಭರತ್ (17), ಮಹಾದೇವ (14), ಗುರು (32) ಮೃತರು.

ಭಾರತ್ ಸಂಚಾರ್ ನಿಗಮ್ ಲಿಮಿಟೆಡ್
(ಭಾರತ ಸರಕಾರದ ಒಂದು ಉದ್ಯಮ)
O/o ಉಪ ಪ್ರಧಾನ ವ್ಯವಸ್ಥಾಪಕರು (ಉತ್ತರ ಪಶ್ಚಿಮ)
ದೂರವಾಣಿ ವಿನಿಮಯ, ವಿಜಯನಗರ ಬೆಂಗಳೂರು–560 040

ಸಾರ್ವಜನಿಕ ಸೂಚನೆ

ಶ್ರೀ ಬಿ. ಎನ್. ಕಿರಣ್ ಕುಮಾರ್, STOAG, HR ಸಂಖ್ಯೆ. 199415265 O/o SDE ದೇವನಹಳ್ಳಿ ದೂರವಾಣಿ ವಿನಿಮಯ ಕೇಂದ್ರ ದೇವನಹಳ್ಳಿ, BGBA., ಕರ್ನಾಟಕ ವೃತ್ತ, 07.12.2020 ರಿಂದ ಈ ದಿನಾಂಕದವರೆಗೆ ಅನಧಿಕೃತವಾಗಿ ಕೆಲಸಕ್ಕೆ ಗೈರುಹಾಜರಿಯಾಗಿರುತ್ತಾರೆ, ಕೆಲಸದಿಂದ ಅನಧಿಕೃತವಾಗಿ ಗೈರು ಹಾಜರಿಗೆ ಶಿಸ್ತು ವಿಚಾರಣೆ ಪೂರ್ಣಗೊಂಡಿದೆ ಮತ್ತು ಕೊನೆಯದಾಗಿ ಲಭ್ಯವಿರುವ ತಮ್ಮ ವಿಳಾಸಕ್ಕೆ ಕಳುಹಿಸಲಾದ ವಿಚಾರಣೆ ದಾಖಲಾತಿಗಳು ತಲುಪದೆ ವಾಪಸ್ಸು ಹಿಂದುರಿಗಿದೆ. ಈ ಸೂಚನೆ ಅನ್ವಯ ಶ್ರೀ ಬಿ. ಎನ್. ಕಿರಣ್ ಕುಮಾರ್, ಈ ನೋಟಿಸ್ ನೀಡಿದ 15 ದಿನಗಳ ಒಳಗಾಗಿ ಈ ಕಛೇರಿಗೆ ಹಾಜರಾಗುವಂತೆ ಈ ಮೂಲಕ ತಿಳಿಸಲಾಗಿದೆ. ಇಲ್ಲವಾದಲ್ಲಿ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು. ಸಹಿ/–
ಡಿಜಿಎಂ/ಎನ್‌ಡಬ್ಲ್ಯೂ

ಇಂದಿನಿಂದ ಬಿಜೆಪಿ–ಜೆಡಿಎಸ್ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯ ಕಾರ್ಯತಂತ್ರ ಮತ್ತು ಪ್ರಚಾರ ಯೋಜನೆ ಅಂತಿಮಗೊಳಿಸಲು ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಬುಧವಾರದಿಂದ ಜಂಟಿ ಸಭೆಗಳನ್ನು ನಡೆಸಲಿವೆ. ಶುಕ್ರವಾರ ಬೆಂಗಳೂರಿನಲ್ಲಿ ಮೈತ್ರಿಕೂಟದ ಜಂಟಿ ಸಭೆ ನಡೆಯಲಿದೆ.

ಮೈಸೂರಿನಲ್ಲಿ ಬುಧವಾರ ಮೈತ್ರಿಕೂಟದ ಮೊದಲ ಜಂಟಿ ಸಭೆ ನಡೆಯಲಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಸೇರಿದಂತೆ ಎರಡೂ ಪಕ್ಷಗಳ ಹಲವು ನಾಯಕರು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಿಂದಲೇ ಜಂಟಿ ಹೋರಾಟಕ್ಕೆ ಚಾಲನೆ ನೀಡಲು ಬಿಜೆಪಿ– ಜೆಡಿಎಸ್ ನಾಯಕರು ನಿರ್ಧರಿಸಿದ್ದಾರೆ. ಈ ಕಾರಣದಿಂದ ಮೊದಲ ಜಂಟಿ ಸಭೆಯನ್ನು ಅಲ್ಲಿಯೇ ನಡೆಸಲಾಗುತ್ತಿದೆ’ ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಬೆಂಗಳೂರಿನ ಹೋಟೆಲ್ ಒಂದರಲ್ಲಿ ಶುಕ್ರವಾರ ರಾಜ್ಯಮಟ್ಟದ ಜಂಟಿ ಸಭೆ ನಡೆಯಲಿದೆ. ಬಿಜೆಪಿ ಮತ್ತು ಜೆಡಿಎಸ್‌ನ ತಲಾ 50 ಮಂದಿ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

‘ಬಿಜೆಪಿ ವಾಷಿಂಗ್ ಮಷಿನ್ ಇದ್ದಂತೆ’

ಬೆಂಗಳೂರು: ‘ಬಿಜೆಪಿ ಅಂದ್ರೆ ಒಂಥರಾ ವಾಷಿಂಗ್ ಮಷಿನ್ ಇದ್ದಂತೆ’ ಎಂದು ಕಾಂಗ್ರೆಸ್ ಟೀಕಿಸಿದೆ.

‘ಪ್ರಜಾವಾಣಿ’ಯ ಮಂಗಳವಾರದ ಸಂಚಿಕೆಯಲ್ಲಿ ಪ್ರಕಟವಾದ ‘ಸ್ವಚ್ಛವಾಗಲು ಬಿಜೆಪಿಯತ್ತ ನಾಯಕರ ದೌಡು’ ವರದಿಯ ಸಹಿತ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್, ‘ಕಂಪನಿಗಳು ಭ್ರಷ್ಟಾಚಾರದ ಆರೋಪ ಹೊತ್ತಿದ್ದರೆ ಚುನಾವಣಾ ಬಾಂಡ್ ಖರೀದಿಸುವ ಮೂಲಕ ಶುದ್ಧರಾಗಬಹುದು! ರಾಜಕಾರಣಿಗಳು ಭ್ರಷ್ಟರಾಗಿದ್ದರೆ ಬಿಜೆಪಿ ಸೇರುವ ಮೂಲಕ ಪವಿತ್ರರಾಗಬಹುದು!’ ಎಂದು ಲೇವಡಿ ಮಾಡಿದೆ.

‘ಯಾವೊಬ್ಬ ಭ್ರಷ್ಟಾಚಾರಿಯನ್ನೂ ಬಿಡುವುದಿಲ್ಲ’ ಎಂದಿದ್ದ ಮೋದಿಯವರು ನುಡಿದಂತೆ ನಡೆಯುತ್ತಿದ್ದಾರೆ. ಯಾವೊಬ್ಬ ಭ್ರಷ್ಟರನ್ನೂ ಬಿಡದೆ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ. ಭ್ರಷ್ಟಾಚಾರದ ವಿರುದ್ಧ ಮೋದಿಯವರ ಸರ್ಜಿಕಲ್ ಸ್ಟ್ರೈಕ್ ಅಮೋಘವಾದುದು!’ ಎಂದೂ ಕಾಂಗ್ರೆಸ್ ವ್ಯಂಗ್ಯವಾಡಿದೆ.

ಸುರಪುರ: ರಾಜುಗೌಡ ಬಿಜೆಪಿ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಯಾದಗಿರಿ ಜಿಲ್ಲೆಯ ಸುರಪುರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಮಾಜಿ ಶಾಸಕ ರಾಜುಗೌಡ (ನರಸಿಂಹ ನಾಯಕ) ಅವರನ್ನು ಪಕ್ಷದ ಅಭ್ಯರ್ಥಿಯನ್ನಾಗಿ ಬಿಜೆಪಿ ಮಂಗಳವಾರ ಘೋಷಿಸಿದೆ.

ಕಾಂಗ್ರೆಸ್‌ನ ಹಾಲಿ ಶಾಸಕ ಕಾಂಗ್ರೆಸ್ ರಾಜಾ ವೆಂಕಟಪ್ಪ ನಾಯಕ ಇತ್ತೀಚೆಗೆ ನಿಧನರಾಗಿದ್ದರಿಂದ ಉಪಚುನಾವಣೆ ನಡೆಯುತ್ತಿದೆ. ಮೇ 7ರಂದು ಮತದಾನ ನಡೆಯಲಿದೆ. ವೆಂಕಟಪ್ಪ ನಾಯಕ ಪುತ್ರ ರಾಜಾ ವೇಣುಗೋಪಾಲ ನಾಯಕ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ.

2004, 2008 ಹಾಗೂ 2018ರಲ್ಲಿ ಗೆಲುವು ಸಾಧಿಸಿದ್ದ ರಾಜುಗೌಡ ಅವರು 2023ರ ಚುನಾವಣೆಯಲ್ಲಿ ಸೋತಿದ್ದರು.

ಬೇಸಿಗೆ ರಜೆಯಲ್ಲೂ ಬಿಸಿಯೂಟ: ಕೇಂದ್ರಕ್ಕೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರಪೀಡಿತ ತಾಲ್ಲೂಕುಗಳಲ್ಲಿ ಬೇಸಿಗೆ ರಜೆಯಲ್ಲೂ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಮುಂದುವರಿಸಲು ನಿರ್ಧರಿಸಿರುವ ರಾಜ್ಯ ಸರ್ಕಾರ, ₹80 ಕೋಟಿ ಹಣ ನೀಡುವಂತೆ ಕೇಂದ್ರಕ್ಕೆ ಪತ್ರ ಬರೆದಿದೆ.

ಅನ್ನದಾಸೋಹ ಯೋಜನೆಗೆ ರಾಜ್ಯ ಸರ್ಕಾರ ಶೇ 40ರಷ್ಟು ಹಾಗೂ ಕೇಂದ್ರ ಸರ್ಕಾರ ಶೇ 60ರಷ್ಟು ಹಣ ಭರಿಸುತ್ತಿವೆ. ಬರಪೀಡಿತ 233 ತಾಲ್ಲೂಕುಗಳ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಮಕ್ಕಳಿಗೆ ಏ.14ರಿಂದ 41 ದಿನಗಳು ಮಧ್ಯಾಹ್ನ ಬಿಸಿಯೂಟ ನೀಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ. ಕೇಂದ್ರದ ಪಾಲು ನೀಡಲು ಕೋರಿಕೆ ಸಲ್ಲಿಸಿದೆ.

‘ಕೋವಿಡ್ ವೇಳೆ ಕೇಂದ್ರ ಸರ್ಕಾರ ಬಿಸಿಯೂಟ ಯೋಜನೆಗೆ ಹಣಕಾಸಿನ ನೆರವು ನೀಡಿತ್ತು. ಈಗ ರಾಜ್ಯ ಬರಗಾಲಕ್ಕೆ ಒಳಗಾಗಿದೆ. ಅದಕ್ಕಾಗಿ ಕೇಂದ್ರದ ನೆರವು ಕೋರಲಾಗಿದೆ. ಬಿಸಿಯೂಟ ವಿಸ್ತರಣೆಯಿಂದ ಶೇ 40ರಷ್ಟು ಮಕ್ಕಳು ಪ್ರಯೋಜನ ಪಡೆಯುವ ನಿರೀಕ್ಷೆ ಇದೆ. ಈ ಸಮಯದಲ್ಲಿ ಕ್ಷೀರ ಭಾಗ್ಯ ಯೋಜನೆ ಇರುವುದಿಲ್ಲ’ ಎಂದು ಇಲಾಖೆಯ ಹಿರಿಯ ಅಧಿಕಾರಿ ಮಾಹಿತಿ ನೀಡಿದರು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ:ಕವಿನಿಆ/ಗ್ರೂಪ್ ಕ್ಯಾಪ್ಟಿವ್/ಸಿಟಿ–2/2023–24/ಕಡತ–3/1553 ದಿನಾಂಕ: 26–03–2024

ಸೂಚನೆ

ವಿಷಯ: ಪರಿಷ್ಕೃತ ಕರಡು – ಕೆ.ಇ.ಆರ್.ಸಿ (ಕರ್ನಾಟಕ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನಾ ಘಟಕಗಳು ಹಾಗೂ ಗ್ರಾಹಕರ ಕ್ಯಾಪ್ಟೀವ್ ಸ್ಥಿತಿಯ ಪರಿಶೀಲನೆ) ವಿನಿಯಮಗಳು, 2024.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವಂತೆ ಕೆ.ಇ.ಆರ್.ಸಿ (ಕರ್ನಾಟಕ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನಾ ಘಟಕಗಳು ಹಾಗೂ ಗ್ರಾಹಕರ ಕ್ಯಾಪ್ಟೀವ್ ಸ್ಥಿತಿಯ ಪರಿಶೀಲನೆ) ವಿನಿಯಮಗಳು, 2024 ರ ಪರಿಷ್ಕೃತ ಕರಡು ಪ್ರತಿಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 22–03–2024 ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.

ಆಸಕ್ತರು, ಸದರಿ ಕರಡು ವಿನಿಯಮಗಳ ಬಗ್ಗೆ ಅಭಿಪ್ರಾಯ / ವಿಮರ್ಶೆ / ಸಲಹೆ/ ಆಕ್ಷೇಪಣೆಗಳೇನಾದರೂ ಇದ್ದಲ್ಲಿ **ಆಯೋಗದ ಕಾರ್ಯದರ್ಶಿಯವರಿಗೆ** ಮೇಲೆ ತಿಳಿಸಿದಂತೆ ಕರಡು ವಿನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನದೊಳಗೆ ಲಿಖಿತವಾಗಿ ಸಲ್ಲಿಸಬಹುದು.

ಸಹಿ/– ಕಾರ್ಯದರ್ಶಿ
ವಾಸಾಸಂಇ/ವಾ.ಪ್ರ/4404/2023–24 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ಮಾಜಿ ಶಾಸಕ ಕೃಷ್ಣಾರೆಡ್ಡಿಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನನಷ್ಟ ಆರೋಪಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ನಿಟ್ಟಿನಲ್ಲಿ, ವಿಧಾನಸಭೆಯ ಮಾಜಿ ಉಪ ಸಭಾಧ್ಯಕ್ಷ ಹಾಗೂ ಚಿಂತಾಮಣಿ ಕ್ಷೇತ್ರದ ಮಾಜಿ ಶಾಸಕ ಎಂ.ಕೃಷ್ಣಾರೆಡ್ಡಿ ವಿರುದ್ಧ ಅವರಿಗೆ ಸಮನ್ಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಸಂಬಂಧ ಎನ್‌.ಆರ್‌.ರಮೇಶ್ ದಾಖಲಿಸಿದ್ದ ಖಾಸಗಿ ದೂರನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ’ದ ನ್ಯಾಯಾಧೀಶೆ ಜೆ.ಪ್ರೀತ್ ಮಂಗಳವಾರ ವಿಚಾರಣೆ ನಡೆಸಿದರು.

ಆರೋಪಿ ಕೃಷ್ಣಾರೆಡ್ಡಿ ಅವರಿಗೆ ಈ ಹಿಂದಿನ ವಿಚಾರಣೆ ವೇಳೆಯೇ ಸಮನ್ಸ್ ಜಾರಿಗೊಳಿಸಲಾಗಿತ್ತು. ಆದರೆ, ಅವರು ಮಂಗಳವಾರ ಗೈರಾಗಿದ್ದರು. ಸಮನ್ಸ್ ಇನ್ನೂ ಜಾರಿಯಾಗದ ಕಾರಣ ಪುನಃ ಜಾರಿಗೆ ಆದೇಶಿಸಿದ ನ್ಯಾಯಾಧೀಶರು ವಿಚಾರಣೆ ಮುಂದೂಡಿದರು. ದೂರುದಾರ ಎನ್‌.ಆರ್‌.ರಮೇಶ್ ಪರ ವಕೀಲ ಮೋಹನ್ ಎಸ್‌.ರೆಡ್ಡಿ ಹಾಜರಿದ್ದರು.

ಪ್ರಕರಣವೇನು?: ‘ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಗಣೇಶ ಮಂದಿರ ವಾರ್ಡ್ ವ್ಯಾಪ್ತಿಯ ಬನಗಿರಿ ನಗರ ವ್ಯಾಪ್ತಿಗೆ ಒಳಪಡುವ ಕತ್ರಿಗುಪ್ಪೆಯ ಸರ್ವೆ ನಂ.125 ಮತ್ತು 126ಕ್ಕೆ ಸೇರಿದ ಅಂದಾಜು ₹350 ಕೋಟಿ ಮೌಲ್ಯದ 4.31 ಎಕರೆ ಬಿ.ಖರಾಬು ಜಮೀನಿಗೆ 41 ಮಂದಿ ಘಟಾನುಘಟಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಸುವ ಯತ್ನ ನಡೆಸಿದ್ದಾರೆ’ ಎಂದು ಎನ್‌. ಆರ್‌.ರಮೇಶ್ ಆರೋಪಿಸಿದ್ದರು. ಈ ಸಂಬಂಧ ಲೋಕಾಯುಕ್ತ ಮತ್ತು ಬೆಂಗಳೂರು ಮಹಾನಗರ ಕಾರ್ಯಪಡೆಯಲ್ಲಿ (ಬಿಎಂಟಿಎಫ್) ದೂರು ಸಲ್ಲಿಸಿದ್ದರು.

ಈ ಹಿನ್ನೆಲೆಯಲ್ಲಿ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ‘ಅಂದು ಸದನ ಸಮಿತಿಯ ಅಧ್ಯಕ್ಷರೂ ಆಗಿದ್ದ ಕೃಷ್ಣಾರೆಡ್ಡಿ ಆರೋಪಿಗಳ ವಿರುದ್ಧ ಕ್ರಮಕ್ಕೆ ಆದೇಶಿಸುವ ಬದಲಾಗಿ, ಪಾಲಿಕೆಯ ಸ್ವತ್ತನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಮುಂದಾಗಿದ್ದ ಅಧಿಕಾರಿಯ ವಿರುದ್ಧವೇ ನಿರ್ಣಯ ತೆಗೆದುಕೊಂಡಿದ್ದರು’ ಎಂದು ಆರೋಪದಲ್ಲಿ ವಿವರಿಸಲಾಗಿತ್ತು.

‘ಅಂತೆಯೇ, ಸದನ ಸಮಿತಿ ಪ್ರಕರಣವನ್ನು ಆರು ತಿಂಗಳಿಗೂ ಹೆಚ್ಚು ಕಾಲ ಇತ್ಯರ್ಥಗೊಳಿಸದೇ ವಿಳಂಬ ಮಾಡಿದೆ ಮತ್ತು ಬಿಬಿಎಂಪಿ ಅಧಿಕಾರಿಗಳ ವಿರುದ್ಧವೇ ವ್ಯತಿರಿಕ್ತ ನಿರ್ಣಯಕ್ಕೆ ಮುಂದಾಗಿದೆ’ ಎಂದು ಆಕ್ಷೇಪಿಸಿ ಎನ್‌.ಆರ್‌.ರಮೇಶ್ ಮಾಧ್ಯಮಗೋಷ್ಠಿ ನಡೆಸಿ ಈ ಕುರಿತ ದಾಖಲೆಗಳನ್ನು ಬಿಡುಗಡೆ ಮಾಡಿದ್ದರು.

ಇದಕ್ಕೆ ಪ್ರತಿಯಾಗಿ, ಕೃಷ್ಣಾರೆಡ್ಡಿ ಅವರೂ ಹೇಳಿಕೆಯೊಂದನ್ನು ನೀಡಿದ್ದರು. ‘ಈ ಹೇಳಿಕೆಯಲ್ಲಿ ಕೃಷ್ಣಾರೆಡ್ಡಿ ನನ್ನ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಮತ್ತು ನನಗೆ ಮಾನನಷ್ಟ ಉಂಟು ಮಾಡಿದ್ದಾರೆ’ ಎಂದು ಆರೋಪಿಸಿ ಎನ್‌.ಆರ್‌.ರಮೇಶ್ ಅವರು ಕೃಷ್ಣಾರೆಡ್ಡಿ ವಿರುದ್ಧ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ದೂರಿನ ಅಪರಾಧವನ್ನು ಸಂಜ್ಞೇಯ ಎಂದು ಪರಿಗಣಿಸಿರುವ ನ್ಯಾಯಾಲಯ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲು ಚಿಂತಾಮಣಿ ಪೊಲೀಸರಿಗೆ ಆದೇಶಿಸಿದೆ.

ಮಂಗನ ಕಾಯಿಲೆ: ಮಹಿಳೆ, ಬಾಲಕಿ ಸಾವು

ಪ್ರಜಾವಾಣಿ ವಾರ್ತೆ

ಕೊಪ್ಪ (ಚಿಕ್ಕಮಗಳೂರು): ಮಂಗನ ಕಾಯಿಲೆಯಿಂದ ಚಿಕ್ಕಮಗಳೂರು ಮತ್ತು ಉತ್ತರಕನ್ನಡ ಜಿಲ್ಲೆಯಲ್ಲಿ ಮಹಿಳೆ ಮತ್ತು ಬಾಲಕಿ ಸಾವಿಗೀಡಾಗಿದ್ದಾರೆ. ಕಾಯಿಲೆ (ಕೆ.ಎಫ್‌.ಡಿ) ದೃಢಪಟ್ಟಿದ್ದ ತಾಲ್ಲೂಕಿನ ಜೋಗಿಸರದ ನಿವಾಸಿ ರತ್ನಮ್ಮ (68) ಸೋಮವಾರ ಮಣಿಪಾಲ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಸಿದ್ದಾಪುರ ವರದಿ (ಉತ್ತರ ಕನ್ನಡ): ಮಂಗನ ಕಾಯಿಲೆಯಿಂದ ತಾಲ್ಲೂಕಿನ ಕೊರ್ಲಕೈ ಸಮೀಪದ ಜಿಡ್ಡಿ ಗ್ರಾಮದ ಏಳು ವರ್ಷದ ಬಾಲಕಿ ಮೃತಪಟ್ಟಿದ್ದಾಳೆ.

ಬಾಲಕಿಗೆ ಮಂಗನ ಕಾಯಿಲೆ ಇರುವುದು ದೃಢಪಟ್ಟಿದ್ದು, ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿತ್ತು. 25ರ ರಾತ್ರಿ ಮೃತಪಟ್ಟಳು ಎಂದು ಸಿದ್ದಾಪುರ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಲಕ್ಷ್ಮೀಕಾಂತ ‘ಪ್ರಜಾವಾಣಿ’ಗೆ ತಿಳಿಸಿದರು.

ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)
ನಮೂನೆ–8 ನಿಯಮ 17(2)(ಡಿ)
ಇಪಿ ಸಂಖ್ಯೆ: ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ./417/2023–24

1. **ಶಿವಶ್ರೀ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ತುಮಕೂರು ಸಹಕಾರಿಯ ಸುಸ್ತಿದಾರರಾದ (1) ಪುನೀತ ಮುನೇಶ ಕೋಂ ಮುನೇಶ ವಿ., ನಂ.12, 11ನೇ ಕ್ರಾಸ್, ಕಗ್ಗದಾಸಪುರ, ಸಿ.ವಿ.ರಾಮನ್‌ನಗರ, ಬೆಂಗಳೂರು–560093. (2) ಮುನೇಶ ವಿ. ಬಿನ್ ಜಿ. ವೆಂಕಟಸ್ವಾಮಿ, (3) ತನಿಷ್ಕ ಬಿನ್ ಮುನೇಶ, (4) ಮಯೂರ ಆದಿತ್ಯ, (5) ಮುನೇಶ ವಿ. ಬಿನ್ ಜಿ. ವೆಂಕಟಸ್ವಾಮಿ** ನಿಂದ ಬಾಕಿಯಾಗಿರುವ ಬಾಕಿ ಮೊತ್ತ ದಿನಾಂಕ: 26.12.2023ಕ್ಕೆ ಒಟ್ಟು ರೂ. 22,56,05,507/– ರೂಪಾಯಿಗಳ ಸಂದಾಯದ ಬಗ್ಗೆ ಈ ಕೆಳಗೆ ನಮೂದಿಸಲಾದ ಸ್ಥಿರ ಸ್ವತ್ತುಗಳ ಜಪ್ತಿಯನ್ನು 2024ನೇ ಇಸವಿ ಏಪ್ರಿಲ್ ತಿಂಗಳ 12ನೇ ದಿನಾಂಕ ಶುಕ್ರವಾರದಂದು ಬಹಿರಂಗ ಹರಾಜು ಮೂಲಕವಾಗಿ ಅಥವಾ ಹರಾಜನ್ನು ಮುಂದೂಡಲಾದ ದಿನಾಂಕದಂದು **ಸ್ವತ್ತುಗಳು ಇರುವ ಸ್ಥಳದಲ್ಲಿ** ಬಹಿರಂಗ ಹರಾಜನ್ನು ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಸದರಿ ಹರಾಜು ಹಗಲು 11–00 ಗಂಟೆಗೆ ಪ್ರಾರಂಭವಾಗಿ ಅತ್ಯಧಿಕ ಬಿಡ್ ಕೂಗುವುವವರಿಗೆ ಸ್ವತ್ತನ್ನು ಮೂರು ಸಲಕ್ಕಾಗಿ ಖಾಯಂ ಮಾಡಿ ಕೊಡಲಾಗುವುದು.
2. ಬಿಡ್ಡುದಾರರು ಹರಾಜಿನ ಮೊಬಲಗಿನ ಪೈಕಿ ಅದರ ಶೇಕಡಾ 25ಕ್ಕೆ ಸಮನಾದ ಮೊಬಲಗನ್ನು ಹರಾಜಿನ ಸಮಯದಲ್ಲಿ ಠೇವಣಿ ಇಡತಕ್ಕದ್ದು ಮತ್ತು ಬಿಡ್ಡು ಹಣದ ಉಳಿದ ಮೊಬಲಗನ್ನು ಮಾರಾಟದ ದಿನಾಂಕದಿಂದ 45 ದಿವಸಗಳೊಳಗಾಗಿ ಸಂದಾಯ ಮಾಡಲು ತಪ್ಪಿದರೆ ಅವರು ಇಟ್ಟಿದ್ದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಗುರಿಯಾಗತಕ್ಕದ್ದು.
3. ಮೇಲೆ ಹೇಳಿದ ಪ್ರಕಾರ ನಿಗದಿತ ಸಮಯದೊಳಗೆ ಹಣವನ್ನು ಠೇವಣಿ ಇಡದಿದ್ದರೆ ಅಥವಾ ಅಂಥ ಪ್ರಕಾರ ಮೊಬಲಗಿನ ಪೈಕಿ ಉಳಿದ ಮೊಬಲಗನ್ನು ಸಂದಾಯ ಮಾಡದಿದ್ದರೆ ಪ್ರಥಮ ಬಿಡ್ಡುದಾರರನ ಸಂಬಂಧದಲ್ಲಿ ಆದ ವೆಚ್ಚ ಅಥವಾ ನಷ್ಟ ಒಳಗೊಂಡಂತೆ, ಆ ಸ್ವತ್ತಿನ ಮರು ಮಾರಾಟಕ್ಕಾಗಿ ಹೊಸ ಅಸೂಚನೆಯನ್ನು ಪ್ರಕಟಿಸಿದ ನಂತರ ಭೂಮಿಗಳನ್ನು ಪುನಃ ಮಾರಾಟ ಮಾಡಲಾಗುವುದು.
4. ಮಾರಾಟದ ಕಾಲದಲ್ಲಿ ಬಿಡ್ಡು ಮಾಡುವವರು ತಾವು ತಮ್ಮ ಪರವಾಗಿಯೇ ಬಿಡ್ಡು ಮಾಡುತ್ತಾರೋ ಅಥವಾ ಅನ್ಯ ವ್ಯಕ್ತಿಯ ಪರವಾಗಿ ಬಿಡ್ಡು ಮಾಡುತ್ತಾರೋ ಎಂಬುದನ್ನು ತಿಳಿಸಬೇಕೆಂದು ಕೋರಬಹುದು. ಅನ್ಯ ವ್ಯಕ್ತಿಯ ಪರವಾಗಿ ಬಿಡ್ಡು ಮಾಡುವ ಪಕ್ಷದಲ್ಲಿ ಬಿಡ್ಡುದಾರರು ಆ ಅನ್ಯ ವ್ಯಕ್ತಿಯು ಸ್ವತಃ ಸಹಿ ಮಾಡಿದ ಅಧಿಕಾರ ಪತ್ರವನ್ನು ಹಾಜರು ಮಾಡುವಂತೆ ಕೋರಬಹುದು. ಈ ಪ್ರಕಾರ ಹಾಜರು ಪಡಿಸದೇ ಇದ್ದರೆ ಅವರ ಬಿಡ್ಡನ್ನು ತಿರಸ್ಕರಿಸಬಹುದು.
5. ಸುಸ್ತಿದಾರನಾಗಲೀ ಅಥವಾ ಅವರ ಪರವಾಗಲಿ ಯಾವೊಬ್ಬ ಏಜೆಂಟನಾಗಲೀ ಅಥವಾ ಜಪ್ತಿ ಮಾಡಲಾದ ಸ್ವತ್ತುಗಳ ಸಂಬಂಧದಲ್ಲಿ ಹಿತಾಸಕ್ತಿಯುಳ್ಳ ಕ್ಲೇಮುದಾರನಾಗಲಿ ಅಥವಾ ಯಾರೊಬ್ಬರು ಬಡ್ಡಿ ಮತ್ತು ಇತರ ಖರ್ಚುಗಳ ಸಹಿತ ಪೂರಾ ಮೊಬಲಗನ್ನು ಸಂದಾಯ ಮಾಡಿದರೆ ಹರಾಜನ್ನು ನಿಲ್ಲಿಸತಕ್ಕದ್ದು. ಪರಂತು, ಹಾಗೆ ಸಂದಾಯ ಮಾಡುವುದು ಹರಾಜು ಮಾಡಲು ನಿಗದಿಪಡಿಸಿದ ದಿನಾಂಕದ ಹಿಂದಿನ ದಿನದ ಸೂರ್ಯಾಸ್ತಕ್ಕೆ ಮುಂಚೆಯಾಗಿರತಕ್ಕದ್ದು.
6. ಹರಾಜು ಉಪ ವಿಭಾಗೀಯ ಸಹಕಾರಿಯ ರಿಜಿಸ್ಟ್ರಾರರು ಅದನ್ನು ಖಾಯಂ ಮಾಡುವವರಿಗೆ ಖಾಯಂ ಆಗತಕ್ಕದ್ದಲ್ಲ. ಮಾರಾಟವು ಮುಕ್ತಾಯದ ನಂತರ ಅದರ ಮೇಲಣ ಸ್ಟಾಂಪು ಶುಲ್ಕವನ್ನು ಪಾವತಿ ಮಾಡಿದಲ್ಲಿ ಸದರಿ ಉಪ ವಿಭಾಗದ ಸಹಾಯಕ ರಿಜಿಸ್ಟ್ರಾರನು ಸಹಿ ಹಾಗೂ ಮೊಹರು ಹಾಕಿರುವ ಮಾರಾಟದ ಪ್ರಮಾಣಪತ್ರವನ್ನು ಅವನಿಗೆ ನೀಡತಕ್ಕದ್ದು.
7. ಭೂಮಿಗಳ ವಿವರಣೆಯಲ್ಲಿ ಅಥವಾ ಅವುಗಳ ಅಂದಾಜು ವಿಸ್ತೀರ್ಣ ವಿಷಯದಲ್ಲಿ ತಪ್ಪುಗಳೇನಾದರೂ ಇದ್ದಲ್ಲಿ ಅವುಗಳ ಬಗ್ಗೆ ಸರ್ಕಾರವು ಜವಾಬ್ದಾರಿಯಾಗಿರುವುದಿಲ್ಲ ಎಂಬುದನ್ನು ಗಮನಿಸಬೇಕು.

1. **ತಾಲ್ಲೂಕು, ಗ್ರಾಮ:** ನಂ.12, 11ನೇ ಕ್ರಾಸ್, ಕಗ್ಗದಾಸಪುರ, ಸಿ.ವಿ.ರಾಮನ್ ನಗರ, ಬೆಂಗಳೂರು–560093
2. **ಸುಸ್ತಿದಾರನ ಹೆಸರು: ಪುನೀತ ಮುನೇಶ ಕೋಂ ಮುನೇಶ ವಿ.**
3. **ಸುಸ್ತಿದಾರನಿಗೆ ಸೇರಿದ ಸ್ಥಿರ ಸ್ವತ್ತುಗಳ ವಿವರ, ಭೂಮಿಯ ಸ.ನಂ., ಅಂದಾಜು ವಿಸ್ತೀರ್ಣ:** **ಷೆಡ್ಯೂಲ್ ಸ್ವತ್ತಿನ ವಿವರ: ನಗರ ಮತ್ತು ಬಡಾವಣೆ:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಆನಂದ ನಗರ, ಚಿನ್ನಪ್ಪನಹಳ್ಳಿ, ಕೆ.ಆರ್.ಪುರಂ. **ವಾರ್ಡ್ ಮತ್ತು ಹೆಸರು:** 86ನೇ ವಾರ್ಡ್, ಮಾರತ್ತಹಳ್ಳಿ, **ಸೈಟ್ ನಂ.:** 25 ಮತ್ತು 32, **ಕ್ರಮ ಸಂಖ್ಯೆ:** 279, **ಖಾತಾ ನಂಬರು:** ಹಳೇಯದು ಖಾತಾ ನಂ. 315/25/36 ಮತ್ತು 314/32/36, ಚಾಲ್ತಿ ಖಾತಾ ನಂ. 279/25/36/25/32/36/32. **ಸ್ವತ್ತಿನ ವಿಸ್ತೀರ್ಣ:** ಪೂರ್ವ–ಪಶ್ಚಿಮ: 120 ಅಡಿಗಳು, ಉತ್ತರ–ದಕ್ಷಿಣ: 40 ಅಡಿಗಳು, ಒಟ್ಟು ವಿಸ್ತೀರ್ಣ: 4800 ಚದುರ ಅಡಿಗಳು. ಇದರಲ್ಲಿ ನಿರ್ಮಿಸುತ್ತಿರುವ ವಾಣಿಜ್ಯ ಕಟ್ಟಡ ಸಹ ಸೇರಿ ಪೂರ ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ನಿವೇಶನ ಸಂಖ್ಯೆ: 26 ಮತ್ತು 31, ದಕ್ಷಿಣಕ್ಕೆ: ನಿವೇಶನ ಸಂಖ್ಯೆ 24 ಮತ್ತು 33, ಈ ಮಧ್ಯೆ ಇರುವ ಸ್ವತ್ತು.
4. **ತೀರ್ಪು ಮೊಬಲಗು: ರೂ. 20,81,74,751/–**
5. **ಸ್ವತ್ತುಗಳ ಮೇಲೆ ಯಾವುದಾದರೂ ಋಣಗಳು ಇದ್ದ ಪಕ್ಷಕ್ಕೆ ಅವುಗಳ ವಿವರ:** ಸಹಕಾರಿಯ ಸಾಲದ ಋಣಭಾರ ಇರುತ್ತದೆ.

ಷರಾ: ಈ ನೋಟೀಸನ್ನು ಮಾರಾಟದ ಮೂವತ್ತು ದಿನಗಳ ಮುಂಚಿತವಾಗಿಯಾದರೂ ಸಹಾಯಕ ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ತಾಲ್ಲೂಕು ಕಛೇರಿಯಲ್ಲಿ ಸೂಚನಾ ಫಲಕದಲ್ಲಿ ಪ್ರಕಟಿಸಿ ಮತ್ತು ಮಾರಾಟದ ದಿನಾಂಕಕ್ಕೆ ಮುಂಚೆ ನಿರಂತರ ಮೂರು ದಿನಗಳ ಸದರೀ ಗ್ರಾಮದಲ್ಲಿ ಡಂಗೂರ ಸಾರುವ ಮೂಲಕ ಪ್ರಕಟಿಸತಕ್ಕದ್ದು.

ಸಹಿ/– **(ಪ್ರೇಮಾನಂದ ಬಿ.ಪಿ.)**
ವಸೂಲಾತಿ ಅಧಿಕಾರಿಗಳು (ನಿ–441), ಹಾಗೂ
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸ್ಥಳ: ಬೆಂಗಳೂರು
ದಿನಾಂಕ: 04–03–2024

भारतीय रिज़र्व बैंक
पर्यवेक्षण विभाग
क्षेत्रीय कार्यालय, बेंगलूरु
www.rbi.org.in

सार्वजनिक सूचना

भारतीय रिज़र्व बैंक अधिनियम, 1934 की धारा 45-आईए (6) (i) द्वारा प्रदत्त शक्तियों का प्रयोग करते हुए, भारतीय रिज़र्व बैंक ने निम्नलिखित गैर-बैंकिंग वित्तीय कंपनियों (एनबीएफ़सी) को जारी किए गए पंजीकरण प्रमाणपत्र (सीओआर) को निरस्त कर दिया है :

क्र. सं.	एनबीएफ़सी का नाम	पंजीकृत कार्यालय का पता	सीओआर सं.	सीओआर जारी करने की तिथि
1	मेसर्स श्रुति फाइनेंशिएल सर्विसेज प्राइवेट लिमिटेड	143, C-5, बोमासांद्रा इंडस्ट्रियल एरिया, होसूर रोड़, बेंगलूरु - 560 099.	बी-02-00213	30 जनवरी, 2004
2	मेसर्स मंजुश्री फिनकैप प्राइवेट लिमिटेड	143, C-5, बोमासांद्रा इंडस्ट्रियल एरिया, होसूर रोड़ बेंगलूरु - 560 099.	बी-02-00212	30 जनवरी, 2004
3	मेसर्स जिनवाणी ट्रेडिंग एंड इन्वेस्टमेंट कंपनी प्राइवेट लिमिटेड	143, C-5, बोमासांद्रा इंडस्ट्रियल एरिया, होसूर रोड़ बेंगलूरु - 560 099.	एन-02-00339	24 अगस्त, 2021

अत:, उपर्युक्त कंपनियों भारतीय रिज़र्व बैंक अधिनियम, 1934 की धारा 45-आई के खंड (क) में यथापरिभाषित गैर-बैंकिंग वित्तीय संस्था (एनबीएफआई) का कारोबार नहीं करेगी।

हस्ता-
स्थान: बेंगलूरु महाप्रबंधक

ಭಾರತೀಯ ರಿಸರ್ವ್ ಬ್ಯಾಂಕ್
ಮೇಲ್ವಿಚಾರಣಾ ವಿಭಾಗ, ಬೆಂಗಳೂರು
www.rbi.org.in

ಸಾರ್ವಜನಿಕ ಸೂಚನೆ

ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಪ್ರಕರಣ 45-IA (6) (i)ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ಕೆಳಕಂಡ ಬ್ಯಾಂಕಿಂಗೇತರ ಹಣಕಾಸು ಕಂಪನಿಗಳಿಗೆ ನೀಡಲಾಗಿದ್ದ ನೋಂದಣಿ ಪ್ರಮಾಣ ಪತ್ರವನ್ನು ಭಾರತೀಯ ರಿಸರ್ವ್ ಬ್ಯಾಂಕ್ ರದ್ದು ಪಡಿಸಿದೆ:

ಕ್ರ. ಸಂ.	ಕಂಪನಿಯ ಹೆಸರು	ನೋಂದಾಯಿತ ಕಚೇರಿ ವಿಳಾಸ	ಸೀ ಓ ಆರ್ ಸಂಖ್ಯೆ	ಸೀ ಓ ಆರ್ ನೀಡಲಾದ ದಿನಾಂಕ
1	ಮೆಸರ್ಸ್ ಶ್ರುತಿ ಫೈನಾನ್ಶಿಯಲ್ ಸರ್ವೀಸಸ್ ಪ್ರೈವೆಟ್ ಲಿಮಿಟೆಡ್	143, ಸಿ–5, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಹೊಸೂರು ರಸ್ತೆ, ಬೆಂಗಳೂರು–560 099.	ಬಿ–02–00213	ಜನವರಿ 30, 2004
2	ಮೆಸರ್ಸ್ ಮಂಜುಶ್ರೀ ಫಿನ್‌ಕ್ಯಾಪ್ ಪ್ರೈವೆಟ್ ಲಿಮಿಟೆಡ್	143, ಸಿ–5, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಹೊಸೂರು ರಸ್ತೆ, ಬೆಂಗಳೂರು–560 099.	ಬಿ–02–00212	ಜನವರಿ 30, 2004
3	ಮೆಸರ್ಸ್ ಜಿನ್ವಾನಿ ಟ್ರೇಡಿಂಗ್ ಅಂಡ್ ಇನ್ವೆಸ್ಟ್ಮೆಂಟ್ ಕಂಪನಿ ಪ್ರೈವೇಟ್ ಲಿಮಿಟೆಡ್	143, ಸಿ–5, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, ಹೊಸೂರು ರಸ್ತೆ, ಬೆಂಗಳೂರು–560 099.	ಎನ್–02–00339	ಆಗಸ್ಟ್ 24, 2021

ಆದ್ದರಿಂದ ಮೇಲಿನ ಸಂಸ್ಥೆಗಳು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ ಕಲಂ 45–I ಷರತ್ತು (ಎ) ಅಡಿಯಲ್ಲಿ ವ್ಯಾಖ್ಯಾನಿಸಲಾದ ಬ್ಯಾಂಕಿಂಗೇತರ ಹಣಕಾಸು ವ್ಯವಹಾರಗಳನ್ನು ನಡೆಸುವಂತಿಲ್ಲ.

ಸಹಿ/–
ಸ್ಥಳ: ಬೆಂಗಳೂರು ಮಹಾ ವ್ಯವಸ್ಥಾಪಕರು

ಕೃತಜ್ಞತಾ ಸಭೆ, ಸಹಕರಿಸಿದ ಸಮಿತಿಗಳಿಗೆ ಗೌರವಾರ್ಪಣೆ

ಆದಿಚುಂಚನಗಿರಿ ಜಾತ್ರಾ ಮಹೋತ್ಸವಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ನಾಗಮಂಗಲ: ಇಲ್ಲಿನ ಆದಿಚುಂಚನಗಿರಿ ಮಠದಲ್ಲಿ ಒಂಬತ್ತು ದಿನಗಳವರೆಗೆ ನಡೆದ ಜಾತ್ರೆ, ದೈವ ಉಪಾಸನೆಗಳಿಗೆ ಮಂಗಳವಾರ ವಿಧ್ಯುಕ್ತ ತೆರೆ ಬಿತ್ತು.

ಮಠದ ಆವರಣದಲ್ಲಿ ಮುಕ್ತಾಯಗೊಂಡ ಜಾತ್ರಾ ಮಹೋತ್ಸವದ ಸಭೆಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದ, ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ, ‘ಮನುಷ್ಯರಿಗೆ ಅಜ್ಞಾನ ಹೋಗದ ಹೊರತು ಸುಜ್ಞಾನವಿಲ್ಲ ಎಂಬುದನ್ನು ಅರಿತು ಸತ್ಸಂಗದಲ್ಲಿ ಭಾಗಿಯಾಗಿ, ಭಕ್ತಿ ಮಾರ್ಗದಲ್ಲಿ ಸಾಗಬೇಕು. ಜಾತ್ರೆಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು’ ಎಂದರು.

ಜಾತ್ರಾ ಮಹೋತ್ಸವದ ಪ್ರಯುಕ್ತ ದಾಸೋಹ ಸೇವೆ ನಡೆಸಿದ ಭದ್ರಾವತಿಯ ಕಾಲಭೈರವ ದಾಸೋಹ ಸಮಿತಿ, ಅರಿಶಿನಕುಂಟೆ ರಾಮಕೃಷ್ಣಪ್ಪ ದಂಪತಿ, ತುರುವೇಕೆರೆ ಒಕ್ಕಲಿಗರ ಸಂಘದ ದಾಸೋಹ ಸಮಿತಿ, ಬೆಂಗಳೂರಿನ ಹಿರಿಯ ವಿದ್ಯಾರ್ಥಿಗಳ ದಾಸೋಹ ಟ್ರಸ್ಟ್‌ನ ಪದಾಧಿಕಾರಿಗಳನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು.

ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಪ್ರಮುಖರಾದ ಸಿ.ಎಸ್‌.ಪುಟ್ಟರಾಜು, ಶಿಕ್ಷಣ ಟ್ರಸ್ಟ್‌ನ ಆಡಳಿತಾಧಿಕಾರಿ ಎ.ಟಿ.ಶಿವರಾಮು, ಚಂದ್ರೇಗೌಡ ಚಿಕ್ಕಮಗಳೂರು ಭಾಗವಹಿಸಿದ್ದರು.

ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ಬಿಂದು ಸರೋವರದಲ್ಲಿ ಅವಭೃತ ಸ್ನಾನದ ಅಂಗವಾಗಿ ನಿರ್ಮಲಾನಂದನಾಥ ಸ್ವಾಮೀಜಿ ಪೂಜೆ ನೆರವೇರಿಸಿದರು

ನೀರಿನ ಕೊರತೆ: ತಾತ್ಕಾಲಿಕ ವ್ಯವಸ್ಥೆಗೆ ಸೂಚನೆ

ಬೆಂಗಳೂರು: ಯಲಹಂಕ ಹಾಗೂ ದಾಸರಹಳ್ಳಿ ವಲಯಗಳಲ್ಲಿ ಶುದ್ಧ ನೀರಿನ ಘಟಕಗಳಲ್ಲಿ ನೀರಿನ ಕೊರತೆ ಇರುವ ಪ್ರದೇಶಗಳಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಯಲಹಂಕ ಹಾಗೂ ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಡೆದ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಪಾಲಿಕೆ ಅಧಿಕಾರಿಗಳು ಜಲ ಮಂಡಳಿ ಅಧಿಕಾರಿಗಳ ಜೊತೆ ಸಮನ್ವಯ ಸಾಧಿಸಿ ನೀರಿನ ಸಮಸ್ಯೆಯಿರುವ ಕಡೆ ಕೂಡಲೇ ನೀರಿನ ವ್ಯವಸ್ಥೆ ಕಲ್ಪಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಶುದ್ಧ ಕುಡಿಯುವ ನೀರಿನ ಘಟಕ ಸಕ್ರಿಯವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕು. ನೀರಿನ ಕೊರತೆಯಿರುವ ಘಟಕಗಳಿಗೆ ತಾತ್ಕಾಲಿಕ ನೀರಿನ ವ್ಯವಸ್ಥೆ ಮಾಡಿಕೊಂಡು ನೀರು ಪೂರೈಸಬೇಕು. ನೀರಿನ ಅಭಾವ ಹೆಚ್ಚಿರುವ ಪ್ರದೇಶಗಳಲ್ಲಿ ಟ್ಯಾಂಕ್‌ಗಳನ್ನು ಅಳವಡಿಸಿ ನೀರು ಸರಬರಾಜು ಮಾಡಬೇಕು ಎಂದು ಆದೇಶಿಸಿದರು.

ಕೊಳವೆ ಬಾವಿಗಳ ನಿರ್ವಹಣೆ, ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಈಗಾಗಲೇ ಅನುದಾನ ನೀಡಲಾಗಿದೆ. ಬತ್ತಿ ಹೋಗಿರುವ ಕೊಳವೆ ಬಾವಿಗಳಲ್ಲಿ ರೀ ಡ್ರಿಲ್ ಮಾಡುವುದು ಹಾಗೂ ಹೊಸ ಕೊಳವೆ ಬಾವಿಗಳನ್ನು ಕೊರೆಸಿ ನೀರಿನ ವ್ಯವಸ್ಥೆ ಮಾಡಲು ಸೂಚಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿರುವ 110 ಹಳ್ಳಿಗಳ ಪೈಕಿ ಯಲಹಂಕ ವಲಯದಲ್ಲಿ 16 ಹಳ್ಳಿ ಹಾಗೂ ದಾಸರಹಳ್ಳಿ ವಲಯದಲ್ಲಿ 5 ಹಳ್ಳಿಗಳಿವೆ. ಈ ಹಳ್ಳಿಗಳಿಗೆ ಪಾಲಿಕೆಯಿಂದ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ. ಮಳೆಗಾಲ ಪ್ರಾರಂಭವಾಗುವ ವರೆಗೆ ಎಲ್ಲಿಯೂ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳಬೇಕೆಂದು ಅಧಿಕಾರಿಗಳಿಗೆ ಹೇಳಿದರು.

ಯಲಹಂಕ ವಲಯ ವ್ಯಾಪ್ತಿಯ ಥಣಿಸಂದ್ರ ವಾರ್ಡ್ ವ್ಯಾಪ್ತಿಯ ಮುಖ್ಯರಸ್ತೆಯ ಬಳಿ ಹೊಸದಾಗಿ ಕೊಳವೆಬಾವಿಗಳನ್ನು ಕೊರೆದು ಪಂಪ್‌ಸೆಟ್ ಅಳವಡಿಸಿ ನೀರು ಪೂರೈಕೆ ಮಾಡುತ್ತಿರುವ ಸ್ಥಳಕ್ಕೆ ತುಷಾರ್ ಗಿರಿನಾಥ್ ಭೇಟಿ ನೀಡಿದ್ದರು.

ವಲಯ ಆಯುಕ್ತರಾದ ಕರೀಗೌಡ, ಪ್ರೀತಿ ಗೆಹ್ಲೋಟ್, ಜಂಟಿ ಆಯುಕ್ತರಾದ ಮೊಹ್ಮದ್ ನಯೀಮ್ ಮೊಮಿನ್, ಬಾಲಶೇಖರ್, ಮುಖ್ಯ ಎಂಜಿನಿಯರ್‌ಗಳಾದ ರಂಗನಾಥ, ರವಿ ಉಪಸ್ಥಿತರಿದ್ದರು.

ಬೆಂಗಳೂರು: ಫೆಬ್ರುವರಿ, ಮಾರ್ಚ್ ತಿಂಗಳಲ್ಲಿ ಒಂದು ಹನಿಯೂ ಸುರಿದಿಲ್ಲ

‘ಶೂನ್ಯ’ ದಾಖಲೆ ಬರೆದ ಮಳೆ

• ಆದಿತ್ಯ ಕೆ.ಎ.

ಬೆಂಗಳೂರು: ಈ ವರ್ಷದ ಫೆಬ್ರುವರಿ ಹಾಗೂ ಮಾರ್ಚ್‌ನಲ್ಲಿ ಮಳೆಯೇ ಸುರಿಯದ ಕಾರಣಕ್ಕೆ ಬೆಂಗಳೂರಿನಲ್ಲಿ ಬಿಸಿಲ ಬೇಗೆ ಹೆಚ್ಚಿದ್ದು, ಜನರನ್ನೂ ಹೈರಾಣಾಗಿಸುತ್ತಿದೆ.

ಮುಂಗಾರು ಪೂರ್ವದಲ್ಲಿ ಫೆಬ್ರುವರಿ ತಿಂಗಳಲ್ಲಿ 7.1 ಮಿ.ಮೀ ಹಾಗೂ ಮಾರ್ಚ್‌ನಲ್ಲಿ 14.7 ಮಿ.ಮೀ ನಗರದ ವಾಡಿಕೆ ಮಳೆ. ಆದರೆ, ಇದುವರೆಗೂ ನಗರದಲ್ಲಿ ‘ಒಂದು ಹನಿ’ಯೂ ಮಳೆ ಸುರಿದಿಲ್ಲ. ಹಿಂದಿನ ಕೆಲವು ವರ್ಷಗಳಂತೆಯೇ ‘ಶೂನ್ಯ’ ದಾಖಲೆ ಬರೆದಿದೆ. ಇದರಿಂದ ಒಣಹವೆ ವಾತಾವರಣವಿದ್ದು ಮಧ್ಯಾಹ್ನದ ವೇಳೆಯಲ್ಲಿ ಮನೆ ಹಾಗೂ ಕಚೇರಿಯಿಂದ ಹೊರಗೆ ಓಡಾಡದ ಪರಿಸ್ಥಿತಿಯಿದೆ. ಮಕ್ಕಳು, ವೃದ್ಧರನ್ನು ದಿನದಿಂದ ದಿನಕ್ಕೆ ಬಸವಳಿಯುವಂತೆ ಮಾಡುತ್ತಿದೆ ವಾತಾವರಣ. ಉದ್ಯಾನಗಳಲ್ಲೂ ತಂಪು ಗಾಳಿ ಬೀಸುತ್ತಿಲ್ಲ. ವಾಡಿಕೆಯಷ್ಟಾದರೂ ಮಳೆ ಆಗಿದ್ದರೆ ತಾಪಮಾನ ಇಳಿಕೆ ಆಗುತ್ತಿತ್ತು ಎಂದು ತಜ್ಞರು ಹೇಳುತ್ತಾರೆ.

ರಾಜ್ಯದ ಬೀದರ್, ಚಿಕ್ಕಮಗಳೂರು, ಕೊಡಗು ಜಿಲ್ಲೆಯ ಅಲ್ಲಲ್ಲಿ ಸಾಧಾರಣ ಮಳೆಯಾಗಿದ್ದರೂ ನಗರದಲ್ಲಿ ಮಾತ್ರ ಮೋಡದ ವಾತಾವರಣವೇ ಕಾಣಿಸುತ್ತಿಲ್ಲ. ಇನ್ನೂ ಒಂದು ವಾರ

ನಗರದಲ್ಲಿ ಸದ್ಯಕ್ಕೆ ಉಷ್ಣಅಲೆಯ ವಾತಾವರಣ ಇಲ್ಲ. ಆದರೆ, ತಾಪಮಾನದಲ್ಲಿ ಏರಿಕೆ ಆಗಲಿದ್ದು ಜನರು ಎಚ್ಚರಿಕೆ ವಹಿಸುವುದು ಅಗತ್ಯ
ಎ.ಪ್ರಸಾದ್
ಹವಾಮಾನ ಇಲಾಖೆ ಅಧಿಕಾರಿ

ನಗರದಲ್ಲಿ ‘ಬಿಸಿಲ ಪ್ರಕೋಪ’ ಹೀಗೆಯೇ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಜ್ಞರು ಮುನ್ಸೂಚನೆ ನೀಡಿದ್ದಾರೆ.

ಮೇನಲ್ಲಿ ಅಧಿಕ ಮಳೆ: ಏಪ್ರಿಲ್‌ನಲ್ಲಿ 61.7 ಮಿ.ಮೀ ಹಾಗೂ ಮೇನಲ್ಲಿ 128.7 ಮಿ.ಮೀ ನಗರದ ವಾಡಿಕೆ ಮಳೆ ಪ್ರಮಾಣ. ಮೇನಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದೆ. ಆದರೆ, ಮುಂದಿನ ಎರಡು ತಿಂಗಳಲ್ಲಿ ಮಳೆಯ ಪ್ರಮಾಣ ಹೇಗಿರಲಿದೆ ಎಬುದನ್ನು ತಿಂಗಳಾಂತ್ಯದಲ್ಲಿ ನಿಖರವಾಗಿ ಮಾಹಿತಿ ನೀಡಲಾಗುವುದು ಎಂದು ಹವಾಮಾನ ಇಲಾಖೆ ಅಧಿಕಾರಿ ಎ.ಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.

ಉಷ್ಣಾಂಶ ಮತ್ತಷ್ಟು ಏರಿಕೆ: ರಾಜ್ಯದ ಕೆಲವು ಭಾಗದಲ್ಲಿ ಗರಿಷ್ಠ ಉಷ್ಣಾಂಶವು 2 ಡಿಗ್ರಿಗಿಂತ ಹೆಚ್ಚಾದರೆ, ಬೆಂಗಳೂರಿನಲ್ಲಿ 1 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ. ಮಾರ್ಚ್‌ನಲ್ಲಿ ನಗರದ ವಾಡಿಕೆ ಉಷ್ಣಾಂಶ 34 ಡಿಗ್ರಿ ಸೆಲ್ಸಿಯಸ್ ಆಗಿದೆ.

1996ರ ಮಾರ್ಚ್ 29ರಂದು 37.3 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿತ್ತು. 2016ರ ಏಪ್ರಿಲ್ 25ರಂದು 39.2 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿತ್ತು. ಅದು ದಾಖಲೆಯಾಗಿದೆ. ಈ ವರ್ಷದ ಮಾರ್ಚ್ 6ರಂದು 36 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ದಾಖಲಾಗಿತ್ತು. ಈ ವರ್ಷ ಹಿಂದಿನ ದಾಖಲೆ ಅಳಿಸಿ ಹಾಕದಿದ್ದರೂ ವಾತಾವರಣದಲ್ಲಿ ಆಗಿರುವ ಬದಲಾವಣೆಯಿಂದ ತಾಪಮಾನ ಹೆಚ್ಚಿರುವಂತೆ ಭಾಸವಾಗುತ್ತಿದೆ. ಬಿಸಿಲ ಪರಿಣಾಮದಿಂದ ರೋಗಗಳು ಬಾಧಿಸುತ್ತಿವೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಮಾರ್ಚ್‌ನಲ್ಲಿ ದಾಖಲಾದ ಗರಿಷ್ಠ ಉಷ್ಣಾಂಶ

ವರ್ಷ–ದಿನಾಂಕ	ಗರಿಷ್ಠ ತಾಪಮಾನ (ಡಿಗ್ರಿ ಸೆಲ್ಸಿಯಸ್‌ನಲ್ಲಿ)
2013ರ ಮಾರ್ಚ್ 30	36.6
2016ರ ಮಾರ್ಚ್ 23	36.3
2017ರ ಮಾರ್ಚ್ 27	37.2
2019ರ ಮಾರ್ಚ್ 8	37.0
2020ರ ಮಾರ್ಚ್ 31	36.1
2024 ಮಾರ್ಚ್ 6	36.0

14 ವರ್ಷಗಳಲ್ಲಿ ಫೆಬ್ರುವರಿ ಹಾಗೂ ಮಾರ್ಚ್‌ನಲ್ಲಿ ಸುರಿದ ಮಳೆ
ಪ್ರಮಾಣ (ಮಿ.ಮೀಗಳಲ್ಲಿ)

ವರ್ಷ	ಫೆಬ್ರುವರಿ	ಮಾರ್ಚ್
2011	44.1	0.2
2012	0.0	0.7
2013	2.9	0.6
2014	0.2	4.7
2015	0.0	37.7
2016	0.0	19.9
2017	0.0	47.8
2018	1.8	47.6
2019	58.0	0.0
2020	0.0	18.4
2021	10.3	0.0
2022	0.0	12.8
2023	5.0	9.0
2024	0.0	0.0

ಸುದ್ದಿ 2 ನಿಮಿಷ

ಶಾಸಕ ರಿಜ್ವಾನ್ ಅರ್ಷದ್ ಅನರ್ಹತೆಗೆ ಕೋರಿದ ಅರ್ಜಿ ವಜಾ

ಬೆಂಗಳೂರು: ವಿಧಾನಸಭೆಗೆ 2023ರಲ್ಲಿ ನಡೆದ ಚುನಾವಣೆಯಲ್ಲಿ ಶಿವಾಜಿನಗರ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕರಾಗಿ ರಿಜ್ವಾನ್ ಅರ್ಷದ್ ಆಯ್ಕೆಯಾಗಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಸಂಪಂಗಿ ರಾಮನಗರದ ಬಿ.ಲಕ್ಷ್ಮಿದೇವಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ, ಇದೇ 13ರಂದು ಕಾಯ್ದಿರಿಸಿದ್ದ ನಿರ್ಣಯವನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಘೋಷಿಸಿದೆ. ವಿಸ್ತೃತ ಆದೇಶ ಇನ್ನಷ್ಟೇ ಪ್ರಕಟವಾಗಬೇಕಿದೆ.

ಅರ್ಜಿಯಲ್ಲಿ ಏನಿತ್ತು?: ‘ಕಾಂಗ್ರೆಸ್ ಪ್ರಕಟಿಸಿರುವ ಗ್ಯಾರಂಟಿ ಯೋಜನೆಗಳು ಕೊಡುಗೆ ಹಾಗೂ ಭರವಸೆ ಸ್ವರೂಪದ್ದಾಗಿವೆ. ಗ್ಯಾರಂಟಿ ಯೋಜನೆಗಳನ್ನು ಪಕ್ಷದ ಅಭ್ಯರ್ಥಿಗಳ ಸಮ್ಮತಿಯೊಂದಿಗೆ ಪ್ರಕಟಿಸಲಾಗಿದೆ. ಇವು ಶಿವಾಜಿನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತಹಾಕುವಂತೆ ಮತದಾರರನ್ನು ಪ್ರೇರೇಪಿಸಿವೆ. ಈ ಮೂಲಕ ರಿಜ್ವಾನ್ ಅರ್ಷದ್ ಚುನಾವಣೆಯಲ್ಲಿ ಅಕ್ರಮ ಎಸಗಿದ್ದಾರೆ. ಮತದಾರರಿಗೆ ಆಮಿಷವೊಡ್ಡುವುದು ಲಂಚ ಮತ್ತು ಭ್ರಷ್ಟಾಚಾರಕ್ಕೆ ಸಮ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದರು.

‘ಪ್ರಜಾಪ್ರತಿನಿಧಿ ಕಾಯ್ದೆಯ ವಿವಿಧ ಕಲಂಗಳ ಅಡಿ ರಿಜ್ವಾನ್ ಅರ್ಷದ್ ಚುನಾವಣಾ ಅಕ್ರಮಗಳನ್ನು ಎಸಗಿದ್ದು, ಆರು ವರ್ಷಗಳ ಕಾಲ ಅವರು ಚುನಾವಣೆಗೆ ಸ್ಪರ್ಧಿಸದಂತೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

‘ಜಾತಿ ಗಣತಿ: ಸಮಿತಿ ರಚಿಸಿ’

ಬೆಂಗಳೂರು: ‘ಎಲ್ಲ ಜಾತಿ, ಸಮುದಾಯಗಳ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕ್ಷೆಯನ್ನು (ಜಾತಿ ಗಣತಿ) ಸಮಗ್ರವಾಗಿ, ವೈಜ್ಞಾನಿಕವಾಗಿ ನಡೆಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಸ್ವತಂತ್ರ ಸಮಿತಿಯೊಂದನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ ಯಶವಂತಪುರದ ಕೆ.ಸಿ.ಶಿವರಾಮ್, ಎಸ್.ವಿ.ಮುನಿರಾಜು ಹಾಗೂ ಕೆ.ಜಿ.ಕುಮಾರ್ ಸಲ್ಲಿಸಿರುವ ಅರ್ಜಿಯು, ಮಂಗಳವಾರ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿತ್ತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಡಿ.ಆರ್.ರವಿಶಂಕರ್ ಹಾಜರಾಗಿ, ‘ಜಾತಿ ಆಧಾರಿತ ಗಣತಿಗೆ ಸಂಬಂಧಿಸಿದ ಮುಂದಿನ ಎಲ್ಲಾ ಪ್ರಕ್ರಿಯೆಗಳನ್ನೂ ಸ್ಥಗಿತಗೊಳಿಸಲು ಆಯೋಗಕ್ಕೆ ನಿರ್ದೇಶಿಸಬೇಕು’ ಎಂದು ಕೋರಿದರು.

ವಾದವನ್ನು ಕೆಲಕಾಲ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಜೂನ್ 5ಕ್ಕೆ ಮುಂದೂಡಿತು.

ಪೈಪ್‌ಲೈನ್ ಮೂಲಕ ಕೆರೆಗಳಿಗೆ ಮಳೆ ನೀರು: ಚಿಂತನೆ

ಬೆಳ್ಳಂದೂರು, ವರ್ತೂರಿನಲ್ಲಿ ಪ್ರಾಯೋಗಿಕವಾಗಿ ಜಾರಿ: ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ಹಾಗೂ ವರ್ತೂರು ಕೆರೆಗಳಿಗೆ ಸುತ್ತಮುತ್ತಲಿನ ಅಪಾರ್ಟ್‌ಮೆಂಟ್ ಹಾಗೂ ಸಾರ್ವಜನಿಕ ಸ್ಥಳಗಳಿಂದ ಮಳೆ ನೀರು ಹರಿಸಲು ಜಲಮಂಡಳಿ ಚಿಂತನೆ ನಡೆಸಿದೆ ಎಂದು ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ವರ್ತೂರು ಕೆರೆಗೆ ನೀರು ಹರಿಸುವ ಸಂಬಂಧ ಮಂಗಳವಾರ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ನಗರದಲ್ಲಿ ಅಂತರ್ಜಲ ವೃದ್ಧಿಸುವ ಹಾಗೂ ಕೆರೆಗಳಿಗೆ ಮಳೆ ನೀರು ತುಂಬಿಸುವ ಉದ್ದೇಶದಿಂದ ಜಲಮಂಡಳಿಯಿಂದ ‘ಸಮುದಾಯ ಮಳೆ ನೀರು ಸಂಗ್ರಹ’ ಯೋಜನೆ ಪ್ರಾರಂಭಿಸಲು ನಿರ್ಧರಿಸಲಾಗಿದೆ. ಮೊದಲ ಹಂತದಲ್ಲಿ ವರ್ತೂರು, ಬೆಳ್ಳಂದೂರು ಭಾಗದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದರು.

ಅಪಾರ ಪ್ರಮಾಣದಲ್ಲಿ ಹರಿದು ಹೋಗುವ ಮಳೆ ನೀರನ್ನು ಸಮರ್ಪಕವಾದ ವ್ಯವಸ್ಥೆಯ ಮೂಲಕ ಕೆರೆಗಳಿಗೆ ಹರಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಕೆರೆಗಳಿಂದ 500 ಮೀಟರ್ ಸುತ್ತಳತೆಯಲ್ಲಿರುವಂತಹ ಅಪಾರ್ಟ್‌ಮೆಂಟ್‌ಗಳು, ಸಾರ್ವಜನಿಕ ಪ್ರದೇಶಗಳು ಹಾಗೂ ದೊಡ್ಡ ಕಟ್ಟಡಗಳಿಂದ ಪೈಪ್‌ಲೈನ್ ಮೂಲಕ ಕೆರೆಗಳಿಗೆ ನೇರವಾಗಿ ಮಳೆ ನೀರನ್ನು ತುಂಬಿಸುವ ಗುರಿ ಹೊಂದಲಾಗಿದೆ ಎಂದು ಮಾಹಿತಿ ನೀಡಿದರು.

ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಅವರು ವರ್ತೂರು ಕೆರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು

ನಗರದಲ್ಲಿ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆಯನ್ನು ಕಡ್ಡಾಯಗೊಳಿಸಲಾಗಿದೆ. ಆದರೆ, ಕಟ್ಟಡಗಳಲ್ಲಿನ ಜಾಗದ ಕೊರತೆ ಹಾಗೂ ನಿರ್ಲಕ್ಷದಿಂದ ಇದರ ಸರಿಯಾದ ಅನುಷ್ಠಾನ ಸಾಧ್ಯವಾಗಿಲ್ಲ. ಬಹುತೇಕ ಕಡೆಗಳಲ್ಲಿ ಕೇವಲ ಅಗತ್ಯ ಅನುಮತಿ ಪಡೆದುಕೊಳ್ಳಲು ಮಳೆ ನೀರು ಸಂಗ್ರಹ ಪದ್ಧತಿಯನ್ನು ಅಳವಡಿಸಿದ್ದು, ಮಳೆ ನೀರನ್ನು ಸಂಗ್ರಹಿಸಿ ಒಳಚರಂಡಿಗೆ ನೇರವಾಗಿ ಹರಿಯಬಿಡಲಾಗುತ್ತಿದೆ. ಇದರಿಂದ ಮಳೆಗಾಲದಲ್ಲಿ ಒಳಚರಂಡಿ ವ್ಯವಸ್ಥೆ ಒತ್ತಡಕ್ಕೆ ಒಳಗಾಗಿ ಪ್ರವಾಹ ಪರಿಸ್ಥಿತಿ ಉಂಟಾಗುತ್ತದೆ ಎಂದು ಹೇಳಿದರು.

ಮಳೆ ನೀರು ವ್ಯರ್ಥವಾಗಿ ಹರಿದು ಚರಂಡಿ ಪಾಲಾಗುತ್ತಿದೆ. ನೀರು ವ್ಯರ್ಥವಾಗದಂತೆ ಅಮೂಲ್ಯ ಮಳೆ ನೀರನ್ನು ಸಂಗ್ರಹಿಸಿ ಅದನ್ನು ಅಂತರ್ಜಲ ವೃದ್ಧಿಗೆ ಬಳಸಿಕೊಳ್ಳಲು ‘ಸಮುದಾಯ ಮಳೆ ನೀರು ಸಂಗ್ರಹ’ ಯೋಜನೆ ರೂಪಿಸಲಾಗಿದೆ ಎಂದರು.

ನೆರಳಿನಾಸರೆ...

ನಗರದ ಜಾನ್ಸನ್ ಮಾರುಕಟ್ಟೆ ಬಳಿ ಇರುವ ಬತ್ತಿದ ಕೊಳವೆ ಬಾವಿಗೆ ವ್ಯಾಪಾರಿಯೊಬ್ಬರು ಬಲೂನ್ ಕಟ್ಟಿ ಮರದ ನೆರಳಿನಲ್ಲಿ ನಿದ್ರೆಗೆ ಜಾರಿದ್ದ ದೃಶ್ಯ ಮಂಗಳವಾರ ಗೋಚರಿಸಿತು

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಪತ್ರ ಬರೆದರೂ ಬಗೆಹರಿಯಲಿಲ್ಲ ನೀರಿನ ಸಮಸ್ಯೆ: ಮುನಿರಾಜು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ದಾಸರಹಳ್ಳಿ ಕ್ಷೇತ್ರದಲ್ಲಿರುವ ನೀರಿನ ಸಮಸ್ಯೆ ಬಗೆಹರಿಸಲು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ’ ಎಂದು ಶಾಸಕ ಎಸ್. ಮುನಿರಾಜು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕ್ಷೇತ್ರದಲ್ಲಿ 6 ಲಕ್ಷಕ್ಕೂ ಅಧಿಕ ಜನಸಂಖ್ಯೆಯಿದೆ. ಕ್ಷೇತ್ರದಲ್ಲಿ ನೀರಿನ ಸಮಸ್ಯೆಯಿದೆ. ಈ ಕುರಿತು ಸಭೆ ನಡೆಸಿ, ಜಲಮಂಡಳಿ ಅಧ್ಯಕ್ಷರ ಗಮನಕ್ಕೆ ತರಲಾಗಿತ್ತು. ಸಿ.ಎಂ, ಡಿಸಿಎಂಗೆ ಪತ್ರ ಬರೆದು ಗಮನ ಸೆಳೆಯಲಾಗಿತ್ತು. ಆದರೂ ಪ್ರಯೋಜನವಾಗಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ಜಲ ಮಂಡಳಿಯವರು ಯಾವುದೇ ಒಂದು ರಸ್ತೆಯಲ್ಲಿ ಸಿಂಟೆಕ್ಸ್ ಟ್ಯಾಂಕ್ ಇಟ್ಟರೆ, ಮಹಡಿಗಳಲ್ಲಿ ವಾಸ ಮಾಡುತ್ತಿರುವವರು ನೀರನ್ನು ಅಲ್ಲಿಗೆ ತೆಗೆದುಕೊಂಡು ಹೋಗಲು ಸಾಧ್ಯವೇ? ವಯಸ್ಸಾದವರು, ಮಹಿಳೆಯರು ನೀರನ್ನು ಕೊಂಡೊಯ್ಯುವುದು ಅಸಾಧ್ಯ’ ಎಂದು ಹೇಳಿದರು.

‘100 ಬೋರ್‌ವೆಲ್ ಕೊರೆಸಲು ಅನುದಾನಕ್ಕೆ ಮನವಿ ಸಲ್ಲಿಸಲಾಗಿತ್ತು. ಅನುದಾನ ನೀಡಿದ್ದರೆ ಸಲ್ಪಮಟ್ಟಿಗಾದರೂ ಬೇಸಿಗೆಯ ನೀರಿನ ಬವಣೆ ತಪ್ಪಿಸಬಹುದಾಗಿತ್ತು. ಆದರೆ, ಇದು ಕಿವುಡ ಮತ್ತು ಕುರುಡು ಸರ್ಕಾರ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಈಗಾಗಲೇ ಪರಿಸ್ಥಿತಿ ಹದಗೆಟ್ಟಿದ್ದು ಜನರು ಹಳ್ಳಿಗಳತ್ತ ಮುಖ ಮಾಡಿದ್ದಾರೆ. ಕಾವೇರಿ ಐದನೇ ಹಂತ ಕಾಮಗಾರಿ ತ್ವರಿತ ಗತಿಯಲ್ಲಿ ಆಗಿದ್ದರೆ ಸ್ವಲ್ಪಮಟ್ಟಿಗಾದರೂ ಸಮಸ್ಯೆ ಬಗೆಹರಿಯುತ್ತಿತ್ತು. ಇತ್ತ ಕೊಳವೆಬಾವಿಗಳು ಬತ್ತಿವೆ. ಕಾವೇರಿ ನೀರು ಕೂಡ ಬರುತ್ತಿಲ್ಲ. ಜನರು ನೀರಿನ ಸಮಸ್ಯೆಯಿಂದ ಜನರು ತತ್ತರಿಸಿದ್ದಾರೆ’ ಎಂದರು.

ತಾಯಿಯ ಕೊಲೆಗೈದಿದ್ದ ಮಗ ಗಲ್ಲು ಶಿಕ್ಷೆ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಲ್ಲು ಶಿಕ್ಷೆ ವಿಧಿಸುವಾಗ ವಿಚಾರಣಾ ನ್ಯಾಯಾಲಯಗಳಿಗೆ ಭಾವನೆಗಳೇ ಪ್ರಧಾನವಾಗಬಾರದು’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ತಾಯಿಯನ್ನು ಕೊಲೆಗೈದಿದ್ದ ಮಗನಿಗೆ ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಮಾರ್ಪಾಡು ಮಾಡಿ ಆದೇಶಿಸಿದೆ.

ಗಲ್ಲು ಶಿಕ್ಷೆ ರದ್ದುಪಡಿಸುವಂತೆ ಕೋರಿ ಅಪರಾಧಿ ತಿಮ್ಮಪ್ಪ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್ ಮತ್ತು ಎಸ್.ರಾಚಯ್ಯ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಮೇಲ್ಮನವಿಯನ್ನು ಭಾಗಶಃ ಮಾನ್ಯ ಮಾಡಿರುವ ನ್ಯಾಯಪೀಠ, ಅಪರಾಧಿಗೆ ಜೀವಾವಧಿ ಶಿಕ್ಷೆ ಹಾಗೂ ₹ 25 ಸಾವಿರ ದಂಡ ವಿಧಿಸಿದೆ. ‘ಒಂದು ವೇಳೆ ದಂಡ ಪಾವತಿಸದಿದ್ದರೆ ಪುನಃ ಒಂದು ವರ್ಷ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ’ ಎಂದು ಆದೇಶದಲ್ಲಿ ವಿವರಿಸಿದೆ.

‘ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸುವುದು ಸೂಕ್ತವಲ್ಲ. ಗಲ್ಲು ಶಿಕ್ಷೆ ವಿಧಿಸಲು ಭಾವನೆಗಳು ಪ್ರಭಾವಶಾಲಿ ಅಂಶಗಳಾಗಬಾರದು. ಅಪರಾಧದ ಸ್ತರ ಹೆಚ್ಚು ಮುಖ್ಯವಾಗುತ್ತದೆ. ಅಂತೆಯೇ, ಇದು ಅಪರೂಪದಲ್ಲೇ ಅಪರೂಪ ಎನ್ನುವಂತಹ ಪ್ರಕರಣವೇನೂ ಅಲ್ಲ’ ಎಂದಿದೆ.

ಪ್ರಕರಣವೇನು?: ‘ಹೆಂಡತಿ ನನ್ನನ್ನು ತೊರೆದು ಹೋಗಲು ತಾಯಿಯೇ ಕಾರಣ’ ಎಂದು ಹೊಳಲ್ಕೆರೆ ತಾಲ್ಲೂಕಿನ ದುಮ್ಮಿ ಗೊಲ್ಲರಹಟ್ಟಿಯ ತಿಮ್ಮಪ್ಪ ತಾಯಿಯ ಜೊತೆ ವಾಗ್ವಾದ ನಡೆಸಿದ್ದ. ಈ ವೇಳೆ ಉದ್ವೇಗಕ್ಕೆ ಒಳಗಾಗಿದ್ದ ಆತ ಮಾರಕಾಸ್ತ್ರ ಬಳಸಿ ತನ್ನ ತಾಯಿಯ ಕುತ್ತಿಗೆಗೆ ಮಚ್ಚಿನಿಂದ ಹೊಡೆದಿದ್ದ. ಆಕೆಯ ಶಿರಚ್ಛೇದನಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದು ತೀರ್ಮಾನಿಸಿದ್ದ ಚಿತ್ರದುರ್ಗದ ಮೊದಲ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ 2018ರ ಜೂನ್ 2ರಂದು ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಿತ್ತು.

ನಿರ್ಮಾಪಕ ಸುರೇಶ್ ವಿರುದ್ಧದ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಕಾರ

ಬೆಂಗಳೂರು: ನಿರ್ಮಾಪಕ ಎಂ.ಎನ್.ಸುರೇಶ್ ವಿರುದ್ಧ ನಟ ಸುದೀಪ್ ಹೂಡಿರುವ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ. ಈ ಸಂಬಂಧ ಸುರೇಶ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘ದೂರು ಮತ್ತು ಸ್ವಯಂಪ್ರೇರಿತ ಹೇಳಿಕೆಯಲ್ಲಿ ಅರ್ಜಿದಾರ ಸುರೇಶ್ ವಿರುದ್ಧ ನಿರ್ದಿಷ್ಟ ಆರೋಪಗಳಿವೆ. ದೂರುದಾರರ ಪ್ರಕಾರ ಅವು ಸುದೀಪ್ ಅವರಿಗೆ ಮಾನಹಾನಿ ಉಂಟು ಮಾಡಿದ್ದು, ಸಮಾಜದಲ್ಲಿ ಅವರ ವರ್ಚಸ್ಸಿಗೆ ಹಾನಿ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹೀಗಾಗಿ, ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶರು ಸುರೇಶ್ ಅವರಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿರುವುದರಲ್ಲಿ ಯಾವುದೇ ಕಾನೂನುಬಾಹಿರ ನಡೆ ಕಾಣುತ್ತಿಲ್ಲ’ ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: ‘ನನ್ನ ಸಿನಿಮಾದಲ್ಲಿ ನಟಿಸುತ್ತೇನೆ ಎಂದು ಹೇಳಿ ಸುದೀಪ್ ಕಳೆದ 7-8 ವರ್ಷಗಳ ಹಿಂದೆ ಮುಂಗಡ ಹಣ ಪಡೆದಿದ್ದರು. ಆದರೆ, ಇದುವರೆವಿಗೂ ಕಾಲ್‌ಶೀಟ್ ನೀಡಿಲ್ಲ. ನನ್ನ ಹಣವನ್ನೂ ವಾಪಸ್ ಕೊಡುತ್ತಿಲ್ಲ' ಎಂದು ನಿರ್ಮಾಪಕ ಎಂ.ಎನ್.ಕುಮಾರ್ ಆರೋಪಿಸಿದ್ದರು. ಸಮಸ್ಯೆ ಬಗೆಹರಿಸುವಂತೆ ಕೋರಿ ಫಿಲ್ಮ್ ಛೇಂಬರ್ ಮೆಟ್ಟಿಲೇರಿದ್ದರು. ಮಾಧ್ಯಮ ಗೋಷ್ಠಿಗಳಲ್ಲೂ ಈ ಕುರಿತಂತೆ ಅವರು ಸಾರ್ವಜನಿಕವಾಗಿ ಸುದೀಪ್ ವಿರುದ್ಧ ಹೇಳಿಕೆಗಳನ್ನು ನೀಡಿದ್ದರು.

ಇದಕ್ಕೆ ಪ್ರತಿಯಾಗಿ ಸುದೀಪ್ ಕೋರ್ಟ್ ಮೆಟ್ಟಿಲೇರಿ, ‘ಕುಮಾರ್ ಹೇಳಿಕೆಯಿಂದ ನಾನು ಇಷ್ಟು ವರ್ಷಗಳ ಕಾಲ ಕಷ್ಟಪಟ್ಟು ಗಳಿಸಿದ್ದ ವರ್ಚಸ್ಸಿಗೆ ಧಕ್ಕೆಯಾಗಿದೆ. ನನ್ನ ಮಾನಹಾನಿಯಾಗಿದೆ‘ ಎಂದು ಆರೋಪಿಸಿ ಕ್ರಿಮಿನಲ್ ಮಾನಹಾನಿ ಪ್ರಕರಣ ದಾಖಲಿಸಿದ್ದಾರೆ.

ಸುದೀಪ್ ದಾಖಲಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಚಿತ್ರ ನಿರ್ಮಾಪಕ ಎನ್.ಎಂ.ಕುಮಾರ್ ಹಾಗೂ ಎನ್.ಎಂ.ಸುರೇಶ್ ಅವರಿಗೆ ಸಮನ್ಸ್ ಜಾರಿಗೊಳಿಸಲು ನಗರದ ವಿಚಾರಣಾ ನ್ಯಾಯಾಲಯ ಆದೇಶಿಸಿತ್ತು.

ಕಾಗದರಹಿತ ವ್ಯವಸ್ಥೆ

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಸಂಪೂರ್ಣವಾಗಿ ಕಾಗದರಹಿತ ಆಡಳಿತ ವ್ಯವಸ್ಥೆ ಜಾರಿಗೆ ತರಲಾಗಿದೆ ಎಂದು ಕಮಿಷನರ್ ಬಿ.ದಯಾನಂದ್ ಅವರು ‘ಎಕ್ಸ್’ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ದಕ್ಷತೆ, ಪಾರದರ್ಶಕತೆ ಹಾಗೂ ಕಚೇರಿಯಲ್ಲಿ ಆಗುತ್ತಿರುವ ಅವ್ಯವಸ್ಥೆ ತಪ್ಪಿಸಲು ಕಾಗರಹಿತ ವ್ಯವಸ್ಥೆ ಉತ್ತಮ. ಅದರ ಭಾಗವಾಗಿ ಇ-ಆಫೀಸ್ ಜಾರಿಗೆ ತರಲಾಗಿದೆ. ನಗರದ ಎಲ್ಲ ಪೊಲೀಸ್ ಠಾಣೆಗಳೂ ಸೇರಿದಂತೆ ಪೊಲೀಸ್ ಇಲಾಖೆಗೆ ಸಂಬಂಧಿಸಿದ ಸ್ಥಳಗಳಲ್ಲಿ ಇ-ಆಫೀಸ್ ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಮೂವರ ಕೊಲೆ ಪ್ರಕರಣ: ಉನ್ನತಮಟ್ಟದ ತನಿಖೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತುಮಕೂರು ಜಿಲ್ಲೆಯ ಕುಚ್ಚಂಗಿ ಕೆರೆ ಅಂಗಳದಲ್ಲಿ ಕಾರು ಸಹಿತ ಮೂವರನ್ನು ಸುಟ್ಟು ಹಾಕಿರುವ ಪ್ರಕರಣ ವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಉನ್ನತಮಟ್ಟದ ತನಿಖೆ ನಡೆಸಬೇಕು. ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲ ಆರೋಪಿಗಳಿಗೆ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳಬೇಕು’ ಎಂದು ಮಂಗಳೂರು ಮುಸ್ಲಿಂ ಯೂತ್ ಕೌನ್ಸಿಲ್ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೌನ್ಸಿಲ್ ಅಧ್ಯಕ್ಷ ಎಚ್.ಅಬೂಬಕ್ಕರ್, ‘ತುಮಕೂರಿನ ಶೀರಾಗೇಟ್ ನಿವಾಸಿ, ಆರೋಪಿ ಪಾತರಾಜು (ರಾಜಗುರು) ಎಂಬಾತ ದಕ್ಷಿಣ ಕನ್ನಡದ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಶಾಹುಲ್ ಹಮೀದ್, ಇಸಾಕ್, ಸಿದ್ದೀಕ್ ಅವರಿಗೆ ನಿಧಿ ಮತ್ತು ಚಿನ್ನದ ಆಸೆ ತೋರಿಸಿ ₹6 ಲಕ್ಷ ಹಣ ಪಡೆದುಕೊಂಡಿದ್ದ. ಅದನ್ನು ವಾಪಸ್ ಕೇಳಿದ್ದಕ್ಕೆ ಕೊಲೆ ಮಾಡಲಾಗಿದೆ. ಇದರಿಂದ, ಮೃತರ ಕುಟುಂಬಗಳಿಗೆ ದಿಕ್ಕು ತೋಚದಂತಾಗಿದೆ. ಸರ್ಕಾರ ಕೂಡಲೇ ಈ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು’ ಎಂದು ಒತ್ತಾಯಿಸಿದರು.

‘ಈ ಕೊಲೆ ಸಂಚು ರೂಪಿಸಿದ್ದ ನಗರದ ಸಿ ಪಾತರಾಜು ಹಾಗೂ ಸತ್ಯಮಂಗಲದ ಗಂಗರಾಜು (35) ಎಂಬ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಉಳಿದ, ಆರೋಪಿಗಳಾದ ತುಮಕೂರಿನ ಪುಟ್ಟಸ್ವಾಮಯ್ಯನ ಪಾಳ್ಯದ ಮಧುಸೂಧನ್ (24), ಸಂತೆಪೇಟೆಯ ನವೀನ್ (24), ವೆಂಕಟೇಶಪುರದ ಕೃಷ್ಣ (22), ಹೊಂಬಯ್ಯನಪಾಳ್ಯದ ಗಣೇಶ (19), ನಾಗಣ್ಣನಪಾಳ್ಯದ ಕಿರಣ್ (23), ಕಾಳಿದಾಸ ನಗರದ ಸೈಮನ್ (18) ಅವರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿ ಬಂಧಿಸಬೇಕು’ ಎಂದು ಆಗ್ರಹಿಸಿದರು.

‘ತುಮಕೂರು ಭಾಗದಲ್ಲಿ ಹತ್ತು ವರ್ಷಗಳಿಂದ ನಿಧಿ ಹುಡುಕಿ ಕೊಡುವುದಾಗಿ ಹೇಳಿ ಮೋಸ ಮಾಡುವ ಜಾಲವೊಂದು ಸಕ್ರಿಯವಾಗಿದೆ. ಅಮಾಯಕರನ್ನು ಗುರಿಯಾಗಿಸಿ ಹಣ ದೋಚಿ, ಕೊಲೆ ಮಾಡುವ ಪ್ರಕರಣಗಳು ನಡೆಯುತ್ತಿವೆ. ಈ ಜಾಲದ ಹಿಂದಿರುವ ಎಲ್ಲ ವ್ಯಕ್ತಿಗಳನ್ನು ಬಂಧಿಸಬೇಕು. ಜೊತೆಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು’ ಎಂದು ಹೇಳಿದರು.

ಕೌನ್ಸಿಲ್‌ನ ಪ್ರಧಾನ ಕಾರ್ಯದರ್ಶಿ ಜುನೈದ್, ಸಲೀಂ ಸಿ.ಎಂ., ಸಮದ್ ಮದ್ದಡ್ಕ, ಬಶೀರ್ ಪುಣಚ, ಉಬೈದುಲ್ಲಾ, ಶಬ್ಬೀರ್ ಉಜಿರೆ ಪಾಲ್ಗೊಂಡಿದ್ದರು.

ವಿವಿಧೆಡೆ ನೀರಿನ ಅದಾಲತ್ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಗೆ ಸಂಬಂಧಿ ಸಿದ ಸಮಸ್ಯೆಗಳನ್ನು ಪರಿಹರಿಸಲು ಮಾರ್ಚ್ 28ರಂದು ನಗರದ ವಿವಿಧ ಪ್ರದೇಶಗಳಲ್ಲಿ ನೀರಿನ ಅದಾಲತ್ ಆಯೋಜಿಸಲಾಗಿದೆ.

ನೀರಿನ ಬಿಲ್, ನೀರು– ಒಳಚರಂಡಿ ಸಂಪರ್ಕ, ಗೃಹ ಬಳಕೆಯಿಂದ ಗೃಹೇತರ ಬಳಕೆಗೆ ಪರಿವರ್ತನೆ ಸೇರಿದಂತೆ ವಿವಿಧ ಕುಂದುಕೊರತೆಗಳನ್ನು ಪರಿಹರಿಸಲು ಉಪ ವಿಭಾಗಗಳಲ್ಲಿ ಗುರುವಾರ ಬೆಳಿಗ್ಗೆ 9.30ರಿಂದ 11ರವರೆಗೆ ಅದಾಲತ್ ನಡೆಯಲಿದೆ ಎಂದು ಜಲಮಂಡಳಿ ಪ್ರಕ ಟಣೆ ತಿಳಿಸಿದೆ.

ಕುಂದುಕೊರತೆಗಳಿಗೆ ಸಂಬಂಧಿಸಿ ದಂತೆ ದಿನದ 24 ಗಂಟೆಯೂ ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಬಹುದು. ವಾಟ್ಸ್ ಆ್ಯಪ್ 87622 28888ಗೂ ಸಂದೇಶದ ಮೂಲಕ ದೂರು ಸಲ್ಲಿಸಬಹುದು.

ಯಾವ ಉಪ ವಿಭಾಗಗಳಲ್ಲಿ ಎಲ್ಲೆಲ್ಲಿ ಅದಾಲತ್?

ಆಗ್ನೇಯ-3: ಸೆಂಟ್ರಲ್ ಜೈಲು ರಸ್ತೆ, ಕೂಡ್ಲು ಜಿಎಲ್‌ಆರ್ ಆವರಣ. ಸೇವಾ ಠಾಣೆಗಳು – ಅರಳೂರು, ದೊಡ್ಡ ಕಣ್ಣನಹಳ್ಳಿ, ಕಸವನಹಳ್ಳಿ.

ಆಗ್ನೇಯ–6: 9ನೇ ಮುಖ್ಯರಸ್ತೆ, ಬಿಟಿಎಂ 1ನೇ ಹಂತ. ಸೇವಾ ಠಾಣೆಗಳು– ಬಿಟಿಎಂ ಲೇಔಟ್ 1, 2, 3 ಹಂತ.

ಪಶ್ಚಿಮ–1: ಡಾ.ಎಂ.ಸಿ. ಮೋದಿ ರಸ್ತೆ, ರಾಜಾಜಿನಗರ. ಸೇವಾ ಠಾಣೆ ಗಳು– ವೆಸ್ಟ್ ಆಫ್ ಕಾರ್ಡ್ ರಸ್ತೆ, ಕಾಮಾಕ್ಷಿಪಾಳ್ಯ, ಕಮಲಾನಗರ, ಮಹಾ ಲಕ್ಷ್ಮಿ ಲೇಔಟ್, ಅಗ್ರಹಾರ ದಾಸರಹಳ್ಳಿ.

ವಾಯವ್ಯ–5: 1ನೇ ಮಹಡಿ, 7ನೇ ಮುಖ್ಯರಸ್ತೆ, ಎಂಇಐ ಲೇಔಟ್, ಹೆಸರಘಟಟ ರಸ್ತೆ. ಸೇವಾ ಠಾಣೆಗಳು– ಶೆಟ್ಟಿಹಳ್ಳಿ, ಅಬ್ಬಿಗೆರೆ, ಚಿಕ್ಕಸಂದ್ರ, ಸಿಡೇದಹಳ್ಳಿ, ದೊಡ್ಡಬಿದರಕಲ್ಲು.

ಉತ್ತರ–2: 1ನೇ ಮಹಡಿ, ಪಿನಾಕಿನಿಭವನ, ದೊಡ್ಡಬಳ್ಳಾಪುರ ರಸ್ತೆ, ಮೇಜರ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ. ಸೇವಾ ಠಾಣೆಗಳು– ಜಿಕೆವಿಕೆ ಮಾನ್ಯತಾ ಟೆಕ್ ಪಾರ್ಕ್.

ದಕ್ಷಿಣ–1: 21ನೇ ಮುಖ್ಯರಸ್ತೆ, 11ನೇ ಬ್ಲಾಕ್, ಅಂಜನಾಪುರ. ಸೇವಾ ಠಾಣೆಗಳು– ಅಂಜನಾಪುರ, ಬ್ಯಾಂಕ್ ಆಫೀರರ್ಸ್ ಲೇಔಟ್, ಗೊಟ್ಟಿಗೆರೆ.

ನೈರುತ್ಯ–3: ನಂ.3, ಎಂಎನ್‌ಕೆ ಪಾರ್ಕ್, ಬಸವನಗುಡಿ. ಸೇವಾ ಠಾಣೆಗಳು: ಎಂಎನ್‌ಕೆ ಪಾರ್ಕ್, ಬಿಟಿಆರ್, ಮೌಂಟ್‌ಜಾಯ್, ನಾಗೇಂದ್ರ ಬ್ಲಾಕ್, ಗಿರಿನಗರ.

ನೈರುತ್ಯ–6: 4ನೇ ಬ್ಲಾಕ್, ಬಿಎಸ್‌ಕೆ 6ನೇ ಹಂತ, ಪವನಪುರ, ರಾಘವೇಂದ್ರ ಸ್ವಾಮಿ ದೇವಸ್ಥಾನದ ಮುಂಭಾಗ, ಲಿಂಗಧೀರನಹಳ್ಳಿ. ಸೇವಾ ಠಾಣೆಗಳು– ಲಿಂಗಧೀರನಹಳ್ಳಿ, ಹೆಮ್ಮಿಗೆಪುರ, ಬನಶಂಕರಿ 6ನೇ ಹಂತ.

ಪೂರ್ವ–2: 1ನೇ ಬಿ ಅಡ್ಡರಸ್ತೆ, ಪೂರ್ವ ಎನ್‌ಜಿಇಎಫ್ ಬಡಾವಣೆ, ಕಸ್ತೂರಿನಗರ. ಸೇವಾ ಠಾಣೆಗಳು– ಕೆ.ಆರ್.ಪುರ, ಬಸವನಪುರ, ದೇವಸಂದ್ರ, ರಾಮಮೂರ್ತಿನಗರ, ವಿಜಿನಾಪುರ, ದೂರವಾಣಿನಗರ.

ನಗರದಲ್ಲಿ ಇಂದು

ರಾಷ್ಟ್ರೀಯ ವಿಚಾರಸಂಕಿರಣ, ಡಿ.ಕೆ. ಚಿತ್ತಯ್ಯ ಪೂಜಾರ್ ಅವರ ‘ಡಿ. ದೇವರಾಜ ಅರಸು–ಯುವ ಸ್ಪಂದನೆ’ ಪುಸ್ತಕ ಬಿಡುಗಡೆ: ಎಸ್. ಜಿ. ಸಿದ್ಧರಾಮಯ್ಯ, ಉದ್ಘಾಟನೆ: ಬಿ.ಕೆ. ರವಿ, ಅಧ್ಯಕ್ಷತೆ: ಎಸ್.ಎಂ. ಜಯಕರ, ಅತಿಥಿಗಳು: ನೆಲ್ಲಿಕುಂಟೆ ವೆಂಕಟೇಶಯ್ಯ, ಶೇಖ್ ಲತೀಫ್, ಆಯೋಜನೆ: ಹಿಂದುಳಿದ ವರ್ಗಗಳ ಕೋಶ, ಬೆಂಗಳೂರು ವಿ.ವಿ, ಸ್ಥಳ: ಪ್ರೊ. ವೆಂಕಟಗಿರಿ ಗೌಡ ಸ್ಮಾರಕ ಸಭಾಂಗಣ, ಬೆಂಗಳೂರು ವಿ.ವಿ ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಸಿದ್ಧರಾಮಯ್ಯ

ರಾಮ ಶರ್ಮಾ ಅವರ ಕಲಾಕೃತಿಗಳ ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11

ಕರ್ನಾಟಕ ರಿಪಬ್ಲಿಕನ್ ಸಂಘಟನೆಯ ಉದ್ಘಾಟನೆ: ಸುಭಾಷ್ ಭರಣಿ, ಅತಿಥಿಗಳು: ಸಿ.ಎಸ್. ದ್ವಾರಕಾನಾಥ್, ಚೇತನ್ ಕುಮಾರ್, ಅಧ್ಯಕ್ಷತೆ: ಬೆಳತೂರು ವೆಂಕಟೇಶ್, ಆಯೋಜನೆ: ಕರ್ನಾಟಕ ರಿಪಬ್ಲಿಕನ್ ಸಂಘಟನೆ, ಸ್ಥಳ: ಗಾಂಧಿಭವನ, ಶಿವಾನಂದ್ ಸರ್ಕಲ್, ಬೆಳಿಗ್ಗೆ 11.30

ಕಣಕಟ್ಟೆ ಕೃಷ್ಣಮೂರ್ತಿರಾವ್ ಸ್ಮಾರಕ ದತ್ತಿ ಸಂಗೀತ ಕಛೇರಿ: ಗಾಯನ: ಶೀಲಾ ಟಿ.ಕೆ., ಕಾರ್ತಿಕ ನರಸಿಂಹ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಸಂಜೆ 5

ವಿಶ್ವ ರಂಗಭೂಮಿ ದಿನಾಚರಣೆ ವಿಶೇಷ: ‘ಅಮರ ರಾಷ್ಟ್ರಪ್ರೇಮಿ ಧಿರೋದಾತ್ತ ಹುತಾತ್ಮ ಭಗತ್‌ಸಿಂಗ್’ ಏಕವ್ಯಕ್ತಿ ನಾಟಕ ಪ್ರದರ್ಶನ: ಯಶ್ವಿನ್ ಶಂಕರ್, ‘ಥಾಮಸ್ ಆಳ್ವ ಎಡಿಸನ್’ ಏಕವ್ಯಕ್ತಿ ನಾಟಕ ಪ್ರದರ್ಶನ: ಆರ್ಯನ್, ರಚನೆ, ನಿರ್ದೇಶನ: ಮೈಸೂರು ರಮಾನಂದ್, ‘ಎದೆಗೆ ಬಿದ್ದ ಅಕ್ಷರ’ ಏಕವ್ಯಕ್ತಿ ನಾಟಕ ಪ್ರದರ್ಶನ: ನಿರ್ದೇಶನ ಮತ್ತು ಪ್ರಸ್ತುತಿ: ರಂಜಾನ್‌ಸಾಬ್ ಉಳ್ಳಾಗಡ್ಡಿ, ಆಯೋಜನೆ: ಗೆಜ್ಜೆಹೆಜ್ಜೆ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಮಧ್ಯಾಹ್ನ 3ರಿಂದ

‘ವಿಜಯಾ ಪಾರಿತೋಷಕ ಬೀದಿ ನಾಟಕ ಸ್ಪರ್ಧಾತ್ಮಕ ಉತ್ಸವ’: ಉದ್ಘಾಟನೆ: ವಿಜಯಾ, ಅತಿಥಿಗಳು: ಗೌರಿ ದತ್ತು, ಶಶಿಧರ್ ಭಾರೀಘಾಟ್, ಆರ್. ಪ್ರಕಾಶ್ ಅರಸ್, ಪ್ರಶಸ್ತಿ ವಿತರಣೆ: ಬಿ. ಸುರೇಶ, ಪ್ರಮೋದ್ ಶೆಟ್ಟಿ, ಉಮಾಶಂಕರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಭಾರತ ಯಾತ್ರಾ ಕೇಂದ್ರ–ರಂಗಸೌರಭ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4

ಸುರೇಶ್ ಅರಕಲಗೂಡು 50ರ ಸಂಭ್ರಮ: ಅತಿಥಿಗಳು: ಎನ್.ಆರ್. ಮಂಜುನಾಥ್, ಸಂಸ ಸುರೇಶ್, ಆನಂದ ಡಿ. ಕಳಸ, ದೀಪಕ್ ಆರ್. ಸಾಗರ್, ಆಯೋಜನೆ: ಕಲಾಸಾಗರ, ಸ್ಥಳ: ಡಾ.ಪುನೀತ್ ರಾಜ್ ಕುಮಾರ್ ಸಭಾಂಗಣ, ಶಾಂತಿನಗರ, ಸಂಜೆ 5

ಉದ್ಘಾಟನೆ: ಉಮಾಶ್ರೀ, ಅಧ್ಯಕ್ಷತೆ: ಉಮೇಶ್ ಬಣಕಾರ್, ಅತಿಥಿ: ಕೆ.ವಿ. ನಾಗರಾಜ್ ಮೂರ್ತಿ, ‘ರಂಗ ಭೂಮಿಯಿಂದ ಸಿನಿಮಾದೆಡೆಗೆ’ ವಿಚಾರ ಮಂಡನೆ: ಎಂ.ಎನ್. ಲಕ್ಷ್ಮೀದೇವಿ, ಹಂಸಲೇಖ, ಉಮೇಶ, ಸುಂದರರಾಜ್, ಶ್ರೀನಿವಾಸಮೂರ್ತಿ, ದೊಡ್ಡಣ್ಣ, ರಮೇಶ್ ಭಟ್, ಸುಂದರಶ್ರೀ, ಶ್ರೀನಿವಾಸ್ ಜಿ. ಕಪ್ಪಣ್ಣ, ಟಿ.ಎಸ್. ನಾಗಾಭರಣ, ಬಿ.ವಿ. ರಾಜಾರಾಂ, ಬಿ. ಸುರೇಶ್, ಅಧ್ಯಕ್ಷತೆ: ಪದ್ಮಿನಿ ನಂದ, ಎಂ.ಎನ್. ಸುರೇಶ್, ಆಯೋಜನೆ: ಕರ್ನಾಟಕ ಚಲನಚಿತ್ರ ಪೋಷಕ ಕಲಾವಿದರ ಸಂಘ, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6



ಟಿ.ಎಸ್. ನಾಗಾಭರಣ

ಅಧ್ಯಕ್ಷತೆ: ಗುಂಡಣ್ಣ ಚಿಕ್ಕಮಗಳೂರು, ಅತಿಥಿಗಳು: ಎಂ. ಪ್ರಕಾಶಮೂರ್ತಿ, ಎನ್.ಆರ್. ಹೆಗಡೆ, ಆರ್.ಕೆ. ಹೆಗಡೆ, ಶ್ರೀನಿವಾಸ್ ಜಿ. ಕಪ್ಪಣ್ಣ, ಅಭಿನಂದಿತರು: ಬೇಲೂರು ರಘುನಂದನ್, ‘ಕಣಿವೆಯ ಹಾಡು’ ನಾಟಕ ಪ್ರದರ್ಶನ: ರಚನೆ: ಅತೋಲ್ ಫ್ಯೂಗಾರ್ಡ್, ಕನ್ನಡಕ್ಕೆ: ಮೀರಾ ಮೂರ್ತಿ, ನಿರ್ದೇಶನ: ಶ್ರೀಪಾದ್ ಭಟ್, ಆಯೋಜನೆ: ರಂಗಚಂದಿರ ಟ್ರಸ್ಟ್, ಸ್ಥಳ: ಸಿ. ಅಶ್ವತ್ಥ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 6

ಶ್ರೀನಿವಾಸ್ ಜಿ. ಕಪ್ಪಣ್ಣ

ಅತಿಥಿಗಳು: ಆರ್.ಪಿ. ಮೋಹನ್, ನರೇಂದ್ರ ಬಾಬು, ಅಧ್ಯಕ್ಷತೆ: ನರಸಿಂಹ ನಾಯ್ಕ, ರಂಗಗೌರವ: ಆರ್. ಏಸುಪಾದಂ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

‘ನವರಾತ್ರಿಯ ಕೊನೆದಿನ’ ನಾಟಕ ಪ್ರದರ್ಶನ: ನಿರ್ದೇಶನ: ರಾಜ್‌ಗುರು ಹೊಸಕೋಟೆ, ಆಯೋಜನೆ: ರಂಗಪಯಣ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಕಾರ್ಮಿಕರ ಸಜೀವ ದಹನ: ವರದಿ ಕೇಳಿದ ಎನ್‌ಜಿಟಿ

ನವದೆಹಲಿ: ಬೆಂಗಳೂರಿನ ಮೈಸೂರು ರಸ್ತೆಯ ರಾಮಸಂದ್ರದಲ್ಲಿರುವ ಮಳಿಗೆಯೊಂದರಲ್ಲಿ ಸುಗಂದ್ರ ದ್ರವ್ಯ ಡಬ್ಬಿ ಜಜ್ಜುವಾಗ ಬೆಂಕಿ ಅವಘಡ ಸಂಭವಿಸಿ ಮೂವರು ಸಜೀವ ದಹನವಾಗಿರುವ ಪ್ರಕರಣದ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿಯಿಂದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಪ್ರಧಾನ ಪೀಠ ವರದಿ ಕೇಳಿದೆ.

ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಎನ್‌ಜಿಟಿ ಅಧ್ಯಕ್ಷ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ಪೀಠ, ‘ವಸತಿ ಪ್ರದೇಶದಲ್ಲಿದ್ದ ಖಾಲಿ ಜಾಗದಲ್ಲಿ ಶೆಡ್ ನಿರ್ಮಿಸಿ ಅಕ್ರಮವಾಗಿ ಮಳಿಗೆ ತೆರೆಯಲಾಗಿತ್ತು. ಕಾರ್ಮಿಕರು ಸುಗಂಧ ದ್ರವ್ಯ ಡಬ್ಬಿ ಜಜ್ಜುವಾಗ ಸ್ಫೋಟ ಸಂಭವಿಸಿದೆ. ಆವರಣದಲ್ಲಿ ದಹಿಸುವ ವಸ್ತುಗಳನ್ನು ದಾಸ್ತಾನು ಮಾಡಲಾಗಿತ್ತು’ ಎಂದು ತಿಳಿಸಿದೆ. ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿರುವ ಪೀಠವು ಪ್ರಕರಣವನ್ನು ದಕ್ಷಿಣ ವಲಯ ಪೀಠಕ್ಕೆ ವರ್ಗಾಯಿಸಿದೆ.

ಲೋಕಸಭಾ ಚುನಾವಣಾ ಪೂರ್ವಭಾವಿ ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ವ್ಯಂಗ್ಯ

‘ಸೋಲಿನ ಭೀತಿ: ಶೋಭಾ ಕ್ಷೇತ್ರ ಬದಲು’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಬೆಂಗಳೂರು ಉತ್ತರ ಲೋಕಸಭಾ ಬಿಜೆಪಿ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ಸೋಲಿನ ಭೀತಿಯಿಂದ ಪ್ರತಿ ಚುನಾವಣೆಯಲ್ಲಿ ಕ್ಷೇತ್ರ ಬದಲಾವಣೆ ಮಾಡುತ್ತಿದ್ದಾರೆ’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ವ್ಯಂಗ್ಯವಾಡಿದರು.

ಕೆ.ಆರ್.ಪುರದಲ್ಲಿ ನಡೆದ ಚುನಾವಣೆ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

‘ಶೋಭಾ ಕರಂದ್ಲಾಜೆ ಅವರು ವಿಧಾನಸಭೆ, ಲೋಕಸಭೆ ಸೇರಿದಂತೆ ಐದು ಬಾರಿ ಕ್ಷೇತ್ರ ಬದಲಾವಣೆ ಮಾಡಿದ್ದಾರೆ. ಒಂದೆಡೆ ನೆಲೆನಿಲ್ಲದೆ ಕ್ಷೇತ್ರ ಬದಲಾವಣೆ ಮಾಡುತ್ತ ಬಂದಿದ್ದಾರೆ. ಒಮ್ಮೆ ಗೆದ್ದ ನಂತರ ಕ್ಷೇತ್ರದ ಕಡೆ ಮುಖ ಮಾಡದೆ, ಜನರಿಗೆ ಕೊಟ್ಟ ಆಶ್ವಾಸನೆ ಈಡೇರಿಸದೆ ದೆಹಲಿ ಮತ್ತು ಬೆಂಗಳೂರಿನಲ್ಲಿ ಕಾಲಹರಣ ಮಾಡಿದ್ದಾರೆ’ ಎಂದು ಆರೋಪಿಸಿದರು.

‘ಚುನಾವಣೆ ಬಂದಾಗ ಕ್ಷೇತ್ರ ನೆನಪಾಗಿ ಮಂಗಳೂರು ಕ್ಷೇತ್ರದಲ್ಲಿ ಓಡಾಡಲು ಆರಂಭಿಸಿದಾಗ ಅಲ್ಲಿನ ಜನರು ಗೋ ಬ್ಯಾಕ್ ಅಭಿಯಾನ ನಡೆಸಿದ್ದರು. ಮತದಾರರಿಗೆ ಹೆದರಿ ಈಗ ಉತ್ತರ ಲೋಕಸಭಾ ಕ್ಷೇತ್ರಕ್ಕೆ ಬಂದಿದ್ದಾರೆ. ಇವರಿಗೆ ಮತ ನೀಡಿದರೆ ಮತ್ತೆ ಗೋಬ್ಯಾಕ್ ಅಭಿಯಾನ ನಡೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಇಂತಹ ರಾಜಕಾರಣಿಗಳಿಗೆ ಮತ್ತೊಮ್ಮೆ ಅವಕಾಶ ನೀಡಿದರೆ ದೇಶ ಮತ್ತು ರಾಜ್ಯ ಎರಡು ಹಾಳಾಗುತ್ತದೆ’ ಎಂದು ಹೇಳಿದರು.

‘ಶೋಭಾ ಕರಂದ್ಲಾಜೆ ಅಂತರವನ್ನು ಅಧಿಕಾರದಿಂದ ದೂರವಿಡಬೇಕು. ಸುಶಿಕ್ಷಿತ ಪ್ರಜ್ಞಾವಂತ ಸಜ್ಜನ ರಾಜಕಾರಣಿ ಎಂದೇ ಗುರುತಿಸಿಕೊಂಡಿರುವ ಪ್ರೊ.ರಾಜೀವ್ ಗೌಡ ಅವರಿಗೆ ಅವಕಾಶ ಮಾಡಿಕೊಡಬೇಕು. ಕೋಮುಗಲಭೆ, ದ್ವೇಷ ರಾಜಕಾರಣ ಮಾಡುವ ಬಿಜೆಪಿಯಿಂದ ಅಭಿವೃದ್ಧಿ ಅಸಾಧ್ಯ. ರಾಜ್ಯ ದೇಶ ಉದ್ಧಾರಕ್ಕಾಗಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ನೀಡಿ’ ಎಂದು ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಪ್ರೊ.ರಾಜೀವ್ ಗೌಡ ಮಾತನಾಡಿದರು. ಇದೇ ವೇಳೆ ಸಚಿವ ಕೃಷ್ಣ ಬೈರೇಗೌಡ, ಶಾಸಕ ಶರತ್ ಬಚ್ಚೇಗೌಡ ಅವರ ಸಮ್ಮುಖದಲ್ಲಿ ಪಾಲಿಕೆ ಮಾಜಿ ಸದಸ್ಯರಾದ ಬಂಡೆ ರಾಜು, ಕಲ್ಕೆರೆ ಶ್ರೀನಿವಾಸ್, ವೀರಣ್ಣ ಸೇರಿದಂತೆ ನೂರಾರು ಬಿಜೆಪಿ ಮುಖಂಡರು ಕಾಂಗ್ರೆಸ್ ಸೇರ್ಪಡೆಯಾದರು.

ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್, ಮುಖಂಡರಾದ ಡಿ.ಕೆ. ಮೋಹನ್, ನಾರಾಯಣಸ್ವಾಮಿ, ನಂದಕುಮಾರ್, ಡಿ.ಎ.ಗೋಪಾಲ್, ಅಗರ ಪ್ರಕಾಶ್, ರಾಕೇಶ್ ಪಾಲ್ಗೊಂಡಿದ್ದರು.

ಸಚಿವರಾದ ಬೈರತಿ ಸುರೇಶ್, ಕೃಷ್ಣ ಬೈರೇಗೌಡ, ಶಾಸಕ ಶರತ್ ಬಚ್ಚೇಗೌಡ ಅವರ ಸಮ್ಮುಖದಲ್ಲಿ ಪಾಲಿಕೆ ಮಾಜಿ ಸದಸ್ಯರಾದ ಬಂಡೆ ರಾಜು, ಕಲ್ಕೆರೆ ಶ್ರೀನಿವಾಸ್, ವೀರಣ್ಣ ಸೇರಿದಂತೆ ಹಲವು ಬಿಜೆಪಿ ಮುಖಂಡರು ಕಾಂಗ್ರೆಸ್ ಸೇರಿದರು

ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧೆ: ಬರ್ತಲೋಮಿಯೊ

ಬರ್ತಲೋಮಿಯೊ

ಬೆಂಗಳೂರು: ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಬಂಡಾಯದ ಬಿಸಿ ಎದುರಾಗಿದ್ದು, ಈ ಕ್ಷೇತ್ರದಿಂದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಲು ಮುಖಂಡ ಬರ್ತಲೋಮಿಯೊ ಅವರು ನಿರ್ಧರಿಸಿದ್ದಾರೆ.

‘ಕಳೆದ 30 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದು, ನನ್ನನ್ನು ಅಭ್ಯರ್ಥಿಯಾಗಿ ಪರಿಗಣಿಸಬೇಕು ಎಂದು ಸೋನಿಯಾ ಗಾಂಧಿ ಸೇರಿದಂತೆ ಪಕ್ಷದ ಹಲವು ಮುಖಂಡರಿಗೆ ಮನವಿ ಮಾಡಿದ್ದೆ. ಆದರೂ ನನ್ನ ಹೆಸರು ಪರಿಗಣಿಸಿಲ್ಲ. ಆದ್ದರಿಂದ, ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದೇನೆ’ ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

‘ಕ್ರಿಶ್ಚಿಯನ್ ಸಮುದಾಯದವರು ತಾಳ್ಮೆ, ಶಾಂತಿ ಮತ್ತು ನೆಮ್ಮದಿಯಿಂದ ಜೀವನ ನಡೆಸುತ್ತಿದ್ದಾರೆ. ಎಲ್ಲ ಧರ್ಮದವರ ಜೊತೆಯಲ್ಲೂ ಸೌಹಾರ್ದವಾಗಿ ಜೀವನ ಸಾಗಿಸುತ್ತಿದ್ದಾರೆ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಕ್ರೈಸ್ತ ಸಮುದಾಯದವರು ಕಾಂಗ್ರೆಸ್ ಅನ್ನು ಬೆಂಬಲಿಸುತ್ತಾ ಬರುತ್ತಿದ್ದಾರೆ. ಆದರೂ 28 ಲೋಕಸಭಾ ಕ್ಷೇತ್ರಗಳಲ್ಲಿ ಕ್ರೈಸ್ತ ಸಮುದಾಯದ ಒಬ್ಬರಿಗೂ ಟಿಕೆಟ್ ನೀಡಿಲ್ಲ. ಇದು ಸಮುದಾಯಕ್ಕೆ ಬೇಸರ ತರಿಸಿದೆ’ ಎಂದು ಹೇಳಿದರು.

‘ಕ್ರಿಶ್ಚಿಯನ್ ಸಮುದಾಯವನ್ನು ಕಾಂಗ್ರೆಸ್ ಕಡೆಗಣಿಸಿದೆ. ನಾನು ಸ್ಪರ್ಧೆಯ ನಿರ್ಧಾರದಿಂದ ಹಿಂದಕ್ಕೆ ಸರಿಯುವುದಿಲ್ಲ. ನನ್ನ ಈ ಹೋರಾಟಕ್ಕೆ ಎಲ್ಲ ಜಾತಿ, ಧರ್ಮದವರು ಬೆಂಬಲ ಹಾಗೂ ಸಹಕಾರ ನೀಡುವ ವಿಶ್ವಾಸವಿದೆ’ ಎಂದು ಹೇಳಿದರು.

‘ಕೌಟುಂಬಿಕ ಕಾರ್ಯಕ್ರಮಕ್ಕೆ ಯಾವುದೇ ನಿರ್ಬಂಧ ಇಲ್ಲ’

ಪ್ರಜಾವಾಣಿ ವಾರ್ತೆ

ಮನೋಜ್ ಕುಮಾರ್ ಮೀನಾ

ಬೆಂಗಳೂರು: ಮದುವೆ ಸೇರಿದಂತೆ ಯಾವುದೇ ಕೌಟುಂಬಿಕ ಕಾರ್ಯಕ್ರಮಗಳನ್ನು ನಡೆಸಲು ಚುನಾವಣಾ ನೀತಿಸಂಹಿತೆಯಲ್ಲಿ ನಿರ್ಬಂಧವಿಲ್ಲ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಈ ಕುರಿತು ‘ಪ್ರಜಾವಾಣಿ’ ಜತೆ ಮಾತನಾಡಿದ ಅವರು, ‘ಯಾವುದೇ ಕೌಟುಂಬಿಕ ಕಾರ್ಯಕ್ರಮಗಳಿಗೂ ಚುನಾವಣಾ ನೀತಿಸಂಹಿತೆ ಅನ್ವಯವಾಗುವುದಿಲ್ಲ. ಕೌಟುಂಬಿಕ ಕಾರ್ಯಕ್ರಮಗಳನ್ನು ನಡೆಸಲು ಚುನಾವಣಾಧಿಕಾರಿಯಿಂದ ಅನುಮತಿ ಪಡೆಯುವ ಅಗತ್ಯವೂ ಇಲ್ಲ’ ಎಂದರು.

ಕೌಟುಂಬಿಕ ಕಾರ್ಯಕ್ರಮಗಳನ್ನು ನಡೆಸಲು ಚುನಾವಣಾ ಆಯೋಗ ಅಥವಾ ಚುನಾವಣಾಧಿಕಾರಿಯಿಂದ ಅನುಮತಿ ಪಡೆಯಬೇಕು ಎಂಬ ತಪ್ಪು ಕಲ್ಪನೆ ಜನರಲ್ಲಿದೆ. ನಿಯಮಗಳು ಮತ್ತು ಮಾರ್ಗಸೂಚಿಗಳಲ್ಲಿ ಅಂತಹ ನಿರ್ಬಂಧ ಇಲ್ಲ. ಹೀಗಾಗಿ ಕೌಟುಂಬಿಕ ಕಾರ್ಯಕ್ರಮ ನಡೆಸಲು ಅನುಮತಿ ಕೋರಿ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ ಎಂದು ಹೇಳಿದರು.

ನೀತಿಸಂಹಿತೆ ಉಲ್ಲಂಘಿಸಿದರೆ ಕ್ರಮ: ಕೌಟುಂಬಿಕ ಕಾರ್ಯಕ್ರಮಗಳಲ್ಲಿ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಗೆ ಅವಕಾಶ ನೀಡಬಾರದು. ಇಂತಹ ಕಾರ್ಯಕ್ರಮಗಳಲ್ಲಿ ಮತ ಯಾಚನೆ ಮಾಡುವುದು, ಮತದಾರರಿಗೆ ಆಮಿಷ ಒಡ್ಡುವುದು, ನಗದು, ಉಡುಗೊರೆ ವಿತರಣೆ ಕಂಡುಬಂದಲ್ಲಿ ಸ್ಥಳೀಯ ಚುನಾವಣಾಧಿಕಾರಿಗಳು ಕ್ರಮ ಜರುಗಿಸುತ್ತಾರೆ ಎಂದು ಅವರು ಮಾಹಿತಿ ನೀಡಿದರು.

ಮುನಿರತ್ನ ವಸ್ತ್ರಾಪಹರಣ ಪ್ರಕರಣ ಶೀಘ್ರ ತೆರೆಗೆ: ಬಾಲಕೃಷ್ಣ

ಪ್ರಜಾವಾಣಿ ವಾರ್ತೆ

ಎಚ್‌.ಸಿ. ಬಾಲಕೃಷ್ಣ,

ಮಾಗಡಿ: ‘ರಾಜರಾಜೇಶ್ವರಿ ಕ್ಷೇತ್ರದ ಶಾಸಕ ಮುನಿರತ್ನ ಅವರು ಯಾರ‍್ಯಾರ ವಸ್ತ್ರಾಪಹರಣ ಮಾಡಿದ್ದಾರೆ ಎಂಬುದನ್ನು ಮುಂದಿನ ದಿನಗಳಲ್ಲಿ ಹೇಳುವೆ’ ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದ್ದಾರೆ.

ಮಾಗಡಿಯಲ್ಲಿ ಮಂಗಳವಾರ ನಡೆದ ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಅವರನ್ನು ರಾವಣ ಎಂದು ಟೀಕಿಸಿದ ಮುನಿರತ್ನ ಅವರ ವಿರುದ್ಧ ಬಾಲಕೃಷ್ಣ ಅವರು ವಾಗ್ದಾಳಿ ನಡೆಸಿದರು.

‘ಯಾರ ಸೀರೆಗೆ ಮುನಿರತ್ನ ಕೈ ಹಾಕಿ ಎಳೆದ್ರು, ಎಲ್ಲವನ್ನೂ ತೋರಿಸೋಣ. ಗೋವಿಂದ ಅರೆ ಗೋವಿಂದ, ಮುನಿರತ್ನ ನಾಯ್ಡು ಗೋವಿಂದ ಅಂತ ಬರುವ ಹಾಡನ್ನು ಸಹ ಹಾಕುತ್ತೇವೆ. ಆ ಹಾಡಲ್ಲೇ ಎಲ್ಲವೂ ಇದೆ’ ಎಂದು ವ್ಯಂಗ್ಯವಾಡಿದರು.

‘ಸುರೇಶ್ ಅವರನ್ನು ರಾವಣನಿಗೆ ಹೋಲಿಸಿ ಅಪಪ್ರಚಾರ ಮಾತನಾಡುವವರು ಅಭಿವೃದ್ಧಿ ಕುರಿತು ಅವರ ಅಭ್ಯರ್ಥಿಯೊಂದಿಗೆ ಚರ್ಚೆಗೆ ಬರಲಿ. ನಾವು ನಮ್ಮ ಅಭ್ಯರ್ಥಿ ಕರೆ ತರುತ್ತೇವೆ. ಸಿನಿಮಾ ತೆಗೆಯುವರು ಸ್ಟೋರಿ ಬರೆಯುವುದನ್ನು ಬಿಟ್ಟು, ಈಗಲಾದರೂ ಅಭಿವೃದ್ಧಿ ವಿಚಾರ ಮಾತನಾಡಲಿ’ ಎಂದು ಮುನಿರತ್ನ ಅವರಿಗೆ ತಿರುಗೇಟು ನೀಡಿದರು.

ಮಂಡ್ಯ ಲೋಕಸಭಾ ಕ್ಷೇತ್ರ: ಬಿಜೆಪಿ ನಾಯಕರ ಅಸಮಾಧಾನ

‘ವರಿಷ್ಠರ ಜತೆಗಿನ ಮಾತುಕತೆ ಮಾಹಿತಿ ನೀಡಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಲೋಕಸಭಾ ಕ್ಷೇತ್ರದ ಟಿಕೆಟ್ ಬಗ್ಗೆ ಸಂಸದೆ ಸುಮಲತಾ ಅಂಬರೀಷ್ ಅವರು ಪಕ್ಷದ ವರಿಷ್ಠರ ಭೇಟಿಯ ಬಳಿಕ ತಮಗೆ ಮಾಹಿತಿಯನ್ನೇ ನೀಡಿಲ್ಲ ಎಂದು ಮಂಡ್ಯ ಜಿಲ್ಲೆಯ ಬಿಜೆಪಿ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಮಂಗಳವಾರ ನಡೆಸಿದ ಮಂಡ್ಯ ಜಿಲ್ಲಾ ಬಿಜೆಪಿ ನಾಯಕರ ಸಭೆಯಲ್ಲಿ ಈ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ ಎಂದು ಮೂಲಗಳು ಹೇಳಿವೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮಾಜಿ ಸಚಿವ ಕೆ.ಸಿ. ನಾರಾಯಣಗೌಡ ‘ದೆಹಲಿಗೆ ಹೋಗಿ ಬಂದ ಬಳಿಕ ಅಲ್ಲಿ ಏನೆಲ್ಲ ಮಾತುಕತೆ ಆಗಿದೆ ಎಂಬ ಮಾಹಿತಿ ನೀಡಿಲ್ಲ. ಅವರು ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದರೆ ನಾನೇ ಟಿಕೆಟ್‌ಗೆ ಪ್ರಯತ್ನಿಸುತ್ತಿದ್ದೆ. ಅವರಿಗೇ ಟಿಕೆಟ್ ನೀಡಬೇಕು ಎಂದು ನಾವೆಲ್ಲ ಒಕ್ಕೊರಲಿನಿಂದ ಹೇಳಿದ್ದೆವು. ಬಿಜೆಪಿ ಸೇರುವಂತೆಯೂ ಅವರಿಗೆ ಮನವಿ ಮಾಡಿದ್ದೆವು’ ಎಂದು ತಿಳಿಸಿದರು.

ವಿಜಯೇಂದ್ರ ಮಾತನಾಡಿ, ‘ರಾಜ್ಯದ 28 ಕ್ಷೇತ್ರಗಳನ್ನೂ ಬಿಜೆಪಿ–ಜೆಡಿಎಸ್ ಒಗ್ಗಟ್ಟಿನಿಂದ ಗೆಲ್ಲಬೇಕಾಗಿದೆ. ಈ ಕಾರಣಕ್ಕೆ ಮೈತ್ರಿ ಆಗಿದೆ. ಮಂಡ್ಯದಲ್ಲಿ ಮೈತ್ರಿ ಅಭ್ಯರ್ಥಿ ಗೆಲ್ಲಬೇಕು. ಮೋದಿ ಅವರ ಕೈ ಬಲಪಡಿಸಬೇಕು. ನಾರಾಯಣಗೌಡ ಸೇರಿ ಎಲ್ಲರೂ ಒಟ್ಟಾಗಿ ಚುನಾವಣೆ ಎದುರಿಸಲು ನಿರ್ಧರಿಸಿದ್ದೇವೆ’ ಎಂದು ಹೇಳಿದರು.

‘ಮಂಡ್ಯ ಸಂಸದೆ ಸುಮಲತಾ ಅವರ ಬಗ್ಗೆ ಬಿಜೆಪಿ ವರಿಷ್ಠರಿಗೆ ಅಪಾರ ಗೌರವವಿದೆ. ಮಂಡ್ಯ ಮತ್ತು ಮೈಸೂರು ಪ್ರವಾಸದ ನಂತರ ಸುಮಲತಾ ಅವರನ್ನು ಭೇಟಿಯಾಗುತ್ತೇನೆ. ಸುಮಲತಾ ಅವರನ್ನು ಪಕ್ಷದಲ್ಲಿ ಗೌರವದಿಂದ ನಡೆಸಿಕೊಳ್ಳುತ್ತೇವೆ. ಕೆ.ಸಿ.ನಾರಾಯಣಗೌಡ ಅವರು ಪಕ್ಷ ಬಿಡುವುದಿಲ್ಲ. ಬಿಜೆಪಿಯಲ್ಲೇ ಮುಂದುವರಿಯುತ್ತಾರೆ ಎಂದು ಹೇಳಿದರು.

ಸಭೆಯಲ್ಲಿ ಮಂಡ್ಯ ಬಿಜೆಪಿ ನಾಯಕರಾದ ಅಶೋಕ್ ಜಯರಾಂ, ಇಂಡವಾಳು ಸಚ್ಚಿದಾನಂದ, ಮುನಿರಾಜು, ಸ್ವಾಮಿ, ಇಂದ್ರೇಶ್ ಕುಮಾರ್, ಎಲ್.ಆರ್.ಶಿವರಾಮೇಗೌಡ, ಚೇತನ್‌ಗೌಡ ಇದ್ದರು.

ಅಶ್ವತ್ಥ ನಾರಾಯಣ, ಕೆ.ಸಿ. ನಾರಾಯಣ ಗೌಡ ಮನೆಗೆ ಎಚ್‌ಡಿಕೆ

ಬೆಂಗಳೂರು: ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸುವ ನಿರ್ಧಾರ ಕೈಗೊಂಡ ಬೆನ್ನಲ್ಲೇ ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಮತ್ತು ಕೆ.ಆರ್. ಪೇಟೆಯ ಮಾಜಿ ಶಾಸಕ ಕೆ.ಸಿ. ನಾರಾಯಣ ಗೌಡ ಮನೆಗಳಿಗೆ ಎಚ್.ಡಿ.ಕುಮಾರಸ್ವಾಮಿ ಮಂಗಳವಾರ ರಾತ್ರಿ ಭೇಟಿ ನೀಡಿ ಚರ್ಚಿಸಿದರು.

ಮಲ್ಲೇಶ್ವರದ ಅಶ್ವತ್ಥ ನಾರಾಯಣ ನಿವಾಸಕ್ಕೆ ಬಂದ ಕುಮಾರಸ್ವಾಮಿ, ಅಲ್ಲಿಯೇ ಊಟ ಮಾಡಿದರು. ದಾಸರಹಳ್ಳಿ ಶಾಸಕ ಎಸ್. ಮುನಿರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು. ಚುನಾವಣಾ ತಯಾರಿ ಕುರಿತು ಚರ್ಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅಶ್ವತ್ಥ ನಾರಾಯಣ ಅವರ ಮನೆಯಿಂದ ಡಾಲರ್ಸ್ ಕಾಲೋನಿಯಲ್ಲಿರುವ ನಾರಾಯಣ ಗೌಡರ ಮನೆಗೆ ಹೋದ ಕುಮಾರಸ್ವಾಮಿ, ಅಲ್ಲಿಯೂ ಕೆಲ ಕಾಲ ಚರ್ಚಿಸಿದರು. ನಾರಾಯಣ ಗೌಡ ಬಿಜೆಪಿಯಿಂದ ಕಾಂಗ್ರೆಸ್‌ನತ್ತ ಹೆಜ್ಜೆ ಇರಿಸಿದ್ದರು. ಬಿಜೆಪಿಯಲ್ಲೇ ಉಳಿದುಕೊಂಡು ಚುನಾವಣೆಯಲ್ಲಿ ಬೆಂಬಲ ನೀಡುವಂತೆ ಕುಮಾರಸ್ವಾಮಿ ಮನವಿ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

‘ರೆಡ್ಡಿ ಸೇರ್ಪಡೆ ರಣತಂತ್ರದ ಭಾಗ’

ಬೆಂಗಳೂರು: ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಶಾಸಕ ಜನಾರ್ದನ ರೆಡ್ಡಿ ಅವರನ್ನು ಚುನಾವಣಾ ರಣತಂತ್ರದ ಭಾಗವಾಗಿಯೇ ಪಕ್ಷಕ್ಕೆ ಸೇರಿಸಿಕೊಳ್ಳಲಾಗಿದೆ ಎಂದು ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಸಮರ್ಥಿಸಿಕೊಂಡರು.

ರೆಡ್ಡಿ ವಿರುದ್ಧ ಇರುವ ಪ್ರಕರಣಗಳನ್ನು ಅವರೇ ಎದುರಿಸಲಿದ್ದಾರೆ. ಇವರ ಸೇರ್ಪಡೆ ಚುನಾವಣಾ ಯುದ್ಧ ನೀತಿಯ ಭಾಗವಾಗಿದೆ. ರಾಜ್ಯಸಭಾ ಚುನಾವಣೆ ವೇಳೆ ಸಿ.ಎಂ ಸಿದ್ದರಾಮಯ್ಯ ಅವರು ರೆಡ್ಡಿಯವರನ್ನು ಭೇಟಿ ಆಗಿಲ್ಲವೇ? ಅವರ ಪಕ್ಷದ ಅಭ್ಯರ್ಥಿ ಪರವಾಗಿ ಮತ ಹಾಕಿಸಿಕೊಂಡಿಲ್ಲವೇ ಎಂರು.

ಒಂಬತ್ತು ಸಾವಿರ ಲೀಟರ್ ಮದ್ಯ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮಾದರಿ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಸಾಗಣೆ ಮಾಡಲಾಗುತ್ತಿದ್ದ, ₹27.51 ಲಕ್ಷ ಮೌಲ್ಯದ 9,263 ಲೀಟರ್ ಮದ್ಯವನ್ನು ಚೆಕ್‌ಪೋಸ್ಟ್ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ.

ಏಳು ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ಅಬಕಾರಿ ಇಲಾಖೆಯವರು 17 ಪ್ರಕರಣಗಳನ್ನು ದಾಖಲಿಸಿದ್ದಾರೆ. ಅಲ್ಲದೆ, ದಾಖಲೆ ಇಲ್ಲದ ₹1.9 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ ಎಂದು ಬಿಬಿಎಂಪಿ ಚುನಾವಣೆ ವಿಭಾಗದ ವಿಶೇಷ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚುನಾವಣೆಗೆ ಸಂಬಂಧಿಸಿದಂತೆ, ‘ಸಿ–ವಿಜಿಲ್’– ಮೊಬೈಲ್ ಆ್ಯಪ್ ಮೂಲಕ ಮಾರ್ಚ್ 26ರವರೆಗೆ 805 ದೂರುಗಳನ್ನು ಸ್ವೀಕರಿಸಲಾಗಿದ್ದು, ಇದರಲ್ಲಿ ನಾಲ್ಕು ದೂರುಗಳನ್ನು ಹೊರತುಪಡಿಸಿ ಉಳಿದೆಲ್ಲ ದೂರುಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದಿದ್ದಾರೆ.

₹4.21 ಕೋಟಿ ಮೌಲ್ಯದ ಚಿನ್ನ, ವಜ್ರದ ಆಭರಣ ವಶ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹4.21 ಕೋಟಿ ಮೌಲ್ಯದ ಚಿನ್ನ ಮತ್ತು ವಜ್ರದ ಆಭರಣಗಳನ್ನು ತರೀಕೆರೆ ತಾಲ್ಲೂಕಿನ ಎಂ.ಸಿ.ಹಳ್ಳಿ ಚೆಕ್ ಪೋಸ್ಟ್ ನಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಮಹೇಂದ್ರ ಕ್ಯಾಂಪರ್ ವಾಹನದಲ್ಲಿ 6 ಕೆ.ಜಿ.586 ಗ್ರಾಂ ಚಿನ್ನದ ಆಭರಣ, 1 ಕೆಜಿ 870 ಗ್ರಾಂ ಬೆಳ್ಳಿ ಮತ್ತು 1 ಕೆಜಿ 710 ಗ್ರಾಂ ವಜ್ರದ ಆಭರಣ ವಶಕ್ಕೆ ಪಡೆದಿದ್ದಾರೆ. ಬಿವಿಎಲ್ ಲಾಜಿಸ್ಟಿಕ್‌ಗೆ ಸೇರಿದ ಈ ವಾಹನ ಶಿವಮೊಗ್ಗದಿಂದ ಚಿಕ್ಕಮಗಳೂರಿಗೆ ಬರುತ್ತಿತ್ತು. ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಯಾರಿಗೇ ಟಿಕೆಟ್ ಕೊಟ್ಟರೂ ಗೆಲ್ಲಿಸುತ್ತೇವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋಲಾರ ಲೋಕಸಭಾ ಕ್ಷೇತ್ರದ ಟಿಕೆಟ್‌ನ್ನು ಯಾರಿಗೇ ಕೊಟ್ಟರೂ ಗೆಲ್ಲಿಸಿಕೊಂಡು ಬರುವುದಾಗಿ ಹೈಕಮಾಂಡ್‌ಗೆ ಭರವಸೆ ನೀಡಿದ್ದೇವೆ. ಅದಕ್ಕೆ ಬದ್ಧರಾಗಿದ್ದೇವೆ’ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರು ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಏಳು ಬಾರಿ ನಾನು ಗೆಲುವು ಸಾಧಿಸಿದ್ದೆ. ಅಲ್ಲಿ ಈ ಬಾರಿ ಬಿ.ಎಸ್. ಸುರೇಶ್ ಜಿಲ್ಲಾ ಉಸ್ತುವಾರಿ ಸಚಿವ. ಕಾಂಗ್ರೆಸ್‌ನ ಭದ್ರಕೋಟೆಯಾಗಿರುವ ಚಿಕ್ಕಬಳ್ಳಾಪುರದಲ್ಲಿ ಡಾ.ಎಂ.ಸಿ. ಸುಧಾಕರ್‌ಗೆ ಉಸ್ತುವಾರಿ ಇದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ನಾನು ಉಸ್ತುವಾರಿ ಸಚಿವ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಈ ಎರಡೂ ಕ್ಷೇತ್ರಗಳಲ್ಲಿ ಯಾರನ್ನೇ ಅಭ್ಯರ್ಥಿ ಮಾಡಿದರೂ ಗೆಲ್ಲಿಸುವ ವಾಗ್ದಾನವನ್ನು ವರಿಷ್ಠರಿಗೆ ನೀಡಿದ್ದೇವೆ’ ಎಂದರು.

‘ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವುದು ಸಚಿವರಾದ ನಮ್ಮ ಜವಾಬ್ದಾರಿಯಾಗಿದೆ. ಇತ್ತೀಚೆಗೆ ನಡೆದ ಪಕ್ಷದ ವರಿಷ್ಠರ ಸಭೆಯಲ್ಲಿ ನಮ್ಮ ಅಭಿಪ್ರಾಯ ತಿಳಿಸಿದ್ದೇವೆ. ಅಭ್ಯರ್ಥಿ ಆಯ್ಕೆ ಹೊಣೆಯನ್ನು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗೆ ಬಿಡಲಾಗಿದೆ. ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿದ್ದೇವೆ’ ಎಂದರು.

‘ರಾಜ್ಯದಾದ್ಯಂತ ಪ್ರವಾಸ ಮಾಡಿ ಕಾಂಗ್ರೆಸ್ ಅಭ್ಯರ್ಥಿ ಪರ ಮತಯಾಚನೆ ಮಾಡುತ್ತೇವೆ. ಚಿಕ್ಕಬಳ್ಳಾಪುರ ಮತ್ತು ಕೋಲಾರ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಲು ಆದ್ಯತೆಯಲ್ಲಿ ಶ್ರಮಿಸುತ್ತೇನೆ. ರಾಜ್ಯದಲ್ಲಿರುವ ಐದು ಮೀಸಲು ಲೋಕಸಭಾ ಕ್ಷೇತ್ರಗಳ ಪೈಕಿ ತಲಾ 2 ಕ್ಷೇತ್ರಗಳನ್ನು ಬಲಗೈ ಮತ್ತು ಎಡಗೈ ಸಮುದಾಯಕ್ಕೆ ಹಂಚಿ, ಒಂದು ಸ್ಥಾನವನ್ನು ಬೋವಿ ಅಥವಾ ಲಂಬಾಣಿಗೆ ನೀಡುವುದು ಸಂಪ್ರದಾಯ. ಎರಡು ಕ್ಷೇತ್ರಗಳಲ್ಲಿ ಎಡಗೈ ಸಮುದಾಯಕ್ಕೆ ಅವಕಾಶ ನೀಡುವ ಸಾಧ್ಯತೆಯಿದೆ’ ಎಂದರು.

‘ಧರ್ಮಯುದ್ಧಕ್ಕೆ ಮುನ್ನ ದೇವರ ಆಶೀರ್ವಾದ’

ಪ್ರಜಾವಾಣಿ ವಾರ್ತೆ

ಮಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಧರ್ಮಸ್ಥಳದ ಮಂಜುನಾಥೇಶ್ವರ ದೇವಸ್ಥಾನ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಹಾಗೂ ಶೃಂಗೇರಿ ಶಾರದಾ ಪೀಠ, ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಮಂಗಳವಾರ ಭೇಟಿ ನೀಡಿ ದೇವರ ದರ್ಶನ ಪಡೆದರು.

ಧರ್ಮಸ್ಥಳದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, ‘ಇಲ್ಲಿನ ದೇವರನ್ನು ‘ಮಾತು ಬಿಡದ ಮಂಜುನಾಥ’ ಎಂದೇ ಬಣ್ಣಿಸುತ್ತಾರೆ. ನಾನು ಪ್ರತಿ ಬಾರಿ ಧರ್ಮ ಯುದ್ಧದ ಸಂದರ್ಭದಲ್ಲಿ ಮಂಜುನಾಥನ ದರ್ಶನ ಪಡೆಯುತ್ತೇನೆ.

ಉಡುಪಿ ಜಿಲ್ಲೆ ಕೊಲ್ಲೂರಿನ ಶ್ರೀ ಮೂಕಾಂಬಿಕಾ ದೇವಸ್ಥಾನಕ್ಕೆ ಮಂಗಳವಾರ ಸಂಜೆ ಭೇಟಿ ನೀಡಿದ್ದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಪೂಜೆ ಸಲ್ಲಿಸಿದರು

ಮಂಜುನಾಥ, ಗಂಗಾಧರ ಅಜ್ಜ ನನ್ನನ್ನು ರಕ್ಷಿಸುತ್ತಾ ಬಂದಿದ್ದಾರೆ. ಈ ಸಲವೂ ಧರ್ಮ ಯುದ್ಧ ಆರಂಭಿಸುವ ಮುನ್ನ ಧರ್ಮಸ್ಥಳದ ಮಂಜುನಾಥ ಹಾಗೂ ಅಣ್ಣಪ್ಪ ಸ್ವಾಮಿಯ ಆಶೀರ್ವಾದ ಪಡೆದಿದ್ದೇನೆ’ ಎಂದರು.

‘ಎಂದೂ ಬಾಡದ ಬೆಟ್ಟದ ಹೂವು ಅಪ್ಪು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋಟ್ಯಂತರ ಕನ್ನಡಿಗರ ಜನಮಾನಸದಲ್ಲಿ ಉಳಿದಿರುವ ‘ಅಪ್ಪು’ ಎಂದೂ ಬಾಡದ ಬೆಟ್ಟದ ಹೂವು’ ಎಂದು ನಟ ಶ್ರೀನಾಥ್ ಹೇಳಿದರು.

ನಗರದಲ್ಲಿ ಸನಾತನಿ ಸಾಹಿತ್ಯ ವೇದಿಕೆ ಮತ್ತು ಶ್ರೀಕೃಷ್ಣ ಕಲಾಸಂಗಮದ ಸಹಯೋಗದಲ್ಲಿ ಆಯೋಜಿಸಿದ್ದ ಲೇಖಕ ವೈ.ಬಿ.ಎಚ್. ಜಯದೇವ್ ಅವರು ನಟ ಪುನಿತ್ ರಾಜ್‌ಕುಮಾರ್ ಕುರಿತು ಬರೆದ ‘ಅಪ್ಪು’ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.

‘ಕನ್ನಡ ಚಿತ್ರರಂಗಕ್ಕೆ ಹೊಸ ಕ್ರಿಯಾಶೀಲತೆ ತಂದು ಕೊಟ್ಟ ಅಪ್ಪು, ತನ್ನ ಅಪ್ರತಿಮ ಸಮಾಜಸೇವೆಯ ಮೂಲಕ ಅಭಿಮಾನಿಗಳಿಗೆ ಇನ್ನೂ ಹತ್ತಿರವಾಗಿ ಬೆಳೆದು ನಿಜವಾಗಿ ದೇವತಾ ಮನುಷ್ಯನೇ ಆದರು’ ಎಂದರು.

ಕೃತಿ ಲೇಖಕ ಜಯದೇವ್ ಮಾತನಾಡಿ, ‘ನಗುಮೊಗದ ಮೂಲಕ ಕನ್ನಡಿಗರ ಮನಗೆದ್ದ ಅಪ್ಪು ತಮ್ಮ ಪ್ರಾಂಜಲ ಸಮಾಜಸೇವೆಯ ಮೂಲಕ ಕನ್ನಡಿಗರ ಮನದಲ್ಲಿ ವಿರಾಜಮಾನರಾಗಿದ್ದಾರೆ. ಆನೆಯನ್ನು ಕನ್ನಡಿಯಲ್ಲಿ ತೋರಿಸುವಂತೆ, ಹಿಮಾಲಯ ಸದೃಶ ವ್ಯಕ್ತಿತ್ವದ ಅಪ್ಪು ಅವರನ್ನು ಈ ಪುಟ್ಟ ಕೃತಿಯ ಮೂಲಕ ಪರಿಚಯಿಸುವ ಪ್ರಯತ್ನ ಮಾಡಿದ್ದೇನೆ’ ಎಂದರು.

ಕಾದಂಬರಿಕಾರ್ತಿ ಮಮತಾ ವಾರನಹಳ್ಳಿ ಮಾತನಾಡಿ, ‘ನಮ್ಮ ವೇದಿಕೆಗಳ ಮೂಲಕ ಸಾಹಿತ್ಯಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅತ್ಯಂತ ವಿನೂತನವಾಗಿ ಆಯೋಜಿಸುವ ಆಲೋಚನೆಯ ಜೊತೆಗೆ ‘ಅಪ್ಪು’ ಪುಸ್ತಕ ಬಿಡುಗಡೆಗೊಳಿಸಿದ ಕೃತಾರ್ಥತೆ ನಮ್ಮದು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಟಿ ಶೈಲಶ್ರೀ ಸುದರ್ಶನ್, ಹಾಸ್ಯ ಕಲಾವಿದ ಬೆಂಗಳೂರು ನಾಗೇಶ್, ಎಸ್. ಕೆ.ಅನಂತ್, ಸಂಗೀತ ನಿರ್ದೇಶಕ ವೆಂಕಟರಾಮಯ್ಯ ಅವರನ್ನು ಸನ್ಮಾನಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಷಿ ಭಾಗವಹಿಸಿದ್ದರು.

ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಅಪ್ಪು’ ಪುಸ್ತಕವನ್ನು ಚಿತ್ರನಟ ಶ್ರೀನಾಥ್ ಬಿಡುಗಡೆ ಮಾಡಿದರು

ನಿಧನ ವಾರ್ತೆ

ಸ್ವಾಮಿ ಸ್ಮರಣಾನಂದ

ಕೋಲ್ಕತ್ತ (ಪಿಟಿಐ): ರಾಮಕೃಷ್ಣ ಮಿಷನ್ ಅಧ್ಯಕ್ಷ ಸ್ವಾಮಿ ಸ್ಮರಣಾನಂದ (95) ಅವರು ಮಂಗಳವಾರ ರಾತ್ರಿ ನಿಧನರಾದರು.

2017ರಲ್ಲಿ ಅವರು ರಾಮಕೃಷ್ಣ ಮಿಷನ್‌ನ 16 ನೇ ಅಧ್ಯಕ್ಷರಾಗಿ ನೇಮಕಗೊಂಡಿದ್ದರು.

ಮೂತ್ರನಾಳದ ಸೋಂಕಿನಿಂದ ಬಳಲುತ್ತಿದ್ದ ಸ್ವಾಮಿ ಸ್ಮರಣಾನಂದ ಅವರನ್ನು ರಾಮಕೃಷ್ಣ ಮಿಷನ್ ಸೇವಾ ಪ್ರತಿಷ್ಠಾನಕ್ಕೆ ಜ. 29ರಂದು ದಾಖಲಿಸಲಾಗಿತ್ತು. ನಂತರ ಅವರಿಗೆ ಉಸಿರಾಟದ ಸಮಸ್ಯೆ ಎದುರಾಗಿತ್ತು. ಅದಕ್ಕಾಗಿ ಅವರನ್ನು ಮಾರ್ಚ್ 3 ರಂದು ವೆಂಟಿಲೇಟರ್‌ನಲ್ಲಿ ಇರಿಸಲಾಗಿತ್ತು ಎಂದು ಪ್ರಕಟಣೆ ತಿಳಿಸಿದೆ.

‘ಮಠಗಳ ಕಾರ್ಯ ಶ್ಲಾಘನೀಯ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಅನ್ನ, ವಸತಿ ಹಾಗೂ ವಿದ್ಯೆಯನ್ನು ಮಠಗಳು ನೀಡುತ್ತಿವೆ. ಸರ್ಕಾರಗಳು ಮಾಡಬೇಕಿರುವ ಕೆಲಸವನ್ನು ಮಠಗಳು ಮಾಡುತ್ತಿವೆ’ ಎಂದು ಶಾಸಕ ಎನ್.ಶ್ರೀನಿವಾಸ್ ಶ್ಲಾಘಿಸಿದರು.

ಶಿವಗಂಗೆ ಮೇಲಣಗವಿ ಮಠದಲ್ಲಿ ಹಮ್ಮಿಕೊಂಡಿದ್ದ ‘ರೇಣುಕಾಚಾರ್ಯ ಜಯಂತಿ, ನೂತನ ವಿದ್ಯಾರ್ಥಿನಿಲಯ ಉದ್ಘಾಟನೆ ಹಾಗೂ ‘ಶಿವಗಂಗಾ ಶ್ರೀ’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಕರಿವೃಷಭ ಶಿವಯೋಗೀಶ್ವರ ಶ್ರೀಗಳು ಭಾಗವಹಿಸಿದ್ದರು.

ನೆಲಮಂಗಲ ತಾಲ್ಲೂಕಿನ ಶಿವಗಂಗೆ ಮೇಲಣಗವಿ ಮಠದಿಂದ ನಡೆದ ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಕೇಂದ್ರ ಸಮಿತಿ ಸದಸ್ಯ ಎನ್‌.ಎಸ್‌.ನಟರಾಜು ಅವರಿಗೆ ‘ಶಿವಗಂಗಾ ಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯಿತು

ಕರಗ: ಪೂರ್ವಭಾವಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರು ಕರಗ’ ಆಚರಣೆಯ ಸಂದರ್ಭದಲ್ಲಿ ಯಾವ ರೀತಿಯಲ್ಲೂ ಲೋಕಸಭಾ ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಸೂಚಿಸಿದರು.

ಏಪ್ರಿಲ್ 15ರಿಂದ 23ರವರೆಗೆ ನಡೆಯುವ ‘ಕರಗ ಮಹೋತ್ಸವ’ ಕುರಿತು ಅಧಿಕಾರಿಗಳೊಂದಿಗೆ ಮಂಗಳವಾರ ಪೂರ್ವಭಾವಿ ಸಭೆ ನಡೆಸಿ, ಸೂಚನೆಗಳನ್ನು ನೀಡಿದರು.

ಕರಗ ಶಕ್ತ್ಯೋತ್ಸವ ಹೊರಡುವ ಮಾರ್ಗದ ರಸ್ತೆಗಳು ಹಾಗೂ ಪಾದಚಾರಿ ಮಾರ್ಗಗಳ ದುರಸ್ತಿ ಕಾರ್ಯ ಕೈಗೊಳ್ಳಬೇಕು. ಉತ್ಸವ ನಡೆಯುವ ಬೀದಿಗಳಲ್ಲಿ ದೀಪಗಳನ್ನು ಅಳವಡಿಸಬೇಕು. ಪಾಲಿಕೆಯ ಆರೋಗ್ಯ ಇಲಾಖೆ ವತಿಯಿಂದ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯ ನಿಯೋಜನೆ ಮಾಡಬೇಕು. ಸ್ವಚ್ಛತಾ ನಿರ್ವಹಣೆಗೆ ಘನತ್ಯಾಜ್ಯ ವಿಭಾಗದ ಅಧಿಕಾರಿ/ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ಹೇಳಿದರು.

ಭಕ್ತಾದಿಗಳು ಹಾಗೂ ಸಾರ್ವಜನಿಕರಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೌಚಾಲಯಗಳ ವ್ಯವಸ್ಥೆ ಮಾಡಬೇಕು. ಜಲಮಂಡಳಿ ವತಿಯಿಂದ ಒಳ ಚರಂಡಿಗಳನ್ನು ಸ್ವಚ್ಛಗೊಳಿಸಿ, ಎಲ್ಲೂ ಕೊಳಚೆ ನೀರು ಹೊರಬಾರದಂತೆ ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಸಂಚಾರ ದಟ್ಟಣೆಯಾಗದಂತೆ ಮಾರ್ಗ ಬದಲಾವಣೆ ಮಾಡಿ, ವಾಹನಗಳ ನಿಲುಗಡೆಗೆ ಸ್ಥಳ ನಿಗದಿಪಡಿಸಬೇಕು ಎಂದು ಅವರು ತಿಳಿಸಿದರು.

ಕರಗ ಮಹೋತ್ಸವ ನಡೆಯುವ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕಾ ಕ್ರಮವಾಗಿ ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಬೆಂಕಿಯಿಂದ ಅವಘಡಗಳು ಸಂಭವಿಸದಂತೆ ಅಗ್ನಿಶಾಮಕ ಸಿಬ್ಬಂದಿ ಮುಂಜಾಗ್ರತೆ ವಹಿಸಬೇಕು. ಭಕ್ತಾದಿಗಳು ಹಾಗೂ ಸಾರ್ವಜನಿಕರ ಭದ್ರತೆಯ ಹಿತದೃಷ್ಟಿಯಿಂದ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು ಎಂದು ಅವರು ಸೂಚಿಸಿದರು.

ಬಿಬಿಎಂಪಿ ವಲಯ ಆಯುಕ್ತರಾದ ಡಾ. ದೀಪಕ್.ಆರ್. ಎಲ್, ವಿನೋತ್ ಪ್ರಿಯಾ, ಸ್ನೇಹಲ್, ಬೆಂಗಳೂರು ನಗರ ಜಿಲ್ಲಾಧಿಕಾರಿ ದಯಾನಂದ್, ಮುಜರಾಯಿ ಇಲಾಖೆಯ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

‘ರವೀಂದ್ರ ಕಲಾಕ್ಷೇತ್ರ-60’ ವಜ್ರ ಮಹೋತ್ಸವ ಸಂಭ್ರಮ ಸಂಪನ್ನ

‘ಸೂಕ್ಷ್ಮ ಸಂವೇದನೆ ಕಳೆದುಕೊಂಡ ನಾಟಕಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚೆಗೆ ನಾಟಕಗಳು ಸೂಕ್ಷ್ಮ ಸಂವೇದನೆ ಕಳೆದುಕೊಳ್ಳುತ್ತಿವೆ. ಹೊಸ ನಾಟಕಗಳೂ ಅಷ್ಟಾಗಿ ಬರುತ್ತಿಲ್ಲ’ ಎಂದು ಕರ್ನಾಟಕ ನಾಟಕ ಅಕಾಡೆಮಿಯ ನಿಯೋಜಿತ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಬೇಸರ ವ್ಯಕ್ತಪಡಿಸಿದರು.

‘ನಾಟಕ ಬೆಂಗ್ಳೂರು’ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ‘ರವೀಂದ್ರ ಕಲಾಕ್ಷೇತ್ರ-60’ ವಜ್ರ ಮಹೋತ್ಸವ ಸಂಭ್ರಮದ ಸಮಾರೋಪ ಸಮಾರಂಭ ಹಾಗೂ ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

‘ಪ್ರತಿ ವರ್ಷ 15 ರಿಂದ 20 ಹೊಸ ನಾಟಕಗಳು ಪ್ರದರ್ಶನ ಕಾಣಬೇಕೆಂಬ ಉದ್ದೇಶದಿಂದ ನಾಟಕ ಬೆಂಗ್ಳೂರು ಆಯೋಜಿಸಲಾಗುತ್ತಿದೆ. ಆದರೆ, ಹಳೆ ನಾಟಕಗಳೇ ಹೆಚ್ಚಾಗಿ ಪ್ರದರ್ಶನ ಕಾಣುತ್ತಿದ್ದವು. ಈ ಬಾರಿ ನಾಟಕ ರಚನಾ ಸ್ಪರ್ಧೆಯಿಂದ ಹೊಸ ನಾಟಕಗಳು ಬರಲು ಸಾಧ್ಯವಾಗಿದೆ’ ಎಂದು ಹೇಳಿದರು.

‘ಬೆರಳಣಿಕೆಯಷ್ಟು ಮಂದಿ ಮಾತ್ರ ನಾಟಕ ಬರೆಯುತ್ತಿದ್ದಾರೆ. ಇದರಿಂದಾಗಿ ಜನರಿಗೆ ಬೇಕಾದಂತಹ ನಾಟಕಗಳು ಕಡಿಮೆ ಆಗಿವೆ. ಈಗ ತುರ್ತು ಪರಿಸ್ಥಿತಿಗಿಂತ ಕ್ರೂರ ಸ್ಥಿತಿಯಲ್ಲಿದ್ದೇವೆ. ಬಹುತ್ವ ಭಾರತ, ಬಹು ಸಂಸ್ಕೃತಿಯ ಭಾರತವು ಏಕತ್ವದ ಕಡೆ ಹೋಗುತ್ತಿದೆ’ ಎಂದು ತಿಳಿಸಿದರು.

ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್, ‘ರವೀಂದ್ರ ಕಲಾಕ್ಷೇತ್ರವು ವ್ಯವಸ್ಥೆಯ ವಿರುದ್ಧದ ಹೋರಾಟಕ್ಕೆ ವೇದಿಕೆಯಾಗಿದೆ. ಶಿವರಾಮ ಕಾರಂತ, ಪಿ.ಲಂಕೇಶ್, ಗಿರೀಶ್ ಕಾರ್ನಾಡ್ ಅವರಂತಹ ದೊಡ್ಡ ನಾಟಕಕಾರನ್ನು ನನಗೆ ಪರಿಚಯಿಸಿದ್ದು ಇದೇ ರವೀಂದ್ರ ಕಲಾಕ್ಷೇತ್ರ. ಅನೇಕರ ಬದುಕನ್ನು ಕಟ್ಟಿಕೊಟ್ಟಿದ್ದು ಮಾತ್ರವಲ್ಲ, ಬದುಕು ಏನು ಎಂಬುದನ್ನು ರವೀಂದ್ರ ಕಲಾಕ್ಷೇತ್ರ ತಿಳಿಸಿಕೊಟ್ಟಿದೆ’ ಎಂದರು.

ರಂಗ ಅಭಿನಂದನೆಗೆ ಭಾಜನರಾಗಿದ್ದ ರಂಗ ನಿರ್ದೇಶಕ ಎಂ.ಎಸ್. ಸತ್ಯು ಅವರು ಅನಾರೋಗ್ಯದ ಕಾರಣ ಗೈರಾಗಿದ್ದರು. ಅವರ ಪರವಾಗಿ ಚಲನಚಿತ್ರ ನಟ ದತ್ತಣ್ಣ ರಂಗ ಅಭಿನಂದನೆ ಸ್ವೀಕರಿಸಿದರು.

ಸ್ಪರ್ಧೆಯಲ್ಲಿ ವಿಜೇತವಾದ 9 ನಾಟಕಗಳಿಗೆ ₹ 60 ಸಾವಿರ ನಗದು ಬಹುಮಾನ ವಿತರಿಸಲಾಯಿತು. ಈ ಬಹುಮಾನವನ್ನು ಕಲಾಗಂಗೋತ್ರಿ ರಂಗತಂಡ ಪ್ರಾಯೋಜಿಸಿದೆ. ಆಯ್ದ ನಾಟಕಗಳನ್ನು ಭಾಗವತರು ಸಾಂಸ್ಕೃತಿಕ ಸಂಘಟನೆ ಪುಸ್ತಕ ರೂಪದಲ್ಲಿ ಪ್ರಕಟಿಸಲಿದೆ. ಸಮಾರಂಭದ ಬಳಿಕ ದಾಕ್ಷಾಯಿಣಿ ಭಟ್ ನಿರ್ದೇಶನದ ‘ಫೋಲಿ ಕಿಟ್ಟಿ’ ನಾಟಕ ಪ್ರದರ್ಶನ ಕಂಡಿತು.

ಸಮಾರಂಭದಲ್ಲಿ ಎಂ.ಎಸ್‌. ಸತ್ಯು ಅವರ ಪರವಾಗಿ ದತ್ತಣ್ಣ ಅವರು ರಂಗ ಅಭಿನಂದನೆ ಸ್ವೀಕರಿಸಿದರು. (ಎಡದಿಂದ) ನಾಟಕಕಾರ ಅಕ್ಷರ, ಟಿ.ಎನ್‌. ಸೀತಾರಾಮ್‌, ಚಿತ್ರ ಕಲಾವಿದ ಎಂ.ಎಸ್‌. ಮೂರ್ತಿ, ರಂಗಕರ್ಮಿ ಬಿ.ವಿ. ರಾಜಾರಾಂ, ಕೆ.ವಿ. ನಾಗರಾಜಮೂರ್ತಿ ಮತ್ತು ಲೇಖಕಿ ಸಂಧ್ಯಾರಾಣಿ ಪಾಲ್ಗೊಂಡಿದ್ದರು

–ಪ್ರಜಾವಾಣಿ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಮರದ ಮೇಲೆ ಕುಳಿತ ಹಕ್ಕಿಗೆ ಕೊಂಬೆ ಮುರಿಯುವ ಭಯವಿರದು. ಏಕೆಂದರೆ ಅದು ನಂಬಿರುವುದು ತನ್ನ ರೆಕ್ಕೆಗಳನ್ನೇ ವಿನಾ ಕೊಂಬೆಯನ್ನಲ್ಲ. ಹಾಗೇ ನಮ್ಮ ಸಾಮರ್ಥ್ಯದ ಮೇಲೆ ನಮಗೆ ಸದಾ ಆತ್ಮವಿಶ್ವಾಸ ಇರಬೇಕು.

–ಶಿವರಾಮ ಕಾರಂತ

ಭೂತಾನ್‌ಗೆ ಪ್ರಧಾನಿ ಭೇಟಿ ಭಾರತದ ಹಿತಾಸಕ್ತಿಗೆ ಬೆಲೆ ಸಿಕ್ಕೀತೆ?

ಹಿಮಾಲಯದ ತಪ್ಪಲಿನ ರಾಷ್ಟ್ರ ಭೂತಾನ್ ದೇಶದ ಅಭಿವೃದ್ಧಿಯಲ್ಲಿ ಈಚಿನ ವರ್ಷಗಳಲ್ಲಿ ಭಾರತವು ಅತ್ಯಂತ ವಿಶ್ವಾಸಾರ್ಹ ಪಾಲುದಾರನಾಗಿದೆ. ಹೀಗಾಗಿ ಈ ದೇಶದ ಪಂಚವಾರ್ಷಿಕ ಯೋಜನೆಗೆ, ದೇಶದ ಆರ್ಥಿಕತೆಯ ಪುನಶ್ಚೇತನಕ್ಕೆ ₹ 10 ಸಾವಿರ ಕೋಟಿ ಒದಗಿಸುವ ಭಾರತದ ನಿರ್ಧಾರವು ಅತ್ಯಂತ ಸಕಾಲಿಕ. ಭೂತಾನ್ ದೇಶವು ಭಾರತದಿಂದ ಬಯಸಿದ ಅತ್ಯಂತ ಮುಖ್ಯವಾದ ಕೊಡುಗೆ ಇದಾಗಿತ್ತು. ಕಳೆದ ವಾರ ಭೂತಾನ್‌ಗೆ ತೆರಳಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಈ ಬೇಡಿಕೆಯನ್ನು ಈಡೇರಿಸುವ ಕೆಲಸ ಮಾಡಿದ್ದಾರೆ. ಭೂತಾನ್ ಪ್ರಧಾನಿ ಶೆರಿಂಗ್ ಟೊಬಗೆ ಅವರು ದೆಹಲಿಗೆ ಭೇಟಿ ನೀಡಿದ ಕೆಲವೇ ದಿನಗಳ ನಂತರದಲ್ಲಿ ಪ್ರಧಾನಿ ಮೋದಿ ಅವರು ಅಲ್ಲಿಗೆ ತೆರಳಿದ್ದರು. ಟೊಬಗೆ ಅವರು ಜನವರಿಯಲ್ಲಿ ಪ್ರಧಾನಿಯಾಗಿ ಆಯ್ಕೆಯಾದ ನಂತರದಲ್ಲಿ ಮೊದಲು ಭೇಟಿ ನೀಡಿದ್ದೇ ಭಾರತಕ್ಕೆ. ಭೂತಾನ್ ದೇಶವು ಆರ್ಥಿಕವಾಗಿ ತೀರಾ ಬಿಕ್ಕಟ್ಟಿಗೆ ಸಿಲುಕಿರುವ ಹೊತ್ತಿನಲ್ಲಿ ಟೊಬಗೆ ಅವರು ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ. ಭೂತಾನ್ ದೇಶದ 'ಒಟ್ಟು ರಾಷ್ಟ್ರೀಯ ಸಂತಸ'ದ ಸೂಚ್ಯಂಕವು ತೀರಾ ಕುಸಿದಿದೆ. ಕೋವಿಡ್ ಸಾಂಕ್ರಾಮಿಕದಿಂದಾಗಿ ಏಟು ತಿಂದ ಭೂತಾನ್‌ನ ಪ್ರವಾಸೋದ್ಯಮವು ಇನ್ನೂ ಚೇತರಿಕೆ ಕಂಡುಕೊಂಡಿಲ್ಲ.

ಭೂತಾನ್‌ನ ಆರ್ಥಿಕತೆಯ ಪುನಶ್ಚೇತನಕ್ಕೆ ನೆರವು ನೀಡುವ ಭಾರತದ ನಿರ್ಧಾರ ಅತ್ಯಂತ ಸಕಾಲಿಕವಾಗಿದೆ

ಭೂತಾನ್‌ನ ಯುವಕರಲ್ಲಿ ಹಲವರು ದೇಶ ತೊರೆಯುತ್ತಿದ್ದಾರೆ, ಅವರಲ್ಲಿ ಹೆಚ್ಚಿನವರು ಉದ್ಯೋಗಾವಕಾಶ ಅರಸಿ ಆಸ್ಟ್ರೇಲಿಯಾ ಕಡೆ ಮುಖ ಮಾಡಿದ್ದಾರೆ. ಪರಿಸರ ಪೂರಕ ವಿಶೇಷ ಆರ್ಥಿಕ ವಲಯವಾಗಿರುವ 'ಗೆಲೆಫೂ ವಿಶೇಷ ಆಡಳಿತ ಪ್ರದೇಶ'ವು ದೇಶದ ಅರ್ಥ ವ್ಯವಸ್ಥೆಯ ಪುನಶ್ಚೇತನಕ್ಕೆ ಕಾರಣವಾಗುತ್ತದೆ, ಉದ್ಯೋಗ ಸೃಷ್ಟಿಗೆ ದಾರಿ ಮಾಡಿಕೊಡುತ್ತದೆ ಎಂದು ಭೂತಾನ್ ಆಡಳಿತ ವಿಶ್ವಾಸ ಇರಿಸಿಕೊಂಡಿದೆ. ಭಾರತದ ಖಾಸಗಿ ವಲಯವು ತನ್ನ ನೆಲದಲ್ಲಿ ಹೂಡಿಕೆ ಮಾಡುತ್ತದೆ ಎಂಬ ನಂಬಿಕೆ ಕೂಡ ಭೂತಾನ್ ಸರ್ಕಾರಕ್ಕೆ ಇದೆ. ಭಾರತವು ಭೂತಾನ್ ಪಾಲಿಗೆ ಅತಿದೊಡ್ಡ ವ್ಯಾಪಾರ ಪಾಲುದಾರ ಕೂಡ ಹೌದು. ಅಲ್ಲಿ ಜಲವಿದ್ಯುತ್ ಉತ್ಪಾದನಾ ಘಟಕಗಳ ಆರಂಭಕ್ಕೆ ನೆರವು ನೀಡಿರುವುದಷ್ಟೇ ಅಲ್ಲದೆ, ಅಲ್ಲಿ ಉತ್ಪಾದನೆ ಆಗುವ ವಿದ್ಯುತ್ತನ್ನು ಭಾರತವೇ ಖರೀದಿಸುತ್ತದೆ. ಭಾರತ–ಭೂತಾನ್ ಸಂಬಂಧದ ಭವಿಷ್ಯ ಕುರಿತ ಕೆಲವು ದಾಖಲೆಗಳಲ್ಲಿ, ಜಲವಿದ್ಯುತ್, ಸೌರವಿದ್ಯುತ್, ಹಸಿರು ಜಲಜನಕ ಇಂಧನ ವಲಯಗಳಲ್ಲಿ ಭಾರತದ ಕಂಪನಿಗಳ ಸಹಯೋಗದಲ್ಲಿ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಉದ್ದೇಶವನ್ನು ವಿವರಿಸಲಾಗಿದೆ.

ಭಾರತ-ಭೂತಾನ್ ಆರ್ಥಿಕ ಸಹಕಾರದ ಭಾಗವಾಗಿ, ರುಪೇ ಹಾಗೂ ಯುಪಿಐ ಮೂಲಕ ಅಲ್ಲಿನ ಹಣಕಾಸಿನ ವ್ಯವಸ್ಥೆಯ ಡಿಜಿಟಲೀಕರಣಕ್ಕೆ ನೆರವಾಗುವ ಉದ್ದೇಶವೂ ಇದೆ.

ಆದರೆ ಭಾರತ ಮತ್ತು ಭೂತಾನ್ ನಡುವಿನ ಸಂಬಂಧಕ್ಕೆ ತೊಡಕಾಗಿ ನಿಂತಿರುವುದು ಚೀನಾ. ಭೂತಾನ್ ದೇಶವು ಚೀನಾದ ಜೊತೆಗಿನ ಗಡಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಮುಂದಾಗುವಾಗ ಭಾರತದ ಹಿತಾಸಕ್ತಿಗಳನ್ನು ಕೂಡ ಗಮನದಲ್ಲಿ ಇರಿಸಿಕೊಳ್ಳುತ್ತದೆ ಎಂಬುದು ಕೇಂದ್ರ ಸರ್ಕಾರದ ನಿರೀಕ್ಷೆ. ಚೀನಾ ಮತ್ತು ಭೂತಾನ್ ಅಧಿಕಾರಿಗಳು ಕಳೆದ ವರ್ಷದ ಅಕ್ಟೋಬರ್‌ನಲ್ಲಿ 25ನೇ ಸುತ್ತಿನ ಗಡಿ ಮಾತುಕತೆ ನಡೆಸಿದ್ದಾರೆ. ಗಡಿ ವಿಚಾರವಾಗಿ ಏಳು ವರ್ಷಗಳ ನಂತರ ಇಂಥದ್ದೊಂದು ಮಾತುಕತೆ ನಡೆದಿದೆ. ಗಡಿ ಸಮಸ್ಯೆಯು ಆದಷ್ಟು ಬೇಗ ಬಗೆಹರಿಯುವ ವಿಶ್ವಾಸ ಇದೆ ಎಂದು ಎರಡೂ ದೇಶಗಳು ಆಗ ಹೇಳಿದ್ದವು. 2021ರ ಏಪ್ರಿಲ್‌ನಲ್ಲಿ ಎರಡೂ ದೇಶಗಳು ಮಾಡಿಕೊಂಡ ಒಪ್ಪಂದಕ್ಕೆ ಅನುಗುಣವಾಗಿ ಈ ಮಾತುಕತೆಯು ನಡೆದಿದೆ. ಡೋಕ್ಲಾಂನಲ್ಲಿ ಭಾರತ, ಚೀನಾ ಮತ್ತು ಭೂತಾನ್ ದೇಶಗಳ ಗಡಿ ಸೇರುತ್ತದೆ. ಈಗ ಇರುವುದಕ್ಕಿಂತ ದಕ್ಷಿಣಕ್ಕೆ ತನ್ನ ಗಡಿ ವಿಸ್ತರಿಸಿಕೊಳ್ಳಬೇಕು ಎಂದು ಚೀನಾ ಬಯಸುತ್ತಿದೆ. ಹಾಗೆ ಆದಲ್ಲಿ ಭಾರತದ ಚಿಕನ್ ನೆಕ್ ಪ್ರದೇಶದ ಮೇಲೆ ಚೀನಾಕ್ಕೆ ಮಿಲಿಟರಿ ದೃಷ್ಟಿಯಿಂದ ಹೆಚ್ಚಿನ ಅನುಕೂಲಗಳು ಆಗುತ್ತವೆ. ಭಾರತದ ಪಾಲಿಗೆ ಈಶಾನ್ಯ ರಾಜ್ಯಗಳ ಜೊತೆಗಿನ ಅತ್ಯಂತ ಕಿರಿದಾದ ಕೊಂಡಿ ಈ ಚಿಕನ್ ನೆಕ್ ಪ್ರದೇಶ.

ಭಾರತದಲ್ಲಿ ಲೋಕಸಭಾ ಚುನಾವಣೆ ಘೋಷಣೆ ಆಗಿದೆ, ನೀತಿ ಸಂಹಿತೆಯು ಜಾರಿಯಲ್ಲಿ ಇದೆ. ಈ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು ವಿದೇಶ ಪ್ರಯಾಣ ಕೈಗೊಂಡಿದ್ದು ಸಾಮಾನ್ಯವೇನೂ ಅಲ್ಲ. ಗಡಿಯ ವಿಚಾರದಲ್ಲಿ ಭಾರತಕ್ಕೆ ಕೆಲವು ಆತಂಕಗಳು ಇದ್ದೇ ಇವೆ ಎಂಬುದನ್ನು, ಈ ಆತಂಕಗಳ ಕಾರಣದಿಂದಾಗಿಯೇ ಭಾರತವು ರಾಜತಾಂತ್ರಿಕವಾಗಿ ನೆರವಿನ ಹಸ್ತವನ್ನು ಚಾಚಿದೆ ಎಂಬುದನ್ನು ಈ ಭೇಟಿಯು ತೋರಿಸಿಕೊಟ್ಟಿದೆ. ಯಾವ ಬಟನ್ ಅದುಮಿದರೆ ಯಾವ ಕೆಲಸ ಆಗುತ್ತದೆ ಎಂಬುದು ಭೂತಾನ್ ಪ್ರಧಾನಿಗೆ ಗೊತ್ತಿದೆ. ಅಲ್ಲದೆ, ಅವರು ಮೋದಿ ಅವರ ಭೇಟಿಯ ಸಂದರ್ಭದಲ್ಲಿ 'ಮೋದಿಯ ಗ್ಯಾರಂಟಿ' ಎಂಬ ಮಾತುಗಳನ್ನು ಉಲ್ಲೇಖಿಸಿದ್ದಾರೆ. ಈಗ ಭಾರತವು ಭೂತಾನ್‌ನ ಗ್ಯಾರಂಟಿ ಏನಿರಲಿದೆ ಎಂಬ ವಿಚಾರವಾಗಿ ಕುತೂಹಲದಿಂದ ನೋಡುತ್ತಿರಬಹುದು.

ಆಗಬೇಕಿರುವ ಬುಡಮಟ್ಟದ ಬದಲಾವಣೆಗಳ ಬಗ್ಗೆ ವಾದ ಮಂಡನೆಗೆ ರಾಜ್ಯಗಳು ಸಿದ್ಧವಾಗಬೇಕಿದೆ

ನನ್ನ ತೆರಿಗೆ ನನ್ನ ಹಕ್ಕು: ಮುಂದೇನು?

ವಿಶ್ಲೇಷಣೆ

ವಸಂತ ಶೆಟ್ಟಿ

ಹದಿನಾರನೇ ಹಣಕಾಸು ಆಯೋಗ ತನ್ನ ಕೆಲಸ ಆರಂಭಿಸುತ್ತಿರುವ ಹೊತ್ತಲ್ಲೇ ಕೇಂದ್ರ ಮತ್ತು ರಾಜ್ಯಗಳ ನಡುವಿನ ತೆರಿಗೆ ಹಂಚಿಕೆಯಲ್ಲಿ ಆಗಿರುವ ಏರುಪೇರುಗಳಲ್ಲಿನ ತೊಂದರೆಗಳ ಕುರಿತು ಹಲವಾರು ರಾಜ್ಯಗಳು ದನಿ ಎತ್ತಿದ ಬೆಳವಣಿಗೆ ಹಿಂದಿನ ತಿಂಗಳು ನಡೆಯಿತು. ಕರ್ನಾಟಕವೂ ಇದಕ್ಕೆ ದನಿಗೂಡಿಸಿದ್ದಲ್ಲದೆ ದೆಹಲಿಯಲ್ಲಿ ರಾಜ್ಯದ ಮುಖ್ಯಮಂತ್ರಿಯೇ ಪ್ರತಿಭಟನೆ ಮಾಡಿದ್ದೂ ಆಯಿತು. ಲೋಕಸಭೆ ಚುನಾವಣೆಯ ಹೊತ್ತಲ್ಲೇ ಈ ವಿಷಯ ಚರ್ಚೆಗೆ ಬಂದ ಬಗೆ ಸಹಜವಾಗಿ ರಾಜಕೀಯ ಹಗ್ಗಜಗ್ಗಾಟಗಳಿಗೂ ಕಾರಣವಾಯಿತು.

ಸದ್ಯಕ್ಕೆ ವಿಷಯ ತಣ್ಣಗಾದರೂ ಆಯೋಗ ತನ್ನ ಕೆಲಸಗಳನ್ನು ಶುರು ಮಾಡುತ್ತಿರುವ ಈ ಹೊತ್ತಿನಲ್ಲಿ, ಕೇಂದ್ರ ಮತ್ತು ರಾಜ್ಯಗಳ ನಡುವಿನ ತೆರಿಗೆ ಹಂಚಿಕೆಯಲ್ಲಿ ಮಾಡಬೇಕಿರುವ ಕೆಲವು ಬುಡಮಟ್ಟದ ಬದಲಾವಣೆಗಳ ಕುರಿತು ಆಯೋಗದ ಮುಂದೆ ವಾದ ಮಂಡಿಸಲು ರಾಜ್ಯ ಸರ್ಕಾರಗಳು ಸೂಕ್ತವಾಗಿ ಸಿದ್ಧವಾಗಬೇಕಾದ ತುರ್ತಿದೆ.

ಭಾರತದ ಸಂವಿಧಾನ ರಚಿಸುವ ಹೊತ್ತಿನಲ್ಲಿ ಸಂವಿಧಾನ ರಚನಾ ಸಮಿತಿಯಲ್ಲೂ ತೆರಿಗೆ ಹಂಚಿಕೆಯ ಏರ್ಪಾಡಿನ ಬಗ್ಗೆ ವ್ಯಾಪಕವಾದ ಚರ್ಚೆಗಳಾಗಿದ್ದವು. ಈಗಿನ ಬಿಹಾರ ರಾಜ್ಯವನ್ನು ಪ್ರತಿನಿಧಿಸುತ್ತಿದ್ದ ಕೆ.ಟಿ.ಶಾ, ಉತ್ತರಪ್ರದೇಶದ ಜೆ.ಬಿ.ಕೃಪಲಾನಿ, ಮದ್ರಾಸಿನ ಟಿ.ಟಿ.ಕೃಷ್ಣಮಾಚಾರಿ, ಮೈಸೂರು ರಾಜ್ಯದ ಎಸ್.ನಾಗಪ್ಪ ಅವರಂತಹ ಹಲವು ಸದಸ್ಯರು ತೆರಿಗೆ ವಿಧಿಸುವ ವಿಷಯದಲ್ಲಿ ರಾಜ್ಯಗಳಿಗೆ ಬಹಳಷ್ಟು ಅವಕಾಶಗಳಿರಬೇಕು ಎಂದು ಗಟ್ಟಿಯಾಗಿ ವಾದಿಸಿದ್ದರು. ಕಾನೂನು ಸುವ್ಯವಸ್ಥೆ, ಶಿಕ್ಷಣ, ಮೂಲಸೌಕರ್ಯ, ಆರೋಗ್ಯ ಸೇವೆಯಂತಹ ದೊಡ್ಡ ಜವಾಬ್ದಾರಿಗಳು ರಾಜ್ಯ ಸರ್ಕಾರದವಾಗಿರುವಾಗ ರಾಜ್ಯಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಸಂಪನ್ಮೂಲ ಹೊಂದಿಸಲು ಒಂದು ಮಟ್ಟಿಗಿನ ತೆರಿಗೆ ಸ್ವಾತಂತ್ರ್ಯ ಇರಬೇಕಾದದ್ದು ಅಗತ್ಯ ಅನ್ನುವುದು ಈ ವಾದಗಳ ಬುನಾದಿಯಲ್ಲಿತ್ತು. ಇಷ್ಟಾದರೂ ಸಂವಿಧಾನ ರಚನೆಯ ಹೊತ್ತಿನಲ್ಲಿ ಇದ್ದ ದೇಶದ ರಾಜಕೀಯ ಸಂದರ್ಭದ ಪ್ರಭಾವದಿಂದಾಗಿ, ಸಂವಿಧಾನ ಜಾರಿಗೆ ಬಂದಾಗ ರಾಜಕೀಯವಷ್ಟೇ ಅಲ್ಲದೆ ತೆರಿಗೆ ವಿಧಿಸುವ, ಸಂಗ್ರಹಿಸುವ ವಿಚಾರದಲ್ಲೂ ಬಹುಪಾಲು ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಕೊಡಲಾಯಿತು.

ಕೇಂದ್ರ ಸರ್ಕಾರ ಸಂಗ್ರಹಿಸುವ ಆದಾಯ ತೆರಿಗೆ ಮತ್ತು ಅಬಕಾರಿ ಸುಂಕವನ್ನು ಮಾತ್ರವೇ ಹಣಕಾಸು ಆಯೋಗ ಅನ್ನುವ ಸ್ವಾಯತ್ತ ಸಂಸ್ಥೆಯ ಮೂಲಕ ಒಂದು ನಿರ್ದಿಷ್ಟ ಸೂತ್ರದಡಿ ರಾಜ್ಯಗಳಿಗೆ ಹಂಚುವ ವ್ಯವಸ್ಥೆ ಜಾರಿಗೆ ಬಂದಿತು. ರಾಜ್ಯಗಳಿಗೆ ಕೆಲವೇ ಕೆಲವು ವಿಷಯಗಳಲ್ಲಿ ತೆರಿಗೆ ಹಾಕುವ ಹಕ್ಕುಗಳನ್ನು ನೀಡಲಾಯಿತು. 1991ರ ಆರ್ಥಿಕ ಸುಧಾರಣೆಗಳ ನಂತರ ಜಾಗತೀಕರಣದ ಅವಕಾಶಗಳನ್ನು ಬಳಸಿಕೊಳ್ಳಲು ಸಮರ್ಥವಾಗಿದ್ದ ಕೆಲವು ರಾಜ್ಯಗಳು ಪ್ರಗತಿಯಲ್ಲಿ ದಾಪುಗಾಲಿಕ್ಕಿ ತಮ್ಮದೇ ತೆರಿಗೆ ಸಂಪನ್ಮೂಲ ಹೆಚ್ಚಿಸಿಕೊಳ್ಳಲು ಸಾಧ್ಯವಾದರೆ, ಆ ರಾಜ್ಯಗಳ ಪ್ರಗತಿಯಿಂದಾಗಿ ಕೇಂದ್ರದ ತೆರಿಗೆ ಸಂಪನ್ಮೂಲದ ಗಾತ್ರವೂ ಹಿಗ್ಗಿದ ಬೆಳವಣಿಗೆಯಾಯಿತು. ಇದೆಲ್ಲ ಆಗುವಾಗಲೂ ಕೇಂದ್ರ ಮತ್ತು ರಾಜ್ಯಗಳ ನಡುವಿನ ತೆರಿಗೆ ಹಂಚಿಕೆಯ ವಿಷಯದಲ್ಲಿ ಮೂಲಭೂತವಾದ ಬದಲಾವಣೆಗಳೇನೂ ಆಗಲಿಲ್ಲ.

ಹದಿನಾಲ್ಕನೇ ಹಣಕಾಸು ಆಯೋಗ ಹಲವಾರು ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ರದ್ದುಪಡಿಸಿ, ಒಟ್ಟಾರೆ ಕೇಂದ್ರದಿಂದ ರಾಜ್ಯಗಳಿಗೆ (ಎಲ್ಲ ರಾಜ್ಯಗಳಿಗೂ ಸಮಾನವಾಗಿಯೇ) ನೀಡುವ ತೆರಿಗೆ ಹಂಚಿಕೆ ಪ್ರಮಾಣವನ್ನು ಶೇಕಡ 32ರಿಂದ 42ಕ್ಕೆ ಏರಿಸಿತು. ಇದು ರಾಜ್ಯಗಳಿಗೆ ದೊರಕುವ ಒಟ್ಟಾರೆ ನಿವ್ವಳ ತೆರಿಗೆ ಪಾಲಿನಲ್ಲಿ ಹೆಚ್ಚೇನೂ ಬದಲಾವಣೆ ತರದಿದ್ದರೂ ಬರುವ ಹಣವನ್ನು ರಾಜ್ಯಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುವ ವಿಷಯದಲ್ಲಿ ಒಂದಿಷ್ಟು ಸ್ವಾತಂತ್ರ್ಯ ನೀಡಿದ್ದು ಈ ದಿಸೆಯಲ್ಲಿ ಆದ ಏಕೈಕ ದೊಡ್ಡ ಬದಲಾವಣೆ ಎನ್ನಬಹುದು. ಇದರ ನಂತರ ಜಾರಿಗೆ ಬಂದ ಜಿಎಸ್‌ಟಿ ತೆರಿಗೆ ವ್ಯವಸ್ಥೆಯು ರಾಜ್ಯಗಳಿಗೆ ಇದ್ದ ಕೆಲವೇ ಕೆಲವು ತೆರಿಗೆ ವಿಧಿಸುವ ಅಧಿಕಾರವನ್ನೂ ಮೊಟಕುಗೊಳಿಸಿ, ರಾಜ್ಯಗಳು ತಮ್ಮ ಆಗತ್ಯಕ್ಕೆ ತಕ್ಕಂತೆ ಹೊಸತಾದ ಯಾವುದೇ ತೆರಿಗೆ ಪರಿಚಯಿಸುವ ಹಕ್ಕನ್ನು ಇಲ್ಲವಾಗಿಸಿತು.

ಕೇಂದ್ರ ಸರ್ಕಾರ ಸಂಗ್ರಹಿಸುವ ಎಲ್ಲ ತರಹದ ತೆರಿಗೆಗಳನ್ನೂ 'ಡಿವಿಸಿಬಲ್ ಪೂಲ್' ವ್ಯಾಪ್ತಿಗೆ ತಂದು ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಉದ್ದೇಶದ ಸಂವಿಧಾನ ತಿದ್ದುಪಡಿಯು ಇಸವಿ 2000ದಲ್ಲಿ ಆಯಿತು. ಆದರೆ ವಿಧಿ 270/271ರ ಅಡಿ ಕೇಂದ್ರ ಸಂಗ್ರಹಿಸುವ ಸೆಸ್ ಮತ್ತು ಸರ್ಚಾರ್ಜ್‌ಗಳನ್ನು ಪೂರ್ತಿಯಾಗಿ ಈ ಹಂಚಿಕೆಯಿಂದ ಹೊರಗಿಡಲಾಯಿತು. ಇದಕ್ಕೂ ಹಿಂದೆ ಇಂತಹ ನಿರ್ಧಾರಗಳನ್ನು ಹಣಕಾಸು ಆಯೋಗದ ಶಿಫಾರಸು ಇದ್ದರಷ್ಟೇ ಮಾಡುವ ನೀತಿಯಿತ್ತು. ಈ ನಿರ್ಣಯ ರಾಜ್ಯಗಳ ಪಾಲಿಗೆ ಬಹಳ ದೊಡ್ಡ ಪೆಟ್ಟು ಕೊಟ್ಟಿತು. ಅಲ್ಲಿಂದೀಚೆಗೆ ಕೇಂದ್ರದ ತೆರಿಗೆ ಸಂಗ್ರಹದ ಗಾತ್ರ ಹಿಗ್ಗುತ್ತಲೇ ಬಂದಿದ್ದರೂ ರಾಜ್ಯಗಳೊಂದಿಗೆ ಹಂಚಿಕೊಳ್ಳುವ ಪಾಲಿನ ಗಾತ್ರ ಮಾತ್ರ ಅದೇ ಪ್ರಮಾಣದಲ್ಲಿ ಹಿಗ್ಗಿಲ್ಲ. ಅದುವೇ ಇಂದಿನ ಕೇಂದ್ರ- ರಾಜ್ಯಗಳ ನಡುವಿನ ತಿಕ್ಕಾಟದ ಮೂಲದಲ್ಲಿರುವ ಅಂಶ.

ಈಗಿರುವ ಅಂದಾಜಿನಂತೆ, ಕೇಂದ್ರ ಸರ್ಕಾರ ಸೆಸ್ ಮತ್ತು ಸರ್ಚಾರ್ಜ್ ಮೂಲಕ ಸಂಗ್ರಹಿಸುವ ತೆರಿಗೆ ಸುಮಾರು ಏಳು ಲಕ್ಷ ಕೋಟಿ ರೂಪಾಯಿಗಳಷ್ಟಾಗಬಹುದು. ಇದು ಕೇಂದ್ರ ಸರ್ಕಾರದ ಒಟ್ಟಾರೆ ಆದಾಯದ ಶೇ 15ಕ್ಕೂ ಹೆಚ್ಚು. ರಾಜ್ಯಗಳು ಈಗ ಪ್ರಶ್ನೆ ಮಾಡಬೇಕಿರುವುದು ಇದನ್ನೇ.

ಹದಿನೈದನೇ ಹಣಕಾಸು ಆಯೋಗದ ಅನ್ವಯ ಕರ್ನಾಟಕದ ತೆರಿಗೆ ಪಾಲು ಶೇ 4.71ರಿಂದ ಶೇ 3.64ಕ್ಕೆ ಇಳಿದಿದೆ. ಇದಕ್ಕೆ ಬಹುಮುಖ್ಯ ಕಾರಣ, ತೆರಿಗೆ ಹಂಚಿಕೆಯನ್ನು ನಿರ್ಧರಿಸುವ ಮಾನದಂಡಗಳಲ್ಲಿ ಅತಿ ಹೆಚ್ಚು ತೂಕ ಹೊಂದಿರುವ ಇನ್‌ಕಂ ಡಿಸ್ಟನ್ಸ್ (ಆದಾಯದ ಅಂತರ) ಅನ್ನುವ ಮಾನದಂಡ. ಒಂದು ರಾಜ್ಯದ ತಲಾದಾಯ ಮತ್ತು ಅತ್ಯಂತ ಶ್ರೀಮಂತ ರಾಜ್ಯದ ತಲಾದಾಯದ ನಡುವೆ ಇರುವ ಆದಾಯದ ಅಂತರವನ್ನು ಅಳೆಯಲು ಇರುವ ಅಳತೆಗೋಲು ಇದಾಗಿದೆ. 15ನೇ ಹಣಕಾಸು ಆಯೋಗದ ಪ್ರಕಾರ, ಕರ್ನಾಟಕ ಈಗಾಗಲೇ ಈ ವಿಷಯದಲ್ಲಿ ಅತ್ಯಂತ ಮುಂದುವರಿದ ರಾಜ್ಯದ ತಲಾದಾಯಕ್ಕೆ ಹತ್ತಿರ ಬಂದಿರುವ ಕಾರಣ, ನಮಗೆ ಸಿಗುವ ತೆರಿಗೆ ಪ್ರಮಾಣದಲ್ಲಿ ಇಷ್ಟು ದೊಡ್ಡ ಮಟ್ಟದ ಇಳಿಕೆಯಾಗಿದೆ. ಹಾಗಿದ್ದರೆ ಕರ್ನಾಟಕದ ಒಟ್ಟಾರೆ ಏಳಿಗೆ ನಿಜಕ್ಕೂ ಅಷ್ಟು ವೇಗವಾಗಿ ಆಗಿದೆಯೇ?

ಕರ್ನಾಟಕದಲ್ಲಿ ನೂರಾರು ಐ.ಟಿ. ಸಂಸ್ಥೆಗಳ ಮುಖ್ಯ ಕಚೇರಿಗಳಿವೆ. ಇವು ದೇಶ-ವಿದೇಶಗಳಿಂದ ಹೆಚ್ಚೆಚ್ಚು ಸಂಪಾದಿಸಿದಂತೆ ರಾಜ್ಯದ ಒಟ್ಟಾರೆ ಜಿಡಿಪಿ ಹೆಚ್ಚುವುದರ ಜೊತೆಗೆ ರಾಜ್ಯದ ತಲಾದಾಯವೂ ಹೆಚ್ಚುತ್ತದೆ. ಆದರೆ ಇಲ್ಲಿ ಗಮನಿಸಬೇಕಾದ ವಿಚಾರ ಎಂದರೆ, ಈ ಸಂಸ್ಥೆಗಳಾಗಲೀ ಅಲ್ಲಿನ ಉದ್ಯೋಗಿಗಳಾಗಲೀ ನೇರವಾಗಿ ರಾಜ್ಯ ಸರ್ಕಾರಕ್ಕೇನೂ ಆದಾಯ ತೆರಿಗೆ ಪಾವತಿಸುವುದಿಲ್ಲ. ಹೀಗಾಗಿ ತಲಾದಾಯದ ಹೆಚ್ಚಳ ನಿಜವಾದ ಅರ್ಥದಲ್ಲಿ ಕರ್ನಾಟಕದ ಬೊಕ್ಕಸಕ್ಕೇನೂ ಹೆಚ್ಚಿನ ಕೊಡುಗೆ ನೀಡದು. ಆದರೆ ತಲಾದಾಯದ ಏರಿಕೆಯು ಆದಾಯದ ಅಂತರವನ್ನು ಕರ್ನಾಟಕದ ವಿಷಯದಲ್ಲಿ ನಕಾರಾತ್ಮಕವಾಗಿ ಪ್ರಭಾವಿಸಿದ್ದರ ಪರಿಣಾಮವಾಗಿ ಕರ್ನಾಟಕಕ್ಕೆ ತೆರಿಗೆ ಹಂಚಿಕೆಯಲ್ಲಿ ಬಹಳಷ್ಟು ದೊಡ್ಡ ಕೊರತೆ ಉಂಟಾಗಿದೆ. ಈ ವಿಷಯವನ್ನು ಈಗಿನ ಸರ್ಕಾರವಷ್ಟೇ ಅಲ್ಲ, ಈ ಹಿಂದಿನ ಸರ್ಕಾರವೂ ವಿಧಾನಸಭೆಯಲ್ಲಿ ಒಪ್ಪಿಕೊಂಡ ನಿದರ್ಶನವಿದೆ. ಈಗ ಇದನ್ನು ಒಂದು ಪಕ್ಷಾತೀತವಾದ ವಿಷಯವನ್ನಾಗಿ ಕಾಣುವ ಅಗತ್ಯ ರಾಜ್ಯದ ಮೂರೂ ಪ್ರಮುಖ ಪಕ್ಷಗಳಿಗಿದೆ.

ಹದಿನಾರನೇ ಆಯೋಗದ ಮುಂದೆ ರಾಜ್ಯ ಸರ್ಕಾರ ಎರಡು ವಿಷಯಗಳನ್ನು ಗಟ್ಟಿಯಾಗಿ ಮಂಡಿಸಬೇಕು. ಮೊದಲನೆಯದು, ರಾಜ್ಯವೊಂದರ ಬೇರೆ ಬೇರೆ ಭಾಗಗಳಲ್ಲಿನ ಏಳಿಗೆಯಲ್ಲಿನ ವ್ಯತ್ಯಾಸಗಳನ್ನೂ ಹಣಕಾಸು ಆಯೋಗವು ತೆರಿಗೆ ಹಂಚಿಕೆಯ ಮಾನದಂಡಗಳಲ್ಲಿ ಒಂದಾಗಿ ಪರಿಗಣಿಸಬೇಕು. ಎರಡನೆಯದು, ರಾಜ್ಯಗಳೊಂದಿಗೆ ಹಂಚಿಕೊಳ್ಳದೆ ತನ್ನ ಬಳಿಯೇ ಉಳಿಸಿಕೊಳ್ಳುತ್ತಿರುವ ಸೆಸ್ ಮತ್ತು ಸರ್ಚಾರ್ಜ್ ಎಲ್ಲವನ್ನೂ ತೆರಿಗೆ ಹಂಚಿಕೆಯ ನಿಧಿಯಲ್ಲಿ ಸೇರಿಸಬೇಕು. ಇದಿಲ್ಲದಿದ್ದರೆ ರಾಜ್ಯಗಳೊಂದಿಗೆ ಹಂಚಿಕೊಳ್ಳುವ ತೆರಿಗೆ ಪಾಲನ್ನು ಈಗಿರುವ ಶೇ 41ರಿಂದ ಶೇ 50ಕ್ಕೆ ಏರಿಸಬೇಕು ಅನ್ನುವ ಬೇಡಿಕೆಯನ್ನಾದರೂ ಇರಿಸಬೇಕು.

ರಾಜ್ಯಗಳ ತೆರಿಗೆ ಪಾಲು ನ್ಯಾಯಯುತವಾಗಿ ಇರುವಂತೆ ಖಾತರಿಪಡಿಸಿಕೊಳ್ಳುವುದು ಭಾರತ ಐದು ಟ್ರಿಲಿಯನ್ ಡಾಲರ್ ಅರ್ಥವ್ಯವಸ್ಥೆಯಾಗುವ ಕನಸಿಗೂ ಮುಖ್ಯ. ಯಾಕೆಂದರೆ, ಭಾರತದ ಏಳಿಗೆ ಅಂದರೆ ರಾಜ್ಯಗಳ ಏಳಿಗೆಯ ಒಟ್ಟು ಮೊತ್ತ. ರಾಜ್ಯಗಳ ಏಳಿಗೆಯಾಗದೆ ಭಾರತದ ಏಳಿಗೆ ಸಾಧ್ಯವಿಲ್ಲ. ಆಲೂರು ವೆಂಕಟರಾಯರು ಇದನ್ನೇ 'ಕರ್ನಾಟಕದಿಂದ ಭಾರತ' ಎಂದಿದ್ದು.

ಚುರುಮುರಿ

ಇ ಫಾರ್ ಎಕ್ಸಾಂ

• ಮಣ್ಣೆ ರಾಜು

'**ಎ ಫಾರ್** ಆ್ಯಪಲ್, ಪಿ ಫಾರ್ ಪೀಪಲ್ ಎಂದು ಮೊನ್ನೆ ಮೊನ್ನೆವರೆಗೂ ಆಡಿಕೊಂಡಿದ್ದ ಮಗಳು ಇ ಫಾರ್ ಎಕ್ಸಾಂ ಬರೆಯುವಷ್ಟು ದೊಡ್ಡವಳಾಗಿಬಿಟ್ಟಳು...' ಸುಮಿ ಆನಂದಪಟ್ಟಳು.

'ಹೌದು, ಮಗಳ ಪರೀಕ್ಷೆ ಶುರುವಾಗಿದೆ. ಮೊಬೈಲ್, ಟಿ.ವಿ. ಮ್ಯೂಟ್ ಮಾಡಿ ಮನೆಯಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡು. ಒಗ್ಗರಣೆ ಸೌಂಡು-ಘಾಟು ಮಗಳ ಓದಿಗೆ ಡಿಸ್ಟರ್ಬ್ ಆಗದಂತೆ ಮನೆಯಲ್ಲಿ ನಿಷೇಧಾಜ್ಞೆ ಜಾರಿ ಮಾಡು. ಮಗಳಲ್ಲಿ ಪರೀಕ್ಷೆ ಎದುರಿಸುವ ಆತ್ಮವಿಶ್ವಾಸ ಮೂಡಿಸು' ಅಂದ ಶಂಕ್ರಿ.

'ಪರೀಕ್ಷೆ ಎದುರಿಸುವುದಕ್ಕಿಂತ ಪರೀಕ್ಷಾ ವ್ಯವಸ್ಥೆಗೆ ಹೆದರಿಬಿಡುತ್ತಾಳೇನೋ ಅನ್ನೋ ಆತಂಕವಿದೆ ಕಣ್ರೀ. ಪರೀಕ್ಷಾ ಕೇಂದ್ರದ ಸುತ್ತ ದಪ್ಪ ಮೀಸೆಯ ಪೊಲೀಸರು ಲಾಠಿ ಹಿಡಿದು ಕಾವಲಿರ್ತಾರಂತೆ. ಜೇಬು, ಜ್ಯಾಮಿಟ್ರಿ ಬಾಕ್ಸ್ ಚೆಕ್ ಮಾಡಿ ಒಳಗೆ ಬಿಡ್ತಾರಂತೆ. ಗೋಡೆ ಕಡೆ ಮುಖ ಮಾಡಿ ಪರೀಕ್ಷೆ ಬರೆಯಬೇಕಂತೆ. ಸಿ.ಸಿ. ಟಿ.ವಿ. ಕ್ಯಾಮೆರಾ ಕಣ್ಣುಗಳು ಕೆಕ್ಕರಿಸಿಕೊಂಡು ನೋಡುತ್ತವಂತೆ, ಸ್ಕ್ವ್ಯಾಡ್ ಮೇಲೆ ಸ್ಕ್ವ್ಯಾಡ್‌ಗಳು ಆಗಾಗ ಬಂದು ಹೆದರಿಸಿಹೋಗ್ತಾವಂತೆ...'

'ಮಕ್ಕಳು ಕಾಪಿ ಹೊಡೆಯಬಾರದೆಂದು ಕಾಪಿ ತಡೆಗೆ ಕ್ರಮ ಕೈಗೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಪರೀಕ್ಷಾ ಸುರಕ್ಷಾ ಕ್ರಮಗಳು ಇನ್ನಷ್ಟು ಕಠಿಣ ಆಗಬಹುದು'.

'ಕಠಿಣ ಅಂದ್ರೆ? ಪರೀಕ್ಷಾರ್ಥಿ ಹಿಂದೆ ಒಬ್ಬೊಬ್ಬರು ಗನ್ ಹಿಡಿದು ನಿಂತು 'ಅತ್ತ ಇತ್ತ ತಿರುಗಿದರೆ ಹುಷಾರ್...' ಅಂತ ಹೇಳೋ ಸ್ಥಿತಿ ಬರುವುದೇನೋ'.

'ಮಕ್ಕಳು ಔಟಾಫ್ ಔಟ್ ಮಾರ್ಕ್ಸ್ ಗಳಿಸಬೇಕು ಅನ್ನೋ ಪೋಷಕರು, ಸಂಸ್ಥೆಗೆ ನೂರಕ್ಕೆ ನೂರು ರಿಸಲ್ಟ್ ದೊರಕಿಸಬೇಕು ಅನ್ನುವ ಶಾಲೆಗಳ ಮಾರ್ಕ್ಸ್ ವ್ಯಾಧಿಗೆ ಚಿಕಿತ್ಸೆಯಾಗಬೇಕು. ಪರೀಕ್ಷೆಯನ್ನು ಭೂತ ಮಾಡಿ ಮಕ್ಕಳನ್ನು ಹೆದರಿಸುವುದು ನಿಲ್ಲಬೇಕು'.

'ಹೌದುರೀ, ಪರೀಕ್ಷೆಯು ಮಕ್ಕಳಿಗೆ ಸವಿಯುವ ಹುರಿಗಡಲೆ ಆಗಬೇಕೇ ವಿನಾ ಕಬ್ಬಿಣದ ಕಡಲೆ ಆಗಬಾರದು...' ಎಂದಳು ಸುಮಿ.

ದಿನದ ಟ್ವೀಟ್

ಇಂಥ ದುರಂತಕ್ಕೆ ಕೊನೆ ಎಂದು?

ಪಂಜಾಬ್‌ನ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಯಾನಕ ಅಪಘಾತವಾಗಿದೆ. ಲಾರಿ ಉರುಳಿಬಿದ್ದು ಬೈಕ್ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಎಕ್ಸ್‌ಪ್ರೆಸ್ ವೇಗಳು, ಹೆದ್ದಾರಿಗಳಲ್ಲಿ ವೇಗದ ಚಾಲನೆ ಮತ್ತು ಮಿತಿಮೀರಿದ ಪ್ರಮಾಣದಲ್ಲಿ ಸರಕು ತುಂಬಿಸಿಕೊಂಡು ಹೋಗುವ ಲಾರಿಗಳಿಂದ ಇಂತಹ ಹೃದಯವಿದ್ರಾವಕ ದುರಂತಗಳು ಸಂಭವಿಸುತ್ತಿವೆ. ಇನ್ನಷ್ಟು ಜೀವಹಾನಿ ಆಗುವುದನ್ನು ತಡೆಯಲು ತುರ್ತು ಗಮನಹರಿಸಿ, ಗಂಭೀರ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವನ್ನು ಈ ಸಂಗತಿ ಎತ್ತಿ ತೋರಿಸುತ್ತದೆ.

ದಿವ್ಯಾ ಗಂಡೋತ್ರ ಟಂಡನ್, ಉದ್ಯಮಿ

ಕಿಡಿನುಡಿ

ಒಬ್ಬ ಮಹಿಳೆಯ ಬಗ್ಗೆ ಎಂದಿಗೂ ಅಗೌರವದಿಂದ ಮತ್ತು ಘನತೆಗೆ ಕುಂದುಂಟಾಗುವಂತೆ ಮಾತನಾಡಬಾರದು... ಅವರು ಯಾರೇ ಆಗಿರಲಿ ಮತ್ತು ಯಾವ ಪಕ್ಷಕ್ಕೇ ಸೇರಿದವರಾಗಿರಲಿ. ಸಂಸ್ಕೃತಿಯು ರಾಜಕೀಯದ ಘನತೆಯನ್ನು ಹೆಚ್ಚಿಸಬೇಕು. ರಾಜಕೀಯವು ಸಂಸ್ಕೃತಿಯ ಘನತೆ ಕುಗ್ಗಿಸುವ ಕೆಲಸ ಮಾಡಬಾರದು.

ಸುಧೀಂದ್ರ ಕುಲಕರ್ಣಿ, ಲೇಖಕ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಶನಿವಾರ, 27-3-1999

• **ಜನವರಿ ಒಂದರಿಂದ ಎಸ್‌ಟಿಡಿ ಖಾಸಗಿಗೆ**

ನವದೆಹಲಿ, ಮಾರ್ಚ್ 26 (ಪಿಟಿಐ, ಯುಎನ್‌ಐ)– ದೂರವಾಣಿ ಕ್ಷೇತ್ರದಲ್ಲಿ ಖಾಸಗಿಯವರಿಗೆ ಅವಕಾಶ ನೀಡುವ, ಮುಂದಿನ ಎಲ್ಲಾ ಪರವಾನಗಿಗಳನ್ನು ಲಾಭ ಹಂಚಿಕೊಳ್ಳುವ ನೆಲೆಯಲ್ಲಿ ನೀಡುವ, ದೂರಗಾಮಿ (ಎಸ್‌ಟಿಡಿ) ದೂರವಾಣಿಯ ಮೇಲಿನ ಸರ್ಕಾರದ ಏಕಸ್ವಾಮ್ಯವನ್ನು ಬಿಟ್ಟುಕೊಡುವ ಹಾಗೂ ಟೆಲಿಸಂಪರ್ಕ ಹತೋಟಿ ಪ್ರಾಧಿಕಾರವನ್ನು ಇನ್ನಷ್ಟು ಬಲಗೊಳಿಸುವ ಹೊಸ ಟೆಲಿಕಾಂ ನೀತಿಯನ್ನು ಕೇಂದ್ರ ಸರ್ಕಾರ ಇಂದು ಪ್ರಕಟಿಸಿತು.

ಎಸ್‌ಟಿಡಿ ದೂರವಾಣಿಯಲ್ಲಿ 2000ದ ಜನವರಿ ಒಂದರಿಂದ ಖಾಸಗಿ ಅವರಿಗೂ ಅವಕಾಶ ನೀಡಲು ನಿರ್ಧರಿಸಲಾಗಿದೆ.

• **ಕಿತ್ತೂರು ಚೆನ್ನಮ್ಮನ ಕೈಗೆ ಹೊಸ ಖಡ್ಗ**

ಬೆಳಗಾವಿ, ಮಾರ್ಚ್ 26– ನಗರದ ಕಿತ್ತೂರು ರಾಣಿ ಚೆನ್ನಮ್ಮ ಪ್ರತಿಮೆಯ ಕೈಯಲ್ಲಿ ಜಿಲ್ಲಾ ಆಡಳಿತವು ಇಂದು ಹೊಸ ಖಡ್ಗ ಕೊಟ್ಟಿದೆ.

ನಿನ್ನೆ ರಾತ್ರಿ ಚೆನ್ನಮ್ಮನ ಕೈಯಲ್ಲಿನ ಖಡ್ಗವನ್ನು ಯಾರೋ ತುಂಡುಮಾಡಿದ್ದು ಈ ಕುರಿತು ತನಿಖೆ ನಡೆಯಬೇಕು ಎಂದು ಕನ್ನಡ ಸಂಘಟನೆಗಳು ಒತ್ತಾಯಿಸಿದ್ದವು. ಈ ವಿಷಯ ಗಮನಕ್ಕೆ ಬಂದ ತಕ್ಷಣ ಇಂದು ಜಿಲ್ಲಾ ಆಡಳಿತವು ರಾಣಿ ಚೆನ್ನಮ್ಮನ ಕೈಯಲ್ಲಿ ಹೊಸ ಖಡ್ಗ ಇರಿಸಿದೆ.

50 ವರ್ಷಗಳ ಹಿಂದೆ

ಬುಧವಾರ, 27-3-1974

• **ನಷ್ಟ ಕೋಟಿಯಲ್ಲ– ನಾಲ್ಕೇ ಲಕ್ಷ!**

ನವದೆಹಲಿ, ಮಾರ್ಚ್ 26– ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಮತ್ತು ರೇಡಾರ್ ಅಭಿವೃದ್ಧಿ ಸಂಸ್ಥೆಯಲ್ಲಿ (ಎಲ್.ಆರ್.ಡಿ.ಇ) ಒಂದು ಕೋಟಿ ರೂ. ಯಂತ್ರ ಸಾಮಗ್ರಿ ನಿರುಪಯುಕ್ತವಾಗಿ ಬಿದ್ದಿದೆ ಎಂಬುದು ಸರಿಯಲ್ಲ, ಕೇವಲ ನಾಲ್ಕು ಲಕ್ಷ ರೂ. ಯಂತ್ರ ಸಾಮಗ್ರಿ ನಿರುಪಯುಕ್ತವಾಗಿದೆ ಎಂದು ರಕ್ಷಣಾ ಉತ್ಪಾದನಾ ರಾಜ್ಯ ಸಚಿವ ವಿ.ಸಿ. ಶುಕ್ಲ ಅವರು ಇಂದು ಲೋಕಸಭೆಯಲ್ಲಿ ಹೇಳಿದರು.

ದೆಹಲಿ ಪತ್ರಿಕೆಯಲ್ಲಿ ಬಂದಿರುವ ಈ ಸಂಬಂಧದ ಸುದ್ದಿ ಸರಿಯಲ್ಲ, ಎಲ್.ಆರ್.ಡಿ.ಇ. ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಗಮನ ಸೆಳೆವ ಸೂಚನೆಯೊಂದಕ್ಕೆ ಉತ್ತರ ನೀಡಿದ ಅವರು ಹೇಳಿದರು. 'ಆ ಸಂಸ್ಥೆಯ ಹೆಸರಿಗೆ ಕಳಂಕ ಹಚ್ಚುವ ಯತ್ನ ನಡೆದಿದ್ದು ವಿಷಾದಕರ' ಎಂದರು.

• **ತಿರುಪತಿ ಬೆಟ್ಟದಲ್ಲಿ ಯಾತ್ರಾರ್ಥಿಗಳ ಬಸ್ ಉರುಳಿ ಏಳು ಸಾವು**

ತಿರುಪತಿ, ಮಾರ್ಚ್ 26– ತಿರುಪತಿಬೆಟ್ಟಕ್ಕೆ ಹೋಗುತ್ತಿದ್ದ ತಿರುಪತಿ ದೇವಸ್ಥಾನದ ಬಸ್ಸೊಂದು ಇಂದು ಬೆಳಿಗ್ಗೆ ಮಂಜಿನಿಂದ ಮಬ್ಬು ಕವಿದಿದ್ದಾಗ ಘಾಟಿ ರಸ್ತೆಯ ಪಕ್ಕದ ಅಡ್ಡಕಟ್ಟೆಗೆ ಡಿಕ್ಕಿ ಹೊಡೆದು 200 ಅಡಿಗಳಷ್ಟು ಕೆಳಕ್ಕೆ ಉರುಳಿದಾಗ, ಏಳು ಮಂದಿ ಸತ್ತು 25 ಜನ ಗಾಯಗೊಂಡರು.

ಸಂಗತ

ಓಡುವ ಮಗುವ ತಡೆಯುವ ತವಕವೇಕೆ?

ಬೇಸಿಗೆ ಶಿಬಿರದ ನೆಪದಲ್ಲಿ ಮಕ್ಕಳನ್ನು ಕಟ್ಟಿಹಾಕುವುದು ಸರಿಯಲ್ಲ

• ಮಲ್ಲಿಕಾರ್ಜುನ ಹೆಗ್ಗಳಗಿ

'ಸೋಮವಾರದಿಂದ ಆರಂಭವಾಗುವ ವಾರದ ದಿನಗಳು ಮುಖ ಉಬ್ಬಿಸಿಕೊಂಡು, ಸಿಟ್ಟು ಸೆಡವಿನಿಂದ ಬೇಗ ಬಂದು ತಡಮಾಡಿ ನಿರ್ಗಮಿಸುತ್ತವೆ. ಭಾನುವಾರ ಮಾತ್ರ ಹಾಗಲ್ಲ, ಅದು ನಿಧಾನಕ್ಕೆ ನಗುತ್ತ, ನಲಿಯುತ್ತ, ಹಾಡುತ್ತಾ ಬಂದು ಬಹು ಬೇಗನೆ ಹೊರಟು ಹೋಗಿಬಿಡುತ್ತದೆ. ಎಲ್ಲ ದಿನಗಳೂ ಭಾನುವಾರ ಆದರೆ ಎಂಥ ಸೊಬಗು!' ಇದು ಕವಿ ರವೀಂದ್ರನಾಥ ಟ್ಯಾಗೋರ್ ಅವರು ರಜೆಯ ದಿನಗಳಿಗಾಗಿ ಹಂಬಲಿಸುವ ಮಗುವಿನ ಮನೋಭಾವ ಕುರಿತು ಬರೆದ 'ಸಂಡೇ' ಇಂಗ್ಲಿಷ್ ಕವನದ ಭಾವಾನುವಾದ.

ಕೆಲವು ಖಾಸಗಿ ಶಾಲೆಗಳು ತಮ್ಮ ಶಾಲೆಗಳಲ್ಲಿ ಮಕ್ಕಳಿಗಾಗಿ 'ಬೇಸಿಗೆ ಶಿಬಿರ' ಹಮ್ಮಿಕೊಳ್ಳಲು ಭರದಿಂದ ಸಿದ್ಧತೆ ನಡೆಸಿರುವುದನ್ನು ನೋಡಿದಾಗ ಈ ಕವಿತೆ ನೆನಪಾಯಿತು. ಪಠ್ಯಪುಸ್ತಕಗಳಲ್ಲಿ ರವೀಂದ್ರರ ಈ ಕವನ ಇದ್ದರೂ ಶಿಕ್ಷಕರು ಬೇಸಿಗೆ ಶಿಬಿರದ ನೆಪದಲ್ಲಿ ಮಕ್ಕಳನ್ನು ಕಟ್ಟಿ ಹಾಕುತ್ತಿರುವುದನ್ನು ನೋಡಿದರೆ ನೋವಾಗುತ್ತದೆ.

ಮಕ್ಕಳಿಗೆ ಬೇಸಿಗೆಯಲ್ಲಿ ಬಿಡುವು ನೀಡುವುದು, ದಸರಾ ಹಬ್ಬದ ಸಂದರ್ಭದಲ್ಲಿ ಕೆಲವು ದಿನ ರಜೆ ಕೊಡುವುದರ ಹಿಂದೆ ಘನವಾದ ಉದ್ದೇಶ ಅಡಗಿದೆ. ಮಕ್ಕಳು ಕಲಿಕೆಯ ಒತ್ತಡದಿಂದ ಮುಕ್ತರಾಗಲಿ, ಸಾಮಾಜಿಕವಾಗಿ ಬೆರೆಯಲಿ, ಸಜ್ಜನ ನಡೆಯನ್ನು ಬೆಳೆಸಿಕೊಳ್ಳಲಿ, ಕುಟುಂಬದ ಸದಸ್ಯರೊಂದಿಗೆ ಹೆಚ್ಚು ಸಮಯ ಕಳೆಯಲಿ, ಆಟ, ತಿರುಗಾಟದಿಂದ ಆರೋಗ್ಯ ವೃದ್ಧಿಸಿಕೊಳ್ಳಲಿ ಎಂಬುವು ದೀರ್ಘ ಅವಧಿಯ ರಜೆ ಕೊಡುವುದರ ಹಿಂದಿನ ಮಹತ್ವದ ಆಶಯಗಳಾಗಿವೆ. ಮಗು ಶಾಲೆಯ ಕೋಣೆಯಲ್ಲಿ ಬೆಳೆಯುವುದಕ್ಕಿಂತ ಶಾಲೆಯ ಹೊರಗೆ ಹೆಚ್ಚು ಸಶಕ್ತವಾಗಿ ಬೆಳೆಯುತ್ತದೆ ಎನ್ನುವ ಮಾತು ಇದಕ್ಕೆ ಬಹಳ ಪೂರಕವಾಗಿದೆ.

ಶಿಕ್ಷಕರು ಕೂಡ ಬಿಡುವಿನ ಅವಧಿಯಲ್ಲಿ ಹೆಚ್ಚಿನ ಓದು, ಹೊಸ ಆವಿಷ್ಕಾರ, ಹೊಸ ವಿಧಾನಗಳನ್ನು ಅರಿತುಕೊಂಡು ಮುಂದಿನ ವರ್ಷಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದು ಶಿಕ್ಷಣ ಇಲಾಖೆಯ ನೀತಿಯಾಗಿದೆ.

ಏಪ್ರಿಲ್, ಮೇ ತಿಂಗಳ ಬೇಸಿಗೆ ಬಿಡುವಿನಲ್ಲಿ ಬಹಳಷ್ಟು ಖಾಸಗಿ ಶಾಲೆಗಳು ಶಿಬಿರ ಹಮ್ಮಿಕೊಳ್ಳುತ್ತವೆ. ಆಕರ್ಷಕ ಕರಪತ್ರಗಳನ್ನು ಪ್ರಕಟಿಸಿ, ರಸ್ತೆಯ ಬದಿಗೆ ಬ್ಯಾನರ್‌ಗಳನ್ನು ಕಟ್ಟಿ ಪಾಲಕರ ಗಮನ ಸೆಳೆಯುವ ತಂತ್ರ ಜೋರಾಗಿ ನಡೆಯುತ್ತದೆ. ಶಿಬಿರದಲ್ಲಿ ಮಕ್ಕಳಿಗೆ ಮುಂದಿನ ವರ್ಗದ ಪಠ್ಯಪುಸ್ತಕದ ವಿಷಯಗಳನ್ನು ಕಲಿಸುತ್ತೇವೆ, ಮುಂದಿನ ಪರೀಕ್ಷೆಗಳಲ್ಲಿ ಶೇ 100 ಅಂಕ ಪಡೆಯುತ್ತಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸಜ್ಜುಗೊಳಿಸುತ್ತೇವೆ. ಯೋಗ, ವ್ಯಾಯಾಮ ತರಬೇತಿ ನೀಡುತ್ತೇವೆ. ಪೌಷ್ಟಿಕ ಊಟ, ಉಪಾಹಾರದ ವ್ಯವಸ್ಥೆ ಇದೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆಯು ಶಿಬಿರದ ಉದ್ದೇಶವಾಗಿದೆ ಎಂಬಂತಹ ವಿವರಗಳನ್ನು ಕರಪತ್ರಗಳಲ್ಲಿ ಪ್ರಕಟಿಸುತ್ತಾರೆ. ಆದರೆ ತಾವು ವಸೂಲು ಮಾಡುವ ಶುಲ್ಕದ ಬಗ್ಗೆ ಮಾಹಿತಿ ಇರುವುದಿಲ್ಲ. ಶಿಬಿರದ ಶುಲ್ಕ ಎಷ್ಟು ಎಂಬುದನ್ನು ಪಾಲಕರು ಮತ್ತು ಶಿಬಿರ ಸಂಘಟನೆಯ ಮುಖ್ಯಸ್ಥರು ಚರ್ಚಿಸಿ ನಿರ್ಧರಿಸುತ್ತಾರೆ.

ಶಿಬಿರ ನಡೆಸುವುದಕ್ಕೆ ಶಿಕ್ಷಣ ಇಲಾಖೆಯಿಂದ ಲಿಖಿತ ಒಪ್ಪಿಗೆ ಪಡೆಯಬೇಕಾಗುತ್ತದೆ. ನಗರ, ಪಟ್ಟಣಗಳ ಕೆಲವು ಸಂಸ್ಥೆಗಳು ಮಾತ್ರ ಒಪ್ಪಿಗೆ ಪಡೆಯುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಹಮ್ಮಿಕೊಳ್ಳುವ ಬಹಳಷ್ಟು ಶಿಬಿರಗಳಿಗೆ ಸಂಬಂಧಿಸಿದ ಸಂಸ್ಥೆಗಳು ಒಪ್ಪಿಗೆ ಪಡೆದಿರುವುದಿಲ್ಲ.

ತಮ್ಮ ಮಕ್ಕಳು ಚೆನ್ನಾಗಿ ಓದಲಿ ಎಂಬುದು ಎಲ್ಲ ಪಾಲಕರ ಆಸೆಯಾಗಿರುತ್ತದೆ. ಪರೀಕ್ಷೆಯಲ್ಲಿ ಮಗು ಪಡೆಯುವ ಅಂಕಗಳೇ ನಿಜವಾದ ಮಾನದಂಡ ಎಂದು ಇವರು ಗಟ್ಟಿಯಾಗಿ ನಂಬುತ್ತಾರೆ.

ಮಕ್ಕಳು ಬಿಡುವಿನ ದಿನಗಳಲ್ಲಿ ಸುಮ್ಮನೆ ತಿರುಗಿ ಹಾಳಾಗುತ್ತಾರೆ, ಕಲಿತ ವಿಷಯ ಮರೆತುಬಿಡುತ್ತಾರೆ, ಮನೆಯಲ್ಲಿ ಹಟ, ಜಗಳ, ಕಿರಿಕಿರಿ ಮಾಡುತ್ತಾರೆ ಎನ್ನುವ ಭಾವನೆಯಿಂದಲೂ ಕೆಲವು ಪಾಲಕರು ಮಕ್ಕಳನ್ನು ಶಿಬಿರಕ್ಕೆ ಸೇರಿಸಿಬಿಡುತ್ತಾರೆ.

ಇಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿ ಎಂದರೆ, ಖಾಸಗಿ ಶಾಲೆಯಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಶಾಲೆಯ ಆಡಳಿತ ಮಂಡಳಿಯವರು ಬೇಸಿಗೆ ಬಿಡುವಿನ ಅವಧಿಯಲ್ಲಿ ಸಂಬಳ ಕೊಡುವುದಿಲ್ಲ. ಇಂಥ ಶಿಕ್ಷಕರು ಆರ್ಥಿಕ ಅನುಕೂಲಕ್ಕಾಗಿ ಅನಿವಾರ್ಯವಾಗಿ ಶಿಬಿರಗಳನ್ನು ಸಂಘಟಿಸುತ್ತಾರೆ.

ಸ್ಪೇನ್, ಇಟಲಿ, ರಷ್ಯಾದಂತಹ ಕೆಲವು ದೇಶಗಳು ಶೈಕ್ಷಣಿಕ ವರ್ಷದ ಪರೀಕ್ಷೆಗಳು ಮುಗಿದ ನಂತರ ಮೂರು ತಿಂಗಳ ದೀರ್ಘ ಬಿಡುವು ನೀಡುತ್ತವೆ. ಆಸ್ಟ್ರೇಲಿಯಾದಲ್ಲಿ 18 ವರ್ಷ ವಯಸ್ಸು ದಾಟಿದ ವಿದ್ಯಾರ್ಥಿಗಳು ದುಡಿದು ಸಂಪಾದಿಸಿದ ಹಣದಲ್ಲಿಯೇ ಓದು ಮುಂದುವರಿಸಬೇಕೆಂಬ ನಿಯಮ ಇದೆ. ಪಾಲಕರಿಂದ ಆರ್ಥಿಕ ನೆರವು ಪಡೆಯುವುದು ಅಪಮಾನ ಎಂದು ಭಾವಿಸುವುದು ಇಲ್ಲಿಯ ಅಪರೂಪದ ಆದರ್ಶವಾಗಿದೆ.

'ಶಿಕ್ಷಣ ಯಾಂತ್ರಿಕವಾಗಬಾರದು. ಕಲಿಕೆಯಲ್ಲಿ ಮಧ್ಯಂತರ ಬಿಡುವು ಅವಶ್ಯ. ಮಕ್ಕಳಿಗೆ ಶಿಕ್ಷಣವೇ ಆಟವಾಗಬೇಕು. ಅದು ಶಿಕ್ಷೆಯಾದಾಗ ಅವರ ಮನಸ್ಸು ಅದನ್ನು ಗ್ರಹಿಸುವುದಿಲ್ಲ' ಎಂಬುದು ಹಿರಿಯ ಶಿಕ್ಷಣ ತಜ್ಞ ವಿ.ಎಸ್.ಮಾಳಿ ಅವರ ಸ್ಪಷ್ಟ ಅಭಿಪ್ರಾಯವಾಗಿದೆ.

ಮಕ್ಕಳು ಬೇಸಿಗೆ ಬಿಡುವಿನಲ್ಲಿ ಸ್ವಚ್ಛಂದವಾಗಿ ಓಡಾಡಿ, ಬಿಸಿಲಿನಲ್ಲಿ ಬಳಲಿ, ಆಡಿ, ಹಾಡಿ, ಜಗಳವಾಡಿ, ಗುಡ್ಡ ಹತ್ತಿ ನಕ್ಕು, ಜಾರಿ ಬಿದ್ದು ದುಃಖಿಸಿ, ಸೋತು, ಗೆದ್ದು ಮುಂದಿನ ವಾಸ್ತವದ ಬದುಕು ಎದುರಿಸುವುದಕ್ಕೆ ಸಜ್ಜಾಗುತ್ತಾರೆ. ಆಡುವುದನ್ನು ನಿಲ್ಲಿಸಿ ಮಕ್ಕಳನ್ನು ಶಿಬಿರಕ್ಕೆ ಎಳೆದು ತರುವುದು ಹಿಂಸೆ ಅನಿಸುತ್ತದೆ.

ವಾಚಕರ ವಾಣಿ

ವೋಟಿಗಾಗಿ ಮೇಕೆದಾಟು!

ಮೇಕೆದಾಟು ಯೋಜನೆಯನ್ನು ಎಲ್ಲ ಪಕ್ಷಗಳೂ ಬೆಂಬಲಿಸಬೇಕೆಂದು ಎಚ್.ಡಿ.ದೇವೇಗೌಡರು ಸಲಹೆ ನೀಡಿ ಎಲ್ಲ ನಾಯಕರ ಮೂಗಿಗೂ ತುಪ್ಪ ಸವರಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ, ಈ ದುಂದುವೆಚ್ಚದ, ವಿಧ್ವಂಸಕಾರಿ ಕನಸಿಗೆ ಯಾವ ಪಕ್ಷವೂ ನೀರೆರೆಯಬಾರದೆಂದು ವಿಜ್ಞಾನಿಗಳು, ಪರಿಸರವಾದಿಗಳು ಹಾಗೂ ವಿಚಾರವಂತರೆಲ್ಲ ಹೇಳುತ್ತಲೇ ಬಂದಿದ್ದಾರೆ. ಈ ಯೋಜನೆಗೆ ಸುರಿಯುವ ಹಣದ ಅರ್ಧ ಭಾಗವನ್ನು ಬೆಂಗಳೂರಿನ ಕೆರೆಗಳ ಹೂಳೆತ್ತಲು, ಇಲ್ಲಿನ ಮಳೆನೀರನ್ನು ಸಂಗ್ರಹಿಸಲು ಮತ್ತು ಕೊಳೆನೀರನ್ನು ಮೂರನೆಯ ಹಂತದಲ್ಲಿ ಶುದ್ಧೀಕರಿಸಲು ಬಳಸಿದರೆ, ಹೆಚ್ಚುವರಿ 31 ಟಿಎಂಸಿ ಅಡಿ (ಮೇಕೆದಾಟು ಯೋಜನೆಯಿಂದ ಸಿಗುವ ನೀರಿನ ಇಮ್ಮಡಿ) ನೀರು ಸಿಗುತ್ತದೆಂಬ ಲೆಕ್ಕಾಚಾರವನ್ನು ಮುಂದಿಟ್ಟಿದ್ದಾರೆ. ಹಾಗೆ ಮಾಡಿದರೆ ನಗರದ ಗಾಳಿಯೂ ಮನಸ್ಸೂ ತಂಪಾಗಿರುತ್ತವೆ; ನಮ್ಮ ದೇಶದ ಮೊದಲ 'ಸ್ಪಾಂಜ್ ಸಿಟಿ' ಎಂದು ಬೆಂಗಳೂರು ಖ್ಯಾತಿ ಪಡೆಯುತ್ತದೆ. ರಾಮನಗರ, ಕನಕಪುರಕ್ಕೆ ನೀರು ಬೇಕೆಂದರೆ ಅಲ್ಲೂ ಬೆಂಗಳೂರು ಮಾದರಿಯನ್ನು ಅನ್ವಯಿಸಲು ಸಾಧ್ಯವಾಗುತ್ತದೆ. ನಮ್ಮದು ವಿದ್ಯಾವಂತರು, ವಿಜ್ಞಾನಿಗಳ ನಗರವೆಂದು ಸಾರಿದಂತಾಗುತ್ತದೆ.

ಇಷ್ಟೆತ್ತರದ ಭೂಮಿಯಲ್ಲಿ ಇಷ್ಟು ದೊಡ್ಡ ಪ್ರಮಾಣದ ನೀರು ಕೊಳಕಿನ ಧಾರೆಯಾಗಿ, ಆವಿಯಾಗಿ ಹೋಗುತ್ತಿದೆ. ಅದನ್ನು ಮರೆತು, ಮೇಕೆದಾಟುವಿನಲ್ಲಿ ದಶಕಗಳ ಕಾಲ ಡೈನಮೈಟ್ ಸಿಡಿಸುತ್ತ, ಅರಣ್ಯ ನಾಶ ಮಾಡುತ್ತ, ಗಡಿಯಂಚಿನಲ್ಲಿ ತಗಾದೆ ಎಬ್ಬಿಸಿ ಮತದಾರರಲ್ಲಿ ಕಿಚ್ಚೆಬ್ಬಿಸುತ್ತ ಹೋಗುವ ರಾಜಕೀಯ ಬೇಕೊ ಅಥವಾ ನಾಳಿನ ಪೀಳಿಗೆ ಹೆಮ್ಮೆಪಡುವಂತಹ ವಿವೇಕದ ನಡೆ ಬೇಕೊ?

ನಾಗೇಶ ಹೆಗಡೆ, ಕೆಂಗೇರಿ

ಪುರದ ಪುಣ್ಯಂ...

ಕೊಟ್ಟಮಾತಿನಂತೆ ಎಲ್ಲವನ್ನೂ ಬಿಟ್ಟು ಅಯೋಧ್ಯಾಪುರದಿಂದ ಕಾಡಿನತ್ತ ಹೊರಟ ಹರಿಶ್ಚಂದ್ರನನ್ನು, 'ಪುರದ ಪುಣ್ಯಂ ಪುರುಷ ರೂಪಿಂದ ಪೋಗುತಿದೆ...' ಎಂದು ಬಣ್ಣಿಸುವ ಮಹಾಕವಿ ರಾಘವಾಂಕ, ಈ ಲೋಕದ ಚುನಾವಣಾ ಕಣದ ಅಭ್ಯರ್ಥಿಗಳನ್ನು ಕಂಡು ಹೀಗನ್ನುತ್ತಿದ್ದನೇನೊ: ಕೋಟಿ ಕೋಟಿ ಕುಳಗಳ್... ಬೀದಿಬೀದಿ ಅಲೆಯುತಿರ್ಪರ್, ತಟ್ಟುವರ್ ಮನೆಮನಗಳ ಕದವ ಗೆಲುವಿಗಾಗಿ ಹಂಬಲಿಸುತ್ತ, ಹಗಲಿರುಳ ಪರಿವಿಲ್ಲದೆ ಯಾಚಿಸುತಿಹರ್ ಮತದಾರರ ಆ ಅಮೂಲ್ಯ ಮತವ...!

ಮ.ಗು.ಬಸವಣ್ಣ, ನಂಜನಗೂಡು

ವಿದ್ಯಾರ್ಥಿಗಳ ಮೇಲೆ ವ್ಯತಿರಿಕ್ತ ಪರಿಣಾಮ

ಮುಖ್ಯ ಶಿಕ್ಷಕರ ನಿರ್ಲಕ್ಷ್ಯದಿಂದ ತನಗೆ ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಪ್ರವೇಶ ಪತ್ರ ಬಂದಿಲ್ಲ ಎಂದು ಆರೋಪಿಸಿ, ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಹರನಗಿರಿ ಸರ್ಕಾರಿ ಪ್ರೌಢಶಾಲೆಯ ಅಭಿಷೇಕ್ ಜರಮಲ್ಲ ಎಂಬ ವಿದ್ಯಾರ್ಥಿ ತನ್ನ ಪೋಷಕರೊಂದಿಗೆ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಮಾರ್ಚ್ 26). ಇಂತಹ ಆರೋಪದಲ್ಲಿ ವಾಸ್ತವ ಇದ್ದರೆ ಇದು ನಿಜಕ್ಕೂ ಅಮಾನವೀಯ ಪ್ರಕರಣವೇ ಆಗುತ್ತದೆ. ಈ ಬಗೆಯ ಬೆಳವಣಿಗೆಗಳು ಸಂಬಂಧಪಟ್ಟ ವಿದ್ಯಾರ್ಥಿ ಮಾತ್ರವಲ್ಲದೆ ಇತರ ವಿದ್ಯಾರ್ಥಿಗಳ ಮನಸ್ಸಿನ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಇಂತಹ ಸಂಗತಿಗಳು ಘಟಿಸದಂತೆ ನೋಡಿಕೊಳ್ಳಬೇಕಾದುದು ಶಿಕ್ಷಣ ಇಲಾಖೆಯ ಕರ್ತವ್ಯ.

ಸಚಿನ್ ಹೊಳೆಹದ್ದು, ಶೃಂಗೇರಿ

ಜಲಮಾರ್ಷಲ್ ನೇಮಿಸಿ

ನಗರ ಮತ್ತು ಪಟ್ಟಣಗಳಲ್ಲಿ ಕೆಲವರು ಬೆಳಿಗ್ಗೆ ಮನೆ ಮುಂದೆ ರಂಗೋಲಿ ಹಾಕಲು ನೀರು ಚಿಮುಕಿಸುವ ಬದಲು ನೀರು ಸುರಿದು ರಸ್ತೆ ತೊಳೆಯುವ ಅಭ್ಯಾಸ ಹೊಂದಿರುತ್ತಾರೆ. ಇಂತಹವರ ವಿರುದ್ಧ ನಿಗಾ ವಹಿಸಿ ದಂಡ ಹಾಕಲು, ಅಂದರೆ ನೀರಿನ ದುರ್ಬಳಕೆ ತಡೆಯಲು ಸ್ಥಳೀಯ ಸಂಸ್ಥೆಗಳು ಜಲಮಾರ್ಷಲ್‌ಗಳನ್ನು ನೇಮಿಸಬೇಕು. ಸ್ವಯಂಸೇವಕರನ್ನು ಈ ಕಾರ್ಯಕ್ಕೆ ನಿಯೋಜಿಸಿದರೆ ಆರ್ಥಿಕ ಹೊರೆಯೂ ಬೀಳುವುದಿಲ್ಲ.

ಎಸ್.ರವಿ, ಮೈಸೂರು

ಭ್ರಷ್ಟರಿಗೆ ಪಾಠ ಕಲಿಸಿದ ಇತಿಹಾಸ ಇದೆ

'ಚುನಾವಣಾ ರಾಜಕಾರಣದಲ್ಲಿ ಮಕ್ಕಳಾಟ' ಎಂಬ ಲೇಖನದಲ್ಲಿ (ಪ್ರ.ವಾ., ಮಾರ್ಚ್ 26) ಚಂದ್ರಕಾಂತ ವಡ್ಡು ಅವರು ನಮ್ಮ ಪ್ರಸ್ತುತ ರಾಜಕೀಯದಲ್ಲಿ ಕಾಣಿಸಿಕೊಂಡ ಕೆಲವು ಒಳಸುಳಿಗಳತ್ತ ಗಮನ ಸೆಳೆದಿರುವುದು ಸರಿ. ಆದರೆ ಕೊನೆಯಲ್ಲಿ ಅವರು 'ಉತ್ತರವಿಲ್ಲದೇ ಉಳಿಯುವ ಪ್ರಶ್ನೆ: ಯಾರು, ಎಲ್ಲಿಂದ ಸರಿಪಡಿಸುವುದು?' ಎಂದಿದ್ದಾರೆ. ರಾಜಕೀಯ ಭ್ರಷ್ಟಾಚಾರವನ್ನು ಮತದಾರರೇ ಮತದಾನದ ಮೂಲಕವೇ ಸರಿಪಡಿಸಬೇಕಿದೆ. ಅದಕ್ಕೆ ಬೇರೆ ದಾರಿಯೇ ಇಲ್ಲ. ಆದರೆ ಇಂದು ಮತದಾರರನ್ನು ಸಹ ಭ್ರಷ್ಟರನ್ನಾಗಿಸಿರುವುದು ವಾಸ್ತವ ಸತ್ಯವಾಗಿದೆ. ಆದರೂ ನಾವು ಮತದಾರರನ್ನು ನಂಬಲೇಬೇಕಿದೆ. ಏಕೆಂದರೆ ಮತದಾರರು ಭ್ರಷ್ಟ ರಾಜಕಾರಣಿಗಳಿಗೆ ಪಾಠ ಕಲಿಸಿದ ಅನೇಕ ಉದಾಹರಣೆಗಳು ನಮ್ಮಲ್ಲಿವೆ.

ಆಡಳಿತ ನಡೆಸಿದ ಪಕ್ಷವನ್ನು ಐದು ಅಥವಾ ಹತ್ತು ವರ್ಷಕ್ಕೊಮ್ಮೆ ಬದಲಿಸುವ ಆಕಾಂಕ್ಷೆ ಸಾಮಾನ್ಯವಾಗಿ ಮತದಾರರಲ್ಲಿ ಇದ್ದೇ ಇರುತ್ತದೆ. ಇದಕ್ಕೆ ಬಹಳ ಒಳ್ಳೆಯ ಉದಾಹರಣೆ ಎಂದರೆ, ಎಂತಹ ಪ್ರತಿಕೂಲ ಸಂದರ್ಭದಲ್ಲೂ 1977ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ನಮ್ಮ ದೇಶದ ಮತದಾರರು ಕಾಂಗ್ರೆಸ್ ಪಕ್ಷಕ್ಕೆ ಪಾಠ ಕಲಿಸಿದರು. ಹಾಗೆ ನೋಡಿದರೆ, ಆಗ ದೇಶದ ಮತದಾರರಲ್ಲಿ ರಾಜಕೀಯ ಪ್ರಜ್ಞೆ ಅಷ್ಟೊಂದು ಚುರುಕಾಗಿರಲಿಲ್ಲ. ಇಂಟರ್ನೆಟ್ ಬಳಕೆ ಈಗಿನಂತೆ ಇರಲಿಲ್ಲ. ಮೊಬೈಲ್ ಫೋನ್ ಸಹ ಇರಲಿಲ್ಲ. ಸಾಕ್ಷರತೆಯ ಪ್ರಮಾಣವೂ ಈಗಿನಷ್ಟು ಇರಲಿಲ್ಲ. ಈ ಎಲ್ಲದರ ನಡುವೆಯೂ ಅಂದಿನ ಮತದಾರರು ಕಾಂಗ್ರೆಸ್ ಪಕ್ಷವನ್ನು ಮತದಾನದ ಮೂಲಕವೇ ಸೋಲಿಸಿ ಪಾಠ ಕಲಿಸಿದರು. ಆನಂತರ ಜನತಾ ಪಕ್ಷದ ಒಳಜಗಳವನ್ನೂ ಸಹಿಸದ ಮತದಾರರು ಜನತಾ ಪಕ್ಷಕ್ಕೂ ಪಾಠ ಕಲಿಸಿ ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ನೀಡಿದ್ದೂ ಉಂಟು. ಅಂದರೆ, ನಮ್ಮ ದೇಶದ ಮತದಾರರಿಗೆ ಭ್ರಷ್ಟಾಚಾರರಹಿತ, ಕಿತ್ತಾಟವಿಲ್ಲದ, ರೈತಪರ, ಪರಿಸರಪರ ಸರ್ಕಾರ ಬೇಕೆಂಬ ಆಸೆ ಪ್ರಬಲವಾಗಿದೆ. ಮತದಾರರು ಇಂದು ಜಾಗೃತರಾಗಿದ್ದಾರೆ. ಹೀಗಾಗಿ, ಬರಲಿರುವ ಚುನಾವಣೆಯಲ್ಲಿ ಮತದಾರರು ಭ್ರಷ್ಟ ರಾಜಕಾರಣಿಗಳಿಗೆ ಪಾಠ ಕಲಿಸಲಿದ್ದಾರೆ ಎಂಬ ನಿರೀಕ್ಷೆ ಇಟ್ಟುಕೊಳ್ಳಬಹುದು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಶುದ್ಧಹಸ್ತ’ರಾಗಲು ಬಿಜೆಪಿ ಜೊತೆ ಸೇರಿದರು

ಬಿಜೆಪಿ ಕೇಂದ್ರದಲ್ಲಿ 2014ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಪಕ್ಷಾಂತರದ ವರಸೆಯೇ ಬದಲಾಗಿದೆ. ಭ್ರಷ್ಟಾಚಾರದ ಗಂಭೀರ ಆರೋಪಗಳನ್ನು ಹೊತ್ತು ತನಿಖೆಗೆ ಒಳಗಾದ ಹಲವು ಮುಖಂಡರನ್ನು ಬಿಜೆಪಿ ತನ್ನೊಳಗೆ ಸೆಳೆದುಕೊಂಡಿದೆ. ಪಕ್ಷ ಸೇರುವವರೆಗೆ ಬಿಜೆಪಿ ಮುಖಂಡರು ಈ ಮುಖಂಡರ ಕುರಿತು ಪುಂಖಾನುಪುಂಖವಾಗಿ ಆರೋಪಗಳನ್ನು ಮಾಡಿದ್ದಾರೆ. ಆದರೆ, ಒಮ್ಮೆ ಬಿಜೆಪಿಯೊಳಕ್ಕೆ ಅವರು ಕಾಲಿಟ್ಟ ಮೇಲೆ ಆರೋಪಗಳೆಲ್ಲವೂ ನಿಂತು ಹೋಗಿವೆ. ಅವರ ವಿರುದ್ಧ ಇದ್ದ ಭ್ರಷ್ಟಾಚಾರದ ತನಿಖೆ ಏನಾಗಿದೆ ಎಂಬುದೇ ಯಾರಿಗೂ ತಿಳಿಯುವುದಿಲ್ಲ. ಹೀಗೆ ಬಿಜೆಪಿ ಸೇರಿ ಶುದ್ಧೀಕರಣಗೊಂಡವರ ಒಂದು ಪಟ್ಟಿ ಇಲ್ಲಿದೆ

ದಿಗಂಬರ ಕಾಮತ್

ಗೋವಾ ಹಾಗೂ ಅಸ್ಸಾಂಗಳಲ್ಲಿ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಯೋಜನೆಗಳ ಗುತ್ತಿಗೆ ನೀಡುವ ವಿಚಾರದಲ್ಲಿ ಗೋವಾದ ಅಂದಿನ ಮುಖ್ಯಮಂತ್ರಿ ದಿಗಂಬರ ಕಾಮತ್ ಅವರು ಲಂಚ ಪಡೆದುಕೊಂಡಿದ್ದಾರೆ ಎಂದು 2010ರಲ್ಲಿ ಸುದ್ದಿಯಾಯಿತು. ಅಮೆರಿಕ ಮೂಲಕ ಲೂಯಿಸ್ ಬರ್ಗರ್ ಎನ್ನುವ ಕಂಪನಿಯು ಕಾಮತ್ ಅವರಿಗೆ ಕೋಟಿಗಟ್ಟಲೆ ರೂಪಾಯಿ ಲಂಚವನ್ನು ನೀಡಿತ್ತು ಎಂದು ಪ್ರಕರಣ ದಾಖಲಾಗಿತ್ತು. ಕಾಮತ್ ಅವರೊಂದಿಗೆ ಅಂದಿನ ಪಿಡಬ್ಲ್ಯುಡಿ ಸಚಿವ ಚರ್ಚಿಲ್ ಅಲೆಮಾವೊ ಅವರೂ ಈ ಪ್ರಕರಣದಲ್ಲಿ ಆರೋಪಿಯಾಗಿದ್ದರು. ಸಿಬಿಐ ನಡೆಸುತ್ತಿದ್ದ ತನಿಖೆಯಲ್ಲಿ 2021ರ ಹೊತ್ತಿಗೆ ಜಾರಿ ನಿರ್ದೇಶನಾಲಯ ಪ್ರವೇಶ ಪಡೆದುಕೊಂಡಿತು. ಈ ಪ್ರಕರಣದಲ್ಲಿ ಈ ಇಬ್ಬರ ಮೇಲೆ ಪ್ರಕರಣ ದಾಖಲಿಸಲು ನ್ಯಾಯಾಲಯ ಅನುಮತಿಯನ್ನೂ ನೀಡಿತು. 2022ರಲ್ಲಿ ಕಾಮತ್ ಅವರು ಕಾಂಗ್ರೆಸ್‌ನ ಇನ್ನಿತರ ಎಂಟು ಶಾಸಕರೊಂದಿಗೆ ಬಿಜೆಪಿಗೆ ಸೇರ್ಪಡೆಗೊಂಡರು.

ನಾನು ದೇವಾಲಯಕ್ಕೆ ಹೋಗಿ ದೇವರನ್ನು ಕೇಳಿದೆ, ಬಿಜೆಪಿಗೆ ಸೇರುವಂತೆ ದೇವರೇ ಸೂಚಿಸಿದರು
ದಿಗಂಬರ ಕಾಮತ್ ಬಿಜೆಪಿ ಶಾಸಕ (ಬಿಜೆಪಿ ಸೇರಿದ ಕೆಲ ದಿನಗಳ ಬಳಿಕ ನೀಡಿದ್ದ ಹೇಳಿಕೆ)

ಬಾಬಾ ಸಿದ್ದಿಕಿ

ಕೊಳೆಗೇರಿ ಜನರಿಗೆ ಪುನರ್‌ವಸತಿ ಕಲ್ಪಿಸುವ ಯೋಜನೆ ಸಂಬಂಧ ಭೂ ಅವ್ಯವಹಾರಕ್ಕೆ ಸಂಬಂಧಿಸಿ ₹500 ಕೋಟಿ ಹಗರಣ ನಡೆದಿದೆ ಎಂಬ ಆರೋಪವು ಕಾಂಗ್ರೆಸ್‌ನಿಂದ ಮೂರು ಬಾರಿ ಶಾಸಕರಾಗಿದ್ದ ಬಾಬಾ ಸಿದ್ದಿಕಿ ಅವರ ಮೇಲಿದೆ. ಈ ಸಂಬಂಧ 2017ರಲ್ಲಿ ಜಾರಿ ನಿರ್ದೇಶನಾಲವು ಅವರಿಗೆ ಸೇರಿದ ಸ್ಥಳಗಳಲ್ಲಿ ದಾಳಿ ನಡೆಸಿತು. 2018ರಲ್ಲಿ ಅವರ ಕೆಲವು ಆಸ್ತಿಗಳನ್ನೂ ಮುಟ್ಟುಗೋಲು ಹಾಕಿಕೊಂಡಿತು. ಮಹಾರಾಷ್ಟ್ರ ವಸತಿ ಹಾಗೂ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಸಿದ್ದಿಕಿ, ತಮ್ಮ ಅಧಿಕಾರ ಬಳಸಿ, ಅವ್ಯವಹಾರ ನಡೆಸಿ, ಹಣ ಮಾಡಿಕೊಂಡಿದ್ದಾರೆ ಎನ್ನುವುದು ಅವರ ಮೇಲಿರುವ ಪ್ರಕರಣ. ಜಾರಿ ನಿರ್ದೇಶನಾಲಯವು ಪ್ರಕರಣದ ತನಿಖೆ ನಡೆಸುತ್ತಿರುವಂತೆಯೇ ಸಿದ್ದಿಕಿ ಅವರು ಅಜಿತ್ ಬಣದ ಎನ್‌ಸಿಪಿಯನ್ನು ಸೇರಿಕೊಂಡಿದ್ದಾರೆ. ಈ ಪಕ್ಷ, ಬಿಜೆಪಿ ಮತ್ತು ಶಿವಸೇನಾ (ಶಿಂದೆ ಬಣ) ಜೊತೆಯಾಗಿ ಮಹಾರಾಷ್ಟ್ರದಲ್ಲಿ ಆಡಳಿತ ನಡೆಸುತ್ತಿವೆ.

ಜಾರಿ ನಿರ್ದೇಶನಾಲಯ ಹಾಗೂ ಸಿಬಿಐ ಸಂಸ್ಥೆಗಳು ವಿರೋಧ ಪಕ್ಷದವರಿಗೆ ಕಿರುಕುಳ ನೀಡುತ್ತಿವೆ. ಕೇಂದ್ರ ಸರ್ಕಾರವು ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಇಂಥ ಕೆಲಸ ಮಾಡುತ್ತಿದೆ. ಜೊತೆಗೆ, ನಮ್ಮ ಚಾರಿತ್ರ್ಯವನ್ನು ಹನನ ಮಾಡುತ್ತಿದೆ ಮತ್ತು ನಮ್ಮ ಧ್ವನಿಗಳನ್ನು ಅಡಗಿಸುತ್ತಿದೆ. ಆದರೆ, ನಾವು ನಮ್ಮ ಧ್ವನಿ ಎತ್ತುವುದನ್ನು ಮುಂದುವರಿಸುತ್ತೇವೆ
ಬಾಬಾ ಸಿದ್ದಿಕಿ (2017ರಲ್ಲಿ ಇ.ಡಿ. ದಾಳಿ ನಡೆಸಿದ ಬಳಿಕ, ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದ ಪೋಸ್ಟ್)

ವೈ.ಎಸ್. ಚೌಧರಿ

ತಮ್ಮ ಸುಜನ ಗ್ರೂಪ್ ಕಂಪನಿಯ ಕಾರಣಕ್ಕಾಗಿ ವೈ.ಎಸ್. ಚೌಧರಿ ಅವರನ್ನು ಸುಜನ ಚೌಧರಿ ಎಂದೇ ಕರೆಯಲಾಗುತ್ತದೆ. ಕೋಟ್ಯಂತರ ರೂಪಾಯಿ ವ್ಯವಹಾರವನ್ನು ಈ ಕಂಪನಿ ನಡೆಸುತ್ತದೆ. ಚೌಧರಿ ಅವರು ಕೇಂದ್ರದಲ್ಲಿ ಸಚಿವರೂ ಆಗಿದ್ದರು. ಆದರೆ, ಟಿಡಿಪಿಯು ಎನ್‌ಡಿಎ ಮೈತ್ರಿಕೂಟ ತೊರೆದ ಕಾರಣ ಅವರನ್ನು ಸಂಪುಟದಿಂದ ಕೈಬಿಡಲಾಗಿತ್ತು. ಹೀಗಿರುವಾಗ, 2018ರ ನವೆಂಬರ್ ಹೊತ್ತಿಗೆ ಚೌಧರಿ ಅವರಿಗೆ ಸೇರಿದ ಸುಮಾರು ಆರು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯವು ದಾಳಿ ನಡೆಸುತ್ತದೆ. ಚೌಧರಿ ಅವರ ಕಂಪನಿಯು ಸುಮಾರು ₹5,700 ಕೋಟಿ ಅವ್ಯವಹಾರ ನಡೆಸಿದೆ ಎಂದೂ ಅದು ಆರೋಪಿಸುತ್ತದೆ. ಸಿಬಿಐ ಹಾಗೂ ಆದಾಯ ತೆರಿಗೆ ಇಲಾಖೆಯವರೂ ಚೌಧರಿ ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ದಾಳಿ ನಡೆಸುತ್ತವೆ ಮತ್ತು ನೋಟಿಸ್ ನೀಡುತ್ತವೆ. ‘ಆಂಧ್ರದ ಮಲ್ಯ’ ಎಂದು ಚೌಧರಿ ಅವರನ್ನು ಕರೆಯಬೇಕು ಎಂದು ಬಿಜೆಪಿಯು ಒಮ್ಮೆ ವ್ಯಂಗ್ಯವಾಡಿತ್ತು. ಇಷ್ಟೆಲ್ಲಾ ದಾಳಿಗಳು, ಪ್ರಕರಣಗಳು ದಾಖಲಾದ ಕೆಲವೇ ತಿಂಗಳಲ್ಲಿ ಅಂದರೆ, ಜೂನ್ 2019ರ ಹೊತ್ತಿಗೆ ವೈ.ಎಸ್. ಚೌಧರಿ ಸೇರಿ ಟಿಡಿಪಿಯ 6 ಸಂಸದರಲ್ಲಿ ನಾಲ್ವರು ಬಿಜೆಪಿ ಸೇರಿಕೊಂಡರು. ಈ ಬಳಿಕ, ಅವರ ಮೇಲಿದ್ದ ಆರೋಪಗಳು, ಪ್ರಕರಣಗಳಲ್ಲಿ ಯಾವುದೇ ತೀವ್ರ ತೆರನಾದ ಪ್ರಗತಿ ಕಂಡುಬಂದಿಲ್ಲ. ಅವರು ಈಗ ಬಿಜೆಪಿಯ ರಾಜ್ಯಸಭೆ ಸದಸ್ಯರಾಗಿದ್ದಾರೆ.

ನನ್ನ ವೃತ್ತಿ ರಾಜಕಾರಣವಲ್ಲ. ನಾನು ರಾಜಕಾರಣಿಯೂ ಅಲ್ಲ. ಆದರೆ, ದೇಶ ಕಟ್ಟುವ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುವುದಕ್ಕಾಗಿ ನಾನು ಬಿಜೆಪಿಯನ್ನು ಸೇರಿಕೊಂಡಿದ್ದೇನೆ
ವೈ.ಎಸ್. ಚೌಧರಿ (ಬಿಜೆಪಿ ಪಕ್ಷವನ್ನು ಸೇರಿಕೊಂಡ ಬಳಿಕ, ಪತ್ರಕರ್ತರಿಗೆ ನೀಡಿದ ಪ್ರತಿಕ್ರಿಯೆ)



ಆಧಾರ: ಪಿಟಿಐ

ಛಗನ್ ಭುಜ್‌ಬಲ್

ಛಗನ್ ಅವರೂ ಸೇರಿದಂತೆ, ಅವರ ಮಗ ಪಂಕಜ್ ಹಾಗೂ ಛಗನ್ ಅವರ ಸಂಬಂಧಿ ಸಮೀರ್, ಜಾರಿ ನಿರ್ದೇಶನಾಲಯದ ತನಿಖೆ ಎದುರಿಸುತ್ತಿದ್ದಾರೆ. ಮಹಾರಾಷ್ಟ್ರ ಸದನ್ ಹಗರಣ; ಇದು ಸುಮಾರು 2005 ಪ್ರಕರಣ. ಸದನ್ ಕಟ್ಟಡದ ನಿರ್ಮಾಣದಲ್ಲಿ ವಂಚನೆ ನಡೆದಿದೆ ಎಂದು ಎಫ್‌ಐಆರ್ ದಾಖಲಾಗಿತ್ತು. ಈ ಹಗರಣದ ಬಗ್ಗೆ 2016ರಿಂದ ಜಾರಿ ನಿರ್ದೇಶನಾಲಯವು ತನಿಖೆ ನಡೆಸುತ್ತಿದೆ. ಸರ್ಕಾರಕ್ಕೆ ಸುಮಾರು ₹840 ಕೋಟಿ ನಷ್ಟ ಮಾಡಿದ್ದಾರೆ ಎನ್ನುವುದು ಛಗನ್ ಮೇಲಿರುವ ಮುಖ್ಯ ಆರೋಪ. ಈ ಸಂಬಂಧ ಅವರು 2016ರಿಂದ 2018ರವರೆಗೆ ಜೈಲಿನಲ್ಲಿದ್ದರು. ಇವರಿಗೆ ಸೇರಿದ ಕೋಟಿಗಟ್ಟಲೆ ಆಸ್ತಿಯನ್ನು ಜಾರಿ ನಿರ್ದೇಶನಾಲಯವು ಮುಟ್ಟುಗೋಲು ಹಾಕಿಕೊಂಡಿದೆ. ಈ ಹಗರಣದ ಕುರಿತ ತನಿಖೆ ಪ್ರಗತಿಯಲ್ಲಿರುವಾಗಲೇ ಛಗನ್ ಅವರು ಅಜಿತ್ ನೇತೃತ್ವದ ಎನ್‌ಸಿಪಿ ಸೇರಿಕೊಂಡಿದ್ದಾರೆ. ಬಿಜೆಪಿ, ಶಿವಸೇನಾ (ಶಿಂದೆ ಬಣ) ಹಾಗೂ ಎನ್‌ಸಿಪಿ (ಅಜಿತ್ ಬಣ) ಮೈತ್ರಿಯ ಸರ್ಕಾರದಲ್ಲಿ ಛಗನ್ ಅವರು ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕ ರಕ್ಷಣೆ ಖಾತೆಗಳ ಸಚಿವರಾಗಿದ್ದರು. ಮರಾಠ ಮೀಸಲಾತಿ ವಿಚಾರವಾಗಿ ಅವರು ಇತ್ತೀಚೆಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಎನ್‌ಸಿಪಿ (ಶರದ್ ಪವಾರ್ ಬಣ)–ಎನ್‌ಸಿಪಿ (ಅಜಿತ್ ಪವಾರ್ ಬಣ)

ಶರದ್ ಪವಾರ್ ಅವರು ಅಧಿಕಾರಕ್ಕಾಗಿ ಹಲವು ಬಾರಿ ಅತ್ತಿಂದಿತ್ತ ವಾಲಿದ್ದಾರೆ, ಮೈತ್ರಿ ಮಾಡಿಕೊಂಡಿದ್ದಾರೆ. ಈ ‘ವಾಲಿಕೆ’ ಪ್ರಕ್ರಿಯೆದಿಂದ ಬೇಸತ್ತು, ಆ ಪಕ್ಷದಿಂದ ಹೊರಬಂದೆ
ಛಗನ್ ಭುಜ್‌ಬಲ್ (ಶರದ್ ಪವಾರ್ ನೇತೃತ್ವದ ಎನ್‌ಸಿಪಿಯಿಂದ ಹೊರಬಂದ ಬಳಿಕ ನೀಡಿದ ಹೇಳಿಕೆ)

ಸಿ.ಎಂ. ರಮೇಶ್

ಉದ್ಯಮಿ ಸಿ.ಎಂ. ರಮೇಶ್ ಅವರು ಟಿಡಿಪಿಯಿಂದ ಸಂಸದರಾಗಿದ್ದವರು. ಚಂದ್ರಬಾಬು ನಾಯ್ಡು ಅವರಿಗೆ ಆಪ್ತರೂ ಆಗಿದ್ದರು. ರಮೇಶ್ ಅವರು ಟಿಡಿಪಿಯ ಸಂಸದರಾಗಿದ್ದಾಗಲೇ ‘ರಿತ್ವಿಕ್ ಪ್ರಾಜೆಕ್ಟ್ಸ್’ ಎಂಬ ಕಂಪನಿ ಸ್ಥಾಪಿಸಿದ್ದರು. ಸಿಬಿಐ, ಜಾರಿ ನಿರ್ದೇಶನಾಲಯ ಹಾಗೂ ಆದಾಯ ತೆರಿಗೆ ಅಧಿಕಾರಿಗಳು ರಮೇಶ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. 2018ರಲ್ಲಿ ಆದಾಯ ತೆರಿಗೆ ಇಲಾಖೆಯು ರಮೇಶ್ ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸುತ್ತದೆ. ₹100 ಕೋಟಿ ಅವ್ಯವಹಾರಕ್ಕೆ ಸಂಬಂಧಿಸಿ ಸುಮಾರು 100 ಮಂದಿ ಅಧಿಕಾರಿಗಳು ದಾಳಿಯಲ್ಲಿ ಭಾಗಿಯಾಗಿದ್ದರು.

ವೈ.ಎಸ್. ಚೌಧರಿ ಅವರೊಂದಿಗೆ ರಮೇಶ್ ಅವರೂ 2019ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು. ಈಗ ಅವರು ರಾಜ್ಯಸಭಾ ಸದಸ್ಯರಾಗಿದ್ದಾರೆ. ವಿವಿಧ ರಾಜ್ಯ ಸರ್ಕಾರಗಳ ಹಲವು ಯೋಜನೆಗಳ ಗುತ್ತಿಗೆಯು ರಿತ್ವಿಕ್ ಕಂಪನಿ ಪಾಲಿಗಿದೆ. ಇದೇ ಕಂಪನಿಯು ವಿವಿಧ ಪಕ್ಷಗಳಿಗೆ ಚುನಾವಣಾ ಬಾಂಡ್ ಮೂಲಕ ₹45 ಕೋಟಿ ದೇಣಿಗೆ ನೀಡಿದೆ.

ಇದು ರಾಜಕೀಯ ಪ್ರೇರಿತ ದಾಳಿಯಾಗಿದೆ. ಆಂಧ್ರ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡುವ ವಿಷಯದಲ್ಲಿ ನಾವು ಹೋರಾಟ ನಡೆಸುತ್ತಿದ್ದೇವೆ. ಹೋರಾಟವನ್ನು ಮುಂದುವರಿಸಿದರೆ, ಮುಂದಿನ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರೇ ನಮಗೆ ಎಚ್ಚರಿಕೆ ನೀಡಿದ್ದರು. ಇದರ ಪರಿಣಾಮವೇ ಆದಾಯ ತೆರಿಗೆ ಇಲಾಖೆಯ ದಾಳಿ
ಸಿ.ಎಂ. ರಮೇಶ್ (ಆದಾಯ ತೆರಿಗೆ ಇಲಾಖೆಯ ದಾಳಿಯ ನಂತರ ನೀಡಿದ್ದ ಹೇಳಿಕೆ)

ಪ್ರಫುಲ್ ಪಟೇಲ್



ಯುಪಿಎ ಅವಧಿಯ ಕೇಂದ್ರ ಸರ್ಕಾರದ ಅವಧಿಯಲ್ಲಿ ಎನ್‌ಸಿಪಿಯ ಪ್ರಫುಲ್ ಪಟೇಲ್ ಅವರು ವಿಮಾನಯಾನ ಸಚಿವರಾಗಿದ್ದರು. ಈ ವೇಳೆಯಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು, ಖಾಸಗಿ ವಿಮಾನಯಾನ ಸಂಸ್ಥೆಗಳಿಗೆ ಲಾಭ ಮಾಡಿಕೊಡುವುದಕ್ಕಾಗಿ ಸರ್ಕಾರಿ ಸ್ವಾಮ್ಯದ ವಿಮಾನಯಾನ ಸಂಸ್ಥೆಗಳಿಗೆ ನಷ್ಟ ಆಗುವಂತೆ ಮಾಡಿದ್ದಾರೆ ಎಂಬ ಆರೋಪ ಪಟೇಲ್ ಅವರ ಮೇಲಿದೆ. 2017ರಲ್ಲಿ ಈ ಬಗ್ಗೆ ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣದ ತನಿಖೆಯನ್ನು ಸಿಬಿಐ ನಡೆಸುತ್ತಿದೆ. ಇದೇ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯವೂ ತನಿಖೆ ನಡೆಸುತ್ತಿದೆ.

ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಆಪ್ತ ಇಕ್ಬಾಲ್ ಮಿರ್ಚಿ ಭಾಗಿಯಾಗಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಪಟೇಲ್ ಅವರ ಹೆಸರೂ ಸೇರಿಕೊಂಡಿದೆ. ಈ ಸಂಬಂಧ 2019ರಿಂದಲೂ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ. 2023ರಲ್ಲಿ ಪಟೇಲ್ ಅವರಿಗೆ ಸಂಬಂಧಿಸಿದ ನೂರಾರು ಕೋಟಿ ರೂಪಾಯಿ ಮೌಲ್ಯದ ಆಸ್ತಿಯನ್ನು ಜಾರಿ ನಿರ್ದೇಶನಾಲಯವು ಮುಟ್ಟುಗೋಲು ಹಾಕಿಕೊಂಡಿತ್ತು. ಈಗ ಅವರು ಶರದ್ ಪವಾರ್ ಅವರ ನೇತೃತ್ವದಲ್ಲಿದ್ದ ಎನ್‌ಸಿಪಿಯನ್ನು ತೊರೆದು, ಅಜಿತ್ ಪವಾರ್ ಅವರ ನೇತೃತ್ವದ ಎನ್‌ಸಿಪಿಯನ್ನು 2023ರ ಜುಲೈ ಹೊತ್ತಿಗೆ ಸೇರಿಕೊಂಡರು. ಆ ಮೂಲಕ ಮಹಾರಾಷ್ಟ್ರ ಸರ್ಕಾರದ ಭಾಗವಾದರು. ಈಗ ಅವರು ಅಜಿತ್ ನೇತೃತ್ವದ ಎನ್‌ಸಿಪಿಯ ರಾಜ್ಯಸಭಾ ಸದಸ್ಯ.

ಎನ್‌ಸಿಪಿ (ಶರದ್ ಪವಾರ್ ಬಣ)–ಎನ್‌ಸಿಪಿ (ಅಜಿತ್ ಪವಾರ್ ಬಣ)

ಶಿವಸೇನಾದ ಸಿದ್ಧಾಂತವನ್ನು ಒಪ್ಪಿಕೊಂಡ ಮೇಲೆ, ಬಿಜೆಪಿಯ ಜೊತೆ ಹೋಗುವುದಕ್ಕೆ ವಿರೋಧ ಮಾಡುವುದರಲ್ಲಿ ಅರ್ಥವೇನಿದೆ? ಸ್ವತಂತ್ರ ಅಸ್ತಿತ್ವ ಇರುವ ಪಕ್ಷವಾಗಿ ನಾವು ಈ ಮೈತ್ರಿಯಲ್ಲಿ ಭಾಗಿಯಾಗಿದ್ದೇವೆ
ಪ್ರಫುಲ್ ಪಟೇಲ್ (ಅಜಿತ್ ನೇತೃತ್ವದ ಎನ್‌ಪಿಸಿ ಸೇರಿಕೊಂಡ ಬಳಿಕ, ಸಭೆಯೊಂದರಲ್ಲಿ ನೀಡಿದ ಹೇಳಿಕೆ)

ಸಿನಿ ಬಿಟ್ಸ್

ಝೈದ್ ಖಾನ್ ಸಿನಿಮಾ ಪೋಸ್ಟರ್ ರಿಲೀಸ್

ಜಯತೀರ್ಥ ನಿರ್ದೇಶನದ ‘ಬನಾರಸ್’ ಸಿನಿಮಾ ಮೂಲಕ ಚಂದನವನಕ್ಕೆ ಕಾಲಿಟ್ಟ ನಟ ಝೈದ್ ಖಾನ್ ನಟನೆಯ ಹೊಸ ಸಿನಿಮಾದ ಶೀರ್ಷಿಕೆ ಶೀಘ್ರದಲ್ಲೇ ಬಿಡುಗಡೆಯಾಗಲಿದೆ. ಇತ್ತೀಚೆಗಷ್ಟೇ ತೆರೆಕಂಡಿದ್ದ ‘ಉಪಾಧ್ಯಕ್ಷ’ ಸಿನಿಮಾದ ರುವಾರಿ ಅನಿಲ್ ಕುಮಾರ್, ಈ ಸಿನಿಮಾದಲ್ಲಿ ಝೈದ್‌ಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ.

ಇತ್ತೀಚೆಗೆ ಚಿತ್ರತಂಡ ಸಿನಿಮಾದ ಪೋಸ್ಟರ್ ಬಿಡುಗಡೆಗೊಳಿಸಿದೆ. ಈ ಹೊಸಚಿತ್ರ, ಪೋಸ್ಟರ್‌ನಲ್ಲೇ ಕುತೂಹಲ ಮೂಡಿಸಿದೆ. ಸದ್ಯದಲ್ಲೇ ಫಸ್ಟ್‌ಲುಕ್ ರಿಲೀಸ್ ಮಾಡುವುದಾಗಿ ನಿರ್ದೇಶಕರು ತಿಳಿಸಿದ್ದಾರೆ. ಈ ಸಿನಿಮಾದಲ್ಲಿ ಹೊಸ ಅವತಾರದಲ್ಲಿ ಝೈದ್ ಕಾಣಿಸಿಕೊಳ್ಳಲಿದ್ದಾರೆ.

ಉದ್ದನೆಯ ಕೂದಲು ಬಿಟ್ಟು ಕೈಯಲ್ಲಿ ಸಿಗರೇಟ್, ಮದ್ಯದ ಬಾಟಲ್ ಹಿಡಿದು ಝೈದ್ ಪೋಸ್ ನೀಡಿದ್ದಾರೆ. ಝೈದ್ ಖಾನ್ ನಾಯಕರಾಗಿ ನಟಿಸುತ್ತಿರುವ ಎರಡನೇ ಚಿತ್ರವಿದು. ಆಶ್ರಿತ್ ಸಿನಿಮಾಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣವಾಗಲಿದ್ದು, ಜೆ.ಎಸ್ ವಾಲಿ ಛಾಯಾಚಿತ್ರಗ್ರಹಣ, ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ❖

ಕೃಷ್ಣಾವತಾರಿಯಾದ ನಾಗೇಂದ್ರ ಪ್ರಸಾದ್

ತ್ರಿವೇಣಿ ರಾಜ್, ನಾಗೇಂದ್ರ ಪ್ರಸಾದ್, ಶುಭ ರಕ್ಷಾ

ಚಿತ್ರ ಸಾಹಿತಿ, ನಟ, ನಿರ್ದೇಶಕ ನಾಗೇಂದ್ರ ಪ್ರಸಾದ್ ಈಗ ‘ಕೃಷ್ಣಾವತಾರ’ ತಾಳಿದ್ದಾರೆ. ಹಾಗಂತ ಇದು ದ್ವಾಪರ ಯುಗದ ಶ್ರೀಕೃಷ್ಣನ ಕಥೆಯಲ್ಲ. ಕಲಿಯುಗದಲ್ಲಿ ಪ್ರಕೃತಿ, ಪರಿಸರ ಉಳಿಸಲು ಹೊಸ ಅವತಾರ ಎತ್ತಿದವನ ಕಥೆ. ಈ ಚಿತ್ರದ ಶೀರ್ಷಿಕೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಸಿರಿ ವೈ.ಎಸ್.ಆರ್. ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವ ಈ ಚಿತ್ರಕ್ಕೆ ಮಾಯಾಬಜಾರ್ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಗುರುಪ್ರಸಾದ್ ಕೆ. ಬಂಡವಾಳ ಹೂಡಿದ್ದಾರೆ. ಶುಭ ರಕ್ಷಾ, ತ್ರಿವೇಣಿ ರಾಜ್ ಚಿತ್ರದ ನಾಯಕಿಯರು.

‘ಹದಿನೈದು ದಿನ ಈ ಚಿತ್ರದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದೆ. ಈ ಕಥೆಯ ಆರಂಭ, ಅಂತ್ಯ ಎರಡೂ ನನ್ನ ಪಾತ್ರದಿಂದಲೇ ಆಗುತ್ತದೆ. ಈ ಸಿನಿಮಾ ಮೂಲಕ ನಿರ್ದೇಶಕರು ಏನೋ ಒಂದು ಹೊಸದನ್ನು ಹೇಳಲು ಹೊರಟಿದ್ದಾರೆ’ ಎಂದರು ನಾಗೇಂದ್ರ ಪ್ರಸಾದ್.

ಈ ಚಿತ್ರಕ್ಕೆ ರಾಜ ಶಿವಶಂಕರ್ ಛಾಯಾಚಿತ್ರಗ್ರಹಣವಿದ್ದು, ಎಬಿಎಂ ಸಂಗೀತ ಸಂಯೋಜನೆ ಮಾಡಿದ್ದಾರೆ. ವಿಶ್ವನಾಥ್, ಮಾನಸಿ ಸುಧೀರ್, ರಘು ರಾಮನಕೊಪ್ಪ, ಪ್ರಕಾಶ್ ತುಮ್ಮಿನಾಡ್ ಮುಂತಾದವರು ತಾರಾಗಣದಲ್ಲಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಹಸಿವು ಮಣಿಸಲು ಹುಟ್ಟಿದವಳು

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಮಿತ್ರನ ಅಕ್ಕ ಆಕೆಯ ತಮ್ಮನಷ್ಟೇ ನನ್ನನ್ನೂ ನೋಡಿಕೊಂಡಳು. ಅವಳ ಮಕ್ಕಳನ್ನು ನಾವು ಎತ್ತಾಡಿಸಿದೆವು. ಅವೂ ಅಷ್ಟೇ ನಮ್ಮನ್ನು ಬಳ್ಳಿಯಂತೆ ಸುತ್ತಿಕೊಂಡವು. ಒಂದೇ ತಾಯಿಯ ಕರುಳು ಕಿತ್ತು ಹಂಚಿಕೊಂಡಂತೆ ಬಾಂಧವ್ಯ ಬೆಳೆದಿತ್ತು. ಹೊಟ್ಟೆ ಹಸಿವಾದರೆ ಸಾಕು ಅವಳ ಮುಖ ನೆನಪಾಗಿ ಓಡುತ್ತಿದ್ದೆವು. ಯಾರೇ ಮನೆಗೆ ಬಂದರೂ ಆಕೆಗದು ಸಡಗರ. ಜೀವವಿರುವ ಎಲ್ಲವನ್ನೂ ಆತುಕೊಂಡು ಮಮತೆ ಎರೆವ ಸ್ವಭಾವ. ಬಂದವರಿಗೆ ರುಚಿರುಚಿ ಅಡಿಗೆ ಮಾಡಿ ಬಡಿಸುವುದು ಅವಳಿಗೆ ದೇವನೊಲುಮೆ ಇದ್ದಂತೆ. ಯಾರಾದರೂ ಉಣ್ಣದೆ ಹಾಗೆ ಹೊರಟರೆ ಮಗುವಿನಂತೆ ಅತ್ತು ಅಡ್ಡ ಹಾಕುತ್ತಿದ್ದಳು. ಮೊಗೆದಷ್ಟೂ ಜಲದಂತೆ ಉಕ್ಕುತ್ತಿದ್ದ ಈ ಬಗೆಯ ವಾತ್ಸಲ್ಯದ, ಕರುಣೆಯ ಹೆಣ್ಣು ಜೀವವ ನಾ ನೋಡೇ ಇರಲಿಲ್ಲ.

ಚೆನ್ನಾಗಿದ್ದ ಅವಳು ಜ್ವರವೆಂದು ಆಸ್ಪತ್ರೆ ಸೇರಿದ್ದೊಂದು ನೆವ. ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಗಂಡನೇ ನೋಡಿಕೊಂಡಿದ್ದು, ಆರೈಕೆ ಮಾಡಿದ್ದು. ಗುಂಡು ಕಲ್ಲಿನಂತಿದ್ದ ಹಳ್ಳಿ ಹೆಣ್ಮಗಳು ಹೊಲ ಉತ್ತವಳು, ಬೀಜ ಬಿತ್ತಿ, ನಟ್ಟಿ ಮಾಡಿ, ಗೊಬ್ಬರ ಹೊತ್ತು ಕಳೆ ತೆಗೆದವಳು. ರಾತ್ರಿ ಸರೋತ್ತಿನಲ್ಲಿ ನೀರು ಕಟ್ಟಲು ಹೊಲಕ್ಕೆ ಹೋದವಳು. ಮನೆಯಲ್ಲಿ ಆಳು ಕಾಳಿಗೆಲ್ಲಾ ರಾಶಿ ರೊಟ್ಟಿ ಬಡಿದವಳು. ಈ ಗಟ್ಟಿಗಿತ್ತಿಗೆ ಅದೇನು ವ್ಯತ್ಯಾಸವಾಯಿತೋ ಅನೇಕ ರೋಗಗಳು ಆಕೆಯಲ್ಲಿ ಪ್ರತ್ಯಕ್ಷವಾದವು. ಹಲವು ಶಸ್ತ್ರ ಚಿಕಿತ್ಸೆ, ವಿಪರೀತ ಔಷಧಿ, ಗುಳಿಗೆ, ಪಥ್ಯ ಹೀಗೆ ಅವಳ ಪಯಣ ಸಾಗಿತ್ತು. ಆದರೆ ಮೊಗದ ತಿಳಿ ನಗು ಕರಗಿರಲಿಲ್ಲ.

ನೋಡಬಂದವರು ವ್ಯಥೆ, ಸಂಕಟ, ಅನುಕಂಪ ಸೂಚಿಸಿದರೂ ಈಕೆ ಎಂದೂ ಕೊರಗಲಿಲ್ಲ. ಅದೇ ಮಂದಹಾಸ. ಎಂದಿನ ಉಪಚಾರ, ಪ್ರೀತಿಯ ಮಾತುಕತೆ. ನಾನು ನನ್ನ ಪತ್ನಿ ಆಕೆಯ ನೋಡಲು ಆಸ್ಪತ್ರೆಗೆ ಹೋದೆವು. ಅದು ರಾತ್ರಿ ಊಟದ ಹೊತ್ತು. ಆಕೆ ಮೊದಲು ಕೇಳಿದ್ದೇ ‘ನಿನ್ನ ಊಟವಾಯಿತಾ’ ಎಂದು. ನಾನು ಆಯಿತೆಂದು ಸುಳ್ಳು ಹೇಳಿದೆ. ಒಮ್ಮೆ ನಕ್ಕು ‘ಹಸಿದ ಮುಖ ನಾನು ಓದುತ್ತೇನೆ ತಮ್ಮಯ್ಯ. ನಮ್ಮ ಮನೆಗೋಗಿ ಮೊದಲು ಊಟ ಮಾಡಿ ಬನ್ನಿ. ಆಮೇಲೆ ಮಾತುಕಥೆ’ ಎಂದಳು. ಆಗ ಆಕೆ ಗಂಜಿಯನ್ನು ಕಷ್ಟಬಿದ್ದು ಕುಡಿಯುತ್ತಿದ್ದಳು.

‘ಸಾಕವ್ವ ಮೊದಲು ನೀ ವೈನಾಗು. ಆಮೇಲೆ ನಿನ್ನ ಕೈ ಬಿಸಿ ರೊಟ್ಟಿ, ಪಲ್ಯ ತಿನ್ನೋಣ’ ಎಂದೆ. ‘ಅವೆಲ್ಲಾ ಮರೆಸೋ ಮಾತು ಬೇಡ. ಮನೇಲಿ ಮಗಳಿಗೆ ತಾಕೀತು ಮಾಡಿದ್ದೀನಿ. ಇಲ್ಲಿ ನನ್ನ ಕಾಣಲು ಯಾರೇ ಬಂದರೂ ಊಟ, ತಿಂಡಿ ವಿಚಾರಿಸದೆ ಕಳಸಬಾರದು ಅಂತ. ನನ್ನ ಕಣ್ಣಿಗೆ ಬಿದ್ದ ಮೇಲೆ ಮುಗೀತು. ಯಾರೂ ಉಪವಾಸ ಹೋಗಬಾರದು’ ಎಂದಳು. ‘ಇದು ಮನೆಯಲ್ಲ ಆಸ್ಪತ್ರೆ’ ಎಂದೆ. ‘ಆದರೇನಂತೆ ಉಣ್ಣದೆ, ಉಪಾಸ ಇರಕ್ಕಾಗುತ್ತಾ? ಹೋಗು’ ಎಂದು ಬಲವಂತ ಮಾಡಿದಳು.

ಅದು ಕೊನೆಯ ಭೇಟಿ. ಇಡೀ ಬದುಕು ಹೀಗೆ ಅನ್ನದಾತೆಯಾಗಿದ್ದಳು. ಹಸಿದವರಿಗೆ ಉಣಿಸುವುದು ಅವಳಿಗೆ ಹಿಡಿದ ಹುಚ್ಚು. ಆಕೆಯ ತಾಯ್ತನ, ಅಂತಃಕರಣದಿಂದ ಹುಟ್ಟುತ್ತಿದ್ದ ನೈಜ ಪ್ರೀತಿ ಅಳತೆ ಮೀರಿದ್ದು. ಜಾತಿ, ಧರ್ಮ ಮೀರಿ ಅಸಾಮಾನ್ಯ ಬದುಕು ನಡೆಸುವ ಇಂತಹ ಸಾವಿರಾರು ಮಾತೃ ಸ್ವರೂಪಿಗಳು ಇನ್ನೂ ನಮ್ಮೊಳಗಿದ್ದಾರೆ. ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮಾರ್ಚ್ 27, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ದ್ವಿತೀಯ ಗಂ. 17-07 ನಕ್ಷತ್ರ: ಚಿತ್ತಾ ಗಂ. 16-16 ಯೋಗ: ವ್ಯಾಘಾತ ಗಂ. 22-53 ಕರಣ: ಗರ ಗಂ. 17-07, ಮೀನ ಮಾಸದ 13 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 3. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-33 ಸೂರ್ಯಾಸ್ತ : 06-38 ಮುಸ್ಲಿಂ ದಿನಾಂಕ : 16 ರಂಜಾನ್.
ಅದೃಷ್ಟ ಸಂಖ್ಯೆ : 10, 6

ಮೇಷ: ಸಾಮರ್ಥ್ಯವು ಉತ್ತಮ ಯೋಜನೆಗೆ ಬಳಕೆಯಾಗುವಂತೆ ನಡೆ ಇರಲಿ. ಅನಿರೀಕ್ಷಿತ ಹಾಗು ಅಪರಿಚಿತ ಕೆಲಸಗಳು ಕೈಸೇರಿ ಅವುಗಳನ್ನು ನಿಭಾಯಿಸಲೇಬೇಕಾದ ಅನಿವಾರ್ಯತೆ ಎದುರಾಗಬಹುದು.

ವೃಷಭ: ಇಂದಿನ ದಿನದವರೆಗೂ ಜೀವನದಲ್ಲಿ ಬೇರೆಯವರ ಹಿಡಿತದಿಂದ ಬಳಲಿರುವ ಸಮಸ್ಯೆಯಿಂದ ಹೊರಬರುವ ಅವಕಾಶಗಳು ಎದುರಾಗುವುದು. ಹೆಂಡತಿಗೆ ಉದ್ಯೋಗ ದೊರೆತು ಸಂತೋಷವಾಗುವುದು.

ಮಿಥುನ: ಭವಿಷ್ಯದ ಬಗ್ಗೆ ಅನಗತ್ಯ ಚಿಂತಿಸುವುದನ್ನು ಬಿಟ್ಟು ಈಗಿನ ಅಗತ್ಯಗಳನ್ನು ಪೂರೈಸಿಕೊಳ್ಳುವ ಕಡೆಗೆ ಗಮನಹರಿಸಿ. ಮಾನಸಿಕ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಸಮಯ ಕಳೆಯಿರಿ. ವೈದ್ಯರ ಸಲಹೆ ಪಡೆದುಕೊಳ್ಳಿ.

ಕರ್ಕಾಟಕ: ಯೋಜನೆಗಳಲ್ಲಿನ ಜಟಿಲ ವಿಷಯಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು ಮುಂದುವರಿದಲ್ಲಿ ಹೆಚ್ಚಿನ ಯಶಸ್ಸನ್ನು ಕಾಣುವಿರಿ. ನಿರೀಕ್ಷೆಗಳು ಹಿತ ಮತ್ತು ಮಿತವಾಗಿದ್ದರೆ ಕೆಲಸ ಸುಸೂತ್ರವಾಗಿ ನೆರವೇರುವುದು.

ಸಿಂಹ: ಉತ್ತಮವಾದ ಪೂರ್ವತಯಾರಿಯೊಂದಿಗೆ ಈಗಿರುವ ಎಲ್ಲಾ ಸಮಸ್ಯೆಯನ್ನು ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕುವುದು ಸರಿಯಾದ ತೀರ್ಮಾನವಾಗಿರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ತೃಪ್ತಿಕರ ಆದಾಯವಿದೆ.

ಕನ್ಯಾ: ವ್ಯವಹಾರದಲ್ಲಿ ಪ್ರಾಮಾಣಿಕವಾಗಿ ದುಡಿಮೆ ಮಾಡುವುದು ಕಷ್ಟಕರ ಎಂದೆನಿಸಿದರೂ ಅದನ್ನು ಆಚರಿಸುವುದರಿಂದ ಮನಃಶಾಂತಿ ಇರಲಿದೆ. ಕೌಟುಂಬಿಕ ಸಮಸ್ಯೆಗಳು ಹೊಸದೊಂದು ಆಯಾಮ ಪಡೆಯಲಿದೆ.

ತುಲಾ: ಹೆಚ್ಚುವರಿ ವರಮಾನದ ಮೂಲವನ್ನು ಹುಡುಕುವ ಪ್ರಯತ್ನವನ್ನು ಮಾಡಿರಿ. ಮನೆಯಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಹೊಣೆಗಾರಿಕೆ ನಿಮ್ಮದಾಗಿರುತ್ತದೆ. ಸ್ನೇಹಗಳು ನೂತನ ಸಂಬಂಧಗಳಿಗೆ ದಾರಿಯಾಗಲಿದೆ.

ವೃಶ್ಚಿಕ: ಸಮಾಜದಲ್ಲಿನ ನಿಮ್ಮ ಮುಂದಾಳತ್ವಕ್ಕೆ ಜನ ನಿಮ್ಮನ್ನು ಇಷ್ಟಪಟ್ಟು ನಿಮ್ಮ ಸಲಹೆಯನ್ನು ಕೇಳುವರು. ನೀವು ಹಿರಿಯರು ಹೇಳಿದಂತೆ ದೂರದೃಷ್ಟಿ ಇಟ್ಟುಕೊಂಡು ಕಾರ್ಯ ಪ್ರವೃತ್ತರಾಗುವುದನ್ನು ಕಲಿತುಕೊಳ್ಳಿರಿ.

ಧನು: ಆದಾಯದಲ್ಲಿ ಅಭಿವೃದ್ಧಿ ತೋರಿಬಂದು ಧಾರ್ಮಿಕ ಅಥವಾ ಪುಣ್ಯಕಾರ್ಯಗಳನ್ನು ಮಾಡುವುದರ ಬಗ್ಗೆ ಮನಸ್ಸಾಗುವುದು. ಬುದ್ಧಿವಂತಿಕೆಯಿಂದ ಬೆಟ್ಟದಂತಹ ಸಮಸ್ಯೆಗಳು ಪರಿಹಾರ ಕಾಣಲಿವೆ. ಹಣದ ಚಿಂತೆ ಇರುವುದಿಲ್ಲ.

ಮಕರ: ಅರಿತುಕೊಳ್ಳುವ ಸತ್ಯ ಭವಿಷ್ಯದ ಮೇಲೆ ದೊಡ್ಡ ಪರಿಣಾಮ ಬೀರಲಿದೆ. ಬದುಕಿನ ಕವಲುದಾರಿಯಲ್ಲಿರುವ ನಿಮಗೆ ಸರಿಯಾದ ಮಾರ್ಗದರ್ಶನ ದೊರೆಯಲಿದೆ. ಆಸ್ತಿ ವಿಷಯಗಳು ನಿರಾತಂಕವಾಗಿ ಬಗೆಹರಿಯುವುದು.

ಕುಂಭ: ಅಶಾಂತಿಯ ವಾತಾವರಣದಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿ ಎದುರಾಗಬಹುದು. ತಾಳ್ಮೆ ಈ ದಿನದ ಮೂಲಮಂತ್ರವಾಗಲಿದೆ. ಯಾವುದೇ ವಿಚಾರದಲ್ಲಾದರೂ ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆ ಮುಖ್ಯ.

ಮೀನ: ಹಣಕಾಸು ತಜ್ಞರ ಸಲಹೆ ಮೇರೆಗೆ ದೀರ್ಘಕಾಲೀನ ಯೋಜನೆಯನ್ನು ರೂಪಿಸುವುದು ಉತ್ತಮ. ಪತ್ರಿಕೋದ್ಯಮ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಮುನ್ನಡೆ ಸಾಧಿಸುವಿರಿ. ಸಣ್ಣ ಪುಟ್ಟ ಸಾಲದ ಹಣ ಹಿಂದಿರುಗುವುದು.

ಪದಬಂಧ 5633

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಒಪ್ಪವಾದ ರಾಗದಿಂದ ಒಲವು ಮೂಡಿತಲ್ಲಾ! (4)
5.ಸೀತೆಯನ್ನು ಕದ್ದೊಯ್ದ ಲಂಕಾಧಿಪತಿ (3)
6.ತಾಯಿಯ ಮನೆಯಲ್ಲಿನ ಕಿಟಕಿ (4)
8.ಗುಡಿಸಲ ಹತ್ತಿರವಿರುವ ಜಲಪಾತ (4)
12.ಮಂದಿಯ ಒಳಿತು (4)
14.ಇದು ಬೇರೆಯವರ ದುಡ್ಡು (4)
15.ಸೂಕ್ಷ್ಮವಾದುದನ್ನು ಹೀಗೆನ್ನಿ (3)
16.ಹಣ್ಣಿನಿಂದ ಮಾಡಿರುವ ಖಾದ್ಯ (4)

ಮೇಲಿಂದ ಕೆಳಕ್ಕೆ
1.ಬೇರೆಯವರನ್ನು ಆಶ್ರಯಿಸಿರುವವನು (5)
2.ಈತ ಒಳ್ಳೆಯ ಸ್ವಭಾವದವನು (4)
3.ತೊಂದರೆಯ ನಿವಾರಣೆಗಾಗಿ ಮಾಡುವ ಪ್ರಾರ್ಥನೆ (4)
4.ಸುಲಭವಲ್ಲದುದು ಇದು (3)
7.ಯಮನ ಸಹೋದರಿ (2)
9.ಸಂಭಾವಿತ ಮನುಷ್ಯ (3)
10.ಮೆಲ್ಲನೆ ಬೀಸುವ ಗಾಳಿ (5)
11.ವರ್ಣಮಾಲೆಯಲ್ಲಿ ಸ್ವತಂತ್ರವಾಗಿ ಉಚ್ಚರಿಸುವ ವರ್ಣ (2)
12.ಮಂದಿಯ ಮನಸ್ಸು (4)
13.ಮಗ್ನತೆಯನ್ನು ಹೀಗೆ ಹೇಳಿ (4)
14.ಉತ್ತರದವರ ವೇತನ (3)

5632ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರದಾಟ 3.ಪರ್ಣಕುಟಿ 5.ರಹಸ್ಯ 6.ಹಣವಂತ 8.ತಭೂ 9.ಲೋಪ 10.ಮಿತವ್ಯಯ 13.ಬುಗುರಿ 16.ಕಡುಕೋಪ 17.ಅಂಕವಣಿ

ಮೇಲಿಂದ ಕೆಳಕ್ಕೆ
1.ಪದ್ಯ 2.ದಾಸೋಹ 3.ಪರಾಯಣ 4.ಟಿಸಿಲು 5.ರಣಭೂಮಿ 6.ಹರೆಯ 7.ತಲೋದರಿ 11.ವ್ಯರ್ಥಾಲಾಪ 12.ಸಂದೂಕ 14.ಗುಣಕ 15.ಪಾಣಿ

ಸುಡೊಕು 6018

				6				2
6		2	4		9			
	8					6		9
3	5	7	2			4		
		8		4			3	7
4					3	2		8
		9	8					4
8					4		2	
		3		2		7		6

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6017 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

ಗುಸುಗುಸು

ಗದ್ದಿಗೌಡರಿಗೆ ಆನಂದದ 'ತ್ಯಾಗ'

ಚುನಾವಣೆ ವೇಳೆ ಎಂತೆಂಥವೋ ಸಣ್ಣ ಸಣ್ಣ ಸಂಗತಿಗಳು ಕೆಲಸ ಮಾಡುತ್ತವೆ. ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ, ತಮ್ಮ ಅಪ್ಪನಂತೆಯೇ ಸಂಸತ್ ಪ್ರವೇಶಿಸುವ ಹಂಬಲದಲ್ಲಿದ್ದ ಮಾಜಿ ಶಾಸಕ ಕಾಂಗ್ರೆಸ್‌ನ ಆನಂದ್ ನ್ಯಾಮಗೌಡ ಸ್ಪರ್ಧೆಗೆ ತಾವೇ ಒಲ್ಲೆ ಎಂದರಂತೆ.


ಪಿ.ಸಿ.ಗದ್ದಿಗೌಡರ

ಬಾಗಲಕೋಟೆ-ವಿಜಯಪುರ ಜಿಲ್ಲೆ, ಕ್ಷೇತ್ರಗಳು ಬೇರೆಬೇರೆಯಾದರೂ ಅವುಗಳ ಭೌತಿಕ ಪರಿಸರ ಒಂದೇ. ಎರಡು ಜಿಲ್ಲೆಗಳ ವಿಧಾನಸಭೆ ಕ್ಷೇತ್ರಗಳಲ್ಲಿ ಗೆದ್ದ ಪ್ರಭಾವಿಗಳು, ಸಚಿವರು ಎರಡೂ ಜಿಲ್ಲೆಗಳಲ್ಲಿ ತಮ್ಮ ಕಾರುಬಾರು ನಡೆಸುತ್ತಾರೆ. ಈ ಕ್ಷೇತ್ರದಲ್ಲಿ ಮಾಜಿ ಸಂಸದ ಅಜಯ್‌ಕುಮಾರ್ ಸರ್ ನಾಯಕ್ ಅಥವಾ ಆನಂದ ನ್ಯಾಮಗೌಡರನ್ನು ಕಣಕ್ಕೆ ಇಳಿಸುವ ಇರಾದೆ ವಿಜಯನಗರ ಜಿಲ್ಲೆಯವರಾದ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲರದ್ದಾಗಿತ್ತು. ಇದೇ ಜಿಲ್ಲೆಯವರಾದ ಬಸವನಬಾಗೇವಾಡಿ ಸಕ್ಕರೆ ಸಚಿವ ಶಿವಾನಂದ ಪಾಟೀಲ ತಮ್ಮ ಮಗಳು ಸಂಯುಕ್ತಾ ಪಾಟೀಲರಿಗೆ ಟಿಕೆಟ್ ದಕ್ಕಿಸಿಕೊಂಡರು. ಆನಂದ ನ್ಯಾಮಗೌಡರನ್ನು ಕಣಕ್ಕೆ ಇಳಿಸುವ ಎಂ.ಬಿ. ಪಾಟೀಲರ ಲೆಕ್ಕಾಚಾರ ಉಲ್ಟಾ ಹೊಡೆಯಿತು. ಆನಂದ ಹಿಂದಕ್ಕೆ ಸರಿಯಲೂ 'ರಹಸ್ಯ' ಕಾರಣವೊಂದಿದೆಯಂತೆ...

ಲಿಂಗಾಯತರ ನಾಯಕರ ಎಂದೇ ಬಿಂಬಿಸಿಕೊಂಡಿದ್ದ ರಾಮಕೃಷ್ಣ ಹೆಗಡೆ ಈ ಹಿಂದೆ ಬಾಗಲಕೋಟೆಯಿಂದ ಸ್ಪರ್ಧಿಸಿದ್ದರು. ಆಗ 'ಬ್ಯಾರೇಜ್ ಸಿದ್ದು' ಎಂದೇ ಪ್ರಖ್ಯಾತರಾಗಿದ್ದ ಸಿದ್ದು ನ್ಯಾಮಗೌಡರನ್ನು ಚಿಕ್ಕವಯಸ್ಸಿನಲ್ಲೇ ಕಣಕ್ಕೆ ಇಳಿಸಿದ್ದ ಕಾಂಗ್ರೆಸ್, ಹೆಗಡೆಯವರಿಗೆ ಸೋಲಿನ ರುಚಿ ತೋರಿಸಿತ್ತು. ಬಿಜೆಪಿ ಸಂಸದ ಪಿ.ಸಿ. ಗದ್ದಿಗೌಡರ ಈ ಬಾರಿ ಸ್ಪರ್ಧೆಗೆ ಅಷ್ಟಾಗಿ ಒಲವು ಹೊಂದಿರಲಿಲ್ಲ. ಅದಕ್ಕಾಗಿ ಆನಂದ ಅಣಿಯಾಗಿದ್ದರು. ಗದ್ದಿಗೌಡರಿಗೆ ಟಿಕೆಟ್ ಸಿಗಲಿದೆ ಎಂಬುದು ನಿಕ್ಕಿಯಾಗುತ್ತಿದ್ದಂತೆ, ಲಿಂಗಾಯತ ಗಾಣಿಗ ಸಮುದಾಯದ ನಾಯಕರು ಆನಂದರನ್ನು ಭೇಟಿಯಾಗಿದ್ದರಂತೆ. ನಾಲ್ಕು ಬಾರಿ ಸಂಸದರಾಗಿರುವ ಗದ್ದಿಗೌಡರು ಈ ಬಾರಿ ಕೇಂದ್ರ ಸಚಿವರಾಗುವುದು ಖಚಿತ. ನೀವು ಸ್ಪರ್ಧಿಸಿದರೆ ಗಾಣಿಗ ಸಮುದಾಯದ ಮತಗಳು ಒಡೆಯಲಿವೆ. ಹಿಂದಕ್ಕೆ ಸರಿಯಿರಿ ಎಂದರಂತೆ. ಅವರು ಕಣದಿಂದ ಹಿಂದೆ ಸರಿದಿದ್ದಾರಷ್ಟೇ, ಸಂಯುಕ್ತಾರನ್ನೇ ಗೆಲ್ಲಿಸಲು ಶ್ರಮ ಹಾಕಿದ್ದಾರೆ ಎಂಬ ಅಂತೆಕಂತೆ ಹರಿದಾಡುತ್ತಿವೆ.

ಮತ ಆಮಿಷ: ಆಯೋಗದ ವಶ

₹18.38 ಕೋಟಿ ನಗದು

ಉಚಿತ ಉಡುಗೊರೆ	₹ 45.98 ಲಕ್ಷ
ಮದ್ಯ	₹ 24.91 ಕೋಟಿ (7.86 ಲಕ್ಷ ಲೀ)
ಮಾದಕವಸ್ತು	₹83.40 ಲಕ್ಷ (118.46 ಕೆ.ಜಿ.)
ಚಿನ್ನ ಮತ್ತು ಬೆಳ್ಳಿ	₹ 48.56 ಕೋಟಿ (55.95 ಕೆ.ಜಿ.)

ಎಂಥಾ ಮಾತು!

ಮುನಿರತ್ನ ಸಿನಿಮಾ ನಿರ್ಮಾಪಕರು. ಅದಕ್ಕಾಗಿ ಸ್ಕ್ರಿಪ್ಟ್ ರೆಡಿ ಮಾಡುತ್ತಿದ್ದಾರೆ. ಸ್ವರ್ಗ ಮತ್ತು ನರಕವನ್ನು ಎಲ್ಲಿ ತೋರಿಸಬೇಕು ಎಂಬುದು ಅವರಿಗೆ ಕರಗತವಾಗಿದೆ. ರಾವಣ ಮತ್ತು ರಾಮನನ್ನು ಏನು ಮಾಡಬೇಕು? ದುರ್ಯೋಧನನ ಪಾತ್ರವನ್ನು ಎಲ್ಲಿ ತರಬೇಕು, ಸೀತೆ ಇಲ್ಲದಿದ್ದರೆ ಎಲ್ಲಿಂದ ತರಬೇಕೆಂಬುದು ಸಹ ಅವರಿಗೆ ಚೆನ್ನಾಗಿ ಗೊತ್ತಿದೆ. ಸಿನಿಮಾ ತೆಗೆಯುವ ಅವರು ಎಲ್ಲವನ್ನೂ ಮಾಡುತ್ತಾರೆ. ಸಿನಿಮಾದಲ್ಲಿ ಎಲ್ಲವನ್ನೂ ತೋರಿಸುವ ಅವರಿಗೆ ಯಾವುದನ್ನು ಎಲ್ಲಿಗೆ ಲಿಂಕ್ ಮಾಡಬೇಕು, ಎಲ್ಲಿ ಕತ್ತರಿಸಿ ಅಂಟಿಸಬೇಕೆಂಬುದು ಗೊತ್ತಿದೆ.

ಡಿ.ಕೆ. ಸುರೇಶ್, ಕಾಂಗ್ರೆಸ್ ಅಭ್ಯರ್ಥಿ, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ
(ತಮ್ಮನ್ನು ರಾವಣನಿಗೆ ಹೋಲಿಸಿದ್ದಕ್ಕೆ ಕೊಟ್ಟ ಪ್ರತಿಕ್ರಿಯೆ)

ಯಾವ ಕಾಲದಲ್ಲಿ ಯಾರೆಲ್ಲ ಪಕ್ಷದ ಚೌಕಟ್ಟಿನಿಂದ ಅಂತರ ಕಾಯ್ದುಕೊಂಡರು ಎಂಬುದು ಗೊತ್ತಿದೆ. ನನ್ನ ವಿರುದ್ಧ ಪೋಸ್ಟರ್ ಹಚ್ಚಿದವರು ಯಾರು ಎಂಬ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಅವರಿಗೆ ಆತ್ಮತೃಪ್ತಿಯಾದರೆ ಸಾಕು

ಶಿವರಾಮ ಹೆಬ್ಬಾರ್, ಶಾಸಕ

ಕ್ಷೇತ್ರ ಮಹಾತ್ಮೆ

ಕಲಬುರಗಿ

ಹಿಂದಿನ ಲೋಕಸಭಾ ಚುನಾವಣೆಯಲ್ಲಿ, ಈಗ ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆಯವರ ಸ್ಪರ್ಧೆ ಕಾರಣಕ್ಕೆ ದೇಶಾದ್ಯಂತ ಕುತೂಹಲಕ್ಕೆ ಕಾರಣವಾಗಿತ್ತು ಕಲಬುರಗಿ ಕ್ಷೇತ್ರ. ಖರ್ಗೆಯವರನ್ನು ಸೋಲಿಸಲು ಬಿಜೆಪಿ ತನ್ನ ಶಕ್ತಿಯನ್ನೆಲ್ಲ ಧಾರೆ ಎರೆದಿತ್ತು. ಕಾಂಗ್ರೆಸ್ ಶಾಸಕರಾಗಿದ್ದ ಉಮೇಶ ಜಾಧವ್ ಅವರನ್ನು ಕರೆತಂದಿದ್ದ ಕೇಸರಿ ಪಡೆ, ಕಣ ರಂಗೇರಿಸಿತ್ತು. ಹಿಂದೆ ಪ್ರತಿನಿಧಿಸಿದ್ದ ಕ್ಷೇತ್ರವನ್ನು ತಮ್ಮ ಅಳಿಯನಿಗೆ ಬಿಟ್ಟುಕೊಟ್ಟ ಖರ್ಗೆಯವರಿಗೆ, ಕಮಲ ಬಾಡಿಸಿ, ಹಸ್ತ ಅರಳಿಸುವ ಸವಾಲು ಈಗಲೂ ಇದೆ. 'ಹಸ್ತ' ಮುರಿದು ಕಮಲ ಮುಡಿದಿದ್ದ ಜಾಧವ್, ಬಿಜೆಪಿಯಲ್ಲಿ ತೇಲಿ ತೇಲಿ ದೆಹಲಿ ತಲುಪಿದ್ದರು. ಈ ಬಾರಿ ಅಂತಹ ಅಲೆಯ ಬೆನ್ನೇರಿ, ದೆಹಲಿಗೆ ಹಾರುವುದೇನೂ ಅವರಿಗೆ ಸಲೀಸಲ್ಲ. 'ಇಂಡಿಯಾ' ಸೂತ್ರ ಹಿಡಿದಿರುವ ಖರ್ಗೆಯವರಿಗೆ ಕ್ಷೇತ್ರ ಗೆಲ್ಲಿಸಿಕೊಳ್ಳುವುದು ಪ್ರತಿಷ್ಠೆ. ಅದಕ್ಕಿಂತಲೂ ಅವರ ಮಗ, ಸಚಿವ ಪ್ರಿಯಾಂಕ್ ಖರ್ಗೆಗೆ ತಮ್ಮ ಭಾವನನ್ನು ಗೆಲ್ಲಿಸಿಕೊಂಡು, ಅಪ್ಪನ ಮರ್ಯಾದೆ ಉಳಿಸುವ ಹೊಣೆ ಹೆಗಲೇರಿದೆ. ತೊಗರಿಯ ಬಯಲಿನಲ್ಲಿ 'ಗ್ಯಾರಂಟಿ'ಗಳ ಖುಷಿಯೊಳಗೆ ರಾಧಾಕೃಷ್ಣ 'ದೊಡ್ಡ'ಮನಿ 'ಲೋಕ' ಪ್ರವೇಶಿಸುತ್ತಾರೋ, 'ಹಸ್ತ'ದ ಹಿಸುಕಿಗೆ ಸಿಗದಂತೆ 'ಕಮಲ' ಹಿಡಿದೆತ್ತಿ ಉಮೇಶ 'ಜಾದೂ' ಮಾಡ್ತರೋ... ಎಂಬುದು ಫಲಿತಾಂಶದ ದಿನವೇ ಗೊತ್ತಾಗಲಿದೆ.

ಲೋಕಸಭೆ ಚುನಾವಣೆಯಲ್ಲಿ ತೆಂಗು, ಅಡಿಕೆ, ಕಾಫಿ ಬೆಳೆಗಾರರ ಪ್ರಭಾವ

ಬೆಳೆ ಧಾರಣೆ ಏರಿಳಿತದಲ್ಲೂ 'ಮತ ಫಸಲು'

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೃಷಿ ವಲಯದ ಸಮಸ್ಯೆಗಳು ಪ್ರತಿ ಚುನಾವಣೆಯಲ್ಲೂ ಸದ್ದು ಮಾಡುತ್ತಲೇ ಬಂದಿವೆ. ರಾಜ್ಯದ ಪ್ರಮುಖ ಬೆಳೆಗಳಾದ ಅಡಿಕೆ, ತೆಂಗು, ಕಾಫಿ ಬೆಳೆಗಾರರ ಸಮಸ್ಯೆಗಳು ರಾಜಕೀಯ ಪಕ್ಷಗಳಿಗೆ ಅಸ್ತ್ರಗಳಾಗಿ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರಿವೆ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲೂ 'ಬೆಳೆ ರಾಜಕಾರಣ' ಮುನ್ನೆಲೆಗೆ ಬಂದಿದೆ.

ಧಾರಣೆಯ ಏರಿಕೆ ಆಳುವ ಪಕ್ಷಗಳಿಗೆ ವರವಾದರೆ, ಇಳಿಕೆ ವಿರೋಧ ಪಕ್ಷಗಳಿಗೆ ಅಸ್ತ್ರವಾಗುತ್ತದೆ. ಧಾರಣೆ ಏರಿಳಿಕೆಯ ಹಾವು–ಏಣಿ ಆಟಕ್ಕೆ ಹಲವು ಅಭ್ಯರ್ಥಿಗಳು ಸೋತು ಮನೆ ಸೇರಿದರೆ, ಕೆಲವರು ಭರವಸೆ ಕೊಟ್ಟುಕೊಂಡೇ ಅನಾಯಾಸವಾಗಿ 'ಲೋಕ' ಪ್ರವೇಶ ಮಾಡಿದ್ದಾರೆ.

ಪಶ್ಚಿಮಘಟ್ಟ ವ್ಯಾಪ್ತಿಯ ಮಲೆನಾಡು, ಅರೆ ಮಲೆನಾಡಿನ ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ದಾವಣಗೆರೆ, ತುಮಕೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಅಡಿಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಪ್ರತಿ ಚುನಾವಣೆಯಲ್ಲೂ ಬಹು ಚರ್ಚಿತ ವಿಷಯ. ಹಾಗೆಯೇ, ಹಳೆ ಮೈಸೂರು ಪ್ರಾಂತ್ಯದ ಜಿಲ್ಲೆಗಳಲ್ಲಿ ತೆಂಗು, ಚಿಕ್ಕಮಗಳೂರು, ಕೊಡಗು, ಹಾಸನ ಜಿಲ್ಲೆಗಳ ವ್ಯಾಪ್ತಿಯ ಕ್ಷೇತ್ರಗಳಲ್ಲಿ ಕಾಫಿ ಸಮಸ್ಯೆಗಳು ರಾಜಕೀಯ ಪಕ್ಷಗಳ ಚುನಾವಣಾ ಸರಕುಗಳಾಗಿವೆ.

ಮಲೆನಾಡಿನ ಸಾಂಪ್ರದಾಯಿಕ ಬೆಳೆ ಅಡಿಕೆಗೆ ಚಿನ್ನದ ಬೆಲೆ ದೊರೆತ ನಂತರ ಬೆಳೆ ಕ್ಷೇತ್ರ ಬಯಲು ಸೀಮೆಗೂ ಹಬ್ಬಿದೆ. ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಅಡಿಕೆ ಬೆಳೆಯಲಾಗುತ್ತಿದೆ. ಬೆಳೆ ಕ್ಷೇತ್ರ ಹೆಚ್ಚಳವಾದಂತೆ ಬೆಳೆಗಾರರ ಸಂಖ್ಯೆಯಲ್ಲೂ ಭಾರಿ ಏರಿಕೆಯಾಗಿದೆ. ಹಾಗಾಗಿಯೇ, ಅಡಿಕೆ ಬೆಳೆಯ ಸಮಸ್ಯೆಗಳು ರಾಜಕೀಯ ಪಕ್ಷಗಳಿಗೆ 'ಮತಬೇಟೆ'ಯ ಪ್ರಮುಖ ವಿಷಯಗಳಾಗಿವೆ. ಅಡಿಕೆ ಬೆಲೆ ಏರಿಕೆಯ ಲಾಭವನ್ನು ತಮ್ಮ ಸಾಧನೆಯ ಕಿರೀಟವೆಂಬಂತೆ ಆಡಳಿತದಲ್ಲಿರುವ ರಾಜಕೀಯ ಪಕ್ಷಗಳು ಬಿಂಬಿಸಿಕೊಂಡರೆ, ಬೆಲೆ ಕುಸಿತವನ್ನು ಆಡಳಿತ ವಿರೋಧಿ ನೀತಿಯಾಗಿ ಪ್ರತಿಪಾದಿಸಿ, ಬೆಳೆಗಾರರ ಆಕ್ರೋಶವನ್ನು ಮತಗಳಾಗಿ ಪರಿವರ್ತಿಸಿಕೊಳ್ಳುವಲ್ಲಿ ವಿರೋಧ ಪಕ್ಷಗಳು ನಿರಂತರ ಪ್ರಯತ್ನ ನಡೆಸುತ್ತಲೇ ಇವೆ.

ಮತ್ತೆ ಮುನ್ನೆಲೆಗೆ ಬಂದ 'ಸರ್ಫೇಸಿ' ಕಾಯ್ದೆ

ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ (ಸರ್ಫೇಸಿ) ಕಾಯ್ದೆಯ ಸೆಕ್ಷನ್ 31(ಐ)ಗೆ ತಿದ್ದುಪಡಿ ತಂದು ಕಾಫಿ, ಏಲಕ್ಕಿ, ಮೆಣಸು, ರಬ್ಬರ್ ಮತ್ತು ಚಹಾ ರೀತಿಯ ಬೆಳೆ ಬೆಳೆಯುವ ತೋಟಗಳನ್ನು (ಎಸ್ಟೇಟ್ಸ್) ಕೃಷಿ ಭೂಮಿ ಎಂದು ಪರಿಗಣಿಸಬೇಕು ಎನ್ನುವ ದಶಕಗಳ ಬೇಡಿಕೆ ಈ ಬಾರಿಯೂ ಮತ್ತೆ ಮುನ್ನೆಲೆಗೆ ಬಂದಿದೆ.

ವಿಪರೀತ ಮಳೆ, ಇಲ್ಲವೇ ಮಳೆ ಕೊರತೆ, ಹವಾಮಾನ ವೈಪರೀತ್ಯ ಹಾಗೂ ಕಾರ್ಮಿಕರ ಕೊರತೆಯ ಸಂಕಷ್ಟ ಎದುರಿಸುತ್ತಿರುವ ಕಾಫಿ ಬೆಳೆಗಾರರು ಬೆಳೆ ನಷ್ಟ ಅಥವಾ ದರ ಇಳಿಕೆಯ ಸಂಕಷ್ಟವನ್ನು ಸದಾ ಅನುಭವಿಸುತ್ತಾ ಬಂದಿದ್ದಾರೆ. ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಭಾಗದ ಕ್ಷೇತ್ರಗಳಲ್ಲಿ ಕಾಫಿ ಬೆಳೆಗಾರರ ಸಮಸ್ಯೆ ಪ್ರತಿ ಬಾರಿಯೂ ಆಡಳಿತ ಪಕ್ಷಗಳಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ.

ಸಾವಿರಾರು ಎಕರೆ ಒತ್ತುವರಿ ತೆರವಿಗೆ ಸರ್ಕಾರಗಳು ಕ್ರಮ ಕೈಗೊಳ್ಳಲು ಮುಂದಾದಾಗಲೆಲ್ಲ ರಾಜಕೀಯ ಕಾರಣಗಳಿಗಾಗಿ ಹಿಂದೇಟು ಹಾಕಲಾಗುತ್ತಿತ್ತು. ಈಚೆಗೆ 25 ಎಕರೆ ಒಳಗಿನ ಒತ್ತುವರಿ ತೋಟಗಳನ್ನು ತೆರವುಗೊಳಿಸುವ ಬದಲು 30 ವರ್ಷಗಳ ಗುತ್ತಿಗೆಗೆ ನೀಡುವ ಸರ್ಕಾರದ ಆದೇಶ ಬೆಳೆಗಾರರಲ್ಲಿ ಕೊಂಚ ನೆಮ್ಮದಿ ತಂದಿದೆ.

ಮತ ಮಂಥನ

ಅಧಿಕಾರದಲ್ಲಿದ್ದಾಗ ಆಡುವ ಮಾತೇ ಬೇರೆ, ವಿರೋಧ ಪಕ್ಷದಲ್ಲಿದ್ದಾಗ ಹೋರಾಡುವ ಕಸುವೇ ಬೇರೆ.

ಅಧಿಕಾರದ 'ಸ್ಥಿತಿ' ಬದಲಾದಂತೆ ಮಾತು ವರಸೆಗಳೂ ಬದಲಾಗುತ್ತಲೇ ಬಂದಿವೆ.

'ಅಡಿಕೆ ಹಾನಿಕರ, ಮನುಷ್ಯರು ಸೇವಿಸಿದರೆ ಕ್ಯಾನ್ಸರ್ ಬರುತ್ತದೆ' ಎಂಬ ವರದಿಯ ಆಧಾರದಲ್ಲಿ ಯುಪಿಎ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಹ ಸಲ್ಲಿಸಿತ್ತು.

ಇದು ಅಡಿಕೆ ರಾಜಕಾರಣಕ್ಕೆ ನಾಂದಿಯಾಡಿತ್ತು. 2009, 2014ರ ಲೋಕಸಭಾ ಚುನಾವಣೆಯಲ್ಲಿ ಇದೇ ವಿಷಯ ಮುಂದಿಟ್ಟುಕೊಂಡು ಬಿಜೆಪಿಯು ಕಾಂಗ್ರೆಸ್ ವಿರುದ್ಧ ನಿರಂತರ ವಾಗ್ದಾಳಿ ನಡೆಸಿತ್ತು. ಅಡಿಕೆ ಬೆಳೆಯುವ ಕ್ಷೇತ್ರಗಳಲ್ಲಿ ತನ್ನ ಮತಬ್ಯಾಂಕ್ ವೃದ್ಧಿಸಿಕೊಂಡಿತು.

ಬಿಜೆಪಿ 2014ರಲ್ಲಿ ಅಧಿಕಾರಕ್ಕೆ ಬಂದ ನಂತರ ಕೋರ್ಟ್‌ಗೆ ಹಿಂದೆ ಸಲ್ಲಿಸಿದ್ದ 'ಹಾನಿಕಾರಕ' ಎಂಬ ಪ್ರಮಾಣಪತ್ರವನ್ನೇ ಮತ್ತೆ ಸಲ್ಲಿಸಿತ್ತು. ಇದು ಕಾಂಗ್ರೆಸ್, ಜೆಡಿಎಸ್ ಸೇರಿದಂತೆ ಇತರೆ ಪಕ್ಷಗಳಿಗೆ ಟೀಕಾಸ್ತ್ರವಾಯಿತು. ನಾಲ್ಕು ವರ್ಷಗಳಿಂದ ₹50 ಸಾವಿರದ ಆಸುಪಾಸು ಇದ್ದು ಅಡಿಕೆ ಧಾರಣೆ ಎರಡು ತಿಂಗಳಿನಿಂದ ಕುಸಿದಿದ್ದು, ಇದು ಕೇಂದ್ರದ ವೈಫಲ್ಯವೆಂದು ಕಾಂಗ್ರೆಸ್ ಬಿಂಬಿಸುತ್ತಿದೆ.

ಚುನಾವಣಾ ಹೊಸ್ತಿಲಲ್ಲಿ 'ಕೊಬ್ಬರಿ' ಅಬ್ಬರ: ತೆಂಗಿನ ಬೆಳೆ ಹಾಗೂ ಬೆಲೆ ಹಳೇ ಮೈಸೂರು ಪ್ರಾಂತ್ಯದ ಕ್ಷೇತ್ರಗಳ ರಾಜಕೀಯದ ಮೇಲೆ ಪರಿಣಾಮ ಬೀರುತ್ತಲೇ ಬಂದಿವೆ. ಇತ್ತೀಚಿನ ದಿನಗಳಲ್ಲಿ ಕೊಬ್ಬರಿ ಬೆಲೆ ಕುಸಿದು ಪಾತಾಳ ಮುಟ್ಟಿದ್ದರೂ, ಈ ವಿಷಯ ಅಷ್ಟೊಂದು ತೀವ್ರತೆ ಪಡೆದುಕೊಂಡಿರಲಿಲ್ಲ. ಆದರೆ, ಚುನಾವಣಾ ವರ್ಷದ ಆರಂಭದಲ್ಲಿ ರಾಜ್ಯ ಸರ್ಕಾರ ಬೆಂಬಲ ಬೆಲೆ ಅಡಿ ಖರೀದಿಸಲು ಹೆಚ್ಚಿನ ಆಸಕ್ತಿ ತೋರಿದೆ. ಉಂಡೆ ಕೊಬ್ಬರಿ ಖರೀದಿ ಜತೆಗೆ, ಮಿಲ್ಲಿಂಗ್ ಕೊಬ್ಬರಿಯನ್ನೂ ಬೆಂಬಲ ಬೆಲೆಯಲ್ಲಿ ಖರೀದಿಸುವ ರಾಜ್ಯ ಸರ್ಕಾರದ ಪ್ರಯತ್ನಕ್ಕೆ ಫಲ ಸಿಕ್ಕಿದೆ. ಇದೇ ಮೊದಲ ಬಾರಿಗೆ ಮಿಲ್ಲಿಂಗ್ ಕೊಬ್ಬರಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಕೇಂದ್ರ ಸಮ್ಮತಿಸಿದೆ. ಇದೇ ವಿಷಯಗಳನ್ನು ಪ್ರಸ್ತಾಪಿಸಿ ರಾಜ್ಯದ ಕಾಂಗ್ರೆಸ್, ಕೇಂದ್ರದ ಬಿಜೆಪಿ 'ಮತ ಫಸಲು' ತೆಗೆಯಲು ಮುಂದಾಗಿವೆ.

ಅಡಿಕೆ ಪ್ರಭಾವಿತ ಕ್ಷೇತ್ರಗಳು	ತೆಂಗು ಪ್ರಭಾವಿತ ಕ್ಷೇತ್ರಗಳು
ಶಿವಮೊಗ್ಗ	ತುಮಕೂರು
ಉತ್ತರ ಕನ್ನಡ	ಹಾಸನ
ಚಿಕ್ಕಮಗಳೂರು–ಉಡುಪಿ	ಚಿಕ್ಕಮಗಳೂರು–ಉಡುಪಿ
ದಾವಣಗೆರೆ	ಚಿತ್ರದುರ್ಗ
ಹಾವೇರಿ	ಮೈಸೂರು–ಕೊಡಗು
ಚಿತ್ರದುರ್ಗ	ಮಂಡ್ಯ
ತುಮಕೂರು	ಬೆಂಗಳೂರು ಗ್ರಾಮಾಂತರ
	ಚಾಮರಾಜನಗರ

ಬೆಳೆಗಳು, ಪ್ರದೇಶ (ಹೆಕ್ಟೇರ್‌ಗಳಲ್ಲಿ)

ಅಡಿಕೆ	ತೆಂಗು	ಕಾಫಿ
8 ಲಕ್ಷ	6.5 ಲಕ್ಷ	2.46 ಲಕ್ಷ

ತೆಂಗು ಬೆಳೆಗಾರರ ಸಿಟ್ಟಿಗೆ ಸಚಿವರೇ ಸೋತಿದ್ದರು

ತೆಂಗಿನ ಬೆಳೆ ಹಾಗೂ ಬೆಲೆ ಹಳೇ ಮೈಸೂರು ಭಾಗದ ಕ್ಷೇತ್ರಗಳ ರಾಜಕೀಯದ ಮೇಲೆ ಪರಿಣಾಮ ಬೀರುತ್ತಲೇ ಬಂದಿದೆ. ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಟಿ.ಬಿ.ಜಯಚಂದ್ರ ಕೃಷಿ ಸಚಿವರಾಗಿದ್ದರು. ಆಗ ತೆಂಗು ಬೆಳೆಗೆ ನುಸಿ ಪೀಡೆ ಇನ್ನಿಲ್ಲದಂತೆ ಬಾಧಿಸಿತ್ತು. ರೋಗ ನಿಯಂತ್ರಿಸುವ ಸಲುವಾಗಿ ಮರದ ಕಾಂಡಕ್ಕೆ ಔಷಧ ಕೊಡಿಸಿದ್ದರು. ಇದರಿಂದ ನುಸಿಪೀಡೆ ಕಡಿಮೆಯಾಗುವ ಬದಲು ಮರಗಳೇ ಒಣಗಿ ಹೋಗಿದ್ದವು. ಸರಿಯಾದ ರೀತಿಯಲ್ಲಿ ಪ್ರಯೋಗ ಮಾಡದೆ ಔಷಧ ಕೊಡಿಸಿ ಮರ ಸಾಯುವಂತೆ ಮಾಡಿದರು ಎಂದು ತೆಂಗು ಬೆಳೆಗಾರರು ಸಿಟ್ಟಾದರು. ಇದರ ಪರಿಣಾಮವಾಗಿ 2004ರಲ್ಲಿ ನಡೆದ ಚುನಾವಣೆಯಲ್ಲಿ ಜಯಚಂದ್ರ ಸೋಲುವಂತಾಯಿತು.

'ಮೋದಿಗೆ ಅವಾಚ್ಯ ಪದ ಬಳಸಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮೋದಿಗೆ ಅವಾಚ್ಯ ಪದಗಳನ್ನು ಬಳಸಿಲ್ಲ. ಬಿಜೆಪಿಯವರು ನುಡಿದಂತೆ ನಡೆದಿದ್ದರೆ ಮೋದಿಗೆ ನಾನೂ ಜೈ ಹೇಳುತ್ತೇನೆ' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಕಾರಟಗಿಯ ಕಾರ್ಯಕ್ರಮದಲ್ಲಿ ನಾನು ಸಂವಿಧಾನ ಬದಲಾವಣೆ ಹೇಳಿಕೆ ವಿರುದ್ಧ ಮಾತನಾಡಿದ್ದೇನೆ. ಬಿಜೆಪಿಯವರ, ಸಿ.ಟಿ. ರವಿ ಅವರ ಕಪಾಳಕ್ಕೆ ಹೊಡೆಯಿರಿ ಎಂದು ನಾನು ಹೇಳಿದ್ದೇನೆಯೇ' ಎಂದು ಪ್ರಶ್ನಿಸಿದರು. 'ನಮ್ಮ ಮಕ್ಕಳ ದಾರಿ ತಪ್ಪಿಸುವವರ ವಿರುದ್ಧ ಮಾತನಾಡಿದೆ. ಚಿಕ್ಕಪ್ಪ, ಅಣ್ಣ, ಹಿತಚಿಂತಕನಾಗಿ ಉತ್ತರ ಕರ್ನಾಟಕ ಭಾಷೆಯಲ್ಲಿ ಮಾತನಾಡಿದ್ದು ತಪ್ಪೇ? ಸಿ.ಟಿ. ರವಿ ಅವರು ಅಪ್ಪನಿಗೆ ಹುಟ್ಟಿದ್ದರೇ ಎನ್ನುವ ಮಾತನ್ನು ಆಡಿದ್ದಾರೆ. ನಾನು ಸಹ ಯಾರಿಗೆ ಹುಟ್ಟಿದ್ದೀರಿ ಎಂದು ಕೇಳಬಹುದಿತ್ತು. ಆದರೆ, ಅವರಷ್ಟು ಕೆಳಮಟ್ಟಕ್ಕೆ ಇಳಿಯಲು ಇಷ್ಟಪಡುವುದಿಲ್ಲ' ಎಂದರು.

ಶಿವರಾಜ ಎಸ್. ತಂಗಡಗಿ

'ನಾವು ಯಾರಿಗೆ ಹುಟ್ಟಿದ್ದೇವೆ ಎಂದು ನಮ್ಮ ತಾಯಂದಿರಿಗೆ ಗೊತ್ತಿರುತ್ತದೆ. ನೀವು ಸವಾಲಿಗೆ ಸಿದ್ಧರಿದ್ದರೆ ನನ್ನ ತಾಯಿಯನ್ನು ಬಿಜೆಪಿ ಕಚೇರಿಗೆ ಕರೆದುಕೊಂಡು ಬರುತ್ತೇನೆ. ನೀವು ತಯಾರಿದ್ದೀರಾ? ಎರಡು ಕೋಟಿ ಉದ್ಯೋಗ, ನರೇಗಾ ಅನ್ಯಾಯದ ಬಗ್ಗೆ ಉತ್ತರ ಕೊಡಲು ಸಿದ್ಧರಿದ್ದೀರಾ' ಎಂದೂ ಸಿ.ಟಿ. ರವಿ ಅವರನ್ನು ತಂಗಡಗಿ ಪ್ರಶ್ನಿಸಿದರು.

ಎಫ್‌ಐಆರ್ ದಾಖಲು

ಕೊಪ್ಪಳ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಖಾತೆ ಸಚಿವ ಶಿವರಾಜ ತಂಗಡಗಿ ವಿರುದ್ಧ ಲೋಕಸಭಾ ಚುನಾವಣೆಯ ಪ್ರಚಾರದ ಸಮಯದಲ್ಲಿ ಪ್ರಚೋದನಕಾರಿಯಾಗಿ ಹೇಳಿಕೆ ನೀಡಿದ ಕಾರಣಕ್ಕಾಗಿ ಜಿಲ್ಲೆಯ ಕಾರಟಗಿ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಎಫ್‌ಐಆರ್ ದಾಖಲಾಗಿದೆ.

'ಮೋದಿ ನಿಂದನೆಗೆ ಕಾಂಗ್ರೆಸ್‌ನಿಂದ ದಲಿತ ಅಸ್ತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರಮೋದಿ ಅವರನ್ನು ನಿಂದಿಸಲು ಕಾಂಗ್ರೆಸ್ ಪಕ್ಷ ದಲಿತ ನಾಯಕರನ್ನು ಅಸ್ತ್ರವಾಗಿ ಬಳಸುತ್ತಿದ್ದು, ಇದು ಆ ಪಕ್ಷದ ಟೂಲ್‌ಕಿಟ್‌ನ ಭಾಗ ಎಂದು ಬಿಜೆಪಿಯ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಆರೋಪಿಸಿದರು.

'ನೇತಾ ಮತ್ತು ನೀತಿ ಎರಡೂ ಇಲ್ಲದ ಕಾಂಗ್ರೆಸ್ ಸೋಲುವ ಭೀತಿಯಿಂದ ಮೋದಿಯವರನ್ನು ಗುರಿಯಾಗಿಸಿ ದ್ವೇಷದಿಂದ ಕೂಡಿದ ಕೀಳು ಮಟ್ಟದ ಹೇಳಿಕೆಗಳನ್ನು ಕೊಡಿಸುತ್ತಿದೆ. ಇದಕ್ಕೆ ಸಚಿವ ಶಿವರಾಜ್ ತಂಗಡಗಿ ಅವರ ಹೇಳಿಕೆಯೇ ನಿದರ್ಶನ' ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಿ.ಟಿ. ರವಿ

'ರಾಹುಲ್ ಗಾಂಧಿ ಮೊಹಬ್ಬತ್ ಕಿ ದುಕಾನ್ ಎನ್ನುತ್ತಾರೆ. ವಾಸ್ತವದಲ್ಲಿ ಅಸಹಿಷ್ಣುತೆ ಮತ್ತು ದ್ವೇಷವೇ ಕಾಂಗ್ರೆಸ್‌ನ ನೀತಿಯಾಗಿದೆ. ಮಲ್ಲಿಕಾರ್ಜುನ ಖರ್ಗೆ ಮೋದಿ ಅವರನ್ನು ವಿಷ ಸರ್ಪ ಎಂದು ಹೇಳಿದರೆ, ಅವರ ಪುತ್ರ ಪ್ರಿಯಾಂಕ್ ಖರ್ಗೆ ಚೋರ್ ಗುರು ಚಾಂಡಾಲ್ ಶಿಷ್ಯ ಎಂದಿದ್ದಾರೆ. ಸಿದ್ದರಾಮಯ್ಯ ಬಿಜೆಪಿಯವರ ಮನೆ ಹಾಳಾಗಿ ಹೋಗಲಿ ಎಂದಿದ್ದಾರೆ' ಎಂದು ರವಿ ತಿಳಿಸಿದರು.

'ಕಾಂಗ್ರೆಸ್ ಪಕ್ಷಕ್ಕೆ 'ನೋ ವಿಷನ್, ನೋ ಮಿಷನ್'. ಕರ್ನಾಟಕ ಕಾಂಗ್ರೆಸ್ ಬರೀ 'ಪರ್ಸೆಂಟೇಜ್'ಗೆ ಸೀಮಿತವಾಗಿದೆ. ಪ್ರಧಾನಿ ಮೋದಿಯವರು ವಿಷನ್ ಮತ್ತು ಮಿಷನ್ ಮೂಲಕ ದೇಶದಲ್ಲಿ ಆಮೂಲಾಗ್ರ ಪರಿವರ್ತನೆ ತರುತ್ತಿದ್ದಾರೆ' ಎಂದರು.

ಶ್ವೇತಪತ್ರ ಹೊರಡಿಸಿ: ಕೇಂದ್ರದಿಂದ ರಾಜ್ಯಕ್ಕೆ 2004ರಿಂದ 2014ರವರೆಗೆ ಮತ್ತು 2014ರಿಂದ 2023ರವರೆಗೆ ಬಂದಿರುವ ತೆರಿಗೆ ಪಾಲಿನ ಮೊತ್ತ ಮತ್ತು ವಿಶೇಷ ಅನುದಾನಗಳ ಬಗ್ಗೆ ರಾಜ್ಯ ಸರ್ಕಾರ ಶ್ವೇತಪತ್ರ ಹೊರಡಿಸಬೇಕು ಎಂದು ಅವರು ಒತ್ತಾಯಿಸಿದರು.

ಸಿದ್ದರಾಮಯ್ಯ ಮತ್ತು ಕೃಷ್ಣಬೈರೇಗೌಡ ನಿರಂತರ ಸುಳ್ಳುಗಳನ್ನು ಹೇಳುವ ಮೂಲಕ ಕೇಂದ್ರ ಸರ್ಕಾರ ಕರ್ನಾಟಕ ವಿರೋಧಿ ಎಂಬುದನ್ನು ದುರುದ್ದೇಶದಿಂದ ಬಿಂಬಿಸುತ್ತಿದ್ದಾರೆ ಎಂದರು.

ಕೃಷ್ಣ ಬೈರೇಗೌಡ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಬಹಿರಂಗ ಚರ್ಚೆಗೆ ಕರೆದಿದ್ದಾರೆ. ನಿರ್ಮಲಾ ಸೀತಾರಾಮನ್ ಅವರು ಸಂಸತ್ತು ಮತ್ತು ರಾಜ್ಯಸಭೆಯಲ್ಲೇ ಈ ಬಗ್ಗೆ ಸುದೀರ್ಘ ಉತ್ತರ ನೀಡಿದ್ದಾರೆ. ರಾಜ್ಯಸಭೆಯಲ್ಲಿ ಹಾಜರಿದ್ದ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಜೈರಾಂ ರಮೇಶ್ ಅವರು ಕೇಂದ್ರದ ಮಾಹಿತಿಯ ಬಗ್ಗೆ ಏಕೆ ತಕರಾರು ಎತ್ತಲಿಲ್ಲ. ಸುಮ್ಮನೇ ಏಕೆ ಕುಳಿತಿದ್ದರು. ಒಂದು ವೇಳೆ ನಿರ್ಮಲಾ ಸೀತಾರಾಮನ್ ಅವರು ತಪ್ಪು ಮಾಹಿತಿ ನೀಡಿದ್ದರೆ ಹಕ್ಕುಚ್ಯುತಿ ಮಂಡಿಸುವುದಕ್ಕೂ ಅವಕಾಶವಿತ್ತಲ್ಲವೇ ಎಂದು ಪ್ರಶ್ನಿಸಿದರು.

ದಾವಣಗೆರೆ: ಯಡಿಯೂರಪ್ಪ ನೇತೃತ್ವದಲ್ಲಿ ಸುದೀರ್ಘ ಸಭೆ

ಶಮನವಾದ ಬಿಜೆಪಿ ಬಂಡಾಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪತ್ನಿ ಗಾಯತ್ರಿ ಅವರಿಗೆ ಲೋಕಸಭೆ ಚುನಾವಣೆ ಟಿಕೆಟ್ ನೀಡಿರುವುದನ್ನು ವಿರೋಧಿಸಿ ಬಂಡಾಯ ಎದ್ದಿದ್ದ ಪಕ್ಷದ ಮುಖಂಡರ ಮನವೊಲಿಸುವ ಮೂಲಕ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಬಂಡಾಯವನ್ನು ಶಮನಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಗರದ ಹೊರವಲಯದಲ್ಲಿ ಮಂಗಳವಾರ ಸಂಜೆ ಮೂರು ಗಂಟೆ ಸುದೀರ್ಘ ಸಭೆ ನಡೆಸಿದ ಯಡಿಯೂರಪ್ಪ ಮುಖಂಡರ ಮನವೊಲಿಸಿದರು. ಬಂಡೆದ್ದವರಲ್ಲಿ ಪ್ರಮುಖರಾದ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರಿಗೆ ಚುನಾವಣೆಯ ನೇತೃತ್ವ ವಹಿಸಲಾಗಿದೆ.

ಪಕ್ಷದ ರಾಜ್ಯ ಚುನಾವಣಾ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಾಜಿ ಸಚಿವರಾದ ಬೈರತಿ ಬಸವರಾಜ, ಶಂಕರ ಪಾಟೀಲ್ ಮುನೇನಕೊಪ್ಪ, ವಿಧಾನಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಕೆ.ಎಸ್. ನವೀನ್ ಅವರೂ ಸಭೆಯಲ್ಲಿ ಭಾಗವಹಿಸಿದ್ದರು.

ಬಂಡಾಯವೆದ್ದಿರುವ ಮಾಜಿ ಸಚಿವರಾದ ಎಂ.ಪಿ. ರೇಣುಕಾಚಾರ್ಯ, ಜಿ.ಕರುಣಾಕರ ರೆಡ್ಡಿ, ಮಾಜಿ ಶಾಸಕರಾದ ಬಸವರಾಜ ನಾಯ್ಕ, ಗುರುಸಿದ್ದನಗೌಡ, ಎ.ಎಚ್. ಶಿವಯೋಗಿ ಸ್ವಾಮಿ, ಪ್ರಮುಖರಾದ ಮಾಡಾಳ್ ಮಲ್ಲಿಕಾರ್ಜುನ, ಲೋಕಿಕೆರೆ ನಾಗರಾಜ್, ಬಿ.ಜಿ. ಅಜಯ್ ಕುಮಾರ್, ಡಾ.ಟಿ.ಜಿ. ರವಿಕುಮಾರ್ ಮತ್ತಿತರರ ಜೊತೆ ಯಡಿಯೂರಪ್ಪ ಚರ್ಚಿಸಿದರು.

ಸುದೀರ್ಘ ಚರ್ಚೆಯ ಬಳಿಕ ಮಾತನಾಡಿದ ಬಿಜೆಪಿಯ ರಾಜ್ಯ ಚುನಾವಣಾ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರ್‌ವಾಲ್, ಗಾಯತ್ರಿ ಸಿದ್ದೇಶ್ವರ ಅವರನ್ನು ಬೆಂಬಲಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ' ಎಂದು ಘೋಷಿಸಿದರು.

'ಗಾಯತ್ರಿ ಸಿದ್ದೇಶ್ವರ ಅವರ ಗೆಲುವಿಗಾಗಿ ಒಂದಾಗಿ ಕೆಲಸ ಮಾಡಬೇಕು. ರವೀಂದ್ರನಾಥ್ ಅವರ ನೇತೃತ್ವದಲ್ಲಿ ಚುನಾವಣೆ ನಡೆಯಲಿದೆ. ದೊಡ್ಡ ಅಂತರದಲ್ಲಿ ಗೆಲ್ಲುವ ಬಗ್ಗೆ ಸಂಶಯ ಬೇಡ. ಬಂಡಾಯ ಎದ್ದವರು ಯಾವುದೇ ಷರತ್ತು ವಿಧಿಸಿಲ್ಲ' ಎಂದು ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ದಾವಣಗೆರೆಯಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ರಾಜ್ಯ ಚುನಾವಣಾ ಉಸ್ತುವಾರಿ ರಾಧಾ ಮೋಹನ್ ದಾಸ್ ಅವರು ಬಂಡಾಯ ಮುಖಂಡರೊಂದಿಗೆ ಚರ್ಚೆ ನಡೆಸಿದರು –ಪ್ರಜಾವಾಣಿ ಚಿತ್ರ

ಬೂದಿ ಮುಚ್ಚಿದ ಕೆಂಡ?

ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಸಭೆ ನಡೆದು, ಸಂಧಾನದ ಮೂಲಕ ಬಂಡಾಯ ಶಮನವಾಗಿದ್ದರೂ ಕೆಲವರಲ್ಲಿ ಇನ್ನೂ ಅಸಮಾಧಾನವಿದೆ. ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ ಎಂದು ಮೂಲಗಳು ತಿಳಿಸಿವೆ. 'ಗಾಯತ್ರಿ ಸಿದ್ದೇಶ್ವರ ಅವರಿಗೆ ನಿಮ್ಮ ಬೆಂಬಲ ಇದೆಯಾ' ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಎಂ.ಪಿ. ರೇಣುಕಾಚಾರ್ಯ, 'ನಾವು ಬಿಜೆಪಿಯನ್ನು ಬೆಂಬಲಿಸುತ್ತೇವೆ' ಎಂದಷ್ಟೇ ಹೇಳಿದರು.

ಕಣದತ್ತ ಕಿರುನೋಟ

ಬೀದರ್

ಅಭ್ಯರ್ಥಿಗಳು

ಭಗವಂತ ಖೂಬಾ
ಬಿಜೆಪಿ

ಸಾಗರ್ ಖಂಡ್ರೆ
ಕಾಂಗ್ರೆಸ್

ಮೋದಿ ಅಲೆ, 'ಗ್ಯಾರಂಟಿ' ಭರವಸೆ

ಬೀದರ್ ಲೋಕಸಭಾ ಕ್ಷೇತ್ರಕ್ಕೆ 2014, 2019ರಲ್ಲಿ ನಡೆದ ಚುನಾವಣೆಗಳಲ್ಲಿ ಬಿಜೆಪಿಯಿಂದ ಗೆದ್ದಿರುವ ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಮೂರನೇ ಬಾರಿ ಕಣಕ್ಕಿಳಿದಿದ್ದು, 'ಹ್ಯಾಟ್ರಿಕ್' ಗೆಲುವಿನ ವಿಶ್ವಾಸದಲ್ಲಿದ್ದಾರೆ.

ಭಗವಂತ ಖೂಬಾ ಅವರು ಸ್ಥಳೀಯ ಬಿಜೆಪಿ ಮುಖಂಡರು, ಕಾರ್ಯಕರ್ತರನ್ನು ಬೆಳೆಸಿಲ್ಲ, ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ ಎಂಬ ಆರೋಪವಿದ್ದು, ಅವರಿಗೆ ಸಹಕಾರ ಸಿಗುತ್ತಿಲ್ಲ. ಅವರ 'ಒರಟು ಸ್ವಭಾವ'ಕ್ಕೆ ಅನೇಕರು ಅವರಿಂದ ದೂರವಾಗಿದ್ದಾರೆ. ಹಿಂದಿನ ಎರಡೂ ಚುನಾವಣೆಗಳಲ್ಲಿ ಮೋದಿ ಅಲೆಯಲ್ಲಿ ಗೆದ್ದಿರುವ ಖೂಬಾ ಅವರು ಈ ಸಲವೂ ಅದನ್ನೇ ನೆಚ್ಚಿಕೊಂಡಿದ್ದಾರೆ.

ಕಾಂಗ್ರೆಸ್‌ನಿಂದ ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ. ಖಂಡ್ರೆಯವರ ಮಗ ಸಾಗರ್ ಖಂಡ್ರೆ ಕಣಕ್ಕಿಳಿದಿದ್ದಾರೆ. ಅವರಿಗೆ ರಾಜಕೀಯ ಸಂಪೂರ್ಣ ಹೊಸತು. 26ರ ಹರೆಯದ ಸಾಗರ್ ಅವರಿಗೆ ಇದು ಮೊದಲ ಚುನಾವಣೆ. ಮಗನನ್ನು ಗೆಲುವಿನ ದಡ ಸೇರಿಸುವ ಸಂಪೂರ್ಣ ಜವಾಬ್ದಾರಿ ಈಶ್ವರ ಬಿ. ಖಂಡ್ರೆಯವರ ಮೇಲಿದೆ. 'ಗ್ಯಾರಂಟಿ'ಗಳು ಕೈಹಿಡಿಯಲಿವೆ ಎಂಬ ವಿಶ್ವಾಸದಲ್ಲಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಘೋಷಣೆಯಾದ ನಂತರ ಆ ಪಕ್ಷದಲ್ಲಿ ಯಾವುದೇ ಅಪಸ್ವರ ಕೇಳಿ ಬಂದಿಲ್ಲ. ಮೇಲ್ನೋಟಕ್ಕೆ ಖೂಬಾ–ಸಾಗರ್ ನಡುವಿನ ಸ್ಪರ್ಧೆಯಂತೆ ಕಂಡು ಬಂದರೂ ಇದು ಖೂಬಾ–ಈಶ್ವರ ಖಂಡ್ರೆ ಮಧ್ಯದ ಸ್ಪರ್ಧೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಬಿಜೆಪಿ 5 | ಕಾಂಗ್ರೆಸ್ 3

ಮತದಾರರ ಸಂಖ್ಯೆ: 9,49,404 ಪುರುಷರು | 8,95,931 ಮಹಿಳೆಯರು | 94 ಲಿಂಗತ್ವ ಅಲ್ಪಸಂಖ್ಯಾತರು

ಒಟ್ಟು 18,45,429

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಭಗವಂತ ಖೂಬಾ	ಬಿಜೆಪಿ	5,85,471
ಸಮೀಪದ ಪ್ರತಿಸ್ಪರ್ಧಿ	ಈಶ್ವರ ಬಿ. ಖಂಡ್ರೆ	ಕಾಂಗ್ರೆಸ್	4,68,637

ಮೈಸೂರು ಕೊಡಗು

ಅಭ್ಯರ್ಥಿಗಳು

ಎಂ. ಲಕ್ಷ್ಮಣ
ಕಾಂಗ್ರೆಸ್

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್
(ಬಿಜೆಪಿ–ಜೆಡಿಎಸ್ ಮೈತ್ರಿಕೂಟ)

ಸಾಮಾನ್ಯ–ರಾಜವಂಶಸ್ಥ ನಡುವೆ ಪೈಪೋಟಿ

ಕಾಂಗ್ರೆಸ್ ಮತ್ತು ಬಿಜೆಪಿ ಈ ಬಾರಿ ಹೊಸಬರಿಗೆ ಟಿಕೆಟ್ ಕೊಟ್ಟಿದ್ದು, ನೇರ ಹಣಾಹಣಿ ಇದೆ. ಯದುವೀರ್ ಮೈಸೂರು ರಾಜವಂಶಸ್ಥ. ಲಕ್ಷ್ಮಣ ಸಾಮಾನ್ಯ ಕಾರ್ಯಕರ್ತ. ಇಬ್ಬರೂ ಸುಶಿಕ್ಷಿತರು.

ಹಾಲಿ ಸಂಸದ, ಸತತ 2 ಬಾರಿ ಗೆದ್ದಿದ್ದ ಪ್ರತಾಪ ಸಿಂಹ ಅವರಿಗೆ ಟಿಕೆಟ್ ತಪ್ಪಿಸಿದ ಬಿಜೆಪಿ 'ರಾಜ ಪರಿವಾರ'ಕ್ಕೆ ಗಾಳ ಹಾಕಿದೆ. ಪ್ರಬಲ ಒಕ್ಕಲಿಗ ಸಮಾಜದ ಅಭ್ಯರ್ಥಿ ಕಣಕ್ಕಿಳಿಸಿರುವ ಕಾಂಗ್ರೆಸ್ 'ಮತ ಫಸಲಿಗೆ' ಯೋಜಿಸಿದೆ. ಲಕ್ಷ್ಮಣ 2 ದಶಕದಿಂದ ಜನಪರ ಹೋರಾಟಗಳಲ್ಲಿದ್ದಾರೆ. ದಕ್ಷಿಣ ಪದವೀಧರರು, ಶಿಕ್ಷಕರ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಮೈಸೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಮಬಲ, ರಾಜ್ಯ ಸರ್ಕಾರದ 'ಗ್ಯಾರಂಟಿ' ಯೋಜನೆಗಳ ಲಾಭವನ್ನು ನೆಚ್ಚಿಕೊಂಡಿದ್ದಾರೆ.

ಯದುವೀರ್‌ಗೆ ರಾಜಕಾರಣ ಹೊಸದು. ಅರಸರ ಬಗ್ಗೆ ಜನರಿಗಿರುವ ಗೌರವ, ಪ್ರಧಾನಿ ಮೋದಿ 'ಅಲೆ'ಯಿಂದ ಅನುಕೂಲದ ನಿರೀಕ್ಷೆಯಲ್ಲಿದ್ದಾರೆ. ಪ್ರತಾಪಗೆ ಟಿಕೆಟ್ ಕೈತಪ್ಪಿದ್ದರಿಂದ ಒಕ್ಕಲಿಗ ಸಮಾಜದಲ್ಲಿರುವ ಅಸಮಾಧಾನದಿಂದ ಒಳೇಟಿನ ಭೀತಿ ಇದೆ. ಮಿತ್ರ ಪಕ್ಷ ಜೆಡಿಎಸ್ ಪ್ರಚಾರ ಆರಂಭಿಸಿಲ್ಲ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್ 5 | ಜೆಡಿಎಸ್ 2 | ಬಿಜೆಪಿ 1

ಮತದಾರರ ಸಂಖ್ಯೆ: 10,17,120 ಪುರುಷರು | 10,55,035 ಮಹಿಳೆಯರು | 182 ಲಿಂಗತ್ವ ಅಲ್ಪಸಂಖ್ಯಾತರು

ಒಟ್ಟು 20,72,337

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಪ್ರತಾಪ ಸಿಂಹ	ಬಿಜೆಪಿ	6,88,974
ಸಮೀಪದ ಪ್ರತಿಸ್ಪರ್ಧಿ	ಸಿ.ಎಚ್.ವಿಜಯಶಂಕರ್	ಕಾಂಗ್ರೆಸ್–ಜೆಡಿಎಸ್ ಮೈತ್ರಿ	5,50,327

ಉಡುಪಿ ಚಿಕ್ಕಮಗಳೂರು

ಅಭ್ಯರ್ಥಿಗಳು

ಕೆ. ಜಯಪ್ರಕಾಶ್ ಹೆಗ್ಡೆ
ಕಾಂಗ್ರೆಸ್

ಕೋಟ ಶ್ರೀನಿವಾಸ ಪೂಜಾರಿ
ಬಿಜೆಪಿ

'ಸಜ್ಜನ'ರ ಹೋರಾಟ

ಉಡುಪಿ–ಚಿಕ್ಕಮಗಳೂರು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಕೆ.ಜಯಪ್ರಕಾಶ್ ಹೆಗ್ಡೆ ಮಧ್ಯೆ ನೇರ ಹಣಾಹಣಿ ಇದೆ. ಇಬ್ಬರೂ ಅನುಭವಿಗಳು ಮತ್ತು ಸಜ್ಜನರು ಎಂಬ ಭಾವನೆ ಜನರಲ್ಲಿದೆ.

ಪೂಜಾರಿ ಹಿಂದುಳಿದ ವರ್ಗಗಳ ಬಿಲ್ಲವ ಸಮುದಾಯದವರು. ಹೆಗ್ಡೆ ಬಂಟ ಸಮುದಾಯದವರು. ಬಿಲ್ಲವ ಹಾಗೂ ಬಂಟ ಸಮುದಾಯಗಳು ಕರಾವಳಿಯ ಪ್ರಬಲ ಜಾತಿಗಳಾಗಿರುವುದರಿಂದ ಇಬ್ಬರ ನಡುವಿನ ಸ್ಪರ್ಧೆ ಕುತೂಹಲ ಕೆರಳಿಸಿದೆ.

ಟಿಕೆಟ್ ಆಕಾಂಕ್ಷಿಯಾಗಿದ್ದ ಪ್ರಮೋದ್ ಮಧ್ವರಾಜ್ ಬಂಡಾಯ ಪ್ರದರ್ಶಿಸಿದರೆ ಬಿಜೆಪಿಗೆ ಹಿನ್ನಡೆಯಾಗಬಹುದು. ಕರಾವಳಿಯಲ್ಲಿ ಪ್ರಬಲವಾಗಿರುವ ಮೊಗವೀರ ಸಮುದಾಯದ ಮತಗಳು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

ಹೆಗ್ಡೆ ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದು, ಸಚಿವರೂ ಆಗಿದ್ದರು. 2012ರ ಲೋಕಸಭಾ ಉಪ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಗೆಲುವು ಸಾಧಿಸಿದ್ದರು. ನಾಲ್ಕು ಬಾರಿ ವಿಧಾನ ಪರಿಷತ್ ಸದಸ್ಯರಾಗಿರುವ, ಸಚಿವರೂ ಆಗಿದ್ದ ಪೂಜಾರಿ ಅವರಿಗೆ ಇದು ಮೊದಲ ಲೋಕಸಭಾ ಚುನಾವಣೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್ 4 | ಬಿಜೆಪಿ 4

ಮತದಾರರ ಸಂಖ್ಯೆ: 8,11,981 ಪುರುಷರು | 7,64,246 ಮಹಿಳೆಯರು | 37 ಲಿಂಗತ್ವ ಅಲ್ಪಸಂಖ್ಯಾತರು

ಒಟ್ಟು 17,57,616

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಶೋಭಾ ಕರಂದ್ಲಾಜೆ	ಬಿಜೆಪಿ	7,18,916
ಸಮೀಪದ ಪ್ರತಿಸ್ಪರ್ಧಿ	ಪ್ರಮೋದ್ ಮಧ್ವರಾಜ್	ಕಾಂಗ್ರೆಸ್ ಜೆಡಿಎಸ್ ಮೈತ್ರಿ ಅಭ್ಯರ್ಥಿ	3,69,317

ಸಿಎಎ: ಬಿಜೆಪಿ ನೀಡಿರುವ ಸಂದೇಶ ಏನು?

ಲೋಕಸಭಾ ಚುನಾವಣೆಯ ಸಮಯದಲ್ಲಿ ಬಿಜೆಪಿಯು ಸಮುದಾಯಗಳನ್ನು ಒಡೆಯುವ ಮೂಲಕ ಕೋಮು ಧ್ರುವೀಕರಣದ ಪ್ರಯತ್ನ ಮಾಡುತ್ತಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಅದರಲ್ಲೂ ಮುಖ್ಯವಾಗಿ ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಸಿಎಎನಿಂದ ಪರಿಸ್ಥಿತಿ ಬಿಗಡಾಯಿಸಲಿದೆ ಎನ್ನುವ ಆತಂಕ ವ್ಯಕ್ತವಾಗಿದೆ. ಅಸ್ಸಾಂನ 1.5 ಲಕ್ಷ ಅಲ್ಪಸಂಖ್ಯಾತರು ಸೇರಿದಂತೆ ಬುಡಕಟ್ಟು, ಎಸ್‌ಸಿ, ಎಸ್‌ಟಿ ಸಮುದಾಯಗಳನ್ನು ಗುರಿಯಾಗಿಸಿಯೇ ಸಿಎಎ ಜಾರಿ ಮಾಡಲಾಗಿದೆ ಎನ್ನುವ ಆರೋಪವಿದೆ

• ಬಿ.ವಿ.ಶ್ರೀನಾಥ್

ಸಿಎಎ ಜಾರಿ ವಿರೋಧಿಸಿ ಅಸ್ಸಾಂನ ಗುವಾಹಟಿಯಲ್ಲಿ ನಡೆದಿದ್ದ ಪ್ರತಿಭಟನೆ —ಪಿಟಿಐ ಚಿತ್ರ

2024ರ ಲೋಕಸಭಾ ಚುನಾವಣೆಯ ಕಾವು ಏರಿಸುತ್ತಿರುವ ಪ್ರಮುಖ ವಿಷಯಗಳಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆಯೂ (ಸಿಎಎ) ಒಂದಾಗಿದೆ. ಚುನಾವಣೆಯ ವೇಳಾಪಟ್ಟಿ ಘೋಷಣೆ ಆಗಿದ್ದು ಮಾರ್ಚ್ 16ರಂದು. ಅದಕ್ಕೆ ಕೇವಲ ಐದು ದಿನಗಳ ಮುಂಚೆ, ಮಾರ್ಚ್ 11ರಂದು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಸಿಎಎ ನಿಯಮಗಳ ಅಧಿಸೂಚನೆ ಹೊರಡಿಸಿತ್ತು.

ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಜಾರಿ ಮಾಡಿದ ವಿಧಾನವೇ ಹಲವು ಅನುಮಾನಗಳಿಗೆ ಕಾರಣವಾಗಿದೆ. ಮಸೂದೆಯು ಸಂಸತ್ತಿನಲ್ಲಿ ಅನುಮೋದನೆಗೊಂಡಿದ್ದು 2019ರ ಡಿಸೆಂಬರ್ 11ರಂದು. ಮರುದಿನವೇ ಅದಕ್ಕೆ ರಾಷ್ಟ್ರಪತಿಯ ಅಂಕಿತ ಬಿದ್ದಿತ್ತು. ಒಂದು ತಿಂಗಳ ನಂತರ, ಜನವರಿ 10, 2020ರಂದು, ಸರ್ಕಾರವು ಅದರ ಬಗ್ಗೆ ಗೆಜೆಟ್ ಅಧಿಸೂಚನೆ ಪ್ರಕಟಿಸಿತ್ತು.

ಸಂಸದೀಯ ಕಾರ್ಯಗಳ ಕೈಪಿಡಿಯ ಪ್ರಕಾರ, ರಾಷ್ಟ್ರಪತಿಯವರ ಅಂಕಿತ ಬಿದ್ದ ನಂತರ ಆರು ತಿಂಗಳಲ್ಲಿ ಕಾಯ್ದೆಗೆ ನಿಯಮಗಳನ್ನು ರೂಪಿಸಬೇಕು. ಆದರೆ, ಕೇಂದ್ರ ಗೃಹ ಸಚಿವಾಲಯವು ಸಿಎಎ ಜಾರಿ ಸಂಬಂಧ ನಿಯಮ ರೂಪಿಸುವುದನ್ನು ಮುಂದೂಡುತ್ತಾ ಹೋಯಿತು. ನಾಲ್ಕು ವರ್ಷ ಮೂರು ತಿಂಗಳ ಅಂತರದಲ್ಲಿ ಹೀಗೆ ಒಂಬತ್ತು ಬಾರಿ ಮುಂದೂಡಿದ ನಂತರ, ಚುನಾವಣೆ ಘೋಷಣೆಗೆ ಐದು ದಿನ ಮುಂಚಿತವಾಗಿ ಸಿಎಎ ನಿಯಮಗಳ ಅಧಿಸೂಚನೆ ಪ್ರಕಟಿಸಿತು.

ಸಿಎಎ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದಾಗಲೇ ಅದನ್ನು ವಿರೋಧಿಸಿ ದೆಹಲಿ ಸೇರಿದಂತೆ ದೇಶದ ವಿವಿಧೆಡೆ ಹಲವು ಸಂಘಟನೆಗಳು, ಸಾಮಾಜಿಕ ಕಾರ್ಯಕರ್ತರು, ವಿದ್ಯಾರ್ಥಿಗಳು ತೀವ್ರ ಪ್ರತಿಭಟನೆ ನಡೆಸಿದ್ದರು. ಸಿಎಎ ಅನುಮೋದನೆಗೊಂಡ ನಂತರ ಕೇರಳ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಪಂಜಾಬ್, ರಾಜಸ್ಥಾನ, ತಮಿಳುನಾಡು ಸರ್ಕಾರಗಳು ಅದನ್ನು ವಿರೋಧಿಸಿ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸಿದ್ದವು.

ಈಗ, ಸಿಎಎ ನಿಯಮಗಳ ಅಧಿಸೂಚನೆ ಪ್ರಕಟವಾದ ನಂತರ, ವಿವಿಧ ಪಕ್ಷಗಳು ಹೇಗೆ ಪ್ರತಿಕ್ರಿಯಿಸಿವೆ ಎಂಬುದರಲ್ಲಿಯೇ ಚುನಾವಣೆಯಲ್ಲಿ ಅದು ಯಾವ ಪಾತ್ರ ವಹಿಸಲಿದೆ ಎಂಬುದರ ಸೂಚನೆಗಳಿವೆ. 'ಮುಸ್ಲಿಮರು ಆತಂಕ ಪಡಬೇಕಿಲ್ಲ. ಸಿಎಎ ಪೌರತ್ವ ಕಿತ್ತುಕೊಳ್ಳುವ ಕಾಯ್ದೆಯಲ್ಲ. ಪೌರತ್ವ ನೀಡುವ ಕಾಯ್ದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಸಿಎಎ ಜಾರಿಯನ್ನು ಸ್ವಾಗತಿಸಿದ್ದಾರೆ. ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಸರ್ಕಾರಗಳು ಸಿಎಎ ಜಾರಿಗೆ ವಿರೋಧ ವ್ಯಕ್ತಪಡಿಸಿವೆ. ಕರ್ನಾಟಕದಲ್ಲಿಯೂ ಈ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚಿಸಿ ನಂತರ ನಿರ್ಣಯ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ. 'ಇಂಡಿಯಾ' ಕೂಟ ಅಧಿಕಾರಕ್ಕೆ ಬಂದರೆ ಸಿಎಎ ಜಾರಿಯನ್ನು ತಡೆಯಲಾಗುವುದು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದ್ದಾರೆ.

ಸಿಎಎ ಹೆಚ್ಚು ಪರಿಣಾಮ ಬೀರುವ ಸಾಧ್ಯತೆ ಇರುವ ರಾಜ್ಯಗಳಲ್ಲಿ ಪಶ್ಚಿಮ ಬಂಗಾಳ ಪ್ರಮುಖವಾದುದು. ಸಿಎಎ ಜಾರಿ ವಿಚಾರವು 2021ರ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯ ವೇಳೆ ಬಿಜೆಪಿಯ ಮುಖ್ಯ ಅಸ್ತ್ರವಾಗಿತ್ತು. ಮಾರ್ಚ್ 11ರಂದು ಸಿಎಎ ಅಧಿಸೂಚನೆ ಪ್ರಕಟವಾದ ತಕ್ಷಣವೇ ಪ್ರತಿಕ್ರಿಯಿಸಿದ್ದ ಕೇಂದ್ರ ಸಚಿವ ಶಂತನು ಠಾಕೂರ್, 'ಬಿಜೆಪಿಗೆ ಇದು ಲೋಕಸಭಾ ಚುನಾವಣೆಯಲ್ಲಿ ನೆರವಾಗಲಿದ್ದು, ಪಶ್ಚಿಮ ಬಂಗಾಳದ 10–12 ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲಲು ಸಹಕಾರಿಯಾಗಲಿದೆ' ಎಂದಿದ್ದರು.

ಶಂತನು ಠಾಕೂರ್, ಮತುವಾ ಸಮುದಾಯಕ್ಕೆ ಸೇರಿದವರು. 1950ರ ನಂತರ ಪೂರ್ವ ಪಾಕಿಸ್ತಾನ– ಈಗಿನ ಬಾಂಗ್ಲಾ ದೇಶದಿಂದ– ಭಾರತಕ್ಕೆ ವಲಸೆ ಬಂದಿರುವ ಮತುವಾ ಸಮುದಾಯವು ಪಶ್ಚಿಮ ಬಂಗಾಳದ ಪರಿಶಿಷ್ಟ ಜಾತಿಯ ಸಮುದಾಯಗಳ ಪೈಕಿ ಪ್ರಮುಖವಾದುದಾಗಿದೆ. ಸುಮಾರು ಮೂವತ್ತು ಲಕ್ಷ ಜನಸಂಖ್ಯೆಯ ಮತುವಾ ಸಮುದಾಯವು ಪಶ್ಚಿಮ ಬಂಗಾಳದ ನಾದಿಯಾ ಮತ್ತು ಉತ್ತರ ಹಾಗೂ ದಕ್ಷಿಣ 24 ಪರಗಣ ಜಿಲ್ಲೆಗಳಲ್ಲಿ ಹೆಚ್ಚಾಗಿದೆ. ಸಿಎಎ ಅಧಿಸೂಚನೆ ಪ್ರಕಟವಾದ ನಂತರ ಸಂತಸದಿಂದ ಕುಣಿದಾಡಿದ್ದ ಮತುವಾ ಸಮುದಾಯದ ಮುಖಂಡರು, 'ಇದು ಎರಡನೇ ಸ್ವಾತಂತ್ರ್ಯೋತ್ಸವದ ದಿನ' ಎಂದು ಕೊಂಡಾಡಿದ್ದರು.

ಕೆಲವೇ ದಿನಗಳಲ್ಲಿ ಅವರ ಸಂಭ್ರಮದ ಉಬ್ಬರ ಇಳಿದಿದ್ದು, ಇದೀಗ ಅವರ ನಿಲುವು ಬದಲಾಗಿದೆ. ಸಿಎಎ ಅಡಿ ನೋಂದಣಿ ಮಾಡಿಕೊಳ್ಳಲು ತಮ್ಮಲ್ಲಿ ಅಗತ್ಯ ದಾಖಲೆಗಳು ಇಲ್ಲ ಎನ್ನುವುದು ಅವರ ಚಿಂತೆಯಾಗಿದೆ. ಆದ್ದರಿಂದ ಲೋಕಸಭಾ ಚುನಾವಣೆ ಮುಗಿದು ಹೊಸ ಸರ್ಕಾರ ರಚನೆಯಾಗುವವರೆಗೆ ಯಾರೂ ಪೌರತ್ವ ನೋಂದಣಿ ಮಾಡಿಕೊಳ್ಳಬಾರದು ಎಂದು ಅಖಿಲ ಭಾರತ ಮತುವಾ ಮಹಾಸಭಾ ಕರೆ ನೀಡಿದೆ. ಇದೇ ಸಮುದಾಯಕ್ಕೆ ಸೇರಿದ ಟಿಎಂಸಿಯ ಮಮತಾಬಾಲ ಠಾಕೂರ್, ಮತುವಾಗಳು ತಮ್ಮ ಪೌರತ್ವವನ್ನು ಮತ್ತೆ ಸಾಬೀತುಪಡಿಸುವ ಅಗತ್ಯವಿದೆಯೇ ಎಂದು ಪ್ರಶ್ನಿಸಿದ್ದಾರೆ. ಸಿಎಎ ವಿರೋಧದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, 'ನನ್ನ ಜೀವ ಇರುವವರೆಗೆ ಒಬ್ಬರೇ ಒಬ್ಬರ ಪೌರತ್ವವನ್ನು ಯಾರೂ ಕಿತ್ತುಕೊಳ್ಳಲು ಬಿಡುವುದಿಲ್ಲ' ಎಂದು ಘೋಷಿಸಿದ್ದಾರೆ.

ಕೇರಳದಲ್ಲಿ ಸಿಎಎ ವಿರೋಧಿಸಿ ರ‍್ಯಾಲಿಗಳು ನಡೆಯುತ್ತಿವೆ. ಧರ್ಮದ ಆಧಾರದಲ್ಲಿ ಪೌರತ್ವ ನೀಡುವ ಈ ಕಾಯ್ದೆ ಸಂವಿಧಾನ ವಿರೋಧಿಯಾಗಿದೆ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಟೀಕಿಸಿದ್ದಾರೆ. ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ (ಪಿಡಿಪಿ) ಮುಖ್ಯಸ್ಥೆ ಮೆಹಬೂಬಾ ಮುಫ್ತಿ, 'ಸಿಎಎ ಜಾರಿಗೊಳಿಸುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರವು ಹಿಂದೂ ಮಹಾಸಭಾದ ದ್ವಿರಾಷ್ಟ್ರ ಸಿದ್ಧಾಂತವನ್ನು ಅನುಸರಿಸುತ್ತಿದೆ' ಎಂದು ಆರೋಪಿಸಿದ್ದಾರೆ.

ಭಾರತದ ಒಳಗೆ ಮಾತ್ರವಲ್ಲ, ಹೊರಗಿನಿಂದಲೂ ಸಿಎಎಗೆ ವಿರೋಧ ವ್ಯಕ್ತವಾಗಿದೆ. ಮುಸ್ಲಿಮರ ಮೇಲೆ ಪರಿಣಾಮ ಬೀರಬಹುದಾದ ಸಿಎಎ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದ್ದರ ಬಗ್ಗೆ ಅಮೆರಿಕ ವಿದೇಶಾಂಗ ಸಚಿವಾಲಯವು ಕಳವಳ ವ್ಯಕ್ತಪಡಿಸಿತ್ತು. ಅಮೆರಿಕವು ತಪ್ಪು ಮಾಹಿತಿಯ ಪರಿಣಾಮವಾಗಿ ಅನಗತ್ಯ ಹೇಳಿಕೆ ನೀಡಿದೆ ಎಂದು ಭಾರತ ಸರ್ಕಾರ ಪ್ರತಿಕ್ರಿಯಿಸಿತ್ತು.

ಬಿಜೆಪಿಯವರ ಅತ್ಯುತ್ಸಾಹ, ಸಂಭ್ರಮ, ವಿರೋಧ ಪಕ್ಷಗಳ ಆತಂಕ, ಅನುಮಾನಗಳ ಸುತ್ತ ರಾಜಕೀಯದ ಕ್ರಿಯೆ–ಪ್ರತಿಕ್ರಿಯೆಗಳು ತೀವ್ರತೆ ಪಡೆದುಕೊಳ್ಳುತ್ತಿವೆ. ಸಿಎಎ ಜಾರಿ ಆಗುತ್ತದೆಯೇ, ಅದರ ಸ್ವರೂಪ ಹೇಗಿರಲಿದೆ ಎನ್ನುವ ಪ್ರಶ್ನೆಗಳಿಗೆ ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ಉತ್ತರ ಸಿಗಲಿದೆ.

ಆತ್ಮಹತ್ಯೆ ಸುತ್ತ ರಾಜಕೀಯ ಸಮರ

ಕೋಲ್ಕತ್ತದಲ್ಲಿ 37 ವರ್ಷದ ತಪನ್‌ಸೇನ್ ಗುಪ್ತಾ ಮಾರ್ಚ್ 21ರಂದು ಆತ್ಮಹತ್ಯೆ ಮಾಡಿಕೊಂಡರು. ಟಿಎಂಸಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ, ರಾಜ್ಯಸಭಾ ಸದಸ್ಯ ನದೀಮುಲ್ ಹಖ್ ಸೇರಿದಂತೆ ಪಶ್ಚಿಮ ಬಂಗಾಳದ ಹಲವು ಸಚಿವರು ಅವರ ಮನೆಗೆ ಭೇಟಿ ನೀಡಿದ್ದರು. 'ಸಿಎಎ ಘೋಷಣೆಯಾದಾಗಿನಿಂದ ತನ್ನ ಮಗ ತೀವ್ರ ಮಾನಸಿಕ ಒತ್ತಡಕ್ಕೆ ಗುರಿಯಾಗಿದ್ದ. ಪ್ರಕರಣದ ಬಗ್ಗೆ ಸೂಕ್ತ ತನಿಖೆ ನಡೆಸಿ' ಎಂದು ಮೃತನ ತಂದೆ ದೇಬಶಿಶ್ ಸೇನ್ ಗುಪ್ತಾ ಹತ್ತಿರದ ನೇತಾಜಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಸಿಎಎ ಮತ್ತು ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿಯಾದರೆ ತನ್ನ ಭವಿಷ್ಯವೇನು ಎಂಬುದರ ಬಗ್ಗೆ ತಪನ್‌ಸೇನ್ ಆತಂಕಗೊಂಡಿದ್ದ ಎಂದು ಮೃತನ ಸಂಬಂಧಿಗಳು ತಿಳಿಸಿದ್ದರು. ಈ ಪ್ರಕರಣವು ಟಿಎಂಸಿ ಮತ್ತು ಬಿಜೆಪಿ ನಡುವೆ ವಾಕ್ಸಮರಕ್ಕೆ ಕಾರಣವಾಗಿತ್ತು.

ಎಐಎಡಿಎಂಕೆ ಅಭ್ಯರ್ಥಿಯ ಆಸ್ತಿ ಮೌಲ್ಯ ₹583 ಕೋಟಿ

ಚೆನ್ನೈ (ಪಿಟಿಐ): ತಮಿಳುನಾಡಿನ ಈರೋಡ್ ಲೋಕಸಭಾ ಕ್ಷೇತ್ರದ ಎಐಎಡಿಎಂಕೆ ಅಭ್ಯರ್ಥಿ ಆತ್ರಲ್ ಅಶೋಕ್ ಕುಮಾರ್ ಅವರು ಒಟ್ಟು ₹ 583.48 ಕೋಟಿ ಆಸ್ತಿ ಹೊಂದಿದ್ದಾರೆ.

₹526.53 ಕೋಟಿ ಚರಾಸ್ತಿ ಹಾಗೂ ₹56.95 ಕೋಟಿ ಸ್ಥಿರಾಸ್ತಿ ಹೊಂದಿರುವುದಾಗಿ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ. ಅಶೋಕ್ ಕುಮಾರ್ ಪತ್ನಿ ಕರುಣಾಂಬಿಕಾ ಅವರ ಬಳಿ ₹69.98 ಕೋಟಿ ಮೌಲ್ಯದ ಆಸ್ತಿ ಇದೆ. ಇಬ್ಬರ ಬಳಿ ತಲಾ 10.1 ಕೆ.ಜಿ ಹಾಗೂ 10.6 ಕೆ.ಜಿ ಚಿನ್ನ ಇದೆ. ₹10 ಲಕ್ಷ ನಗದು ಇರುವುದಾಗಿ ಅಶೋಕ್ ಕುಮಾರ್ ಅವರು ತಿಳಿಸಿದ್ದಾರೆ.

53 ವರ್ಷದ ಅಶೋಕ್ ಕುಮಾರ್ ಅವರು ದಿ ಇಂಡಿಯನ್ ಪಬ್ಲಿಕ್ ಸ್ಕೂಲ್ (ಟಿಐಪಿಎಸ್) ಮತ್ತು ಅಮೆಕ್ಸ್ ಅಲಾಯ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸ್ಥಾಪಕ ಸದಸ್ಯ ಮತ್ತು ನಿರ್ದೇಶಕರಾಗಿದ್ದಾರೆ.

ಇತರ ಅಭ್ಯರ್ಥಿಗಳ ಆಸ್ತಿ ವಿವರ	
ರಾಧಿಕಾ ಶಾಂತಕುಮಾರ್ (ಬಿಜೆಪಿ, ವಿರುಧುನಗರ ಕ್ಷೇತ್ರ)	₹ **53.45** ಕೋಟಿ
ವಿಜಯ ಪ್ರಭಾಕರನ್ (ಡಿಎಂಡಿಕೆ, ವಿರುಧುನಗರ ಕ್ಷೇತ್ರ)	₹ **17.95** ಕೋಟಿ
ಟಿ.ಆರ್.ಬಾಲು (ಡಿಎಂಕೆ, ಶ್ರೀಪೆರಂಬದೂರು)	₹ **17.40** ಕೋಟಿ

ಶಿರೋಮಣಿ ಅಕಾಲಿ ದಳದೊಂದಿಗೆ ಮೈತ್ರಿ ಮಾತುಕತೆ ವಿಫಲ

ಪಂಜಾಬ್: ಬಿಜೆಪಿ ಏಕಾಂಗಿ ಸ್ಪರ್ಧೆ

ಚಂಡೀಗಢ (ಪಿಟಿಐ): ಪಂಜಾಬ್‌ನಲ್ಲಿ ಏಕಾಂಗಿಯಾಗಿ ಚುನಾವಣೆ ಎದುರಿಸುವುದಾಗಿ ಬಿಜೆಪಿ ಘೋಷಿಸಿದೆ. ಈ ಮೂಲಕ ಶಿರೋಮಣಿ ಅಕಾಲಿ ದಳದೊಂದಿಗೆ (ಎಸ್‌ಎಡಿ) ಪುನರ್ ಮೈತ್ರಿಯ ದಿಕ್ಕಿನಲ್ಲಿ ಮಾತುಕತೆ ಅಂತ್ಯವಾಗಿರುವುದನ್ನು ಬಿಜೆಪಿ ಸೂಚಿಸಿದೆ.

ಈ ಬಗ್ಗೆ 'ಎಕ್ಸ್' ವೇದಿಕೆಯಲ್ಲಿ ವಿಡಿಯೊ ಸಂದೇಶ ಪೋಸ್ಟ್ ಮಾಡಿರುವ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸುನೀಲ್ ಜಾಖಡ್, 'ಜನರು, ಪಕ್ಷದ ಕಾರ್ಯಕರ್ತರು ಮತ್ತು ಮುಖಂಡರ ಪ್ರತಿಕ್ರಿಯೆ ಆಧರಿಸಿ ಈ ತೀರ್ಮಾನಕ್ಕೆ ಬಂದಿದ್ದೇನೆ. ಯುವಜನರು, ರೈತರು, ವ್ಯಾಪಾರಿಗಳು, ಕಾರ್ಮಿಕರು ಮತ್ತು ಶೋಷಿತ ಜನರ ಭವಿಷ್ಯದ ದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

ಗಡಿ ರಾಜ್ಯದಲ್ಲಿ ಚತುಷ್ಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆಗಳು ಹೆಚ್ಚಾಗಿವೆ. ಪಂಜಾಬ್‌ನಲ್ಲಿ ಒಂದೇ ಹಂತದಲ್ಲಿ ಜೂನ್ 1ರಂದು ಮತದಾನ ನಡೆಯಲಿದೆ.

'ರಾಜಕೀಯಕ್ಕಿಂತ ಮೌಲ್ಯಗಳಿಗೆ ಹೆಚ್ಚು ಬೆಲೆ'

ಲೋಕಸಭಾ ಚುನಾವಣೆಯನ್ನು ಏಕಾಂಗಿಯಾಗಿ ಎದುರಿಸುವ ಬಗ್ಗೆ ಎಸ್‌ಎಡಿ ಶುಕ್ರವಾರ ನಡೆದ ಪಕ್ಷದ ಪ್ರಮುಖರ ಸಭೆಯಲ್ಲಿ ಸೂಚನೆ ನೀಡಿತ್ತು. ಪಕ್ಷವು ರಾಜಕೀಯಕ್ಕಿಂತ ಮೌಲ್ಯಗಳಿಗೆ ಹೆಚ್ಚು ಬೆಲೆ ಕೊಡುವುದಾಗಿ ಪಕ್ಷವು ಹೇಳಿತ್ತು.

ಸಭೆಯಲ್ಲಿ ಸಿಖ್ ಕೈದಿಗಳ ಬಗ್ಗೆ ನಿರ್ಣಯ ಕೈಗೊಂಡಿದ್ದ ಎಸ್‌ಎಡಿ, ಅವಧಿ ಪೂರೈಸಿರುವ 'ಬಂಧಿ ಸಿಖ್ಖರ' ಬಿಡುಗಡೆಗಾಗಿ 'ಷರತ್ತುರಹಿತ ಲಿಖಿತ ಬದ್ಧತೆ' ನೀಡುವಂತೆ ನಿರ್ಣಯದಲ್ಲಿ ಒತ್ತಾಯಿಸಿತ್ತು. ಜತೆಗೆ ರೈತರ ಮತ್ತು ರೈತ ಕಾರ್ಮಿಕರ ಪರ ನಿಲ್ಲುವುದನ್ನು ಮುಂದುವರೆಸು ವುದಾಗಿ ತಿಳಿಸಿದ್ದ ಎಸ್‌ಎಡಿ, ಬಿಜೆಪಿ ಸರ್ಕಾರವು ಅವರಿಗೆ ನೀಡಿದ್ದ ಎಲ್ಲ ಭರವಸೆಗಳನ್ನು ಪೂರೈಸಬೇಕೆಂದು ಬೇಡಿಕೆ ಇಟ್ಟಿತ್ತು.

'ಎಸ್‌ಎಡಿ ಜತೆಗೆ ಮಾತುಕತೆ ನಡೆಯುತ್ತಿದೆ. ಎನ್‌ಡಿಎ ಕೂಟದ ಎಲ್ಲ ಪಕ್ಷಗಳೂ ಒಂದಾಗಬೇಕು ಎನ್ನುವುದು ನಮ್ಮ ಬಯಕೆ' ಎಂದು ಕೇಂದ್ರ ಸಚಿವ ಅಮಿತ್ ಶಾ ವಾರದ ಹಿಂದೆ ಹೇಳಿದ್ದರು.

ಪಂಜಾಬ್‌ನ 13 ಲೋಕಸಭಾ ಸ್ಥಾನಗಳ ಪೈಕಿ ಐದರಿಂದ ಆರು ಕ್ಷೇತ್ರ ಬಿಟ್ಟುಕೊಡುವಂತೆ ಬಿಜೆಪಿ ಒತ್ತಾಯಿಸಿತ್ತು. ಅದಕ್ಕೆ ಎಸ್‌ಎಡಿ ಒಪ್ಪದಿರುವುದರಿಂದ ಮೈತ್ರಿ ಮಾತುಕತೆ ಮುರಿದುಬಿದ್ದಿದೆ ಎನ್ನಲಾಗುತ್ತಿದೆ.

ಈ ಬಗ್ಗೆ ಸುಖ್‌ಬೀರ್ ಸಿಂಗ್ ಬಾದಲ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. 2020ರ ಸೆಪ್ಟೆಂಬರ್‌ನಲ್ಲಿ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಎಸ್‌ಎಡಿ, ಎನ್‌ಡಿಎ ಕೂಟದಿಂದ ಹೊರಹೋಗಿತ್ತು.

ಕಾಂಗ್ರೆಸ್ ಅನರ್ಹರಿಗೆ ಬಿಜೆಪಿ ಟಿಕೆಟ್

ಹಿಮಾಚಲ ಪ್ರದೇಶ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ನಡೆಯಲಿರುವ ವಿಧಾನಸಭಾ ಉಪ ಚುನಾವಣೆಗೆ ಬಿಜೆಪಿಯು ಅಭ್ಯರ್ಥಿಗಳನ್ನು ಘೋಷಿಸಿದ್ದು, ಕಾಂಗ್ರೆಸ್‌ನ 6 ಅನರ್ಹ ಶಾಸಕರನ್ನು ಹುರಿಯಾಳುಗಳಾಗಿ ಕಣಕ್ಕಿಳಿಸಿದೆ.

ಹಿಮಾಚಲ ಪ್ರದೇಶ ಸೇರಿದಂತೆ ಪಶ್ಚಿಮ ಬಂಗಾಳ, ಸಿಕ್ಕಿಂ, ಗುಜರಾತ್ ಮುಂತಾದ ರಾಜ್ಯಗಳ ಉಪಚುನಾವಣೆಗಳಿಗೆ ಬಿಜೆಪಿ ಮಂಗಳವಾರ ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಬಜೆಟ್ ಕಲಾಪದ ವೇಳೆ ಹಣಕಾಸು ಮಸೂದೆಗೆ ಸರ್ಕಾರದ ಪರ ಮತ ಚಲಾಯಿಸುವಂತೆ ಕಾಂಗ್ರೆಸ್ ಜಾರಿ ಮಾಡಿದ್ದ ವಿಪ್ ಉಲ್ಲಂಘಿಸಿದ್ದಕ್ಕಾಗಿ ಆರು ಶಾಸಕರನ್ನು ವಿಧಾನಸಭೆಯಿಂದ ಅನರ್ಹಗೊಳಿಸಲಾಗಿತ್ತು. ಆರೂ ಮಂದಿ ನಂತರ ಬಿಜೆಪಿ ಸೇರಿದ್ದರು.

ಬಿಜೆಪಿ ಪಟ್ಟಿ ಬಿಡುಗಡೆ ಮಾಡಿದ ನಂತರ ಮಾತನಾಡಿದ ಮುಖ್ಯಮಂತ್ರಿ ಸುಖ್‌ವಿಂದರ್ ಸಿಂಗ್ ಸುಖು, 'ಹಿಮಾಚಲ ಪ್ರದೇಶದ ಜನ ಬುದ್ಧಿವಂತರಾಗಿದ್ದು, ಅವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ. ಆಯಾ ರಾಂ ಗಯಾ ರಾಂ ಸಂಸ್ಕೃತಿಯ ಜನರಿಗೆ ಜನ ಸೂಕ್ತ ಪಾಠ ಕಲಿಸಲಿದ್ದಾರೆ' ಎಂದು ಹೇಳಿದ್ದಾರೆ.

ಬಿಜೆಪಿ ಮುಖಂಡ ರಾಜೀನಾಮೆ: ಕಾಂಗ್ರೆಸ್ ಅನರ್ಹ ಶಾಸಕ ರವಿ ಠಾಕೂರ್ ಅವರಿಗೆ ಬಿಜೆಪಿ ಟಿಕೆಟ್ ನೀಡಿರುವುದನ್ನು ಖಂಡಿಸಿ ಲಾಹೌಲ್ ಮತ್ತು ಸ್ಪಿತಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಹಾಗೂ ಮಾಜಿ ಸಚಿವ ರಾಮ್ ಲಾಲ್ ಮಾರ್ಕಂಡ ಮಂಗಳವಾರ ಪಕ್ಷಕ್ಕೆ ರಾಜೀನಾಮೆ ನೀಡಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮಾರ್ಕಂಡ ಅವರು ರವಿ ವಿರುದ್ಧ ಸ್ಪರ್ಧಿಸಿ ಪರಾಭವಗೊಂಡಿದ್ದರು.

ಕಾಂಗ್ರೆಸ್‌ನ ಆರು ಅನರ್ಹ ಶಾಸಕರಿಗೆ ಬಿಜೆಪಿ ಟಿಕೆಟ್ ಪ್ರಕಟಿಸಿದ ಕೆಲವೇ ಗಂಟೆಗಳಲ್ಲಿ ಮಾರ್ಕಂಡ ಅವರು ಪಕ್ಷಕ್ಕೆ ರಾಜೀನಾಮೆ ನೀಡಿದ್ದು, ತಾನೂ ಅದೇ ಕ್ಷೇತ್ರದಿಂದ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಹೇಳಿದ್ದಾರೆ. ಅವರು ಕಾಂಗ್ರೆಸ್ ಅಭ್ಯರ್ಥಿಯಾಗುವ ಸಾಧ್ಯತೆಯಿದೆ.

ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳ ಘೋಷಣೆ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಗೆ ಕಾಂಗ್ರೆಸ್ ಮಂಗಳವಾರ ತನ್ನ ಅಭ್ಯರ್ಥಿಗಳ ಏಳನೇ ಪಟ್ಟಿ ಬಿಡುಗಡೆ ಮಾಡಿದ್ದು, ಛತ್ತೀಸ್‌ಗಢ ಮತ್ತು ತಮಿಳುನಾಡಿನ ಇನ್ನುಳಿದ ಕ್ಷೇತ್ರಗಳಿಗೆ ಹುರಿಯಾಳುಗಳನ್ನು ಪ್ರಕಟಿಸಿದೆ.

ಛತ್ತೀಸ್‌ಗಢದಲ್ಲಿ ಸುರ್ಜುಗಾ ಕ್ಷೇತ್ರದಿಂದ ಶಶಿ ಸಿಂಗ್ ಮತ್ತು ರಾಯಗಢದಿಂದ ಮೇನಕಾ ದೇವಿ ಅವರನ್ನು ಕಣಕ್ಕಿಳಿಸಿದೆ. ಬಿಲಾಸಪುರದಿಂದ ದೇವೇಂದ್ರ ಯಾದವ್ ಮತ್ತು ಕನ್ಕೇರ್‌ನಿಂದ ಬೀರೇಶ್ ಠಾಕೂರ್ ಅವರಿಗೆ ಟಿಕೆಟ್ ನೀಡಿದೆ. ತಮಿಳುನಾಡಿನ ಮಯಿಲಾಡುತುರೈ ಕ್ಷೇತ್ರಕ್ಕೆ ಆರ್.ಸುಧಾ ಅವರ ಹೆಸರು ಪ್ರಕಟಿಸಿದೆ.

ಬಿಜೆಪಿ ಅಭ್ಯರ್ಥಿಗಳ ಘೋಷಣೆ: ಬಿಜೆಪಿಯು ಮಂಗಳವಾರ ಮೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದ್ದು, ಕೇಂದ್ರ ಸಚಿವ ರಾಜಕುಮಾರ್ ರಂಜನ್ ಸಿಂಗ್ (ಮಣಿಪುರ ಇನ್ನರ್ ಕ್ಷೇತ್ರ) ಸೇರಿದಂತೆ ಮೂರೂ ಕಡೆ ಹಾಲಿ ಸಂಸದರಿಗೆ ಕೊಕ್ ನೀಡಿದೆ. ರಂಜನ್ ಬದಲು ಬಸಂತ್ ಕುಮಾರ್ ಸಿಂಗ್ ಅವರಿಗೆ ಅವಕಾಶ ನೀಡಿದೆ. ರಾಜಸ್ಥಾನದ ಕರೌಲಿ–ಧೋಲಾಪುರ ಕ್ಷೇತ್ರದಿಂದ ಇಂದು ದೇವಿ ಜಾಟವ್ ಹಾಗೂ ದೌಸಾ ಕ್ಷೇತ್ರದಿಂದ ಕನ್ನಯ್ಯ ಲಾಲ್ ಮೀನಾ ಅವರನ್ನು ಕಣಕ್ಕಿಳಿಸಿದೆ.

ಜನಸಾಗರ

ಪ್ರಚಾರ

ತಮಿಳುನಾಡಿನ ತಿರುವಣ್ಣಾಮಲೈನಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಪ್ರಚಾರ ಕಾರ್ಯಕ್ರಮದಲ್ಲಿ ಡಿಎಂಕೆ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ಅವರು ಭಾಗವಹಿಸಿದ್ದರು —ಪಿಟಿಐ ಚಿತ್ರ

ರಿಜಿಜು, ನಬಂ ನಾಮಪತ್ರ ಸಲ್ಲಿಕೆ

ಇಟಾನಗರ (ಪಿಟಿಐ): ಕೇಂದ್ರ ಸಚಿವ ಕಿರಣ್ ರಿಜಿಜು ಬಿಜೆಪಿ ಅಭ್ಯರ್ಥಿಯಾಗಿ ಮತ್ತು ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ, ಮಾಜಿ ಮುಖ್ಯಮಂತ್ರಿ ನಬಂ ತುಕಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಅರುಣಾಚಲ ಪ್ರದೇಶ ಪಶ್ಚಿಮ ಲೋಕಸಭಾ ಕ್ಷೇತ್ರದಿಂದ ಮಂಗಳವಾರ ನಾಮಪತ್ರ ಸಲ್ಲಿಸಿದರು.

ರಿಜಿಜು ಅವರಿಗೆ ಮುಖ್ಯಮಂತ್ರಿ ಪ್ರೇಮಾ ಖಂಡು ಮತ್ತು ಬಿಜೆಪಿ ಶಾಸಕ ಕೆಂಟೊ ಜಿನಿ ಹಾಗೂ ನ್ಯಾಮರ್ ಕರ್ಬಕ್ ಸಾಥ್ ನೀಡಿದರು. ನಾಮಪತ್ರ ಸಲ್ಲಿಸಿದ ಬಳಿಕ ಮಾತನಾಡಿದ ರಿಜಿಜು, 'ಚುನಾವಣಾ ಪ್ರಕ್ರಿಯೆಯಲ್ಲಿ ಶಾಂತಿಯಿಂದ ಪಾಲ್ಗೊಳ್ಳುವಂತೆ ನಾನು ಜನರಲ್ಲಿ ಮನವಿ ಮಾಡಿಕೊಳ್ಳುತ್ತೇನೆ' ಎಂದು ಹೇಳಿದರು.

ಉತ್ತರ ಪ್ರದೇಶ: ಕಳೆದ ಬಾರಿ ಅಲ್ಪ ಅಂತರದಲ್ಲಿ ಗೆದ್ದ ಕಡೆ ಸವಾಲು ಸಾಧ್ಯತೆ

ಬಿಜೆಪಿಯ 'ಮಿಷನ್ 80' ಹಾದಿ ಕಠಿಣ

• ಸಂಜಯ್ ಪಾಂಡೆ

ಲಖನೌ: ಬಿಜೆಪಿಯ 'ಅಬ್‌ಕಿ ಬಾರ್ 400 ಪಾರ್' (ಈ ಬಾರಿ 400ಕ್ಕೂ ಅಧಿಕ ಸ್ಥಾನಗಳು) ಘೋಷಣೆಯ ಯಶಸ್ಸು, ಉತ್ತರ ಪ್ರದೇಶದಲ್ಲಿ ಪಕ್ಷವು ತೋರುವ ಸಾಧನೆಯನ್ನು ಮುಖ್ಯವಾಗಿ ಅವಲಂಬಿಸಿರುತ್ತದೆ.

ಉತ್ತರ ಪ್ರದೇಶವು ಲೋಕಸಭೆಗೆ ಅತ್ಯಧಿಕ, ಅಂದರೆ 80 ಸಂಸದರನ್ನು ಕಳುಹಿಸಿಕೊಡುತ್ತದೆ. ಕೇಸರಿ ಪಕ್ಷವು ಚುನಾವಣಾ ಕಾರ್ಯತಂತ್ರದ ಭಾಗವಾಗಿ ಈ ಬಾರಿ ಸಣ್ಣ ಹಾಗೂ ಜಾತಿ ಆಧರಿತ ಪಕ್ಷಗಳ ಜತೆ ಮೈತ್ರಿ ಮಾಡಿಕೊಂಡಿದೆ. ಆದರೂ ಎಲ್ಲ ಸ್ಥಾನಗಳನ್ನು ಗೆದ್ದು 'ಮಿಷನ್–80' ಗುರಿ ಈಡೇರಿಸುವ ಕಾರ್ಯ ಕಷ್ಟಕರವಾಗಿದೆ.

ಉತ್ತರ ಪ್ರದೇಶದಲ್ಲಿ 'ಕ್ಲೀನ್ ಸ್ವೀಪ್' ಮಾಡುವ ಬಿಜೆಪಿಯ ಹಾದಿಯಲ್ಲಿ ಸಮಾಜವಾದಿ ಪಕ್ಷ (ಎಸ್‌ಪಿ) ಮಾತ್ರ ಪ್ರಮುಖ ತಡೆಯಾಗಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ನಿಶಾದ್ ಪಕ್ಷ ಮತ್ತು ಅಪ್ನಾ ದಳ (ಅನುಪ್ರಿಯಾ ಪಟೇಲ್) ಜತೆ ಮೈತ್ರಿ ಮಾಡಿಕೊಂಡಿದ್ದ ಬಿಜೆಪಿ, 64 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿದ್ದ ಎಸ್‌ಪಿ ಮತ್ತು ಬಿಎಸ್‌ಪಿ 15 ಕ್ಷೇತ್ರಗಳನ್ನು ಜಯಿಸಿದ್ದವು. ಇನ್ನೊಂದು ಸ್ಥಾನ ಕಾಂಗ್ರೆಸ್ ಪಾಲಾಗಿತ್ತು.

ಬಿಜೆಪಿಯು 64 ಸ್ಥಾನಗಳಲ್ಲಿ ಸುಮಾರು 10 ಕ್ಷೇತ್ರಗಳನ್ನು ಕೆಲವೇ ಸಾವಿರ ಮತಗಳ ಅಂತರದಿಂದ ಜಯಿಸಿತ್ತು. ಒಂದು ಕ್ಷೇತ್ರದಲ್ಲಿ (ಮಚ್‌ಲೀ ಶಹರ್) ಗೆಲುವು ಕೇವಲ 181 ಮತಗಳಿಂದ ದಕ್ಕಿತ್ತು. ಇತರ ಮೂರು ಕ್ಷೇತ್ರಗಳಲ್ಲಿ ಗೆಲುವಿನ ಅಂತರ 10 ಸಾವಿರ ಮತಗಳಿಗಿಂತ ಕಡಿಮೆಯಿತ್ತು.

ಫಿರೋಜಾಬಾದ್ ಕ್ಷೇತ್ರವನ್ನು ಬಿಜೆಪಿ 29 ಸಾವಿರ ಮತಗಳ ಅಂತರದಿಂದ ಗೆದ್ದಿತ್ತು. ಆದರೆ ಕಳೆದ ಬಾರಿ ಅಖಿಲೇಶ್ ಯಾದವ್ ಅವರ ಮಾವ ಶಿವಪಾಲ್ ಯಾದವ್ (ಪ್ರಗತಿಶೀಲ ಸಮಾಜವಾದಿ ಪಕ್ಷದಿಂದ) ಕಣದಲ್ಲಿದ್ದರಲ್ಲದೆ, 91 ಸಾವಿರ ಮತಗಳನ್ನು ಪಡೆದಿದ್ದರು. ಇದು ಬಿಜೆಪಿ ಗೆಲುವಿಗೆ ನೆರವು ನೀಡಿತ್ತು. ಈ ಬಾರಿ ಶಿವಪಾಲ್ ಅವರು ಅಖಿಲೇಶ್ ಜತೆಗಿರುವುದರಿಂದ ಬಿಜೆಪಿಗೆ ಪ್ರಬಲ ಸವಾಲು ಎದುರಾಗಲಿದೆ.

ಕಳೆದ ಬಾರಿ ಕನೌಜ್ ಕ್ಷೇತ್ರದಲ್ಲಿ ಎಸ್‌ಪಿ ಸೋಲಿಗೆ ಶಿವಪಾಲ್ ಅವರು ಪರೋಕ್ಷವಾಗಿ ಕಾರಣರಾಗಿದ್ದರು. ಅಲ್ಲಿ ಎಸ್‌ಪಿಯಿಂದ ಸ್ಪರ್ಧಿಸಿದ್ದ ಅಖಿಲೇಶ್ ಅವರ ಪತ್ನಿ, ಡಿಂಪಲ್ ಯಾದವ್ ಅವರು 12 ಸಾವಿರಕ್ಕೂ ಅಧಿಕ ಮತಗಳಿಂದ ಸೋತಿದ್ದರು.

ಮೀರತ್ ಮತ್ತು ಮುಜಫ್ಫರ್‌ನಗರ ಕ್ಷೇತ್ರಗಳಲ್ಲೂ ಬಿಜೆಪಿ ಅಭ್ಯರ್ಥಿಗಳ ಗೆಲುವಿನ ಅಂತರ ಕ್ರಮವಾಗಿ ಐದು ಸಾವಿರ ಮತ್ತು ಆರು ಸಾವಿರ ದಷ್ಟಿತ್ತು. ಈ ಎಲ್ಲಾ ಕ್ಷೇತ್ರಗಳಲ್ಲಿ ಈ ಬಾರಿ ತುರುಸಿನ ಹೋರಾಟ ನಡೆಯುವುದರಲ್ಲಿ ಅನುಮಾನವಿಲ್ಲ.

ಗೆಲುವಿನ ಅಂತರ ಹೆಚ್ಚಲಿದೆ: ಬಿಜೆಪಿ

2019ರಲ್ಲಿ ಕಡಿಮೆ ಅಂತರದಲ್ಲಿ ಗೆದ್ದಿದ್ದ ಕ್ಷೇತ್ರಗಳಲ್ಲಿ ಕಳೆದ ಐದು ವರ್ಷಗಳಿಂದ ಸಾಕಷ್ಟು ಅಭಿವೃದ್ಧಿ ಕೆಲಸ ನಡೆದಿದ್ದು, ಈ ಬಾರಿ ಗೆಲುವಿನ ಅಂತರ ಹೆಚ್ಚಾಗಲಿದೆ ಎಂಬುದು ಬಿಜೆಪಿ ನಾಯಕರ ಹೇಳಿಕೆ. ಸ್ವಲ್ಪ ಹೆಚ್ಚು ಶ್ರಮವಹಿಸಿದರೆ ಕೆಲವು ಸ್ಥಾನಗಳನ್ನಾದರೂ ಬಿಜೆಪಿಯಿಂದ ಕಸಿದುಕೊಳ್ಳಬಹುದು ಎಂಬುದು ಎಸ್‌ಪಿ ನಾಯಕರ ಲೆಕ್ಕಾಚಾರ.

2019ರಲ್ಲಿ ಅಲ್ಪ ಅಂತರದಲ್ಲಿ ಜಯಿಸಿದ್ದ ಸುಮಾರು 10 ಕ್ಷೇತ್ರಗಳನ್ನು ಉಳಿಸಿಕೊಳ್ಳುವುದು ಬಲುದೊಡ್ಡ ಸವಾಲಾಗಿ ಪರಿಣಮಿಸುವ ಸಾಧ್ಯತೆಯಿದೆ.

ಚುಟುಕು

ಬಿಜೆಪಿ ಅಭ್ಯರ್ಥಿಯನ್ನು 'ಶಕ್ತಿ ಸ್ವರೂಪಿ' ಎಂದು ಬಣ್ಣಿಸಿದ ಪ್ರಧಾನಿ ಮೋದಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸಂದೇಶ್‌ಖಾಲಿ ಪ್ರಕರಣದ ಸಂತ್ರಸ್ತೆ ಹಾಗೂ ಪಶ್ಚಿಮ ಬಂಗಾಳದ ಬಸಿರ್‌ಹಾತ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರೇಖಾ ಪಾತ್ರ ಅವರನ್ನು 'ಶಕ್ತಿ ಸ್ವರೂಪ' ಎಂದು ಬಣ್ಣಿಸಿರುವುದಾಗಿ ಬಿಜೆಪಿ ಮುಖಂಡರು ತಿಳಿಸಿದ್ದಾರೆ.

ಬಸಿರ್‌ಹಾತ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸಂದೇಶ್‌ಖಾಲಿಯಲ್ಲಿ ಟಿಎಂಸಿ ಮುಖಂಡ ಶಾಜಹಾನ್ ಶೇಖ್ ಹಾಗೂ ಅವರ ಆಪ್ತರ ವಿರುದ್ಧ ಧ್ವನಿ ಎತ್ತಿದ್ದ ರೇಖಾ ಅವರನ್ನು ಬಿಜೆಪಿಯು ಅಭ್ಯರ್ಥಿಯನ್ನಾಗಿಸಿದೆ. ರೇಖಾ ಅವರಿಗೆ ಪ್ರಧಾನಿ ಮೋದಿ ಕರೆ ಮಾಡಿ ಮಾತನಾಡಿರುವುದಾಗಿ ಬಿಜೆಪಿ ಮುಖಂಡರು ಹೇಳಿದ್ದಾರೆ.

ಚುನಾವಣಾ ಪ್ರಚಾರದ ಸಿದ್ಧತೆ, ಪಕ್ಷಕ್ಕೆ ಮತದಾರರ ಬೆಂಬಲ ಸೇರಿದಂತೆ ಹಲವು ವಿಷಯಗಳ ಬಗ್ಗೆ ರೇಖಾ ಅವರೊಂದಿಗೆ ಮೋದಿ ಚರ್ಚೆ ನಡೆಸಿದ್ದಾರೆ. ಮೋದಿ ಅವರೊಂದಿಗೆ ಮಹಿಳೆಯರ ಸಮಸ್ಯೆಗಳನ್ನು ಹೇಳಿಕೊಂಡ ರೇಖಾ, 'ನೀವು ನಮ್ಮೊಂದಿಗಿರುವುದು ರಾಮನೇ ಇದ್ದಂತೆ' ಎಂದು ತಮ್ಮ ಸಂತೋಷವನ್ನು ಹಂಚಿಕೊಂಡಿದ್ದಾರೆ.

'ಸಂದೇಶ್‌ಖಾಲಿಯಲ್ಲಿ ನೀವು ಯುದ್ಧ ಮಾಡಿದ್ದೀರಿ. ನೀವು ಶಕ್ತಿ ಸ್ವರೂಪ' ಎಂದು ರೇಖಾ ಅವರನ್ನು ಮೋದಿ ಬಣ್ಣಿಸಿದ್ದಾರೆ. ಟಿಎಂಸಿ ಸರ್ಕಾರ ಜನರ ವಿರುದ್ಧ ಕೆಲಸ ಮಾಡುತ್ತಿದೆ ಎಂಬ ಸಂದೇಶವನ್ನು ಜನಸಮೂಹಕ್ಕೆ ತಲುಪಿಸುವಂತೆ ರೇಖಾ ಅವರಿಗೆ ಹೇಳಿದ್ದಾರೆ.

ಜಿಗಿ–ನೆಗೆದಾಟ

'ಕೈ' ಸಂಸದ ರವನೀತ್ ಬಿಜೆಪಿಗೆ

ನವದೆಹಲಿ (ಪಿಟಿಐ): ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಅವರ ಮೊಮ್ಮಗ, ಲುಧಿಯಾನ ಕ್ಷೇತ್ರದ ಕಾಂಗ್ರೆಸ್ ಸಂಸದ ರವನೀತ್ ಸಿಂಗ್ ಬಿಟ್ಟೂ ಅವರು ಮಂಗಳವಾರ ಬಿಜೆಪಿ ಸೇರಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವನ್ನು ಮತ್ತೊಮ್ಮೆ ಆಯ್ಕೆ ಮಾಡಲು ಜನರು ನಿರ್ಧರಿಸಿದ್ದಾರೆ. ಆದ್ದರಿಂದ ಬಿಜೆಪಿ ಸೇರುವ ನಿರ್ಧಾರ ತೆಗೆದುಕೊಂಡೆ ಎಂದು ಅವರು ಹೇಳಿದ್ದಾರೆ. ಬಿಟ್ಟೂ ಅವರು 2014ರಿಂದಲೂ ಲುಧಿಯಾನ ಕ್ಷೇತ್ರದ ಸಂಸದರಾಗಿದ್ದಾರೆ.

ಎಂಥಾ ಮಾತು!

ಪಕ್ಷದ ಖಾತೆಗಳು ಜಪ್ತಿಯಾಗಿರುವುದರಿಂದ ನಾವು ಆರ್ಥಿಕ ಬಿಕ್ಕಟ್ಟಿನಲ್ಲಿದ್ದೇವೆ. ನಾವು ಬಯಸಿದ ರೀತಿಯಲ್ಲಿ ನಮ್ಮ ಬೆಂಬಲಕ್ಕೆ ನಿಲ್ಲಲು ಪಕ್ಷಕ್ಕೆ ಸಾಧ್ಯವಾಗುತ್ತಿಲ್ಲ. ನಿಷ್ಠಾವಂತ, ಕಠಿಣ ಪರಿಶ್ರಮದ ಕಾಂಗ್ರೆಸ್ ಕಾರ್ಯಕರ್ತರು ಎಲ್ಲೆಡೆ ಇದ್ದು, ನಮಗೆ ಸಾಧ್ಯವಾದದ್ದನ್ನು ಅವರು ಮಾಡುತ್ತಿದ್ದಾರೆ. ಸಾರ್ವಜನಿಕರಿಂದ ಹಣ ಸಂಗ್ರಹಿಸಲು ಚುನಾವಣಾ ಆಯೋಗವು ಅನುಮತಿ ನೀಡಿದಾಗ ನಾವು ಹಾಗೆ ಮಾಡುತ್ತೇವೆ. ಬಿಜೆಪಿ ಮತ್ತು ಸಿಪಿಎಂ ರೀತಿಯಲ್ಲಿ ಕಾರ್ಯಕರ್ತರಿಗೆ ಹಣ ಪೂರೈಸಲು ನಮ್ಮಿಂದ ಸಾಧ್ಯವಿಲ್ಲ. ಕೇರಳದ ಜನರಿಗೆ ಅದು ಗೊತ್ತಿದೆ. ಹಣ ಮತ್ತು ಪ್ರಚಾರಕ್ಕಿಂತ ಪ್ರಜಾಪ್ರಭುತ್ವ ಮುಖ್ಯ ಎಂಬುದನ್ನು ಅವರು ತಮ್ಮ ಮತಗಳ ಮೂಲಕ ಸಾಬೀತುಪಡಿಸಲಿದ್ದಾರೆ.

ಶಶಿ ತರೂರ್, ಕಾಂಗ್ರೆಸ್ ಮುಖಂಡ, ಸಂಸದ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಮಹಿಳೆಯರ ಸಬಲೀಕರಣಕ್ಕಾಗಿ ಕೆಲವು ಮಹಿಳಾ ಕೇಂದ್ರಿತ ಯೋಜನೆಗಳನ್ನು ರೂಪಿಸಿದೆ. ಸೇನೆಯಲ್ಲಿ ಮಹಿಳೆಯರ ನೇಮಕ, ಸೈನಿಕ್ ಶಾಲೆಗಳಲ್ಲಿ ಬಾಲಕಿಯರಿಗೆ ಪ್ರವೇಶ, ಹೆರಿಗೆ ರಜೆಯನ್ನು 12 ವಾರದಿಂದ 26 ವಾರಗಳಿಗೆ ವಿಸ್ತರಿಸಿದ್ದು, ಪೋಷಣ್ ಅಭಿಯಾನದ ಮೂಲಕ 10 ಕೋಟಿ ಮಹಿಳೆಯರಿಗೆ ನೆರವು ನೀಡಿದ್ದು.. ಇವು ಅಂಥ ಕೆಲವು ಯೋಜನೆಗಳಾಗಿವೆ. ಉದ್ಯಮಶೀಲತೆಯನ್ನು ಬೆಳೆಸಲು ಮುದ್ರಾ ಯೋಜನೆಯ ಅಡಿಯಲ್ಲಿ ಮಹಿಳಾ ಉದ್ಯಮಿಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ.

ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ

ಕ್ಷೇತ್ರ ಮಹಾತ್ಮೆ

ರಾಜಸ್ಥಾನದ ಕೋಟಾ ಲೋಕಸಭಾ ಕ್ಷೇತ್ರವು ಹಳೆಯ ಸ್ನೇಹಿತರ ನಡುವಣ ಹೋರಾಟದಿಂದ ಗಮನ ಸೆಳೆದಿದೆ. ಬಿಜೆಪಿ ಅಭ್ಯರ್ಥಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ಕಾಂಗ್ರೆಸ್ ಪಕ್ಷವು ಪ್ರಹ್ಲಾದ್ ಗುಂಜಲ್ ಅವರನ್ನು ಕಣಕ್ಕಿಳಿಸಿದೆ. ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಗುಂಜಲ್ ಕಳೆದ ಗುರುವಾರ ಮಾಜಿ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದ್ದರು. ಬಿಜೆಪಿ ತೊರೆದು 'ಕೈ' ಹಿಡಿಯುವ ವೇಳೆ ಓಂ ಬಿರ್ಲಾ ವಿರುದ್ಧ ಟೀಕಾಪ್ರಹಾರ ಮಾಡಿದ್ದರು. 'ಕೋಟಾದಲ್ಲಿ ಬಿಜೆಪಿಯು ಒಬ್ಬ ವ್ಯಕ್ತಿ ಮತ್ತು ಒಂದು ಕುಟುಂಬದ ಹಿಡಿತದಲ್ಲಿದೆ' ಎಂದು ಆರೋಪಿಸಿದ್ದರು. ಗುಂಜಲ್ ಅವರು ಕೋಟಾ ಉತ್ತರ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿಯಿಂದ ಎರಡು ಸಲ ಆಯ್ಕೆಯಾಗಿದ್ದರು. 2014 ಮತ್ತು 2019ರಲ್ಲಿ ಇಲ್ಲಿ ಗೆದ್ದಿದ್ದ ಬಿರ್ಲಾ ಅವರು 'ಹ್ಯಾಟ್ರಿಕ್' ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಕಳೆದ ಸಲ ಅವರು ಕಾಂಗ್ರೆಸ್‌ನ ರಾಮನಾರಾಯಣ ಮೀನಾ ಎದುರು ಗೆದ್ದಿದ್ದರು. ಕಾಂಗ್ರೆಸ್ ಪಕ್ಷವು ಇಲ್ಲಿ 2009ರಲ್ಲಿ ಕೊನೆಯದಾಗಿ ಗೆಲುವು ಸಾಧಿಸಿತ್ತು. ಈ ಬಾರಿ ಗುಂಜಲ್ ಅವರನ್ನು ಕಣಕ್ಕಿಳಿಸಿ ಬಿಜೆಪಿಗೆ ಪ್ರಬಲ ಪೈಪೋಟಿ ನೀಡಲು ಸಜ್ಜಾಗಿದೆ.

ಮುಖಾಮುಖಿ

ಸಿಕಂದರಾಬಾದ್ (ತೆಲಂಗಾಣ)

ಕಿಶನ್ ರೆಡ್ಡಿ
ಬಿಜೆಪಿ

ಕೇಂದ್ರ ಸಚಿವ ಗಂಗಾಪುರಂ ಕಿಶನ್ ರೆಡ್ಡಿ ಅವರು ಸಿಕಂದರಾಬಾದ್ ಲೋಕಸಭಾ ಕ್ಷೇತ್ರವನ್ನು ತಮ್ಮಲ್ಲೇ ಉಳಿಸಿಕೊಳ್ಳುವ ಪ್ರಯತ್ನ ಮಾಡಲಿದ್ದಾರೆ. 2019ರ ಚುನಾವಣೆಯಲ್ಲಿ ಅವರು 62,144 ಮತಗಳ ಅಂತರದ ಗೆಲುವಿನೊಂದಿಗೆ ಈ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಈ ಹಿಂದೆ ಮೂರು ಬಾರಿ ಶಾಸಕರಾಗಿದ್ದ ಅವರು ತೆಲಂಗಾಣ ಮತ್ತು ಆಂಧ್ರ ಪ್ರದೇಶ ವಿಧಾನಸಭೆಗಳಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿದ್ದರು. ರಂಗಾರೆಡ್ಡಿ ಜಿಲ್ಲೆಯ ಮಧ್ಯಮ ವರ್ಗದ ರೈತ ಕುಟುಂಬದಲ್ಲಿ ಜನಿಸಿದ ಅವರು, ಜನತಾ ಪಾರ್ಟಿಯಿಂದ ರಾಜಕೀಯ ಜೀವನ ಆರಂಭಿಸಿದ್ದರು. 1980ರಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಬಿಜೆಪಿ ಸೇರಿದ್ದ ಕಿಶನ್, ಪಕ್ಷದಲ್ಲಿ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿ ಕೇಂದ್ರ ಸಚಿವರೂ ಆದರು. ಪ್ರಧಾನಿ ನರೇಂದ್ರ ಮೋದಿ ಪರವಾದ ಅಲೆಯಲ್ಲಿ ಗೆಲುವಿನ ದಡ ಸೇರುವ ವಿಶ್ವಾಸವನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಕಿಶನ್ ಹೊಂದಿದ್ದಾರೆ.

v/s

ಪದ್ಮರಾವ್ ಗೌಡ್
ಬಿಆರ್‌ಎಸ್

ಬಿಆರ್‌ಎಸ್ ಪಕ್ಷವು ಸಿಕಂದರಾಬಾದ್ ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ಮಾಜಿ ಸಚಿವ ಪದ್ಮರಾವ್ ಗೌಡ್ ಅವರನ್ನು ಲೋಕಸಭಾ ಚುನಾವಣೆಗೆ ಸ್ಪರ್ಧೆಗಿಳಿಸಿದೆ. ಕಳೆದ ವರ್ಷ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಿಕಂದರಾಬಾದ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಏಳು ಸ್ಥಾನಗಳಲ್ಲಿ ಆರರಲ್ಲೂ ಬಿಆರ್‌ಎಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಈ ಕ್ಷೇತ್ರವನ್ನು ಬಿಜೆಪಿಯಿಂದ ಕಸಿದುಕೊಳ್ಳುವ ಉದ್ದೇಶದಿಂದ ಬಿಆರ್‌ಎಸ್ ವರಿಷ್ಠ ಕೆ.ಚಂದ್ರಶೇಖರ ರಾವ್ ಅವರು, ಪದ್ಮರಾವ್ ಅವರನ್ನು ಕಣಕ್ಕಿಳಿಸಿದ್ದಾರೆ. ಆದರೆ ಈ ಕ್ಷೇತ್ರವನ್ನು ಬಿಆರ್‌ಎಸ್ ಒಮ್ಮೆಯೂ ಗೆದ್ದಿಲ್ಲ. ಒಂದು ಕಾಲದಲ್ಲಿ ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಸಿಕಂದರಾಬಾದ್ ಕ್ಷೇತ್ರದಲ್ಲಿ ಆ ಬಳಿಕ ಬಿಜೆಪಿ ತನ್ನ ಬಲ ವೃದ್ಧಿಸಿಕೊಂಡಿದೆ. ಕಾರ್ಪೊರೇಟರ್ ಆಗಿ ರಾಜಕೀಯ ಜೀವನ ಆರಂಭಿಸಿದ್ದ ಪದ್ಮರಾವ್ ಅವರು 2004ರಲ್ಲಿ ಸಿಕಂದರಾಬಾದ್ ಶಾಸಕರಾಗಿ ಮೊದಲ ಬಾರಿ ವಿಧಾನಸಭೆ ಪ್ರವೇಶಿಸಿದ್ದರು.

ಮುಂಬೈ ಧಾರಣೆ

ಶೇಂಗಾ

26-3-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	935 (932)
ಪಾಮ್ ವಾರದ ಡೆಲಿವರಿ	943 (938)
ಸೂರ್ಯಕಾಂತಿ ಎಣ್ಣೆ ಕಚ್ಚಾ	895 (895)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹66,350 (65,950)

ಬೆಳ್ಳಿ ಕೆ.ಜಿ ₹74,200 (74,00)

ಆವರಣದಲ್ಲಿ ಶನಿವಾರದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,004
ಇಂದಿನ ಅಂತ್ಯ	22,096
▼	92
ದಿನದ ಕನಿಷ್ಠ	21,947

ವಿನಿಮಯ ದರ

$ ಡಾಲರ್	83.29
£ ಪೌಂಡ್	105.38
€ ಯುರೊ	90.39
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100ಕ್ಕೆ	₹440
12 ಕ್ಕೆ	₹60

ಮೈಸೂರು

100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹985 (985)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹945 (940)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹255-456

ದ್ವಿತಳಿ (ಬಿ.ವಿ) ₹321-576

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-8770
ಕೆ. ಆರ್.ಪೇಟೆ	₹9100-9100
ಪುತ್ತೂರು	₹5500-8600
ತಿಪಟೂರು	₹7000-9000
ತುರುವೇಕೆರೆ	₹8700-8800

ರೊಬಸ್ಟಾಗೆ ದಾಖಲೆ ಬೆಲೆ

ಪ್ರತಿ ಕೆ.ಜಿಗೆ ₹330 ದರ: ರೈತರ ಬಳಿ ದಾಸ್ತಾನು ಕೊರತೆ

• ರವಿ ಕೆಳಂಗಡಿ

ಬೆಲೆ ಏರಿಕೆಯಿಂದ ಉತ್ತೇಜಿತರಾಗಿ ಕಳಸದಲ್ಲಿ ಬೆಳೆಗಾರರೊಬ್ಬರು ಕಾಫಿ ತೋಟಕ್ಕೆ ಹನಿ ನೀರಾವರಿ ವ್ಯವಸ್ಥೆ ಮಾಡಿದ್ದಾರೆ

ಕಳಸ (ಚಿಕ್ಕಮಗಳೂರು ಜಿಲ್ಲೆ): ರೊಬಸ್ಟಾ ಕಾಫಿ ಧಾರಣೆಯು ಪ್ರತಿ ಕೆ.ಜಿ.ಗೆ ₹330ಕ್ಕೆ ಏರಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಕಳೆದ ಡಿಸೆಂಬರ್‌ನಲ್ಲಿ ಕೆ.ಜಿಗೆ ₹260 ದರ ಇತ್ತು. ಸದ್ಯ 50 ಕೆ.ಜಿ ತೂಕದ ರೊಬಸ್ಟಾ ಚೆರ‍್ರಿ ಕಾಫಿಗೆ ₹8,500ರಿಂದ ₹9 ಸಾವಿರ ದರ ಇದೆ. ಮಂಗಳವಾರ ಲಂಡನ್ ಮಾರುಕಟ್ಟೆಯಲ್ಲಿ ಪ್ರತಿ ಟನ್ ರೊಬಸ್ಟಾ ಕಾಫಿಗೆ 3,472 ಡಾಲರ್ ಧಾರಣೆ ಲಭಿಸಿದೆ.

ಗರಿಷ್ಠ ಪ್ರಮಾಣದಲ್ಲಿ ರೊಬಸ್ಟಾ ಕಾಫಿ ಬೆಳೆಯುವ ವಿಯೆಟ್ನಾಂನಲ್ಲಿ ಈ ಬಾರಿ ಎಲ್‌ನಿನೊ ಪರಿಣಾಮದಿಂದಾಗಿ ಶೇ 10ರಷ್ಟು ಬೆಳೆ ಹಾನಿ ಆಗಿದೆ ಎಂದು ಅಲ್ಲಿನ ಕೃಷಿ ಇಲಾಖೆಯು ಮೂರು ತಿಂಗಳ ಹಿಂದೆ ಹೇಳಿತ್ತು. ಇದೀಗ ಹಾನಿ ಪ್ರಮಾಣ ಶೇ 20ಕ್ಕೆ ಹೆಚ್ಚಿದೆ ಎಂಬ ಅಧಿಕೃತ ಮಾಹಿತಿ ಹೊರಬಿದ್ದಿದ್ದು, ರೊಬಸ್ಟಾ ಬೆಲೆ ಮತ್ತಷ್ಟು ಏರಿಕೆ ಕಾಣುತ್ತಿದೆ.

ಎಲ್ಲೆಡೆ ಜನಪ್ರಿಯಗೊಂಡಿರುವ ಇನ್‌ಸ್ಟಂಟ್ ಮತ್ತು ನೊರೆಯುಕ್ತ ಕಾಫಿ ತಯಾರಿಸಲು ರೊಬಸ್ಟಾ ತಳಿಯೇ ಬೇಕು. ಇದರಿಂದ ಬೆಲೆ ಮತ್ತು ಬೇಡಿಕೆ ಹೆಚ್ಚುತ್ತಿದೆ. ರೊಬಸ್ಟಾಗಿಂತ ಹೆಚ್ಚಿನ ಗುಣಮಟ್ಟ ಹೊಂದಿರುವ ಅರೇಬಿಕಾ ತಳಿಯ ಬೆಲೆಯನ್ನೂ ಮೀರಿ ರೊಬಸ್ಟಾ ಧಾರಣೆಯು ಏರುತ್ತಿದೆ.

ಕಳೆದ ಜನವರಿಯಲ್ಲಿ ರೊಬಸ್ಟಾ ಚೆರ‍್ರಿ ಚೀಲಕ್ಕೆ ₹7 ಸಾವಿರ ದರ ಸಿಕ್ಕಾಗ ಅದನ್ನೇ ಗರಿಷ್ಠ ಬೆಲೆ ಎಂದು ಅರಿತ ಬೆಳೆಗಾರರು, ಕಾಫಿ ಮಾರಾಟ ಮಾಡಲು ಆರಂಭಿಸಿದ್ದರು. ಇದೀಗ ಬೆಲೆ ಗಗನಕ್ಕೆ ಏರಿದ್ದರೂ, ಬಹುತೇಕ ಬೆಳೆಗಾರರ ಬಳಿ ಕಾಫಿ ದಾಸ್ತಾನು ಇಲ್ಲ.

'ನಾವು ಕಳೆದ ತಿಂಗಳು ಎಲ್ಲ ಕಾಫಿ ಮಾರಾಟ ಮಾಡಿದೆವು. ಈಗ ಬೆಲೆ ಏರುತ್ತಿದ್ದರೂ ನಮಗೆ ಪ್ರಯೋಜನ ಇಲ್ಲದಂತಾಗಿದೆ' ಎಂದು ಅಬ್ಬುಗುಡಿಗೆಯ ಬೆಳೆಗಾರ ಮೂರ್ತಿ ಬೇಸರ ತೋಡಿಕೊಂಡರು.

'ಕಾಫಿ ಬೆಲೆ ಏರಿದ ಬೆನ್ನಲ್ಲೇ ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರ ವೇತನವೂ ಏರಿಕೆಯಾಗಿದೆ. ಗೊಬ್ಬರ, ಔಷಧ ದುಬಾರಿಯಾಗಿದೆ. ಕಾರ್ಮಿಕರು ಮತ್ತು ನೀರಿನ ಕೊರತೆಯಿಂದ ನೀರಾವರಿ ಮಾಡಲಾರದೆ ಸೋತಿದ್ದೇವೆ. ಇದು ಉತ್ತಮ ಬೆಲೆ ಎನ್ನಬಹುದೇ ಹೊರತು ಭಾರಿ ಲಾಭಕರ ಅಲ್ಲ' ಎನ್ನುತ್ತಾರೆ ಅನುಭವಿ ಬೆಳೆಗಾರರು.

ಎಲ್‌ಐಸಿಗೆ ವಿಶ್ವದ ಬಲಿಷ್ಠ ವಿಮಾ ಬ್ರ್ಯಾಂಡ್ ಮುಕುಟ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ವಿಶ್ವದ ಅತ್ಯಂತ ಬಲಿಷ್ಠ ವಿಮಾ ಬ್ರ್ಯಾಂಡ್ ಆಗಿ ಹೊರಹೊಮ್ಮಿದೆ. 'ಎಲ್‌ಐಸಿ ಬ್ರ್ಯಾಂಡ್‌ನ ಮೌಲ್ಯ ₹81,634 ಕೋಟಿ (9.8 ಬಿಲಿಯನ್ ಡಾಲರ್) ಆಗಿದೆ' ಎಂದು ಲಂಡನ್ ಮೂಲದ ಬ್ರ್ಯಾಂಡ್ ಫೈನಾನ್ಸ್ ಇನ್ಶೂರೆನ್ಸ್ ವರದಿ ತಿಳಿಸಿದೆ.

ತೈವಾನ್‌ನ ಕ್ಯಾಥೆ ಜೀವ ವಿಮಾ ಸಂಸ್ಥೆಯು ಎರಡನೇ ಬಲಿಷ್ಠ ಬ್ರ್ಯಾಂಡ್ ಮೌಲ್ಯ ಹೊಂದಿದೆ. ಇದರ ಬ್ರ್ಯಾಂಡ್ ಮೌಲ್ಯ ₹40,817 ಕೋಟಿ ಆಗಿದೆ. ಮೂರನೇ ಸ್ಥಾನ ಗಿಟ್ಟಿಸಿಕೊಂಡಿರುವ ಆಸ್ಟ್ರೇಲಿಯಾದ ಎನ್‌ಆರ್‌ಎಂಎ ಇನ್ಶೂರೆನ್ಸ್ ಕಂಪನಿಯು ₹10,900 ಕೋಟಿ ಬ್ರ್ಯಾಂಡ್ ಮೌಲ್ಯ ಹೊಂದಿದೆ ಎಂದು ವರದಿ ತಿಳಿಸಿದೆ. ವಿಮಾ ಕಂತು ಸಂಗ್ರಹದಲ್ಲೂ ಎಲ್‌ಐಸಿ ದಾಖಲೆ ಬರೆದಿದೆ. 2023ರಲ್ಲಿ ಒಟ್ಟು ₹39,090 ಕೋಟಿ ಸಂಗ್ರಹಿಸಿದೆ. ಎಸ್‌ಬಿಐ ಲೈಫ್ ಇನ್ಶೂರೆನ್ಸ್ ₹15,197 ಕೋಟಿ, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ₹10,970 ಕೋಟಿ ವಿಮಾ ಕಂತು ಸಂಗ್ರಹಿಸಿದೆ ಎಂದು ತಿಳಿಸಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗೇಂದ್ರ ಪ್ರಸಾದ್, ವೈಯಾಲಿಕಾವಲ್, ಬೆಂಗಳೂರು.

• **ಪ್ರಶ್ನೆ: ನಾನು ಈ ಹಿಂದೆ ಕೆಲವು ಬ್ಯಾಂಕ್ ಹಾಗೂ ಕ್ರೆಡಿಟ್ ಕಾರ್ಡ್ ಸಂಸ್ಥೆಗಳಿಂದ ವೈಯಕ್ತಿಕ ಸಾಲ ಪಡೆದಿದ್ದೆ. ಈ ಸಂದರ್ಭದಲ್ಲಿ ನನ್ನ ಉದ್ಯೋಗಕ್ಕೆ ತೊಂದರೆಯಾದ ಕಾರಣ ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿ ಸಾಧ್ಯವಾಗಲಿಲ್ಲ. ಈಗ ನನ್ನ ಕ್ರೆಡಿಟ್ ಸ್ಕೋರ್ 600ರ ಹತ್ತಿರದಲ್ಲಿದೆ. ಈ ಅಂಕ ಹೊಂದಿದರೆ ಮುಂದೆ ಸಾಲ ಸಿಗುವ ಸಾಧ್ಯತೆ ಇಲ್ಲ ಎಂಬುದಾಗಿ ನನ್ನ ಸ್ನೇಹಿತರಲ್ಲಿ ಕೇಳಿದಾಗ ಹೇಳುತ್ತಾರೆ. ಒಂದು ವೇಳೆ ಇದನ್ನು ವಿಶ್ವಾಸಾರ್ಹ ಮಟ್ಟಕ್ಕೆ ಏರಿಸಲು ಏನು ಮಾಡಬೇಕು. ಮುಂದೆ ನಾನು ಗೃಹ ಸಾಲ ಪಡೆಯಬೇಕಾಗಿದೆ. ಇದಕ್ಕೆ ತೊಂದರೆಯಾಗುತ್ತದೆಯೇ?**

ಉತ್ತರ: ಕ್ರೆಡಿಟ್ ಸ್ಕೋರ್ ಯಾವುದೇ ವ್ಯಕ್ತಿಯ ಆರ್ಥಿಕ ವಹಿವಾಟಿನ ಒಟ್ಟಾರೆ ಗುಣಮಟ್ಟ ಹಾಗೂ ವಿಶ್ವಸನೀಯತೆಯ ಬಗೆಗಿನ ಹಿಂದಿನ ಕೆಲವು ವರ್ಷಗಳ ಮಾಹಿತಿ ನೀಡುತ್ತದೆ. ಇದು ಮುಂದೆ ಯಾವುದೇ ವ್ಯಕ್ತಿಯಿಂದ ಸಾಲದ ಕೋರಿಕೆ ಬಂದ ಸಂದರ್ಭದಲ್ಲಿ ಸಾಲ ನೀಡಬೇಕೆ, ಬೇಡವೇ ಅಥವಾ ಯಾವ ಷರತ್ತಿನ ಮೇಲೆ ಸಾಲ ನೀಡಬಹುದು ಹಾಗೂ ಬಡ್ಡಿದರ ಏನಿರಬೇಕು ಎಂಬಿತ್ಯಾದಿ ನಿಗದಿಪಡಿಸುವಲ್ಲಿ ಮತ್ತು ಪೂರ್ವ ಸೂಚನೆಯನ್ನು ಸಾಲ ನೀಡುವ ಸಂಸ್ಥೆಗೆ ಸಾಲ ಪಡೆಯುವವನ ಬಗ್ಗೆ ತಿಳಿಯುವಂತೆ ಮಾಡುತ್ತದೆ.

ಇದನ್ನು ಮುಖ್ಯವಾಗಿ ವೈಯಕ್ತಿಕ ಸಾಲ ನೀಡುವ ಸಂದರ್ಭದಲ್ಲಿ ಗಂಭೀರವಾಗಿ ಪರಿಗಣಿಸುತ್ತಾರೆ. ಆದರೆ, ಮನೆ ಸಾಲ ಅಥವಾ ಕಟ್ಟಡ ನಿರ್ಮಾಣ ಸಾಲಗಳನ್ನು ಅಡಮಾನವಾಗಿ ಭೂಮಿ-ಕಟ್ಟಡ ಇತ್ಯಾದಿ ಸ್ಥಿರ ಆಸ್ತಿ ಪರಿಗಣಿಸಿ ವಿತರಿಸಲಾಗುತ್ತದೆ. ಹೀಗಿರುವಾಗ, ಅಂತಹ ಸಾಲಗಳನ್ನು ಕ್ರೆಡಿಟ್ ಸ್ಕೋರ್ ಶ್ರೇಯಾಂಕ ಆಧಾರದಲ್ಲಿ ಮಾತ್ರವಲ್ಲದೆ, ಪ್ರಸ್ತುತ ಮರುಪಾವತಿ ಸಾಮರ್ಥ್ಯ ಹಾಗೂ ಭದ್ರತೆಯ ದೃಷ್ಟಿಯನ್ನು ಹೆಚ್ಚಾಗಿ ಪರಿಗಣಿಸಿ ನೀಡಲಾಗುತ್ತದೆ. ಸುಮಾರು 750ಕ್ಕೂ ಮೀರಿ 900 ಅಂಕಗಳ ತನಕ, ಅದನ್ನು ಅತ್ಯುತ್ತಮ ಅಂಕವೆಂದೂ, 650ಕ್ಕಿಂತ ಕಡಿಮೆ ಅಂಕ ಪಡೆದಿದ್ದರೆ ತುಂಬಾ ಆರ್ಥಿಕ ಸಂಕಷ್ಟ ಹೊಂದಿದ್ದಾರೆಂದೂ ಪರಿಗಣಿಸಲಾಗುತ್ತದೆ. ನಿಮ್ಮ ವಿಚಾರದಲ್ಲಿ ಕ್ರೆಡಿಟ್ ಶ್ರೇಯಾಂಕ ಹೆಚ್ಚಿಸಲು ಕೆಲವು ಅಗತ್ಯ ಕ್ರಮ ಅನುಸರಿಸಬೇಕಿದೆ. ಅದೆಂದರೆ, ಸಮಯಕ್ಕೆ ಸರಿಯಾಗಿ ಯಾವುದೇ ಸಾಲದ ಮೊತ್ತ ಪಾವತಿ ಮಾಡುವುದು. ನಿಮ್ಮ ಕಾರ್ಡ್ ಮಿತಿಯನ್ನು ಸಂಪೂರ್ಣವಾಗಿ ಉಪಯೋಗಿಸದೆ ಸುಮಾರು ಶೇ 30ರಿಂದ ಶೇ 40ರಷ್ಟನ್ನು ಮಾತ್ರ ಉಪಯೋಗಿಸುವುದು ಸಮರ್ಪಕವಾದುದು.

ನೀವು ಕಾರ್ಡ್ ಮೇಲೆ ಹೊಂದಿರುವ ಸಾಲವನ್ನು ಪ್ರತಿ ತಿಂಗಳೂ ಸಂಪೂರ್ಣ ಪಾವತಿಸಿದರೆ ಅಂಕ ವೃದ್ಧಿಯಾಗುತ್ತದೆ. ಕೆಲವೊಮ್ಮೆ ಇರುವ ಬಾಕಿ ಮುಂದೂಡಲು ಇನ್ನಷ್ಟು ಕಂತುಗಳಲ್ಲಿ ಪಾವತಿಗೆ ಬಡ್ಡಿ ಸಹಿತ ಅವಕಾಶ ಇದೆ. ಆದರೆ, ಇದು ನಮ್ಮ ಮರುಪಾವತಿ ಸಾಮರ್ಥ್ಯ ಕಡಿಮೆ ಎಂಬುದನ್ನು ಸಾಬೀತುಪಡಿಸುತ್ತದೆ. ಹಾಗಾಗಿ, ಕಂತುಗಳಲ್ಲಿ ಪಾವತಿಸುವುದು ಸೂಕ್ತವಲ್ಲ. ವಿವಿಧ ವರ್ಗದ ಸಾಲ ಯೋಜನೆ ಉತ್ಪನ್ನಗಳನ್ನು ಪಡೆದಂತೆ ಅಲ್ಪ ಪ್ರಮಾಣದಲ್ಲಿ ಅಂಕ ವೃದ್ಧಿಯಾಗುತ್ತದೆ.

ರತ್ನಾಕರ್, ಮಂಗಳೂರು.

• **ಪ್ರಶ್ನೆ: ನಾನು ಈ ವರ್ಷ ಅನೇಕ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿದ್ದೇನೆ. ನನ್ನ ಹೂಡಿಕೆಯ ವಿಧಾನವೆಂದರೆ, ಮೊದಲ ಹಂತದಲ್ಲಿ ನಾನು ಸಾಮಾನ್ಯ ಆದಾಯ ನೀಡುವ ಲಿಕ್ವಿಡ್ ಕ್ಯಾಷ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತೇನೆ. ಯಾವುದಾದರೂ ಉತ್ತಮ ಹೂಡಿಕೆಗೆ ಮಾರುಕಟ್ಟೆ ಸಜ್ಜಾದಾಗ ಅಂದರೆ ಒಂದು ಹಂತಕ್ಕೆ ಮಾರುಕಟ್ಟೆ ಇಳಿದಾಗ ನಾನು ಈ ಮೊತ್ತವನ್ನು ಈಕ್ವಿಟಿ ಅಥವಾ ಬ್ಯಾಲೆನ್ಸ್ಡ್ ಫಂಡ್ ಇತ್ಯಾದಿಗಳಲ್ಲಿ ಹೆಚ್ಚಿನ ಲಾಭಕ್ಕಾಗಿ ಮರು ಹೂಡಿಕೆ ಮಾಡುತ್ತೇನೆ.**

ನನ್ನ ಪ್ರಶ್ನೆ ಇರುವುದು ಏನೆಂದರೆ, ಇತ್ತೀಚೆಗೆ ಒಂದು ಹಂತಕ್ಕೂ ಮೀರಿದ ಹೂಡಿಕೆಗೆ, ಆದಾಯ ತೆರಿಗೆ ವಿಭಾಗಕ್ಕೆ ನಮ್ಮ ಆರ್ಥಿಕ ವಹಿವಾಟಿನ ಮಾಹಿತಿ ರವಾನೆಯಾಗುತ್ತದೆ ಎನ್ನುವುದು. ಈ ರೀತಿ ಯಾವ ಎಲ್ಲಾ ಮಾಹಿತಿ ಆದಾಯ ತೆರಿಗೆ ಇಲಾಖೆ ಹೊಂದಿರುತ್ತದೆ. ಈ ಮಾಹಿತಿ ರವಾನೆಯಾಗದೆ ಯಾವುದಾದರೂ ರೀತಿ ನಾವು ನಿರ್ವಹಿಸಲು ಸಾಧ್ಯವೇ?

ಉತ್ತರ: ಕೆಲವು ನಿರ್ದಿಷ್ಟ ಆರ್ಥಿಕ ವ್ಯವಹಾರವಾದ ಸಂದರ್ಭದಲ್ಲಿ, ತೆರಿಗೆ ವಂಚನೆಯನ್ನು ತಪ್ಪಿಸುವ ಬಗ್ಗೆ ನಿಗಾ ಇಡಲು ಹಾಗೂ ಸರಿಯಾದ ಆರ್ಥಿಕ ವಹಿವಾಟಿನ ಮಾಹಿತಿ ತೆರಿಗೆದಾರರಿಂದ ಸಲ್ಲಿಕೆಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಆದಾಯ ತೆರಿಗೆ ಇಲಾಖೆಯು ಕೆಲವೆಲ್ಲಾ ಮಾಹಿತಿಯನ್ನು ಅನೇಕ ಸಂಸ್ಥೆಗಳಿಂದ ಪಡೆದುಕೊಳ್ಳುತ್ತದೆ. ಇಂತಹ ಮಾಹಿತಿಯನ್ನು ನಿಗದಿಪಡಿಸಿದ ಸಂಸ್ಥೆಗಳು ವರ್ಷಕ್ಕೊಮ್ಮೆ ಸಲ್ಲಿಸಬೇಕು.

ಆದಾಯ ತೆರಿಗೆಯ ಸೆಕ್ಷನ್ 285ಬಿಎ ಪ್ರಕಾರ ಕೆಲವು ನಿರ್ದಿಷ್ಟ ಸಂಸ್ಥೆಗಳು ಅಂದರೆ, ಬ್ಯಾಂಕ್‌ಗಳು, ಕೋ ಆಪರೇಟಿವ್ ಬ್ಯಾಂಕ್‌ಗಳು, ಅಂಚೆ ಕಚೇರಿಗಳು, ಕ್ರೆಡಿಟ್ ಕಾರ್ಡ್ ವಿತರಿಸುವ ಸಂಸ್ಥೆಗಳು, ಷೇರು, ಬಾಂಡ್, ಡಿಬೆಂಚರ್ ಇತ್ಯಾದಿ ಬಿಡುಗಡೆ ಮಾಡುವಾಗ ಹಣ ಸಂಗ್ರಹಿಸುವ ಕಂಪನಿಗಳು, ಮ್ಯೂಚುವಲ್ ಫಂಡ್ ಟ್ರಸ್ಟಿಗಳು, ಸಬ್ ರಿಜಿಸ್ಟ್ರಾರ್, ಮೋಟರ್ ವಾಹನ ನೋಂದಣಿ ಇಲಾಖೆ ಹೀಗೆ ಇನ್ನೂ ಅನೇಕ ಸಂಸ್ಥೆಗಳು ನಿಗದಿತ ಆರ್ಥಿಕ ವಹಿವಾಟು ಮೊತ್ತಕ್ಕಿಂತ ಅಧಿಕ ಮೊತ್ತದ ವ್ಯವಹಾರ ಆದಾಗ ಅಂತಹ ಮಾಹಿತಿಯನ್ನು ತೆರಿಗೆದಾರರ ಪ್ಯಾನ್ ಸಂಖ್ಯೆ ಸಹಿತ ಸಲ್ಲಿಕೆ ಮಾಡಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು ಹಾಗೂ ವಹಿವಾಟಿಗೆ ಸಂಬಂಧಿಸಿದ ಆರ್ಥಿಕ ಮಿತಿಯನ್ನು ಆದಾಯ ತೆರಿಗೆಯ ಅಂತರ್ಜಾಲ ತಾಣದಲ್ಲಿ ಮೇಲೆ ತಿಳಿಸಿರುವ ಸೆಕ್ಷನ್ ಹುಡುಕಿ ನೋಡಬಹುದು.

ಇನ್ನು ನಿಮ್ಮ ಪ್ರಶ್ನೆ ಏನೆಂದರೆ, ಇಂತಹ ಮಾಹಿತಿಯನ್ನು ತೆರಿಗೆದಾರರು ಗೋಪ್ಯವಾಗಿ ಇಡಬಹುದೇ ಅಥವಾ ನಿಯಂತ್ರಿಸಬಹುದೇ ಎನ್ನುವುದು. ಮ್ಯೂಚುವಲ್ ಫಂಡ್‌ಗಳಲ್ಲಿ ವರ್ಷದಲ್ಲಿ ₹10 ಲಕ್ಷಕ್ಕಿಂತ ಅಧಿಕ ಹೂಡಿಕೆ ಮಾಡಿದಾಗ ಫಂಡ್ ಟ್ರಸ್ಟಿಗಳು ಈ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಗೆ ನೀಡಬೇಕಾಗಿರುತ್ತದೆ.

ಅದೇ ರೀತಿ, ಮೇಲಿನ ಸಂಸ್ಥೆಗಳೆಲ್ಲ ಅವುಗಳದ್ದೇ ಆದ ಮಾಹಿತಿ ಸಲ್ಲಿಕೆ ವಿಧಾನಗಳನ್ನು ಹೊಂದಿವೆ. ಎಲ್ಲಾ ಮಾಹಿತಿಗಳು ವಿದ್ಯುನ್ಮಾನ ಮಾಧ್ಯಮದ ಮೂಲಕ ಕಾರ್ಯ ನಿರ್ವಹಿಸುತ್ತವೆ. ಒಂದು ವೇಳೆ ಅಂತಹ ಸಂಸ್ಥೆಗಳು, ಯಾವುದೇ ಉದ್ದೇಶ ಪೂರ್ವಕ ಮಾಹಿತಿ ಮರೆಮಾಚುವ ಪ್ರಯತ್ನ ನಡೆಸಿದರೂ ಅದಕ್ಕೆ ಅವರೂ ಬಾಧ್ಯಸ್ಥರು. ಹೀಗಾಗಿ ಮೊದಲು ಅಂತಹ ಸಂಸ್ಥೆಗಳು ಸಮರ್ಪಕ ಮಾಹಿತಿ ನೀಡದಿದ್ದರೂ ಕಾನೂನು ಕ್ರಮದ ವ್ಯಾಪ್ತಿಗೊಳ ಪಡುತ್ತವೆ. ಮಾತ್ರವಲ್ಲ, ಇವೆಲ್ಲ ವೈಯಕ್ತಿಕ ತೆರಿಗೆದಾರರ ನಿಯಂತ್ರಣದ ಹೊರತಾಗಿವೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

ಹಸಿ ಕೊಕ್ಕೊ ಧಾರಣೆ ಏರಿಕೆ

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ ಜಿಲ್ಲೆ): ಅಡಿಕೆ ಮತ್ತು ತೆಂಗು ಕೃಷಿಯೊಂದಿಗೆ ಮಿಶ್ರ ಬೆಳೆಯಾಗಿ ಬೆಳೆಯುವ ಕೊಕ್ಕೊ ಬೆಳೆಯ ಧಾರಣೆಯು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಹಸಿ ಕೊಕ್ಕೊ ದರವು ಪ್ರತಿ ಕೆ.ಜಿಗೆ ₹200 ಗಡಿ ದಾಟಿರುವುದು ಸಾರ್ವಕಾಲಿಕ ದಾಖಲೆಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಧಾರಣೆಯು ₹ 75ರಿಂದ ₹90ರ ನಡುವೆ ಇತ್ತು. ಕೆ.ಜಿ.ಗೆ ₹125ರ ಗಡಿ ಕೂಡ ದಾಟಿರಲಿಲ್ಲ. ಇದೀಗ ಹಸಿ ಕೊಕ್ಕೊ ಧಾರಣೆ ನಿರೀಕ್ಷೆಗೂ ಮೀರಿ ಹೆಚ್ಚಳವಾಗುತ್ತಿದೆ. ಮತ್ತೊಂದೆಡೆ ಒಣ ಕೊಕ್ಕೊ ಧಾರಣೆಯೂ ಏರಿಕೆಯಾಗಿದೆ.

ಪುತ್ತೂರಿನ ಕ್ಯಾಂಪ್ಕೊ ಮಾರುಕಟ್ಟೆಯಲ್ಲಿ ಹಸಿ ಕೊಕ್ಕೊ ಧಾರಣೆ ಮಂಗಳವಾರವೂ ಕೆ.ಜಿಗೆ ₹205 ಇತ್ತು. ಉತ್ಪಾದನೆ ಇಳಿಮುಖವಾಗಿರುವುದು, ದಾಸ್ತಾನು ಕಡಿಮೆ ಇರುವುದೇ ಬೆಲೆ ಏರಿಕೆಗೆ ಕಾರಣ ಎನ್ನುತ್ತಾರೆ ವರ್ತಕರು .

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-36500
ಚಿತ್ರದುರ್ಗ	
ಅಪಿ	47739-48169
ಬೆಟ್ಟೆ	33619-34059
ಕೆಂಪುಗೋಟು	28409-28810
ರಾಶಿ	47229-47689
ಪುತ್ತೂರು	
ಕೋಕ	11500-26000
ಹೊಸತು	26500-36500
ಶಿವಮೊಗ್ಗ	
ಬೆಟ್ಟೆ	47000-47000
ಗೊರಬಲು	18009-34107
ರಾಶಿ	29199-47569
ಸಿದ್ದಾಪುರ	
ಬಿಳಿಗೋಟು	25999-28809
ಚಾಲಿ	35399-36699
ಕೋಕ	24699-27199
ಹೊಸಚಾಲಿ	32699-36339
ಕೆಂಪುಗೋಟು	30389-33699
ರಾಶಿ	42899-46239
ತಟ್ಟಿಬೆಟ್ಟೆ	32689-36300
ಶಿರಸಿ	
ಬೆಟ್ಟೆ	30130-41299
ಬಿಳಿಗೋಟು	21799-29737
ಚಾಲಿ	31509-35761
ಕೆಂಪುಗೋಟು	22199-34099
ರಾಶಿ	42098-46609

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹178.50
ಆರ್‌ಎಸ್‌ಎಸ್-5	₹171.50
ಗುಡ್ ಲಾಟ್	₹161.50

ಭಾರತದ ಶ್ರೀಮಂತರಲ್ಲಿ ಉದ್ಯಮಿ ಮುಕೇಶ್ ಅಂಬಾನಿಗೆ ಅಗ್ರಸ್ಥಾನ

ಮುಂಬೈ ಶತಕೋಟ್ಯಧಿಪತಿಗಳ ರಾಜಧಾನಿ

ಮುಕೇಶ್ ಅಂಬಾನಿ

ಮುಂಬೈ (ಪಿಟಿಐ): ಏಷ್ಯಾದಲ್ಲಿಯೇ ಅತಿಹೆಚ್ಚು ಶತಕೋಟ್ಯಧಿಪತಿಗಳನ್ನು (ಬಿಲಿಯನೇರ್‌ಗಳು) ಹೊಂದಿದ ನಗರವೆಂಬ ಹೆಗ್ಗಳಿಕೆಗೆ ಮುಂಬೈ ಭಾಜನವಾಗಿದೆ.

ಹುರೂನ್ ಸಂಸ್ಥೆಯು ಮಂಗಳವಾರ ಪ್ರಕಟಿಸಿರುವ ಜಾಗತಿಕ ಸಿರಿವಂತರ ಪಟ್ಟಿಯಲ್ಲಿ ದೇಶದ ವಾಣಿಜ್ಯ ನಗರಿಯು, ಚೀನಾದ ಬೀಜಿಂಗ್ ಅನ್ನು ಹಿಂದಿಕ್ಕಿದೆ. ಮುಂಬೈನಲ್ಲಿ 92 ಶತಕೋಟ್ಯಧಿಪತಿಗಳಿದ್ದರೆ (₹8,330 ಕೋಟಿಗಿಂತ ಹೆಚ್ಚು ಸಂಪತ್ತು ಹೊಂದಿರುವವರು), ಬೀಜಿಂಗ್‌ನಲ್ಲಿ 91 ಮಂದಿ ಇದ್ದಾರೆ. ಚೀನಾದಲ್ಲಿ 814 ಶತಕೋಟ್ಯಧಿಪತಿಗಳಿದ್ದರೆ, ಭಾರತದಲ್ಲಿ 271 ಮಂದಿ ಇದ್ದಾರೆ ಎಂದು ವರದಿ ವಿವರಿಸಿದೆ.

ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಕಾಲಕ್ಕಿಂತಲೂ ಅಸಮಾನತೆ ಪ್ರಮಾಣ ಹೆಚ್ಚಿದೆ ಎಂದು ಇತ್ತೀಚೆಗೆ ಬಿಡುಗಡೆಯಾದ ಪ್ಯಾರಿಸ್ ಮೂಲದ ವಿಶ್ವ ಅಸಮಾನತೆ ಲ್ಯಾಬ್‌ನ ವರದಿ ಹೇಳಿತ್ತು. ಇದರ ಬೆನ್ನಲ್ಲೇ ಈ ಸಿರಿವಂತರ ಪಟ್ಟಿ ಹೊರಬಿದ್ದಿದೆ. ಭಾರತದ ಶತಕೋಟ್ಯಧಿಪತಿಗಳ ಸಂಪತ್ತು ₹83 ಲಕ್ಷ ಕೋಟಿಗೆ ಮುಟ್ಟಿದೆ.

ಜಾಗತಿಕ ಶ್ರೀಮಂತರು

ಒಟ್ಟು ಸಂಪತ್ತು (₹ಲಕ್ಷ ಕೋಟಿಗಳಲ್ಲಿ)	
ಇಲಾನ್ ಮಸ್ಕ್	19.24
ಜೆಫ್ ಬೆಜಾಸ್	15.41
ಬರ್ನಾರ್ಡ್ ಅರ್ನಾಲ್ಟ್	14.57
ಮಾರ್ಕ್ ಜುಕರ್‌ಬರ್ಗ್	13.16
ಲ್ಯಾರಿ ಎಲ್ಲಿಸನ್	11.99
ವಾರೆನ್ ಬಫೆಟ್	11.99
ಸ್ಟೀವ್ ಬಾಲ್ಮರ್	11.91
ಬಿಲ್ ಗೇಟ್ಸ್	11.49
ಲ್ಯಾರಿ ಪೇಜ್	10.24
ಮುಕೇಶ್ ಅಂಬಾನಿ	9.57

ರಿಲಯನ್ಸ್ ಇಂಡಸ್ಟ್ರೀಸ್‌ನ ಮುಕೇಶ್ ಅಂಬಾನಿ ಅವರು, ₹9.57 ಲಕ್ಷ ಕೋಟಿ ಸಂಪತ್ತು ಹೊಂದುವ ಮೂಲಕ ಭಾರತದ ಸಿರಿವಂತರಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಕಳೆದ ವರ್ಷ ಅವರ ಸಂಪತ್ತಿಗೆ ₹2.73 ಲಕ್ಷ ಕೋಟಿ ಸೇರ್ಪಡೆಯಾಗಿದೆ.

ಹಿಂಡನ್‌ಬರ್ಗ್ ಸಂಶೋಧನಾ ಸಂಸ್ಥೆಯ ವರದಿ ಪ್ರಕಟವಾದ ಬಳಿಕ ಉದ್ಯಮಿ ಗೌತಮ್ ಅದಾನಿ ಅವರು ನಷ್ಟ ಅನುಭವಿಸಿದ್ದರು. ಈ ನಡುವೆಯೂ ಕಳೆದ ವರ್ಷ ಅವರ ನಿವ್ವಳ ಸಂಪತ್ತಿನಲ್ಲಿ ಶೇ 62ರಷ್ಟು ಏರಿಕೆಯಾಗಿದೆ ಎಂದು ವರದಿ ತಿಳಿಸಿದೆ.

ಜಾಗತಿಕ ಮಟ್ಟದ ಸಿರಿವಂತರ ಪಟ್ಟಿಯಲ್ಲಿ ಮುಕೇಶ್ ಅಂಬಾನಿ 10ನೇ ಸ್ಥಾನ ಪಡೆದಿದ್ದರೆ, ಗೌತಮ್ ಅದಾನಿ 15ನೇ ಸ್ಥಾನದಲ್ಲಿದ್ದಾರೆ. ಟೆಸ್ಲಾ ಕಂಪನಿಯ ಮುಖ್ಯಸ್ಥ ಇಲಾನ್ ಮಸ್ಕ್ ಜಗತ್ತಿನ ಅತಿದೊಡ್ಡ ಶ್ರೀಮಂತರಾಗಿದ್ದಾರೆ.

ಚೀನಾದಲ್ಲಿ ರಿಯಲ್ ಎಸ್ಟೇಟ್ ವಲಯ ಸಂಕಷ್ಟಕ್ಕೆ ಸಿಲುಕಿದ್ದು, ಆರ್ಥಿಕತೆ ಬೆಳವಣಿಗೆಯು ಮಂದಗತಿಯಲ್ಲಿದೆ. ಇದಕ್ಕೆ ಹೋಲಿಸಿದರೆ ಜಾಗತಿಕ ಮಟ್ಟದಲ್ಲಿ ಭಾರತದ ಆರ್ಥಿಕತೆಯು ವಾರ್ಷಿಕ ಶೇ7ರಷ್ಟು ಬೆಳವಣಿಗೆ ಕಾಣುತ್ತಿದೆ. ವಿದೇಶಿ ಸಂಪತ್ತಿನ ಒಳಹರಿವು ಕೂಡ ಹೆಚ್ಚಿದೆ. ಹಾಗಾಗಿ, ಸಿರಿವಂತರ ನಿವ್ವಳ ಸಂಪತ್ತು ಕೂಡ ಏರಿಕೆಯ ಹಾದಿ ಹಿಡಿದಿದೆ.

ಕಳೆದ ವರ್ಷ ಮುಂಬೈನಲ್ಲಿ ಶತಕೋಟ್ಯಧಿಪತಿಗಳ ಪಟ್ಟಿಗೆ ಹೊಸದಾಗಿ 27 ಮಂದಿ ಸೇರ್ಪಡೆಯಾಗಿದ್ದಾರೆ. ಇದಕ್ಕೆ ಹೋಲಿಸಿದರೆ ಬೀಜಿಂಗ್‌ನಲ್ಲಿ 6 ಮಂದಿಯಷ್ಟೇ ಸೇರ್ಪಡೆಯಾಗಿದ್ದಾರೆ. ಮುಂಬೈ 'ಸಂಪತ್ತಿನ ಕೇಂದ್ರ'ವೆಂದು ಪ್ರಸಿದ್ಧಿ ಪಡೆದಿದೆ ಎಂದು ವರದಿ ತಿಳಿಸಿದೆ.

ಪುತ್ರನ ಜೊತೆಗಿನ ಫೋಟೊಗೆ ವಿಜಯಪತ್ ಸ್ಪಷ್ಟನೆ

'ರಾಜಿ ಆಗಲ್ಲ; ಜೆಕೆ ಹೌಸ್‌ಗೆ ಮತ್ತೆ ಕಾಲಿಡಲ್ಲ'



ವಿಜಯಪತ್ ಸಿಂಘಾನಿಯಾ

ನವದೆಹಲಿ (ಪಿಟಿಐ) : 'ನನ್ನ ಪುತ್ರನೊಟ್ಟಿಗೆ ಎಂದಿಗೂ ರಾಜಿ ಮಾಡಿ ಕೊಳ್ಳುವುದಿಲ್ಲ. ಜೆಕೆ ಹೌಸ್‌ಗೆ ಮತ್ತೆ ಕಾಲಿಡುವುದಿಲ್ಲ' ಎಂದು ರೇಮಂಡ್ ಸಮೂಹದ ಮಾಜಿ ಅಧ್ಯಕ್ಷ ವಿಜಯಪತ್ ಸಿಂಘಾನಿಯಾ ಸ್ಪಷ್ಟಪಡಿಸಿದ್ದಾರೆ.

ರೇಮಂಡ್ ಸಮೂಹದ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕರಾಗಿರುವ ಪುತ್ರ ಗೌತಮ್ ಸಿಂಘಾನಿಯಾ, ಕಳೆದ ವಾರ ತನ್ನ ತಂದೆ ವಿಜಯಪತ್ ಅವರನ್ನು ಮನೆಗೆ ಆಹ್ವಾನಿಸಿದ್ದರು. ಈ ವೇಳೆ ಅವರೊಟ್ಟಿಗೆ ತಾನು ನಿಂತುಕೊಂಡು ಫೋಟೊ ಕ್ಲಿಕ್ಕಿಸಿಕೊಂಡಿದ್ದರು. ಬಳಿಕ ಅದನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದರು.

'ನನ್ನಪ್ಪ ಮನೆಗೆ ಬಂದಿದ್ದು, ಅವರ ಆಶೀರ್ವಾದ ಪಡೆದೆ. ಅಪ್ಪ, ನೀವು ಸದಾ ಕಾಲ ಆರೋಗ್ಯದಿಂದ ಇರುವಂತೆ ಹಾರೈಸುತ್ತೇನೆ' ಎಂದು ಆ ಫೋಟೊಕ್ಕೆ ಗೌತಮ್ ನೀಡಿದ್ದ ಶೀರ್ಷಿಕೆಯು ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಗ್ರಾಸವಾಗಿತ್ತು. ಅಪ್ಪ ಮತ್ತು ಪುತ್ರ ಸಂಘರ್ಷ ಮರೆತು ಮತ್ತೆ ಒಂದಾಗಿದ್ದಾರೆ ಎಂಬ ಸುದ್ದಿ ಹಬ್ಬಿತ್ತು.

'ಮಾರ್ಚ್ 20ರಂದು ನನ್ನ ಪುತ್ರನ ಸಹಾಯಕ, ಮನೆಗೆ ಬರುವಂತೆ ಆಹ್ವಾನ ನೀಡಿದ್ದ. ಇದಕ್ಕೆ ನಾನು ನಿರಾಕರಿಸಿದೆ. ಕೊನೆಗೆ, ಮೊಬೈಲ್ ಪರದೆಯಲ್ಲಿ ಕಾಣಿಸಿಕೊಂಡ ಪುತ್ರ ಗೌತಮ್, ಮನೆಗೆ ಬಂದು ಕಾಫಿ ಕುಡಿಯುವಂತೆ ಮನವೊಲಿಸಿದ. ಕೊನೆಗೆ, ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡೆ' ಎಂದು ವಿಜಯಪತ್ ಅವರು, ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

'ಆ ಬಳಿಕ ನಾನು ಮತ್ತು ಗೌತಮ್ ಜೊತೆಗಿರುವ ಫೋಟೊ ಅಂತರ್ಜಾಲದಲ್ಲಿ ಹರಿದಾಡಿದ ಬಗ್ಗೆ ನನಗೆ ಸಂದೇಶಗಳು ಬರಲಾರಂಭಿಸಿದವು. ನಾನು ಆತನೊಟ್ಟಿಗೆ ರಾಜಿ ಮಾಡಿಕೊಂಡಿದ್ದೇನೆ ಎಂಬುದು ಶುದ್ಧ ಸುಳ್ಳು' ಎಂದು ಸ್ಪಷ್ಟಪಡಿಸಿದ್ದಾರೆ.

'ನನ್ನನ್ನು ಮನೆಗೆ ಆಹ್ವಾನಿಸಿದ್ದು ಕಾಫಿಗಾಗಿಯೇ ಅಥವಾ ಇಬ್ಬರ ನಡುವಿನ ಭಿನ್ನಾಭಿಪ್ರಾಯಗಳ ಪರಿಹಾರ ಕ್ಕಾಗಿಯೇ ಎಂಬುದು ನನಗೆ ಗೊತ್ತಿಲ್ಲ. ಆದರೆ, ಇದರ ಹಿಂದಿನ ಉದ್ದೇಶವು ಅನುಮಾನದಿಂದ ಕೂಡಿದೆ. ಹತ್ತು ವರ್ಷಗಳ ಬಳಿಕ ನಾನು ಜೆಕೆ ಹೌಸ್ ಭೇಟಿ ನೀಡಿದ್ದೆ. ಮತ್ತೆ ಆ ಮನೆಗೆ ಕಾಲಿಡುತ್ತೇನೆಂದು ನಾನು ಯೋಚಿಸಿಲ್ಲ' ಎಂದು ಹೇಳಿದ್ದಾರೆ. ವಿಜಯಪತ್ ಅವರಿಗೆ ಸದ್ಯ 85 ವರ್ಷ. ಗೌತಮ್ ಮತ್ತು ಅವರ ನಡುವಿನ ಬಾಂಧವ್ಯ ಹದಗೆಟ್ಟಿದ್ದರಿಂದ 2015ರಲ್ಲಿ ರೇಮಂಡ್ ಸಮೂಹದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದಿದ್ದ ಅವರು, ಪುತ್ರನಿಗೆ ಅಧ್ಯಕ್ಷ ಸ್ಥಾನವನ್ನು ಬಿಟ್ಟುಕೊಟ್ಟಿದ್ದರು. 2018ರಲ್ಲಿ ರೇಮಂಡ್ ಸಮೂಹದ ಗೌರವಾಧ್ಯಕ್ಷ ಸ್ಥಾನದಿಂದಲೂ ಅವರನ್ನು ವಜಾಗೊಳಿಸಲಾಗಿತ್ತು.

ಜಿಡಿಪಿ: ಶೇ 6.8ರಷ್ಟು ಪ್ರಗತಿ ನಿರೀಕ್ಷೆ

ನವದೆಹಲಿ (ಪಿಟಿಐ): ಜಾಗತಿಕ ರೇಟಿಂಗ್ ಸಂಸ್ಥೆಯಾದ ಎಸ್ ಆ್ಯಂಡ್ ಪಿ, 2024-25ನೇ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕತೆ (ಜಿಡಿಪಿ) ಬೆಳವಣಿಗೆಯನ್ನು ಪರಿಷ್ಕರಿಸಿದ್ದು, ಶೇ 6.8ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

ಕಳೆದ ನವೆಂಬರ್‌ನಲ್ಲಿ ಬಿಡುಗಡೆಗೊಳಿಸಿದ್ದ ವರದಿಯಲ್ಲಿ ಶೇ 6.4ರಷ್ಟು ಬೆಳವಣಿಗೆ ದಾಖಲಿಸಲಿದೆ ಎಂದು ಹೇಳಿತ್ತು.

2023-24ನೇ ಹಣಕಾಸು ವರ್ಷದಲ್ಲಿ ಜಿಡಿಪಿಯು ಶೇ 7.6 ರಷ್ಟು ದಾಖಲಾಗಲಿದೆ ಎಂದು ಅಂದಾಜಿಸಲಾಗಿದೆ. ಭಾರತ, ಇಂಡೊನೇಷ್ಯಾ, ಫಿಲಿಪ್ಪೀನ್ ಹಾಗೂ ವಿಯೆಟ್ನಾಂನ ಆರ್ಥಿಕತೆಯು ಉತ್ತಮ ಬೆಳವಣಿಗೆ ದಾಖಲಿಸಲಿವೆ ಎಂದು ಹೇಳಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

|| ವೈಕುಂಠ ಸಮಾರಾಧನೆ ||

ಶ್ರೀಮತಿ ಬಿ.ಚಿನ್ನಮ್ಮ, ನಿವೃತ್ತ ತಹಶೀಲ್ದಾರ್

ಇವರು ದಿ: 17-03-2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ವೈಕುಂಠ ಸಮಾರಾಧನೆಯನ್ನು 28-03-2024ನೇ ಗುರುವಾರ ಮಧ್ಯಾಹ್ನ 12-00 ಗಂಟೆಗೆ ಪುಟ್ಟೇನಹಳ್ಳಿ ಜೆ.ಪಿ.ನಗರ ಬೆಂಗಳೂರಿನ ಸ್ವಗೃಹದಲ್ಲಿ ಹಮ್ಮಿಕೊಂಡಿದ್ದು, ನೀವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ: ಶ್ರೀಮತಿ ಧನಲಕ್ಷ್ಮಿ, ಶ್ರೀಮತಿ ಕವಿತಾ, ಶ್ರೀಮತಿ ವಿನುತ ಹಾಗೂ ಕುಟುಂಬದವರು

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Hotel

ದಾಬಸ್ ಪೇಟೆ ಹಾಗೂ ಹೊಸೂರು (ತಮಿಳುನಾಡು)ನಲ್ಲಿರುವ ಕ್ಯಾಂಟೀನ್ ಒಂದಕ್ಕೆ, SUPERVISOR MANAGER ಅಡುಗೆಯವರು, ಅಡುಗೆ ಸಹಾಯಕರು, ತರಕಾರಿ ಹೆಚ್ಚುವವರು, ರುಬ್ಬುವವರು ಬೇಕಾಗಿದ್ದಾರೆ. ಊಟ, ವಸತಿ, ESI,PF ಸೌಲಭ್ಯವಿದೆ. 9512799918 7353500688 9900141311 9591810812

Teachers/ Professors

Vidya Sanskaar International Public School
(Affiliated to Central Board of Secondary Education)
Machohalli Gate, Magadi Main Road, Bengaluru - 91
Recruitment: 2024-25
- Coordinators (Pre-Primary & Primary): PG + B.Ed
- High School Teachers (Female):
  - Computer Science - BE/BCA/MCA/M.Sc
  - Social Science - BA/MA + B.Ed
  - Mathematics - B.Sc/M.Sc + B.Ed
  - English - BA/MA + B.Ed
  - Science (Phy, Chem, Bio) - B.Sc/M.Sc + B.Ed
- Primary Teachers (Female):
  - Mathematics - B.Sc/M.Sc + B.Ed
  - Science - B.Sc/M.Sc + B.Ed
  - English - BA/MA + B.Ed

Eligible Candidates can send their resumes before 30th of April 2024
shr@vidyasanskaar.edu.in

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತಊಟ ವಸತಿ ಸಂಬಳ 15,000/- ರಿಂದ 20,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು-56. ಸಂಪರ್ಕಿಸಿ: 9606385001, 9606523337

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9353185367

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಬೇಕಾಗಿದ್ದಾರೆ. ಊಟ ವಸತಿವಿದೆ 13,000 - 17,000. 8951315839, 9141634619

ಅಡುಗೆ ಮತ್ತು ಮನೆಕೆಲಸಕ್ಕೆ (15000), ರೋಗಿಗಳಾರೈಕೆಗೆ (18,000-20,000), ಹೆಂಗಸರು/ ಹುಡುಗಿಯರು (ನಿಲ್ಲುವವರು) ಬೇಕಾಗಿದ್ದಾರೆ. ಉಡುಪಿ: 9148330776

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಿಂದಲೇ ಕುಳಿತು ಪುಸ್ತಕ ಬರೆಯುವ, ಫಾರಂ ತುಂಬುವ ಮೂಲಕ, ತಿಂಗಳಿಗೆ, 18,000-20,000.ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8050064327, 8050064328.

ಪ್ರವಾಸ

Travel

19.4.2024, 1.5.2024 ಅಯೋಧ್ಯಾ,ಕಾಶಿ,ಗಯಾ, ಪ್ರಯಾಗ್‌ರಾಜ್, 9.5.2024ದೆಹಲಿ,ಹರಿದ್ವಾರ, ಆಗ್ರಾ,ಪ್ರಯಾಗ್‌ರಾಜ್, ಅಯೋಧ್ಯಾ,ಕಾಶಿ, ಗಯಾ9.6.2024 ಯಮುನೋತ್ರಿ,ಗಂಗೋತ್ರಿ,ಕೇದಾರನಾಥ್,ಬದ್ರಿನಾಥ್27.6.2024 ಅಮರನಾಥ್,ಅಮೃತಸರ್, ವೈಷ್ಣೋದೇವಿ,ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

6 ದಿನಗಳ ಬಾಲಿ. 8 ದಿನಗಳ ಮುಕ್ತಿನಾಥ ನೇಪಾಳ ವಿಶೇ ಷ. 6 ದಿನಗಳ ಶ್ರೀಲಂಕಾ. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯ. 10 ದಿನಗಳ ಸೌತ್‌ಆಫ್ರಿಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9900080793

13.04.2024 6ದಿನಗಳು A/Cಬಸ್ಸಿನಲ್ಲಿ ಅಯೋಧ್ಯೆ, ಕಾಶಿ,ಗಯಾ, ಪ್ರಯೋಗರಾಜ್ (ಕೆಲವೇ ಸೀಟುಗಳಿವೆ) 12.07.2024 13/17ದಿನಗಳು ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಅಮೃತಸರ್, ಆಗ್ರ,ದೆಹಲಿ ಇತ್ಯಾದಿ.28000/ಏಪ್ರಿಲ್, ಮೇನಲ್ಲಿ ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

ಸೌತ್ ಆಫ್ರಿಕಾ 8 ದಿನಗಳು, 8 ದಿನಗಳ ನೇಪಾಳ ಮುಕ್ತಿನಾಥ ಭೂತಾನ್ 8 ದಿನಗಳು, 6 ದಿನಗಳ ಬಾಲಿ, 7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್, 4 ದಿನಗಳ ಲಕ್ಷದೀಪ(ಕ್ರೂಸ), ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ 18 ದಿನಗಳು ಭಟ್ ಟ್ರಾವೆಲ್ಸ್ 9844166555 7975132507

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ADMISSION CORNER

JAIN Law School
No.59, Sunkadakatte, Bolare P.O. Kanakapura Rd, Bangalore-116
ADMISSION OPEN
For Prospective Student Workshop and Law Teacher Enlistment
LLB 5yrs & 3yrs
Eligibility: For 5 Years II PUC (+2), for 3 Years Any Degree
Day & Residential Programmes
Affiliated to KSLU and BCI in Progress.
Campus 2 : CA Site1, Brigade Gardenia, J.P.Nagar 8th Ph, B'lore-78.
City Off : 960, 24th Mn, 38th Cr, 4-T,Blk,Jayanagar, Bangalore-41
Tel: +91-99644 46655 & 98451 43211
Email: jainlawschool@gmail.com, Web:intechibm.org

ರಿಯಲ್ ಎಸ್ಟೇಟ್ ಸೆಲ್ಲಿಂಗ್

Flat

Jayanagar

2BHK APT. SALE Jayanagar, Floor 1, behind Lalbagh, lift, Balcony, car park, security, brokers excuse, Buyers only, 65 lakhs, Whatsapp: +91-9284538248

PROPERTY
To Place your Classified Ads Contact
9845114560

DH Classifieds More value, more impact
ಪ್ರಜಾವಾಣಿ
NAME CHANGE
Book your Name Change Ad in DH All Karnataka + Prajavani Bengaluru City All Days
@50/-* PER WORDS
www.dhclassifieds.com
BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನ ಖಂಡಿಸಿ ಆಮ್ ಆದ್ಮಿ ಪಕ್ಷ ದೆಹಲಿಯಲ್ಲಿ ಮಂಗಳವಾರ ನಡೆಸಿದ ಪ್ರತಿಭಟನೆ ವೇಳೆ ಪಂಜಾಬ್ ಸಚಿವ ಹರ್ಜೋತ್ ಸಿಂಗ್ ಬೇನ್ಸ್ ಅವರನ್ನು ಪೊಲೀಸರು ವಶಕ್ಕೆ ಪಡೆದರು (ಎಡ ಚಿತ್ರ). ಇ.ಡಿ.ಯಿಂದ ಬಂಧನಕ್ಕೆ ಒಳಗಾಗಿರುವ ಮುಖ್ಯಮಂತ್ರಿ ಕೇಜ್ರಿವಾಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟಿಸಿದರು —ಪಿಟಿಐ ಚಿತ್ರ

ಕೇಜ್ರಿವಾಲ್ ಬಂಧನ ಖಂಡಿಸಿ ಎಎಪಿ ಪ್ರತಿಭಟನೆ • ದೆಹಲಿ ಪೊಲೀಸರ ರಾಜ್ಯವಾಗಿದೆ—ಟೀಕೆ

ಪ್ರಧಾನಿ ನಿವಾಸಕ್ಕೆ ಘೇರಾವ್ ಯತ್ನ

ನವದೆಹಲಿ(ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ವಿರೋಧಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕರು ಹಾಗೂ ಕಾರ್ಯಕರ್ತರು ಮಂಗಳವಾರ ಪ್ರತಿಭಟಿಸಿದರು.

ಲೋಕ ಕಲ್ಯಾಣ ಮಾರ್ಗದಲ್ಲಿರುವ ಪ್ರಧಾನಿ ನಿವಾಸಕ್ಕೆ ಘೇರಾವ್ ಹಾಕುವುದಕ್ಕಾಗಿ ಮೆರವಣಿಗೆಯಲ್ಲಿ ಹೊರಟಿದ್ದ ಪ್ರತಿಭಟನಕಾರರನ್ನು ಪೊಲೀಸರು ಪಟೇಲ್ ಚೌಕದಲ್ಲಿ ವಶಕ್ಕೆ ಪಡೆದರು. ಮೆರವಣಿಗೆಯುದ್ದಕ್ಕೂ ಪ್ರತಿಭಟನಕಾರರು 'ಇನ್‌ಕ್ವಿಲಾಬ್ ಜಿಂದಾಬಾದ್' ಹಾಗೂ 'ಕೇಜ್ರಿವಾಲ್ ಜಿಂದಾಬಾದ್' ಎಂಬ ಘೋಷಣೆಗಳನ್ನು ಕೂಗಿದರು.

ಎಎಪಿಯ ದೆಹಲಿ ಘಟಕದ ಸಂಚಾಲಕ ಗೋಪಾಲ್ ರಾಯ್, ಹಿರಿಯ ನಾಯಕರಾದ ಸೋಮನಾಥ್ ಭಾರ್ತಿ, ದೆಹಲಿ ವಿಧಾನಸಭೆಯ ಡೆಪ್ಯುಟಿ ಸ್ಪೀಕರ್ ರಾಖಿ ಬಿರ್ಲಾ, ಪಂಜಾಬ್ ಸಚಿವ ಹರ್ಜೋತ್ ಸಿಂಗ್ ಬೇನ್ಸ್ ಮತ್ತಿತರರು ಪೊಲೀಸರು ವಶಕ್ಕೆ ತೆಗೆದುಕೊಂಡ ನಾಯಕರಲ್ಲಿ ಪ್ರಮುಖರು.

ನಂತರ, ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ದೆಹಲಿ ಘಟಕದ ಸಂಚಾಲಕ ಗೋಪಾಲ್ ರಾಯ್,'ದೆಹಲಿಯಾದ್ಯಂತ ಕೇಂದ್ರ ಸರ್ಕಾರ ಸೆಕ್ಷನ್ 144ರಡಿ ನಿಷೇಧಾಜ್ಞೆ ಹೇರಿದೆ. ಈಗ ದೆಹಲಿ 'ಪೊಲೀಸ್ ರಾಜ್ಯ'ವಾಗಿ ಪರಿವರ್ತನೆಯಾಗಿದೆ' ಎಂದರು.

'ಪೊಲೀಸ್ ಬಲ ಬಳಸಿಕೊಳ್ಳುವ ಮೂಲಕ ಈ ಚಳವಳಿಯನ್ನು ನಿಲ್ಲಿಸಲು ಸಾಧ್ಯ ಇಲ್ಲ ಎಂದು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಲು ಬಯಸುತ್ತೇನೆ. ಪಕ್ಷದ ಮಹಿಳಾ ಕಾರ್ಯಕರ್ತರನ್ನು ಸಹ ಎಳೆದಾಡಿ, ವಶಕ್ಕೆ ಪಡೆಯಲಾಗಿದೆ' ಎಂದರು.

ಭಾರಿ ಭದ್ರತೆ: ಎಎಪಿ ವತಿಯಿಂದ ಪ್ರತಿಭಟನೆ ಹಮ್ಮಿಕೊಂಡಿದ್ದ ಹಿನ್ನೆಲೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಪೊಲೀಸ್ ಬಂದೋಬಸ್ತ್ ಹಾಕಲಾಗಿತ್ತು.

ಅದರಲ್ಲೂ, ಪ್ರಧಾನಿ ನಿವಾಸ, ಕೇಂದ್ರೀಯ ದೆಹಲಿಯಲ್ಲಿ ಪೊಲೀಸರಲ್ಲದೇ, ಅರೆಸೇನಾ ಪಡೆಗಳ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಲೋಕ ಕಲ್ಯಾಣ ಮಾರ್ಗದ ಮೆಟ್ರೊ ನಿಲ್ದಾಣವನ್ನು ಮುಚ್ಚಲಾಗಿತ್ತು. ಪಟೇಲ್ ಚೌಕ್ ಬಳಿಯ ಮೆಟ್ರೊ ನಿಲ್ದಾಣದಲ್ಲಿ ಪ್ರವೇಶ ಮತ್ತು ನಿರ್ಗಮನವನ್ನು ನಿರ್ಬಂಧಿಸಲಾಗಿತ್ತು.

ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಧರಣಿ

ನವದೆಹಲಿ(ಪಿಟಿಐ): ದೆಹಲಿ ಅಬಕಾರಿ ಹಗರಣದಲ್ಲಿ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೆ ಒಳಗಾಗಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಬಿಜೆಪಿಯಿಂದ ಮಂಗಳವಾರ ಇಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಕ್ಷದ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚದೇವ್ ಸೇರಿದಂತೆ ಕನಿಷ್ಠ 57 ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಇದಕ್ಕೂ ಮುನ್ನ, ಫಿರೋಜ್‌ಶಾ ಕೋಟ್ಲಾ ಸ್ಟೇಡಿಯಂ ಬಳಿ ಜಮಾವಣೆಗೊಂಡ ಬಿಜೆಪಿ ಕಾರ್ಯಕರ್ತರು, ದೆಹಲಿ ಸಚಿವಾಲಯದತ್ತ ಮೆರವಣಿಗೆ ಆರಂಭಿಸಿದರು. ಮೆರವಣಿಗೆಯುದ್ದಕ್ಕೂ ಕಾರ್ಯಕರ್ತರು 'ಕೇಜ್ರಿವಾಲ್ ಶರಮ್ ಕರೋ' ಹಾಗೂ 'ಕೇಜ್ರಿವಾಲ್ ಇಸ್ತಿಫಾ ದೋ' ಎಂಬ ಘೋಷಣೆ ಕೂಗಿದರು.

'ಸಚಿವಾಲಯ ಬಳಿ ಅಳವಡಿಸಿದ್ದ ತಡೆಗೋಡೆಗಳನ್ನು ತೆಗೆದು ಹಾಕಲು ಪ್ರತಿಭಟನಕಾರರು ಯತ್ನಿಸಿದರು. ಕೆಲವರು ಅವುಗಳ ಮೇಲೆ ಹತ್ತಿ, ಪ್ರತಿಭಟಿಸಿದರು. ಜಲಫಿರಂಗಿ ಬಳಸಿ ಕೆಲವರನ್ನು ಚದುರಿಸಲಾಯಿತಲ್ಲದೇ, ಹಲವರನ್ನು ವಶಕ್ಕೆ ಪಡೆಯಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತಿಭಟನೆ ವೇಳೆ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಪಕ್ಷದ ಹಿರಿಯ ಮುಖಂಡ ಹಾಗೂ ಸಂಸದ ಹರ್ಷವರ್ಧನ್, 'ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನಕ್ಕೆ ಒಳಗಾಗಿದ್ದು, ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಮಂಜಿಂದರ್ ಸಿಂಗ್ ಸಿರ್ಸಾ,'ಒಬ್ಬ ಮುಖ್ಯಮಂತ್ರಿ ಇ.ಡಿ ವಶದಲ್ಲಿದ್ದುಕೊಂಡು ನಿರ್ದೇಶನ ನೀಡುವಂತಿಲ್ಲ. ಎಎಪಿ ನಾಟಕೀಯ ಸನ್ನಿವೇಶಗಳನ್ನು ಸೃಷ್ಟಿಸುತ್ತಿದೆ' ಎಂದು ಟೀಕಿಸಿದರು.

ಮತ್ತೊಬ್ಬ ಸಂಸದ ಮನೋಜ್ ತಿವಾರಿ,'ಜೈಲಿನಿಂದ ನೀವು ಒಂದು ಗ್ಯಾಂಗ್ ಅನ್ನು ಮುನ್ನಡೆಸಬಹುದೇ ಹೊರತು ಒಂದು ಸರ್ಕಾರವನ್ನಲ್ಲ. ಒಂದು ಸರ್ಕಾರ ಸಂವಿಧಾನದ ಪ್ರಕಾರ ಮಾತ್ರ ಕಾರ್ಯ ನಿರ್ವಹಿಸುತ್ತದೆ' ಎಂದರು.

> **ಭ್ರಷ್ಟರನ್ನು ರಕ್ಷಿಸುವ ಸಲುವಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಪ್ರಾಮಾಣಿಕರನ್ನು ಗುರಿಯಾಗಿಸಿ ಕ್ರಮ ಕೈಗೊಳ್ಳುತ್ತಿದೆ**
> **ಕವಿತಾ**
> ಎಎಪಿ ಕಾರ್ಯಕರ್ತೆ

> **ಇ.ಡಿ ವಶದಲ್ಲಿರುವ ಕೇಜ್ರಿವಾಲ್ ನಿರ್ದೇಶನ ನೀಡುವಂತಿಲ್ಲ. ಈ ಬಗ್ಗೆ ಲೆಫ್ಟಿನೆಂಟ್ ಗವರ್ನರ್‌ಗೆ ದೂರು ನೀಡಿದ್ದೇನೆ**
> **ಮಂಜಿಂದರ್ ಸಿಂಗ್ ಸಿರ್ಸಾ**
> ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ

ನ್ಯಾಯಯುತ ತನಿಖೆ ನಡೆಯಲಿ– ಅಮೆರಿಕ

ವಾಷಿಂಗ್ಟನ್ (ರಾಯಿಟರ್ಸ್): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ಕುರಿತಂತೆ ಕಾನೂನು ಪ್ರಕ್ರಿಯೆ ಮುಕ್ತ ಮತ್ತು ನ್ಯಾಯಸಮ್ಮತ ಆಗಿರುವಂತೆ ನೋಡಿಕೊಳ್ಳಬೇಕು ಎಂದು ಅಮೆರಿಕ ಪ್ರತಿಕ್ರಿಯಿಸಿದೆ.

ಈ ಬಂಧನಕ್ಕೆ ಸಂಬಂಧಿಸಿದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಲಾಗುತ್ತಿದೆ ಎಂದು ಅಮೆರಿಕ ವಿದೇಶಾಂಗ ಇಲಾಖೆಯ ವಕ್ತಾರರು ಹೇಳಿದ್ದಾರೆ. ಕೇಜ್ರಿವಾಲ್ ಬಂಧನ ಕುರಿತು ಜರ್ಮನಿ ನೀಡಿದ್ದ ಹೇಳಿಕೆಗೆ ಭಾರತದಲ್ಲಿ ತೀವ್ರ ವಿರೋಧ ವ್ಯಕ್ತವಾಗಿತ್ತು.

'ಕಾನೂನು ಪ್ರಕ್ರಿಯೆಯು ನ್ಯಾಯಯುತ ಮತ್ತು ಪಾರದರ್ಶಕವಾಗಿರಬೇಕು. ಸಕಾಲದಲ್ಲಿ ಮುಗಿಯಬೇಕು ಎಂದು ನಾವು ಬಯಸುತ್ತೇವೆ' ಎಂದು ವಕ್ತಾರರು ಈ ಕುರಿತ ಇ–ಮೇಲ್‌ಗೆ ಪ್ರತಿಕ್ರಿಯಿಸಿದ್ದಾರೆ.

'ಔಷಧಗಳ ಕೊರತೆ ಆಗದಿರಲಿ'

ನವದೆಹಲಿ(ಪಿಟಿಐ): 'ರಾಷ್ಟ್ರ ರಾಜಧಾನಿಯಲ್ಲಿರುವ ಆಸ್ಪತ್ರೆಗಳು ಮತ್ತು ಮೊಹಲ್ಲಾ ಕ್ಲಿನಿಕ್‌ಗಳಲ್ಲಿನ ಔಷಧಗಳ ಕೊರತೆ ಹಾಗೂ ರೋಗ ಪತ್ತೆ ಪರೀಕ್ಷೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸುವಂತೆ, ಜಾರಿ ನಿರ್ದೇಶನಾಲಯದ (ಇ.ಡಿ) ವಶದಲ್ಲಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನಿರ್ದೇಶನ ನೀಡಿದ್ದಾರೆ' ಎಂದು ದೆಹಲಿ ಆರೋಗ್ಯ ಸಚಿವ ಸೌರಭ್ ಭಾರದ್ವಾಜ್ ಮಂಗಳವಾರ ಹೇಳಿದ್ದಾರೆ.

ಈ ವಿಷಯಗಳನ್ನು ಚರ್ಚಿಸುವುದಕ್ಕಾಗಿ ವಿಧಾನಸಭೆಯ ವಿಶೇಷ ಅಧಿವೇಶನವನ್ನು ಬುಧವಾರ ಕರೆಯಲಾಗಿದೆ ಎಂದೂ ಅವರು 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಇ.ಡಿ ವಶದಲ್ಲಿರುವ ಕೇಜ್ರಿವಾಲ್ ಅವರು ಸಂಪುಟ ಸಹೋದ್ಯೋಗಿಗಳಿಗೆ ನೀಡಿರುವ ಎರಡನೇ ನಿರ್ದೇಶನ ಇದಾಗಿದೆ.

ಅರ್ಜಿ ವಿಚಾರಣೆ ಇಂದು

ನವದೆಹಲಿ(ಪಿಟಿಐ): ಜಾರಿ ನಿರ್ದೇಶನಾಲಯ (ಇ.ಡಿ) ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ದೆಹಲಿ ಹೈಕೋರ್ಟ್ ಬುಧವಾರ ನಡೆಸಲಿದೆ.

ಪಿಐಎಲ್: ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಬಂಧನಕ್ಕೆ ಒಳಗಾಗಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಇ.ಡಿ ಕಸ್ಟಡಿಯಲ್ಲಿರುವಾಗ ಆದೇಶಗಳನ್ನು ನೀಡದಂತೆ ನಿರ್ದೇಶನ ನೀಡಬೇಕು ಎಂದು ಕೋರಿ ಸುರ್ಜೀತ್ ಸಿಂಗ್ ಯಾದವ್ ಎಂಬುವವರು ದೆಹಲಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದಾರೆ.

ಏ. 9ರವರೆಗೆ ಕವಿತಾ ನ್ಯಾಯಾಂಗ ವಶಕ್ಕೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣ ಪ್ರಕರಣದಲ್ಲಿ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರನ್ನು ಏ.9ರವರೆಗೆ ನ್ಯಾಯಾಂಗ ವಶಕ್ಕೆ ನೀಡಿ ಇಲ್ಲಿನ ನ್ಯಾಯಾಲಯ ಮಂಗಳವಾರ ಆದೇಶ ನೀಡಿದೆ.

ಕೆ.ಕವಿತಾ

ಕವಿತಾ ಅವರನ್ನು ನ್ಯಾಯಾಂಗದ ವಶಕ್ಕೆ ನೀಡಬೇಕೆಂದು ಜಾರಿ ನಿರ್ದೇಶನಾಲಯವು (ಇ.ಡಿ) ಕೋರಿದ್ದ ಅರ್ಜಿಯನ್ನು ವಿಶೇಷ ನ್ಯಾಯಾಧೀಶೆ ಕಾವೇರಿ ಬಾವೇಜ ಅವರು ವಿಚಾರಣೆ ನಡೆಸಿ ಈ ಆದೇಶ ನೀಡಿದರು.

ವಿಚಾರಣೆ ವೇಳೆ ಕವಿತಾ ಪರ ವಕೀಲರು, ಕವಿತಾ ಅವರ ಅಪ್ರಾಪ್ತ ವಯಸ್ಸಿನ ಪುತ್ರನಿಗೆ ಪರೀಕ್ಷೆ ಇರುವುದರಿಂದ ಜಾಮೀನು ಮಂಜೂರು ಮಾಡಬೇಕು ಎಂದು ಕೋರಿದರು. ಇದಕ್ಕೆ ಇ.ಡಿ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದರು.

ಹಗರಣದ ಪ್ರಮುಖ ಆರೋಪಿಯಾಗಿದ್ದು, ಇವರ ಬಿಡುಗಡೆಯಾದಲ್ಲಿ ಸಾಕ್ಷ್ಯಗಳ ಮೇಲೆ ಪ್ರಭಾವ ಬೀರುವ ಸಂಭವವಿದೆ ಎಂದು ವಾದಿಸಿದರು. ಆರೋಪಿಯು ಪ್ರಭಾವಿಯಾಗಿದ್ದಾಗ ಆರ್ಥಿಕ ಅಪರಾಧ ಪ್ರಕರಣಗಳ ವಿಚಾರಣೆಯು ಸಾಮಾನ್ಯ ಅಪರಾಧ ಪ್ರಕರಣಕ್ಕಿಂತ ಸಂಕೀರ್ಣವಾಗಿರುತ್ತದೆ ಎಂದು ಹೇಳಿದರು.

ಮಾ.16ರಂದು ಕವಿತಾ ಅವರನ್ನು ಏಳು ದಿನಗಳ ಕಾಲ ಇ.ಡಿ ಕಸ್ಟಡಿಗೆ ನೀಡಲಾಗಿತ್ತು. ಬಳಿಕ ಶನಿವಾರ ಮತ್ತೆ ಕಸ್ಟಡಿ ಅವಧಿಯನ್ನು ಮೂರು ದಿನಗಳ ಕಾಲ ವಿಸ್ತರಿಸಲಾಗಿತ್ತು.

ತಿಹಾರ್ ಜೈಲಿಗೆ: ದೆಹಲಿ ಕೋರ್ಟ್ ಆದೇಶದ ನಂತರ ಕವಿತಾ ಅವರನ್ನು ತಿಹಾರ್ ಜೈಲಿಗೆ ಕರೆದೊಯ್ಯಲಾಯಿತು ಎಂದು ಕಾರಾಗೃಹ ಅಧಿಕಾರಿಗಳು ತಿಳಿಸಿದರು.

'ರಾಜಕೀಯ ಪಕ್ಷ ಬದಲಾವಣೆ ಪ್ರಕರಣ'

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣವು 'ರಾಜಕೀಯ ಪಕ್ಷ ಬದಲಾವಣೆ ಪ್ರಕರಣ' ಎಂದು ಬಿಆರ್‌ಎಸ್ ನಾಯಕಿ ಕೆ.ಕವಿತಾ ಹೇಳಿದರು.

ಕವಿತಾ ಅವರನ್ನು ಭಾರಿ ಭದ್ರತೆ ಮಧ್ಯೆ ದೆಹಲಿ ಕೋರ್ಟ್ ಎದುರು ಮಂಗಳವಾರ ಹಾಜರುಪಡಿಸಲಾಯಿತು.

ಈ ವೇಳೆ ಕೋರ್ಟ್ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇದು ಹಣ ಅಕ್ರಮ ವರ್ಗಾವಣೆ ಪ್ರಕರಣ ಅಲ್ಲ, ರಾಜಕೀಯ ಪಕ್ಷ ಬದಲಾವಣೆ ಪ್ರಕರಣ. ಒಬ್ಬ ಆರೋಪಿ ಈಗಾಗಲೇ ಬಿಜೆಪಿ ಸೇರಿದ್ದಾರೆ, ಎರಡನೇ ಆರೋಪಿ ಬಿಜೆಪಿ ಟಿಕೆಟ್ ಪಡೆದಿದ್ದಾರೆ. ಮೂರನೇ ಆರೋಪಿ ಚುನಾವಣಾ ಬಾಂಡ್ ಮೂಲಕ ₹50 ಕೋಟಿ ನೀಡಿದ್ದಾರೆ. ಇದೊಂದು ಸುಳ್ಳು ಪ್ರಕರಣ. ಕ್ಲೀನ್‌ಚಿಟ್ ಪಡೆದು ಇಲ್ಲಿಂದ ಹೊರಬರುತ್ತೇವೆ. ಜೈ ತೆಲಂಗಾಣ' ಎಂದು ಹೇಳಿದರು.

ಕೋರ್ಟ್ ವಿಚಾರಣೆ ಬಳಿಕ ಅವರಿಗೆ ನ್ಯಾಯಾಲಯದ ಒಳಗಡೆ ಕುಟುಂಬ ಸದಸ್ಯರನ್ನು ಭೇಟಿಯಾಗಲು ಅವಕಾಶ ನೀಡಲಾಗಿತ್ತು.

'ಚೀನಾ ಹೇಳಿಕೆ: ಮೋದಿ ಖಂಡಿಸಲಿ'

ನವದೆಹಲಿ (ಪಿಟಿಐ): 'ಅರುಣಾಚಲ ಪ್ರದೇಶ ಭಾರತದ ಅವಿಭಾಜ್ಯ ಅಂಗ. ಅದನ್ನು ಪ್ರತ್ಯೇಕಿಸಲು ಮತ್ತು ಬೇರ್ಪಡಿಸಲು ಆಗದು' ಎಂದು ಕಾಂಗ್ರೆಸ್ ಪಕ್ಷ ಮಂಗಳವಾರ ಪ್ರತಿಪಾದಿಸಿದೆ. ಈ ಪ್ರದೇಶದ ಕುರಿತು ಚೀನಾ ಮಾಡುತ್ತಿರುವ ಹಕ್ಕಿನ ಪ್ರತಿಪಾದನೆಯನ್ನು ನರೇಂದ್ರ ಮೋದಿ ಸರ್ಕಾರವು ಬಲವಾಗಿ ಖಂಡಿಸಬೇಕು ಎಂದು ಅದು ಆಗ್ರಹಿಸಿದೆ.

ಮಲ್ಲಿಕಾರ್ಜುನ ಖರ್ಗೆ

ಬೀಜಿಂಗ್‌ನ ಹೇಳಿಕೆಯನ್ನು ಭಾರತವು 'ಅಸಂಬದ್ಧ' ಮತ್ತು 'ಹಾಸ್ಯಾಸ್ಪದ' ಎಂದು ತಳ್ಳಿಹಾಕಿದ ನಂತರವೂ, ಅರುಣಾಚಲ ಪ್ರದೇಶ 'ಯಾವಾಗಲೂ' ತನ್ನ ಭೂ ಪ್ರದೇಶ ಎಂದು ಚೀನಾ ಸೋಮವಾರ ಮತ್ತೆ ಪ್ರತಿಪಾದಿಸಿದೆ.

ಈ ಕುರಿತು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ಅರುಣಾಚಲ ಪ್ರದೇಶವು ಭಾರತದ ಬೇರ್ಪಡಿಸಲಾಗದ, ಪ್ರತ್ಯೇಕಿಸಲಾಗದ ಭಾಗ' ಎಂದು ಹೇಳಿದ್ದಾರೆ.

ಚೀನಾದ ಅತ್ಯುನ್ನತ ಕಚೇರಿಯು ತಿಂಗಳಲ್ಲಿ ನಾಲ್ಕನೇ ಬಾರಿಗೆ ಹಾಸ್ಯಸ್ಪದ ರೀತಿಯಲ್ಲಿ ಹೇಳಿಕೆಗಳನ್ನು ನೀಡಿದೆ. ಅರುಣಾಚಲ ಪ್ರದೇಶ ಮೇಲೆ ತನ್ನ ಹಕ್ಕು ಪ್ರತಿಪಾದಿಸುವ ಚೀನಾದ ಯಾವುದೇ ನಡೆಯನ್ನು ಕಾಂಗ್ರೆಸ್ ಖಂಡಿಸುತ್ತದೆ ಎಂದು ಅವರು ತಿಳಿಸಿದ್ದಾರೆ.

ಬೇರೆ ದೇಶಗಳಿಗೆ ಸೇರಿದ ಸ್ಥಳಗಳನ್ನು ಮರುನಾಮಕರಣ ಮಾಡುವ ಮತ್ತು ಭೂ ಪ್ರದೇಶಗಳ ನಕ್ಷೆಗಳನ್ನು ಮರುರೂಪಿಸುವ ಮೂಲಕ ಅಸಂಬಂಧ ಹಕ್ಕುಗಳನ್ನು ಪ್ರತಿಪಾದಿಸುವ ಚೀನಾದ ನಡೆಗಳು ಎಲ್ಲರಿಗೂ ತಿಳಿದಿವೆ ಎಂದು ಖರ್ಗೆ ಹೇಳಿದ್ದಾರೆ.

'ಪಕ್ಷಾತೀತವಾಗಿ ನಾವು ಭಾರತದ ಸಾರ್ವಭೌಮತೆ, ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸಲು ಒಟ್ಟಿಗೆ ಇದ್ದೇವೆ' ಎಂದು ಅವರು ಹೇಳಿದ್ದಾರೆ. ಆದಾಗ್ಯೂ, 2020ರ ಜೂನ್ 19ರಂದು ಗಲ್ವಾನ್‌ನಲ್ಲಿ 20 ಭಾರತೀಯ ವೀರ ಸೇನಾನಿಗಳು ಪ್ರಾಣ ತ್ಯಾಗ ಮಾಡಿದಾಗ ಪ್ರಧಾನಿ ಅವರು ಚೀನಾಗೆ ಕ್ಲೀನ್ ಚೀಟ್ ನೀಡಿದ ಪರಿಣಾಮ, ಚೀನಾ ಹೀಗೆ ವರ್ತಿಸುತ್ತಿದೆ ಎಂದು ಆರೋಪಿಸಿದ್ದಾರೆ.

ವಿಕಿಲೀಕ್ಸ್ ಪ್ರಕರಣ: ಅಸಾಂಜೆ ಹಸ್ತಾಂತರ ಸದ್ಯಕ್ಕಿಲ್ಲ

ಲಂಡನ್ (ಎಪಿ): ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸಾಂಜೆ ಅವರನ್ನು ಬೇಹುಗಾರಿಕೆ ಆರೋಪದ ಮೇಲೆ ತಕ್ಷಣವೇ ಅಮೆರಿಕಕ್ಕೆ ಹಸ್ತಾಂತರಿಸಲು ಆಗುವುದಿಲ್ಲ ಎಂದು ಬ್ರಿಟನ್ ನ್ಯಾಯಾಲಯವು ಮಂಗಳವಾರ ತೀರ್ಪು ನೀಡಿದೆ.

ಈ ಪ್ರಕರಣದಲ್ಲಿ ಅಸಾಂಜೆ ಅವರಿಗೆ ಸಂದ ಭಾಗಶಃ ವಿಜಯ ಇದಾಗಿದೆ ಎಂಬ ಅಭಿಪ್ರಾಯವು ವ್ಯಕ್ತವಾಗಿದೆ.

ಉದ್ಯೋಗ ವಾಣಿ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಡಳಿತಾಧಿಕಾರಿಗಳ ಕಚೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560 065.

ಸಂಖ್ಯೆ: ಆಕ/ಆರ್‌ಟಿ/11/64/ಅಧಿಕಾರಿಗಳ ಹುದ್ದೆಗಳು/ದಿ. ವಿ./2023–24 ದಿನಾಂಕ: 25–03–2024

ಪ್ರಕಟಣೆ

ವಿಷಯ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕ ಹುದ್ದೆಗಳ ನೇಮಕಾತಿ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ನೇರ ನೇಮಕಾತಿ ಅಧಿಸೂಚನೆ **No. AO/RT/11/64/Current Posts/Teach./date Ext./2023-24** ದಿನಾಂಕ: 24–02–2024ರಲ್ಲಿ ಅಧಿಸೂಚಿಸಿರುವ ಬೋಧಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 26–03–2024ಕ್ಕೆ ನಿಗದಿಪಡಿಸಿರುವುದನ್ನು, ಪ್ರಸ್ತುತ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು **04–04–2024** ವರೆಗೆ ವಿಸ್ತರಿಸಲಾಗಿದೆ. ಇನ್ನುಳಿದಂತೆ ದಿನಾಂಕ: 24–02–2024ರ ಅಧಿಸೂಚನೆಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಅಧಿಸೂಚನೆಯಲ್ಲಿನ ಇತರೆ ಅಂಶಗಳು ಯಥಾವತ್ತಾಗಿ ಅನ್ವಯವಾಗುತ್ತದೆ.

ಆದೇಶದ ಮೇರೆಗೆ
ಆಡಳಿತಾಧಿಕಾರಿಗಳು

ಕನಿಷ್ಠ 7 ಮಂದಿ ನಾಪತ್ತೆ: ಅಗ್ನಿಶಾಮಕ ದಳದ ಸಿಬ್ಬಂದಿಯಿಂದ ಶೋಧ

ಹಡಗು ಡಿಕ್ಕಿ: ಕುಸಿದ ಸೇತುವೆ

ಬಾಲ್ಟಿಮೋರ್ (ಎಪಿ): ಸರಕು ಸಾಗಣೆ ಹಡಗೊಂದು ಅಪ್ಪಳಿಸಿದ ಕಾರಣ ಅಮೆರಿಕದ ಬಾಲ್ಟಿಮೋರ್‌ನ ಪ್ರಮುಖ ಸೇತುವೆಯೊಂದು ಕುಸಿದಿದೆ. ಮಂಗಳವಾರ ನಸುಕಿನಲ್ಲಿ ನಡೆದ ಈ ಅವಘಡದಿಂದಾಗಿ ಹಲವು ವಾಹನಗಳು ನದಿಗೆ ಉರುಳಿವೆ. ಕನಿಷ್ಠ ಏಳು ಮಂದಿ ನೀರಿನಲ್ಲಿ ಸಿಲುಕಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಾಲ್ಟಿಮೋರ್‌ನಿಂದ ಶ್ರೀಲಂಕಾಕ್ಕೆ ಹೊರಟಿದ್ದ, ಸಿಂಗಪುರ ಧ್ವಜ ಹೊತ್ತಿದ್ದ 'ಡಾಲಿ' ಎಂಬ ಹೆಸರಿನ ಹಡಗು 'ಫ್ರಾನ್ಸಿಸ್ ಸ್ಕಾಟ್ ಕೀ' ಸೇತುವೆಯ ಒಂದು ಆಧಾರಸ್ತಂಭಕ್ಕೆ ಡಿಕ್ಕಿ ಹೊಡೆಯಿತು. ಕ್ಷಣಮಾತ್ರದಲ್ಲಿ ಸೇತುವೆ ಕುಸಿದುಬಿದ್ದಿತು. ಆ ಬಳಿಕ ಹಡಗಿಗೆ ಬೆಂಕಿ ಹೊತ್ತಿಕೊಂಡಿತು. ಈ ಘಟನೆಗೆ ಸಂಬಂಧಿಸಿದ ವಿಡಿಯೊವೊಂದನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಲಾಗಿದೆ.

'ಸರಕು ಸಾಗಣೆ ಹಡಗು ಸೇತುವೆಗೆ ಅಪ್ಪಳಿಸಿದ ಸುದ್ದಿ ನಸುಕಿನಲ್ಲಿ ವರದಿಯಾಯಿತು. ಆ ವೇಳೆ ಹಲವಾರು ವಾಹನಗಳು ಸೇತುವೆ ಮೇಲಿದ್ದವು. 50 ಅಡಿಯಷ್ಟು ಆಳವಿರುವ ನೀರಿನಲ್ಲಿ ಕಾರುಗಳು ಬಿದ್ದಿರುವುದನ್ನು ಸೋನಾರ್ ದೃಢಪಡಿಸಿದೆ. ಅವಘಡ ನಡೆದಾಗ ದೊಡ್ಡ ಟ್ರಕ್ ಸೇತುವೆ ಮೇಲೆ ಸಾಗುತ್ತಿತ್ತು. ನದಿಯಿಂದ ಸದ್ಯಕ್ಕೆ ಇಬ್ಬರನ್ನು ಹೊರತೆಗೆದಿದ್ದೇವೆ. ಒಬ್ಬರ ಸ್ಥಿತಿ ಗಂಭೀರವಾಗಿದೆ' ಎಂದು ಬಾಲ್ಟಿಮೋರ್ ಅಗ್ನಿಶಾಮಕ ವಿಭಾಗದ ಅಧಿಕಾರಿ ತಿಳಿಸಿದ್ದಾರೆ.

'ಕಾಣೆಯಾಗಿರುವ ಇತರರಿಗಾಗಿ ಶೋಧ ನಡೆಸಲಾಗುತ್ತಿದೆ. ಈ ರೀತಿಯ ದುರಂತಗಳು ಸಂಭವಿಸಿದಾಗ ಹೆಚ್ಚಿನ ಸಂಖ್ಯೆಯಲ್ಲಿ ಸಾವು–ನೋವು ಉಂಟಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಎಷ್ಟು ಜನರು ನೀರಿನಲ್ಲಿ ಮುಳುಗಿದ್ದಾರೆ ಎಂದು ಈಗಲೇ ಖಚಿತವಾಗಿ ಹೇಳುವುದು ಕಷ್ಟ. ಜನರನ್ನು ರಕ್ಷಿಸುವುದು ಮತ್ತು ಅವರು ಚೇತರಿಸಿಕೊಳ್ಳುವಂತೆ ಮಾಡುವುದರ ಕಡೆಗೆ ಈಗ ನಾವು ದೃಷ್ಟಿ ನೆಟ್ಟಿದ್ದೇವೆ. ಇದೊಂದು ಘೋರ ವಿಪತ್ತು' ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ.

'ಹಡಗು ಸೇತುವೆಗೆ ಡಿಕ್ಕಿ ಹೊಡೆಯುವ ಕೆಲವು ಕ್ಷಣಗಳ ಮೊದಲು ಅಪಾಯ ಸಾಧ್ಯತೆಯ ತುರ್ತು ಸಂದೇಶವನ್ನು ನಾವಿಕರು ಕಳುಹಿಸಿದ್ದರು. ಹೀಗಾಗಿ ಸೇತುವೆ ಮೇಲಿನ ವಾಹನ ಸಂಚಾರವನ್ನು ಕಡಿಮೆ ಮಾಡಲು ಸಾಧ್ಯವಾಯಿತು. ಹಡಗಿನಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡು ಸಮಸ್ಯೆ ಉದ್ಭವಿಸಿತ್ತು' ಎಂದು ಬಾಲ್ಟಿಮೋರ್ ಮೇಯರ್ ಬ್ರೆಂಡನ್ ಸ್ಕಾಟ್ ಮಾಹಿತಿ ನೀಡಿದ್ದಾರೆ.

ದುರಂತ ಸಂಭವಿಸಿದ ವೇಳೆ ನದಿಯಲ್ಲಿಯ ಉಷ್ಣಾಂಶವು 8 ಡಿಗ್ರಿ ಸೆಲ್ಸಿಯಸ್ ಇತ್ತು ಎನ್ನಲಾಗಿದೆ.

ಈ ಸೇತುವೆ ಕಡೆಗೆ ಸಾಗುವ ಎಲ್ಲಾ ಮಾರ್ಗಗಳಲ್ಲೂ ಸಂಚಾರವನ್ನು ಬೇರೆಡೆಗೆ ತಿರುಗಿಸಲಾಗಿದೆ ಎಂದು ಅಲ್ಲಿಯ ಸಂಚಾರ ವಿಭಾಗವು 'ಎಕ್ಸ್'ನಲ್ಲಿ ಬೆಳಿಗ್ಗೆಯೇ ಪೋಸ್ಟ್ ಮಾಡಿತ್ತು.

ಸರಕು ಸಾಗಣೆ ಹಡಗು ಡಿಕ್ಕಿ ಹೊಡೆದು ಅಮೆರಿಕದ ಬಾಲ್ಟಿಮೋರ್‌ನ ಫ್ರಾನ್ಸಿಸ್ ಸ್ಕಾಟ್ ಕೀ ಸೇತುವೆ ಕುಸಿದಿದೆ —ಎಎಫ್‌ಪಿ ಚಿತ್ರ

ಹಡಗಿನ ಸಿಬ್ಬಂದಿ ಭಾರತೀಯರು

ನ್ಯೂಯಾರ್ಕ್ (ಪಿಟಿಐ): ಸೇತುವೆಗೆ ಡಿಕ್ಕಿ ಹೊಡೆದ ಸರಕು ಸಾಗಣೆ ಹಡಗಿನಲ್ಲಿದ್ದ 22 ಸಿಬ್ಬಂದಿ ಭಾರತೀಯರು ಎಂದು ಸಿನರ್ಜಿ ಮರೀನ್ ಗ್ರೂಪ್ ತಿಳಿಸಿದೆ.

ಈ ಹಡಗು ಗ್ರೇಸ್ ಓಷನ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಸೇರಿದ್ದಾಗಿದೆ. 'ಡಾಲಿ' ಹಡಗಿನ ಸಾಮರ್ಥ್ಯ 10,000 ಟಿಇಯು (ಒಂದು ಟಿಇಯು ಎಂದರೆ 20 ಅಡಿ ಉದ್ದ, 8 ಅಡಿ ಅಗಲ ಹಾಗೂ 8 ಅಡಿ ಎತ್ತರದ ಕಂಟೇನರ್‌ನಷ್ಟು ಸ್ಥಳಾವಕಾಶ) ಇದ್ದು, 4,679 ಟಿಇಯು ಸ್ಥಳಾವಕಾಶದಲ್ಲಿ ಸರಕುಗಳನ್ನು ತುಂಬಲಾಗಿತ್ತು ಎಂದೂ ಸಿನರ್ಜಿ ಮರೀನ್ ಗ್ರೂಪ್ ಮಾಹಿತಿ ನೀಡಿದೆ.

ಅವಘಡಕ್ಕೆ ಕಾರಣವೇನು ಎನ್ನುವುದು ಇನ್ನೂ ತಿಳಿದಿಲ್ಲ. ಪೈಲಟ್‌ಗಳಿಬ್ಬರು ಸೇರಿದಂತೆ 22 ಸಿಬ್ಬಂದಿಯಲ್ಲಿ ಯಾರೂ ಗಾಯಗೊಂಡಿಲ್ಲ ಎಂದೂ ಹೇಳಿದೆ.

ಜರ್ಮನಿ ವರದಿ (ರಾಯಿಟರ್ಸ್): 2016ರ ಜುಲೈ 11ರಂದು ಇದೇ ಸರಕು ಸಾಗಣೆ ಹಡಗು ಬೆಲ್ಜಿಯಂನ ಆ್ಯಂಟ್‌ವರ್ಪ್ ಬಂದರಿನಲ್ಲಿಯೂ ಅಪಘಾತಕ್ಕೆ ಈಡಾಗಿತ್ತು. ಆಗ ಬಂದರಿನ ಒಂದು ಭಾಗಕ್ಕೆ ಹಡಗು ಅಪ್ಪಳಿಸಿತ್ತು. ಕೆಲವು ದಿನಗಳ ಕಾಲ ಅದು ಅಲ್ಲಿಯೇ ನಿಂತಿದ್ದು, ರಿಪೇರಿ ಕೆಲಸಗಳಾದ ಮೇಲೆ ಮತ್ತೆ ಸಂಚಾರಕ್ಕೆ ಮುಕ್ತವಾಗಿತ್ತು ಎಂದು ಬಂದರಿನ ವಕ್ತಾರರೊಬ್ಬರು ತಿಳಿಸಿದ್ದಾರೆ.

ಭಾರತದಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ಜಾರಿ

ಅಮೆರಿಕ ಆಯೋಗದ ಆಕ್ಷೇಪ

ನ್ಯೂಯಾರ್ಕ್ (ಪಿಟಿಐ): ಭಾರತ ಸರ್ಕಾರವು ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಜಾರಿಗೆ ತಂದಿರುವುದಕ್ಕೆ ಪ್ರತಿಕ್ರಿಯಿಸಿರುವ ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗ (ಯುಎಸ್‌ಸಿಐಆರ್‌ಎಫ್), ಧರ್ಮದ ಹೆಸರಿನಲ್ಲಿ ಯಾರಿಗೂ ಪೌರತ್ವ ನಿರಾಕರಿಸುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟಿದೆ.

'ಪಾಕಿಸ್ತಾನ, ಬಾಂಗ್ಲಾದೇಶ ಹಾಗೂ ಅಫ್ಗಾನಿಸ್ತಾನದಿಂದ ವಲಸೆ ಬಂದಿರುವ, ಸ್ಥಳೀಯವಾಗಿ ವಾಸಿಸುತ್ತಿರುವ ಕುರಿತು ದಾಖಲೆಗಳು ಇಲ್ಲದ ಮುಸ್ಲಿಮೇತರರಿಗೆ ಪೌರತ್ವ ನೀಡಬಹುದಾದ ಸಿಎಎ ಜಾರಿಗೆ ಭಾರತ ಸರ್ಕಾರವು ಈ ತಿಂಗಳ ಪ್ರಾರಂಭದಲ್ಲಿ ಅಧಿಸೂಚನೆ ಪ್ರಕಟಿಸಿತು. ನೆರೆಯ ರಾಷ್ಟ್ರಗಳಿಂದ ವಲಸೆ ಬಂದವರು ನಿರ್ದಿಷ್ಟ ದೇಶದಲ್ಲಿ ಆಶ್ರಯ ಕೇಳಿದರೆ, ಧರ್ಮವನ್ನು ಆಧಾರವಾಗಿ ಇಟ್ಟುಕೊಂಡು ಪೌರತ್ವ ನೀಡುವ ಪರಿಪಾಟಕ್ಕೆ ಸಿಎಎ ಕಾರಣವಾಗುತ್ತದೆ. ಇದು ಸಮಸ್ಯಾತ್ಮಕವಾಗಿದೆ' ಎಂದು ಯುಎಸ್‌ಸಿಐಆರ್‌ಎಫ್ ಆಯುಕ್ತ ಸ್ಟೀಫನ್ ಶ್ನೆಕ್ ಸೋಮವಾರ ಪ್ರಕಟಣೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

ಹಿಂದೂ, ಪಾರ್ಸಿ, ಸಿಖ್, ಬೌದ್ಧ, ಜೈನ ಹಾಗೂ ಕ್ರಿಶ್ಚಿಯನ್ನರಿಗೆ ಬೇಗ ಪೌರತ್ವ ದೊರಕುವಂತೆ ಸಿಎಎ ಮಾಡುತ್ತದೆ. ಆದರೆ, ಹೊಸ ಕಾನೂನು ಈ ಚುರುಕಾದ ಪ್ರಕ್ರಿಯೆಯಿಂದ ಮುಸ್ಲಿಮರನ್ನು ಹೊರಗಿಡುತ್ತದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

'ಸಿಎಎ ಪೌರತ್ವ ನೀಡುವ ಕಾನೂನಾಗಿದೆ; ಕಿತ್ತುಕೊಳ್ಳುವ ಕಾನೂನಲ್ಲ. ಮನುಷ್ಯನ ಘನತೆಯನ್ನು ಎತ್ತಿಹಿಡಿದು, ನೆಲೆ ಇಲ್ಲದವರನ್ನು ನಿರ್ದಿಷ್ಟ ದೇಶದ ಪ್ರಜೆಗಳನ್ನಾಗಿಸುವ ಮಾನವ ಹಕ್ಕು ಗಳ ಕಾನೂನು ಇದು' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸಿಎಎ ಅನ್ನು ಸಮರ್ಥಿಸಿಕೊಂಡಿದ್ದರು.

'ಹಿಂಸೆಗೆ ಒಳಗಾದ ಧಾರ್ಮಿಕ ಅಲ್ಪಸಂಖ್ಯಾತರಿಗೆ ನಿಜಕ್ಕೂ ಅನುಕೂಲ ಮಾಡಿಕೊಡಬೇಕು ಎಂದಿದ್ದರೆ, ಬರ್ಮಾದ ರೋಹಿಂಗ್ಯಾ ಮುಸ್ಲಿಮರು, ಪಾಕಿಸ್ತಾನದ ಅಹಮದೀಯ ಮುಸ್ಲಿಮರು, ಅಫ್ಗಾನಿಸ್ತಾನದ ಹಜಾರಾ ಶಿಯಾಗಳು– ಇವರಿಗೂ ಸಿಎಎ ಮೂಲಕ ಪೌರತ್ವ ದೊರಕುವಂತೆ ಮಾಡಬೇಕಿತ್ತು' ಎಂದೂ ಸ್ಟೀಫನ್ ಪ್ರತಿಪಾದಿಸಿದ್ದಾರೆ.

ಹೊಸ ಕಾನೂನಿನ ಪ್ರಕಾರ ಮುಸ್ಲಿಮರೂ ಅರ್ಜಿ ಸಲ್ಲಿಸಬಹುದು ಎಂದು ಭಾರತ ಸ್ಪಷ್ಟಪಡಿಸಿದೆ. ಹೀಗಿದ್ದೂ ಅಧಿಸೂಚನೆಯ ಅಂಶಗಳನ್ನು ಆಧಾರವಾಗಿ ಇಟ್ಟುಕೊಂಡು ಸಿಎಎ ಧರ್ಮಾಧಾರಿತವಾದದ್ದಾಗಿದೆ ಎಂದೇ ಯುಎಸ್‌ಸಿಐಆರ್‌ಎಫ್ ಹೇಳುತ್ತಿದೆ.

ಅಮೆರಿಕ ನಿಲುವಿಗೆ ಖಂಡನೆ: ಪಿಎಚ್.ಡಿ ಪದವಿ ವಾಪಸ್

ನವದೆಹಲಿ (ಪಿಟಿಐ): ಇಸ್ರೇಲ್–ಪ್ಯಾಲೆಸ್ಟೀನ್ ಬಿಕ್ಕಟ್ಟು ಕುರಿತಂತೆ ಅಮೆರಿಕ ತಳೆದಿರುವ ನಿಲುವು ಖಂಡಿಸಿ, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಪಡೆದಿದ್ದ ಪಿಎಚ್.ಡಿ ಪದವಿಯನ್ನು ಸಾಮಾಜಿಕ ಹೋರಾಟಗಾರ ಸಂದೀಪ್ ಪಾಂಡೆ ಹಿಂದಿರುಗಿಸಿದ್ದಾರೆ.

ಗಾಜಾ ಮೇಲಿನ ಇಸ್ರೇಲ್ ದಾಳಿಯಲ್ಲಿ ಅಮೆರಿಕ ಪಾತ್ರವನ್ನು ಖಂಡಿಸಿ, ತಮಗೆ 2002ರಲ್ಲಿ ನೀಡಲಾಗಿದ್ದ ಪ್ರತಿಷ್ಠಿತ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿಯನ್ನು ಹಿಂದಿರುಗಿಸಲಾಗುವುದು ಎಂದು ಪಾಂಡೆ ಜನವರಿ ತಿಂಗಳಲ್ಲಿ ಪ್ರಕಟಿಸಿದ್ದರು.

ಸೈರಾಕುಸ್ ವಿಶ್ವವಿದ್ಯಾಲಯದಿಂದ ಪಡೆಯಲಾಗಿದ್ದ ಎಂ.ಎಸ್ಸಿ ದ್ವಿ ಪದವಿ ಪ್ರಮಾಣಪತ್ರವನ್ನು ಅವರು ಇದೇ ವಿಷಯಕ್ಕೆ ಸಂಬಂಧಿಸಿದಂತೆ ವಾಪಸು ಮಾಡಿದ್ದರು.

ಶಿವಂ ದುಬೆ ಮಿಂಚಿನ ಅರ್ಧಶತಕ: ಗುಜರಾತ್ ಟೈಟನ್ಸ್ ತಂಡಕ್ಕೆ ಸೋಲು

ಚೆನ್ನೈ ತಂಡಕ್ಕೆ ಎರಡನೇ ಗೆಲುವು

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಶಿವಂ ದುಬೆ – ಎಎಫ್‌ಪಿ ಚಿತ್ರ

ಚೆನ್ನೈ (ಪಿಟಿಐ): ಆಟದ ಎಲ್ಲ ವಿಭಾಗಗಳಲ್ಲೂ ಪ್ರಾಬಲ್ಯ ಸಾಧಿಸಿದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ 63 ರನ್‌ಗಳಿಂದ ಗುಜರಾತ್ ಟೈಟನ್ಸ್ ತಂಡವನ್ನು ಸೋಲಿಸಿತು.

ಚೆಪಾಕ್ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್‌ಗೆ ಇಳಿದ ಚೆನ್ನೈ ತಂಡವು ಆರಂಭಿಕ ಆಟಗಾರ ರಚಿನ್ ರವೀಂದ್ರ (46;20ಎ, 4x6, 6x3) ಮತ್ತು ಅಂತಿಮ ಹಂತದಲ್ಲಿ ಶಿವಂ ದುಬೆ (51;23ಎ, 4x2, 6x5) ಅವರ ಮಿಂಚಿನ ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗೆ 206 ರನ್ ಕಲೆ ಹಾಕಿತು.

ಈ ದೊಡ್ಡ ಮೊತ್ತಕ್ಕೆ ಉತ್ತರವಾಗಿ ಗುಜರಾತ್ ಟೈಟನ್ಸ್ ತಂಡ ಆರಂಭದಲ್ಲೇ ನಾಯಕ ಶುಭಮನ್ ಗಿಲ್ (8 ರನ್) ಅವರನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ನಂತರ ಯಾವುದೇ ಹಂತದಲ್ಲಿ ಚೇತರಿಸಿಕೊಳ್ಳದೆ ನಿಗದಿತ ಓವರ್‌ಗಳಲ್ಲಿ ಎಂಟು ವಿಕೆಟ್‌ಗೆ 143 ರನ್ ಗಳಿಸಲಷ್ಟೇ ಶಕ್ತವಾಯಿತು.

ಹಿಂದಿನ ಪಂದ್ಯದಲ್ಲಿ ಮಿಂಚಿದ್ದ ಸಾಯಿ ಸುದರ್ಶನ್ (37; 31ಎ) ಈ ಪಂದ್ಯದಲ್ಲಿ ಟೈಟನ್ಸ್ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಅವರಿಗೆ ಉಳಿದ ಆಟಗಾರರಿಂದ ಬೆಂಬಲ ಸಿಗಲಿಲ್ಲ. ಚೆನ್ನೈ ಪರ ದೀಪಕ್ ಚಾಹರ್, ಮುಸ್ತಫಿಜುರ್ ರೆಹಮಾನ್ ಮತ್ತು ತುಷಾರ್ ದೇಶಪಾಂಡೆ ತಲಾ ಎರಡು ವಿಕೆಟ್ ಪಡೆದರು.

ಇದಕ್ಕೂ ಮೊದಲು ಚೆನ್ನೈ ತಂಡಕ್ಕೆ ಆರಂಭಿಕ ಆಟಗಾರರಾದ ರಚಿನ್ ಮತ್ತು ನಾಯಕ ಋತುರಾಜ್ ಗಾಯಕವಾಡ (46;36ಎ, 4x5, 6x1) ಉತ್ತಮ ಆರಂಭ ಒದಗಿಸಿದರು. ಪವರ್ ಪ್ಲೇ ಅವಧಿಯನ್ನು ಸದುಪಯೋಗ ಪಡೆದುಕೊಂಡ ಈ ಜೋಡಿ ಮೊದಲ ವಿಕೆಟ್‌ಗೆ 62 ರನ್ ಸೇರಿಸಿತು. ರವೀಂದ್ರ ಆಕರ್ಷಕ ಹೊಡೆತಗಳನ್ನು ಪ್ರದರ್ಶಿಸಿ ಸಿಎಸ್‌ಕೆ ಅಭಿಮಾನಿಗಳನ್ನು ರಂಜಿಸಿದರು. ಕೊನೆಗೂ ಸ್ಪಿನ್ನರ್ ರಶೀದ್ ಖಾನ್ ಈ ಜೊತೆಯಾಟ ಮುರಿದರು. ಹೊಡೆತಕ್ಕೆ ಮುನ್ನುಗ್ಗಿ ನಿಯಂತ್ರಣ ಕಳೆದುಕೊಂಡಾಗ ವೃದ್ಧಿಮಾನ್ ಸಹ ಸ್ಟಂಪಿಂಗ್‌ನಲ್ಲಿ ತಪ್ಪು ಮಾಡಲಿಲ್ಲ. ಅಜಿಂಕ್ಯ ರಹಾನೆ ಕೂಡ ಸಾಯಿ ಕಿಶೋರ್ ಬೌಲಿಂಗ್‌ನಲ್ಲಿ ಮುನ್ನುಗ್ಗಿ ದೊಡ್ಡ ಹೊಡೆತಕ್ಕೆ ಹೋಗಿ ಸ್ಟಂಪಿಂಗ್‌ಗೆ ಒಳಗಾದರು.

₹7.60 ಕೋಟಿಗೆ ಚೆನ್ನೈ ಪಾಲಾಗಿದ್ದ ಸಮೀರ್ ರಿಜ್ವಿ ಪದಾರ್ಪಣೆ ಮಾಡಿ 14 ರನ್ ಗಳಿಸಿದರು. ರಶೀದ್ ಖಾನ್ ಬೌಲಿಂಗ್‌ನಲ್ಲಿ ಎರಡು ಸಿಕ್ಸರ್‌ಗಳನ್ನು ಎತ್ತಿ ಗಮನಸೆಳೆದರು.

ರವೀಂದ್ರ ಅವರ ವೇಗಕ್ಕೆ ಸಾಟಿಯಾಗದಿದ್ದರೂ ಗಾಯಕವಾಡ ಅವರ ಆಟ ಗುಣಮಟ್ಟದಿಂದ ಕೂಡಿತ್ತು. ಜಾನ್ಸನ್ ಎಸೆತವನ್ನು ಪುಲ್ ಮಾಡಲು ಹೋಗಿ ಅವರು ವಿಕೆಟ್ ಕೀಪರ್‌ಗೆ ಕ್ಯಾಚಿತ್ತರು. ನಂತರ ದುಬೆ ಅವರದೇ ಆಟವಾಗಿತ್ತು. ಸಾಯಿಕಿಶೋರ್ ಬೌಲಿಂಗ್‌ನಲ್ಲಿ ಎರಡು ಭರ್ಜರಿ ಸಿಕ್ಸರ್ ಬಾರಿಸಿದರೆ, ಸ್ಪೆನ್ಸರ್ ಜಾನ್ಸನ್ ಬೌಲಿಂಗ್‌ನಲ್ಲಿ ಮತ್ತೊಂದು ಸಿಕ್ಸರ್ ಎತ್ತಿದರು. ಚೆನ್ನೈ ತಂಡಕ್ಕೆ ಇದು ತವರಿನಲ್ಲಿ ಸತತ ಎರಡನೇ ಗೆಲುವು.ಈ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಏರಿತು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್: 6ಕ್ಕೆ206 (20 ಓವರುಗಳಲ್ಲಿ)

ಋತುರಾಜ್ ಸಿ ಸಹಾ ಬಿ ಜಾನ್ಸನ್ 46 (36ಎ, 4x5, 6x1)
ರಚಿನ್ ಸ್ಟಂ. ಸಹಾ ಬಿ ರಶೀದ್ 46 (20, 4x6, 6x3)
ರಹಾನೆ ಸ್ಟಂ. ಸಹಾ ಬಿ ಕಿಶೋರ್ 12 (12)
ಶಿವಂ ದುಬೆ ಸಿ ಶಂಕರ್ ಬಿ ರಶೀದ್ 51 (23ಎ, 4x2, 6x5)
ಮಿಚೆಲ್ ಔಟಾಗದೇ 24 (20ಎ, 4x2)
ರಿಜ್ವಿ ಸಿ ಮಿಲ್ಲರ್ ಬಿ ಶರ್ಮಾ 14 (6ಎ, 6x2)
ಜಡೇಜ ರನೌಟ್ (ಶಂಕರ್/ಸಹಾ) 7 (3ಎ, 4x1
ಇತರೆ: 6 (ಲೆಗ್‌ಬೈ 1, ವೈಡ್ 5)
ವಿಕೆಟ್ ಪತನ: 1–62 (ರಚಿನ್ ರವೀಂದ್ರ, 5.2), 2–104 (ಅಜಿಂಕ್ಯ ರಹಾನೆ, 10.1), 3–127 (ಋತುರಾಜ್ ಗಾಯಕವಾಡ, 12.3), 4–184 (ಶಿವಂ ದುಬೆ, 18.2), 5–199 (ಸಮೀರ್ ರಿಜ್ವಿ, 19.3), 6–206 (ರವೀಂದ್ರ ಜಡೇಜ, 19.6).
ಬೌಲಿಂಗ್: ಅಜ್ಮತ್‌ಉಲ್ಲಾ ಒಮರ್‌ಝೈ 3–0–30–0; ಉಮೇಶ್ ಯಾದವ್ 2–0–27–0; ರಶೀದ್ ಖಾನ್ 4–0–49–2; ಸಾಯಿ ಕಿಶೋರ್ 3–0–28–1; ಸ್ಪೆನ್ಸರ್ ಜಾನ್ಸನ್ 4–0–35–1; ಮೋಹಿತ್ ಶರ್ಮಾ 4–0–36–1.

ಗುಜರಾತ್ ಟೈಟನ್: 8ಕ್ಕೆ143 (20 ಓವರ್‌ಗಳಲ್ಲಿ)

ವೃದ್ಧಿಮಾನ್ ಸಿ ದೇಶಪಾಂಡೆ ಬಿ ಚಾಹರ್ 21 (17ಎ, 4x4)
ಗಿಲ್ ಎಲ್‌ಬಿಡಬ್ಲ್ಯು ಬಿ ಚಾಹರ್ 8 (5ಎ, 6x1)
ಸುದರ್ಶನ್ ಸಿ ಸಮೀರ್ ಬಿ ಪಥಿರಾಣ 37 (31ಎ, 4x3)
ವಿಜಯ್ ಸಿ ಧೋನಿ ಬಿ ಮಿಚೆಲ್ 12 (12ಎ, 6x1)
ಮಿಲ್ಲರ್ ಸಿ ರಹಾನೆ ಬಿ ದೇಶಪಾಂಡೆ 21 (16ಎ, 4x3)
ಅಜ್ಮತ್‌ಉಲ್ಲಾ ಸಿ ರವೀಂದ್ರ ಬಿ ದೇಶಪಾಂಡೆ 11 (10ಎ, 4x1)
ರಾಹುಲ್ ಸಿ ರವೀಂದ್ರ ಬಿ ಮುಸ್ತಫಿಜುರ್ 6 (11ಎ, 4X1)
ರಶೀದ್ ಸಿ ರವೀಂದ್ರ ಬಿ ಮುಸ್ತಫಿಜುರ್ 1 (2ಎ)
ಉಮೇಶ್ ಔಟಾಗದೇ 10 (11ಎ, 6X1)
ಸ್ಪೆನ್ಸರ್ ಔಟಾಗದೇ 5 (5ಎ, 4X1)
ಇತರೆ: 11 (ಲೆಗ್‌ಬೈ 2, ವೈಡ್ 9)
ವಿಕೆಟ್ ಪತನ: 1–28 (ಶುಭಮನ್ ಗಿಲ್, 2.5), 2–34 (ವೃದ್ಧಿಮಾನ್ ಸಹ, 4.3), 3–55 (ವಿಜಯ ಶಂಕರ್, 7.3), 4–96 (ಡೇವಿಡ್ ಮಿಲ್ಲರ್, 11.5), 5-114 (ಸಾಯಿ ಸುದರ್ಶನ್; 14.5), 6-118 (ಅಜ್ಮತ್‌ಉಲ್ಲಾ ಒಮರ್‌ಝೈ, 15.2),7121 (ರಶೀದ್ ಖಾನ್, 16.2), 8–129 (ರಾಹುಲ್ ತೆವಾಟಿಯಾ, 18.2),
ಬೌಲಿಂಗ್: ದೀಪಕ್ ಚಾಹರ್ 4-0-28-2, ಮುಸ್ತಫಿಜುರ್ ರಹಮಾನ್ 4–0–30–2, ತುಷಾರ್ ದೇಶಪಾಂಡೆ 4–0–21–2, ರವೀಂದ್ರ ಜಡೇಜ 2–0–15–0, ಡೇರಿಲ್ ಮಿಚೆಲ್ 2–0–18–1, ಮಥೀಷ ಪಥಿರಾಣ 4–0–29–1,
ಪಂದ್ಯದ ಆಟಗಾರ: ಶಿವಂ ದುಬೆ

ಮೊದಲ ಪಂದ್ಯ ಅಲ್ಪ ಅಂತರದಲ್ಲಿ ಸೋತಿದ್ದ ತಂಡಗಳು

ಮುಂಬೈ –ಸನ್‌ರೈಸರ್ಸ್ ಸೆಣಸಾಟ

ಹಾರ್ದಿಕ್ ಪಾಂಡ್ಯ



ಪ್ಯಾಟ್ ಕಮಿನ್ಸ್

ಮುಖಾಮುಖಿ ಪಂದ್ಯಗಳು 21

ಮುಂಬೈ ಗೆಲುವು	12
ಸನ್‌ರೈಸರ್ಸ್	9

ಪಂದ್ಯ ಆರಂಭ ರಾತ್ರಿ 7.30

ಹೈದರಾಬಾದ್ (ಪಿಟಿಐ): ಗುಜರಾತ್ ವಿರುದ್ಧ ಮೊದಲ ಪಂದ್ಯದಲ್ಲಿ ಗುರಿಯನ್ನು ಬೆನ್ನತ್ತುವಾಗ ಕೊನೆಯ ಕ್ಷಣದಲ್ಲಿ ಮುಗ್ಗರಿಸಿದ ಮುಂಬೈ ಇಂಡಿಯನ್ಸ್ ತಂಡ, ಬುಧವಾರ ಇಲ್ಲಿನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಪಂದ್ಯದಲ್ಲಿ ಅಪಾಯಕಾರಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

ಮುಂಬೈ ರೀತಿ ಪ್ಯಾಟ್ ಕಮಿನ್ಸ್ ನೇತೃತ್ವದ ಸನ್‌ರೈಸರ್ಸ್ ತಂಡ ಶನಿವಾರ ಮೊದಲ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಎದುರು ಕೊನೆಯ ಎಸೆತದವರೆಗೆ ಆಡಿ ಕೇವಲ ನಾಲ್ಕು ರನ್‌ಗಳಿಂದ ಸೋತಿತ್ತು.

ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಒಳ್ಳೆಯ ಆರಂಭ ಮಾಡುವಂತೆ ಕಂಡಿತ್ತು. ಬೂಮ್ರಾ ಅವರ ಪರಿಣಾಮಕಾರಿ ಸ್ಪೆಲ್, ಆರಂಭದಲ್ಲಿ ರೋಹಿತ್ ಶರ್ಮಾ ಅವರ ಬಿರುಸಿನ ಆಟ, ನಂತರ ಡೆವಾಲ್ಡ್ ಬ್ರೆವಿಸ್ ಅವರ ಭರ್ಜರಿ ಆಟದಿಂದ ತಂಡ ಗೆಲುವಿನತ್ತ ಸಾಗಿತ್ತು.

ಆದರೆ 36 ಎಸೆತಗಳಲ್ಲಿ ಏಳು ವಿಕೆಟ್‌ಗಳಿಂದ 48 ರನ್ ಗಳಿಸುವ ಸುಲಭ ಅವಕಾಶದಲ್ಲಿ ಎಡವಿತ್ತು. ಸತತ 12ನೇ ಆವೃತ್ತಿಯಲ್ಲೂ ತನ್ನ ಗೆಲುವಿನೊಡನೆ ಲೀಗ್ ಆರಂಭ ಪಡೆಯಲಾಗಲಿಲ್ಲ. ಆದರೆ, ಈ ಬಾರಿ ಲೀಗ್‌ನಲ್ಲಿ ತಂಡಗಳು ಹಿಂದೆಂದಿಗಿಂತ ಸ್ಪರ್ಧಾತ್ಮಕವಾಗಿದ್ದು, ಮುಂಬೈ ಮುಂದಿನ ಪಂದ್ಯಗಳನ್ನು ಲಘುವಾಗಿ ಪರಿಗಣಿಸುವಂತಿಲ್ಲ.

ಮುಂಬೈ ಹೊಸ ನಾಯಕ ಹಾರ್ದಿಕ್ ಪಾಂಡ್ಯ ಮೊದಲ ಪಂದ್ಯದಲ್ಲಿ, ಟಿಮ್ ಡೇವಿಡ್, ಡೆವಾಲ್ಡ್ ಬ್ರೆವಿಸ್ ಅವರಿಗೆ ಅವಕಾಶ ಕಲ್ಪಿಸಲು ಏಳನೇ ಕ್ರಮಾಂಕದಲ್ಲಿ ಆಡಿದ್ದರು. ಗುಜರಾತ್ ಟೈಟನ್ಸ್‌ನಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡುತ್ತಿದ್ದ ಅವರು ಈ ಬಾರಿ ಮೇಲಿನ ಕ್ರಮಾಂಕದಲ್ಲಿ ಆಡಬಹುದು.

ಟಿ20 ವಿಶ್ವಕಪ್ ತಂಡಕ್ಕೆ ಆಯ್ಕೆಯಾಗಬೇಕಾದರೆ ಇಶಾನ್ ಕಿಶನ್ ಮುಂದಿನೆಲ್ಲಾ ಪಂದ್ಯಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಮೊದಲ ಪಂದ್ಯದಲ್ಲಿ ಅವರು ಬೇಗನೇ ನಿರ್ಗಮಿಸಿದ್ದರು.

ಮುಂಬೈ ಸ್ಪಿನ್ನರ್‌ಗಳಾದ ಶಮ್ಸ್ ಮುಲಾನಿ ಮತ್ತು ಪಿಯೂಷ್ ಚಾವ್ಲಾ ಅವರೂ ಪ್ರಭಾವಿ ಎನಿಸಿರಲಿಲ್ಲ.

ತನ್ನ ಮೊದಲ ಪಂದ್ಯವನ್ನು ಕೋಲ್ಕತ್ತದಲ್ಲಿ ಆಡಿದ್ದ ಪ್ಯಾಟ್ ಕಮಿನ್ಸ್ ಬಳಗ ಈಗ ತವರಿನಲ್ಲಿ ಆಡಲಿದೆ. ಭರ್ಜರಿ ಹೊಡೆತಗಳ ಆಟಗಾರ, ದಕ್ಷಿಣ ಆಫ್ರಿಕದ ಹೆನ್ರಿಚ್ ಕ್ಲಾಸೆನ್ ಅವರ 'ಕ್ಲಾಸ್' ಬ್ಯಾಟಿಂಗ್ ತಂಡವನ್ನು ಗೆಲುವಿನಂಚಿಗೆ ತಂದು ನಿಲ್ಲಿಸಿತ್ತು. ಕೆಲಹೊತ್ತು ಶಾಬಾಜ್ ಅಹ್ಮದ್ ಬಿಟ್ಟರೆ ಉಳಿದವರಿಂದ ಬೆಂಬಲ ಸಿಕ್ಕಿರಲಿಲ್ಲ.

ಆರಂಭ ಆಟಗಾರರಾದ ಮಯಂಕ್ ಅಗರವಾಲ್ ಮತ್ತು ಅಭಿಷೇಕ್ ಶರ್ಮಾ ಅವರು ತಂಡಕ್ಕೆ ಬಿರುಸಿನ ಆರಂಭ ಒದಗಿದ್ದರು. ತಂಡ ಅವರಿಂದ ಇದೇ ರೀತಿಯ ಸ್ಥಿರ ಪ್ರದರ್ಶನ ನಿರೀಕ್ಷಿಸುತ್ತಿದೆ. ಫಿಂಚ್ ಹಿಟ್ಟರ್ ಅಬ್ದುಲ್ ಸಮದ್ ತಂಡ ತಮ್ಮ ಮೇಲಿಟ್ಟಿರುವ ಭರವಸೆಗೆ ತಕ್ಕಂತೆ ಆಡಬೇಕಾಗಿದೆ.

ಈ ಹಿಂದಿನ ಪಂದ್ಯದಲ್ಲಿ ಆಂಡ್ರೆ ರಸೆಲ್ ಆಕ್ರಮಣದ ಆಟಕ್ಕೆ ತತ್ತರಿಸಿದ್ದ ಬೌಲರ್ ಭುವನೇಶ್ವರ ಕುಮಾರ್ ಪುಟಿದೇಳಬಲ್ಲರೇ ಎಂಬುದನ್ನು ಕಾದುನೋಡಬೇಕಾಗಿದೆ.

ಬಾರ್ಡರ್– ಗಾವಸ್ಕರ್ ಟ್ರೋಫಿ

ನ.22ರಿಂದ ಮೊದಲ ಟೆಸ್ಟ್

ಮೆಲ್ಬರ್ನ್ (ಪಿಟಿಐ): ಭಾರತ ಮತ್ತು ಆಸ್ಟ್ರೇಲಿಯಾ ನಡುವಿನ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯು ನ.22ರಂದು ಪರ್ತ್‌ನ ಆಪ್ಟಸ್ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಹೇಳಿದೆ.

ಈ ಸರಣಿಯನ್ನು 1991–92ರ ಬಳಿಕ ಇದೇ ಮೊದಲ ಬಾರಿಗೆ ಐದು ಪಂದ್ಯಗಳಿಗೆ ವಿಸ್ತರಿಸಲಾಗಿದೆ. ಈ ಹಿಂದೆ ನಾಲ್ಕು ಪಂದ್ಯಗಳಿಗೆ ಸೀಮಿತವಾಗಿತ್ತು.

ಅಡಿಲೇಡ್‌ನಲ್ಲಿ ಡಿ.6ರಿಂದ ನಡೆಯುವ ಪಿಂಕ್ ಬಾಲ್ ಟೆಸ್ಟ್ ಪಂದ್ಯಕ್ಕೂ (ಹಗಲು- ರಾತ್ರಿ) ಮುನ್ನ ಆ ಚೆಂಡಿನೊಂದಿಗೆ ಅಭ್ಯಾಸ ನಡೆಸಲು ಒಂಬತ್ತು ದಿನಗಳ ಅಂತರವನ್ನು ನೀಡಲಾಗಿದೆ. ಹಿಂದಿನ ಪ್ರವಾಸದಲ್ಲಿ ಭಾರತವು ಪಿಂಕ್ ಬಾಲ್ ಟೆಸ್ಟ್‌ನಲ್ಲಿ ಹೀನಾಯವಾಗಿ ಸೋತಿತ್ತು.

ಭಾರತ–ಆಸ್ಟ್ರೇಲಿಯಾ ಟೆಸ್ಟ್ ಸರಣಿ ವೇಳಾಪಟ್ಟಿ

ಪಂದ್ಯ	ಸ್ಥಳ	ದಿನಾಂಕ
1ನೇ ಟೆಸ್ಟ್	ಪರ್ತ್	ನ.22-26
2ನೇ ಟೆಸ್ಟ್	ಅಡಿಲೇಡ್	ಡಿ.6-10
3ನೇ ಟೆಸ್ಟ್	ಬ್ರಿಸ್ಬೇನ್	ಡಿ.14-18
4ನೇ ಟೆಸ್ಟ್	ಮೆಲ್ಬರ್ನ್	ಡಿ.26-30
5ನೇ ಟೆಸ್ಟ್	ಸಿಡ್ನಿ	2025 ಜ.3-7

ಆಸ್ಟ್ರೇಲಿಯಾವನ್ನು ಅವರ ನೆಲದಲ್ಲೇ ಸತತ ಎರಡು ಟೆಸ್ಟ್ ಸರಣಿಗಳಲ್ಲಿ ಭಾರತ ಸೋಲಿಸಿದೆ. ಅಲ್ಲದೆ, ಉಭಯ ತಂಡಗಳ ನಡುವಿನ ಸತತ ನಾಲ್ಕು ಸರಣಿಗಳನ್ನು ಗೆದ್ದಿರುವ ಭಾರತ, ಈ ಬಾರಿಯೂ ಪರಾಕ್ರಮ ಮೆರೆಯುವ ವಿಶ್ವಾಸದಲ್ಲಿವೆ.

ಕಳೆದ ವರ್ಷ ಇಂಗ್ಲೆಂಡ್‌ನಲ್ಲಿ ನಡೆದ ಎರಡನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವು ಭಾರತವನ್ನು ಮಣಿಸಿ ಚಾಂಪಿಯನ್ ಕಿರೀಟ ಧರಿಸಿತ್ತು. ಇದೀಗ ಅವರ ನೆಲದಲ್ಲೇ ಮುಯ್ಯಿ ತೀರಿಸಿಕೊಳ್ಳುವ ಅವಕಾಶವೂ ಭಾರತದ ಮುಂದಿದೆ.

ಟೆಸ್ಟ್ ತಂಡಕ್ಕೆ ಸಂಸದ ಶಕೀಬ್

ಶಕೀಬ್ ಅಲ್ ಹಸನ್

ಢಾಕ್ಕಾ (ಎಎಫ್‌ಪಿ): ಬಾಂಗ್ಲಾದೇಶದ ಸಂಸತ್ ಸದಸ್ಯರಾಗಿರುವ ಶಕೀಬ್ ಅಲ್ ಹಸನ್ ಅವರನ್ನು ಶ್ರೀಲಂಕಾ ವಿರುದ್ಧ ಎರಡನೇ ಕ್ರಿಕೆಟ್ ಟೆಸ್ಟ್ ಆಡಲಿರುವ 15 ಆಟಗಾರರ ಬಾಂಗ್ಲಾದೇಶ ತಂಡಕ್ಕೆ ಮಂಗಳವಾರ ಆಯ್ಕೆ ಮಾಡಲಾಗಿದೆ.

ಮಾಜಿ ನಾಯಕ ಹಾಗೂ ಆಲ್‌ರೌಂಡರ್ ಶಕೀಬ್ ಕಳೆದ ಜನವರಿಯಲ್ಲಿ ಅವಾಮಿ ಲೀಗ್‌ನಿಂದ ಸ್ಪರ್ಧಿಸಿ ಮಗುರಾ ಕ್ಷೇತ್ರದಿಂದ ಜಯಗಳಿಸಿದ್ದರು. ಕಳೆದ ವರ್ಷದ ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್ ಆಡಿದ್ದ ನಂತರ ಶಕೀಬ್ ಸ್ಪರ್ಧಾತ್ಮಕ ಕ್ರಿಕೆಟ್ ಆಡಿರಲಿಲ್ಲ. 2023ರಲ್ಲಿ ಐರ್ಲೆಂಡ್ ವಿರುದ್ಧ ಕೊನೆಯ ಸಲ ಟೆಸ್ಟ್ ಆಡಿದ್ದರು. ಸಿಲ್ಹೆಟ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಪ್ರವಾಸಿ ಶ್ರೀಲಂಕಾ ತಂಡ 328 ರನ್‌ಗಳ ರನ್‌ಗಳಿಂದ ನಜ್ಮುಲ್ ಹುಸೇನ್ ಶಾಂತೊ ಬಳಗ ಮೇಲೆ ಜಯಗಳಿಸಿತ್ತು. ಬಾಂಗ್ಲಾ ತಂಡ ಎರಡೂ ಇನಿಂಗ್ಸ್‌ಗಳಲ್ಲಿ 200ರ ಒಳಗೆ ಆಲೌಟ್ ಆಗಿತ್ತು.

ಎರಡು ತಿಂಗಳ ಬಿಡುವಿನ ಅನುಭವ ಹಂಚಿಕೊಂಡ ಕೊಹ್ಲಿ

'ಕುಟುಂಬ ಜತೆಗಿನ ಕ್ಷಣ ಅದ್ಭುತ'

ವಿರಾಟ್ ಕೊಹ್ಲಿ

ಬೆಂಗಳೂರು (ಪಿಟಿಐ): 'ಎರಡು ತಿಂಗಳ ಬಿಡುವಿನ ವೇಳೆ ಯಲ್ಲಿ ಯಾರೂ ಗುರುತಿಸಲು ಸಾಧ್ಯವಿರದ ಜಾಗದಲ್ಲಿ ಸಾಮಾನ್ಯನಂತೆ ಕಳೆದಿದ್ದು, ಆ ಅನುಭವ ಅದ್ಭುತವಾಗಿತ್ತು' ಎಂದು ಭಾರತ ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಹೇಳಿದ್ದಾರೆ.

ವೈಯಕ್ತಿಕ ಕಾರಣದಿಂದಾಗಿ ಇಂಗ್ಲೆಂಡ್ ವಿರುದ್ಧ ತವರಿನಲ್ಲಿ ನಡೆದ ಐದು ಪಂದ್ಯಗಳ ಟೆಸ್ಟ್ ಸರಣಿಯಿಂದ ದೂರ ಉಳಿದಿದ್ದ ವಿರಾಟ್, ಐಪಿಎಲ್ ಟೂರ್ನಿ ಮೂಲಕ ಸ್ಪರ್ಧಾತ್ಮಕ ಕ್ರಿಕೆಟ್‌ಗೆ ಮರಳಿದ್ದಾರೆ. ಇದೀಗ ಎರಡು ತಿಂಗಳ ಬಿಡುವಿನ ಅನುಭವವನ್ನು ಅವರು ಹಂಚಿಕೊಂಡಿದ್ದಾರೆ.

ವಿರಾಟ್ ಹಾಗೂ ಪತ್ನಿ ಅನುಷ್ಕಾ ಶರ್ಮಾ ದಂಪತಿಗೆ ಎರಡನೇ ಮಗು ಅಕಾಯ್ ಜನಿಸಿದ್ದು, ಈ ಕುರಿತು ಅವರು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಪಡಿಸಿದ್ದರು.

'ನಾವು ದೇಶದಲ್ಲಿ ಇರಲಿಲ್ಲ. ನಾವಿದ್ದ ಪ್ರದೇಶದ ರಸ್ತೆಗಳಲ್ಲಿ ಯಾರೂ ನನ್ನನ್ನು ಗುರುತಿಸಿರಲಿಲ್ಲ. ಅಲ್ಲಿ ಸಾಮಾನ್ಯ ಜೀವನ ನಡೆಸಿದ್ದೇವೆ. ಪುತ್ರಿ ವಮಿಕಾ ಜೊತೆ ಕಾಲ ಕಳೆಯಲು ಸಾಕಷ್ಟು ಸಮಯವೂ ಸಿಕ್ಕಿತ್ತು' ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

'ಇಬ್ಬರು ಮಕ್ಕಳ ತಂದೆಯಾಗಿ, ಕುಟುಂಬದ ಜವಾಬ್ದಾರಿ ನೋಡಿಕೊಳ್ಳುವುದು ಸಂಪೂರ್ಣ ಭಿನ್ನವಾಗಿರುತ್ತದೆ. ಹಾಗಾಗಿ ಕುಟುಂಬದ ಜತೆಗಿನ ಕ್ಷಣ ಅದ್ಭುತವಾಗಿತ್ತು. ಈ ಅವಕಾಶ ಸಿಕ್ಕಿರುವುದಕ್ಕೆ ದೇವರಿಗೆ ಕೃತಜ್ಞನಾಗಿದ್ದೇನೆ' ಎಂದು ಹೇಳಿದ್ದಾರೆ.

ಟಿ20 ಆಡುವ ಸಾಮರ್ಥ್ಯ–ಸಂದೇಶ ರವಾನೆ: 'ಪ್ರಪಂಚದ ಅನೇಕ ಭಾಗಗಳಲ್ಲಿ ಟಿ20 ಕ್ರಿಕೆಟ್ ಆಟದ ಪ್ರಚುರಪಡಿಸಲು ನನ್ನ ಹೆಸರು ಬಳಸಲಾಗುತ್ತಿದೆ. ಆದರೆ, ನನ್ನಲ್ಲಿ ಈ ಮಾದರಿಯ ಕ್ರಿಕೆಟ್‌ನಲ್ಲಿ ಆಡುವ ಸಾಮರ್ಥ್ಯ ಇನ್ನೂ ಉಳಿದಿದೆ' ಎಂದು 35 ವರ್ಷದ ವಿರಾಟ್ ಕೊಹ್ಲಿ ಹೇಳಿದ್ದಾರೆ.

ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಆತಿಥ್ಯದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗೆ ಭಾರತ ತಂಡದಲ್ಲಿ ವಿರಾಟ್ ಕೊಹ್ಲಿ ಅವರು ಸ್ಥಾನ ಪಡೆಯುವ ಬಗ್ಗೆ ಎದ್ದಿರುವ ಊಹಾಪೋಹಗಳ ನಡುವೆಯೇ ಅವರು ಸೂಚ್ಯವಾಗಿ ಈ ಸಂದೇಶ ರವಾನಿಸಿದರು. ಸೋಮವಾರ ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ 49 ಎಸೆತಗಳಲ್ಲಿ 77 ರನ್ ಗಳಿಸಿ ಪಂದ್ಯದ ಆಟಗಾರ ಗೌರವ ಪಡೆದ ಬಳಿಕ ಮಾತನಾಡಿದರು. ಕೊಹ್ಲಿ ಟಿ20 ಮಾದರಿಯಲ್ಲಿ 50ಕ್ಕೂ ಅಧಿಕ ಸರಾಸರಿಯಲ್ಲಿ ರನ್ ಗಳಿಸಿದ್ದು, 138.15 ಸ್ಟ್ರೈಕ್ ರೇಟ್ ಹೊಂದಿದ್ದಾರೆ.

ರಣಜಿ ತಂಡಕ್ಕೆ ಸನ್ಮಾನ ಇಂದು

ಬೆಂಗಳೂರು: 50 ವರ್ಷಗಳ ಹಿಂದೆ ಮೊದಲ ಬಾರಿ ರಣಜಿ ಟ್ರೋಫಿ (1974) ಗೆದ್ದುಕೊಂಡ ಕರ್ನಾಟಕ ತಂಡದ ಆಟಗಾ ರರನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯಿಂದ ಬುಧವಾರ (ಮಾರ್ಚ್ 27) ಸಂಜೆ 6 ಗಂಟೆಗೆ ಮೀಡಿಯಾ ಸಭಾಂಗಣದಲ್ಲಿ ಸನ್ಮಾನಿಸಲಾಗುತ್ತದೆ ಎಂದು ಕೆಎಸ್‌ಸಿಎ ಉಪಾಧ್ಯಕ್ಷ ಬಿ.ಕೆ. ಸಂಪತ್ ಕುಮಾರ್ ತಿಳಿಸಿದ್ದಾರೆ.

150ನೇ ಅಂತರರಾಷ್ಟ್ರೀಯ ಪಂದ್ಯವಾಡಿದ 39 ವರ್ಷದ ಸುನಿಲ್ ಚೆಟ್ರಿ ಅವರನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಗೌರವಿಸಿತು. ಫೆಡರೇಷನ್ ಅಧ್ಯಕ್ಷ ಕಲ್ಯಾಣ್ ಚೌಬೆ, ಅಸ್ಸಾಂ ಫುಟ್‌ಬಾಲ್ ಸಂಸ್ಥೆ ಕಾರ್ಯದರ್ಶಿ ಸಂಗ್ರಾಂಗ್ ಬ್ರಹ್ಮ, ಎಐಎಫ್‌ಎಫ್‌ನ ತಾಂತ್ರಿಕ ಸಮಿತಿ ಅಧ್ಯಕ್ಷ ಐ.ಎಂ.ವಿಜಯನ್ ಇದ್ದರು.

150ನೇ ಪಂದ್ಯದಲ್ಲೂ ಚೆಟ್ರಿ ಗೋಲು

ಅಫ್ಗನ್‌ಗೆ 2–1 ಜಯ

ಗುವಾಹಟಿ: ನಾಯಕ ಸುನಿಲ್ ಚೆಟ್ರಿ ತಮ್ಮ 150ನೇ ಅಂತರರಾಷ್ಟ್ರೀಯ ಪಂದ್ಯದಲ್ಲಿ ಗಳಿಸಿದ ಗೋಲಿನ ಹೊರತಾಗಿಯೂ ಭಾರತ ತಂಡವು ಫೀಫಾ ವಿಶ್ವಕಪ್ 'ಎ' ಗುಂಪಿನ ಅರ್ಹತಾ ಸುತ್ತಿನ ಪಂದ್ಯದಲ್ಲಿ ಮಂಗಳವಾರ ಅಫ್ಗಾನಿಸ್ತಾನ ತಂಡದ ವಿರುದ್ಧ 1–2ಯಿಂದ ಪರಾಭವಗೊಂಡಿತು.

ಇಲ್ಲಿನ ಇಂದಿರಾಗಾಂಧಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ತನಗಿಂತ ಕೆಳ ಕ್ರಮಾಂಕದ ತಂಡದ ವಿರುದ್ಧ ಭಾರತ ಮುಗ್ಗರಿಸಿತು. ಮೈಲಿಗಲ್ಲು ಪಂದ್ಯದಲ್ಲಿ ಚೆಟ್ರಿ ಭಾರತಕ್ಕೆ 37ನೇ ನಿಮಿಷದಲ್ಲಿ ಮುನ್ನಡೆ ಒಗಿಸಿದರು. ಎದುರಾಳಿ ತಂಡದ ಹರೂನ್ ಅಮಿರಿ ಬಾಕ್ಸ್‌ನೊಳಗೆ ಚೆಂಡಿಗೆ ಅಡ್ಡ ಮಾಡಿದ್ದರಿಂದ ಸಿಕ್ಕ ಪೆನಾಲ್ಟಿ ಅವಕಾಶವನ್ನು ಚೆಟ್ರಿ ಗೋಲಾಗಿ ಪರಿವರ್ತಿಸಿದರು.

71ನೇ ನಿಮಿಷದಲ್ಲಿ ಅಫ್ಗನ್ ತಂಡದ ರಹಮತ್ ಅಕ್ಬರಿ ಚೆಂಡನ್ನು ಗುರಿ ಸೇರಿಸಿ ತಂಡದ ಸ್ಕೋರ್ ಅನ್ನು 1–1ರಿಂದ ಸಮಬಲ ಗೊಳಿಸಿದರು. ಪಂದ್ಯ ಮುಕ್ತಾಯಕ್ಕೆ ಎರಡು ನಿಮಿಷ ಬಾಕಿ ಇರುವಾಗ ಅಫ್ಗಾನ್‌ನ ಮತ್ತೊಬ್ಬ ಆಟಗಾರ ಶರೀಫ್ ಮುಖಮದ್ (88ನೇ ನಿಮಿಷ) ಅವರಿಗೆ ಲಭಿಸಿದ ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿ ಭಾರತಕ್ಕೆ ಆಘಾತ ನೀಡಿದರು.

ಸೌದಿ ಅರೇಬಿಯಾದಲ್ಲಿ ಮಾರ್ಚ್ 22ರಂದು ನಡೆದ ಮೊದಲ ಲೆಗ್‌ನಲ್ಲಿ ಭಾರತ ಮತ್ತು ಅಫ್ಘಾನಿಸ್ತಾನ ನಡುವಿನ ಪಂದ್ಯ 0–0 ಯಿಂದ ಡ್ರಾ ಆಗಿತ್ತು.

ದಾಖಲೆ ವಿಸ್ತರಣೆ: ಈ ಪಂದ್ಯದಲ್ಲಿ 39 ವರ್ಷದ ಚೆಟ್ರಿ 94ನೇ ಅಂತರರಾಷ್ಟ್ರೀಯ ಗೋಲನ್ನು ದಾಖಲಿಸಿದರು. ಅತಿ ಹೆಚ್ಚು ಗೋಲು ಗಳಿಸಿದ ಆಟಗಾರರಲ್ಲಿ ಚೆಟ್ರಿ ವಿಶ್ವದಲ್ಲಿ ನಾಲ್ಕನೇ ಸ್ಥಾನವಿದೆ.

ಕ್ರಿಸ್ಟಿಯಾನೊ ರೊನಾಲ್ಡೊ (ಪೋರ್ಚುಗಲ್-128), ಅಲಿ ದಾಯಿ (ಇರಾನ್-108) ಲಿಯೊನೆಲ್ ಮೆಸ್ಸಿ (ಅರ್ಜೆಂಟಿನಾ-106) ಮೊದಲ ಸ್ಥಾನದಲ್ಲಿರುವ ಮೂವರು.

ಚೆಟ್ರಿ 2005ರ ಜೂನ್ 12ರಂದು ಪಾಕಿಸ್ತಾನದ ವಿರುದ್ಧದ ಸೌಹಾರ್ದ ಪಂದ್ಯದಲ್ಲಿ ರಾಷ್ಟ್ರೀಯ ಜರ್ಸಿ ಧರಿಸಿದ್ದರು. ಅವರು ತಮ್ಮ 25, 50, 75, 100 ಮತ್ತು 125ನೇ ಪಂದ್ಯದಲ್ಲಿ ಕನಿಷ್ಠ ಒಂದು ಗೋಲು ಗಳಿಸಿದ ಅನನ್ಯ ದಾಖಲೆಯನ್ನು ಹೊಂದಿದ್ದಾರೆ.

ಈ ಪಂದ್ಯಕ್ಕೂ ಆ ದಾಖಲೆಯನ್ನು ವಿಸ್ತರಿಸಿಕೊಂಡರು.

ಟೇಬಲ್ ಟೆನಿಸ್ ವಿಶ್ವ ರ್‍ಯಾಂಕಿಂಗ್ ಪ್ರಕಟ

ಸತ್ಯನ್, ಶ್ರೀಜಾ ಅಕುಲಾಗೆ ಬಡ್ತಿ

ಜಿ. ಸತ್ಯನ್

ಶ್ರೀಜಾ ಅಕುಲಾ

ನವದೆಹಲಿ (ಪಿಟಿಐ): ಭಾರತದ ಅನುಭವಿ ಟೇಬಲ್ ಟೆನಿಸ್ ಆಟಗಾರ ಜಿ. ಸತ್ಯನ್ ಅವರು ಮಂಗಳವಾರ ಪ್ರಕಟಗೊಂಡ ಐಟಿಟಿಎಫ್ ವಿಶ್ವ ರ್‍ಯಾಂಕಿಂಗ್‌ನಲ್ಲಿ 43 ಸ್ಥಾನಗಳ ಬಡ್ತಿಯೊಂದಿಗೆ 60ನೇ ಸ್ಥಾನಕ್ಕೆ ತಲುಪಿದ್ದಾರೆ.

ವೃತ್ತಿಜೀವನದಲ್ಲಿ 24ನೇ ರ್‍ಯಾಂಕಿಂಗ್ ಪಡೆದಿದ್ದ 31 ವರ್ಷದ ಸತ್ಯನ್ ಅವರು ಈಚೆಗೆ ಟಾಪ್ 100 ಪಟ್ಟಿಯಿಂದ ಹೊರಬಿದ್ದಿದ್ದರು. ಬೇರೂತ್‌ನಲ್ಲಿ ಕಳೆದ ವಾರ ನಡೆದ ಡಬ್ಲ್ಯುಟಿಟಿ ಫೀಡರ್ ಸರಣಿಯ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಟ್ರೋಫಿ ಗೆದ್ದುಕೊಂಡ ಸತ್ಯನ್, 125 ಅಂಕಗಳನ್ನು ಸಂಪಾದಿಸಿ ರ್‍ಯಾಂಕಿಂಗ್ ಸುಧಾರಿಸಿಕೊಂಡಿದ್ದಾರೆ.

ಕಳೆದ ವಾರ ಡಬ್ಲ್ಯುಟಿಟಿ ಫೀಟರ್ ಸರಣಿಯ ಟೂರ್ನಿಯಲ್ಲಿ ಮಹಿಳಾ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡ ಶ್ರೀಜಾ ಅಕುಲಾ 40ನೇ ಸ್ಥಾನಕ್ಕೆ ಏರಿದ್ದಾರೆ. ಇದು ಅವರ ಜೀವನಶ್ರೇಷ್ಠ ಸಾಧನೆಯಾಗಿದೆ.

41 ವರ್ಷದ ಶರತ್ ಕಮಲ್ ಭಾರತದ ಪರ ಅಗ್ರ ಕ್ರಮಾಂಕ ಹೊಂದಿದ್ದಾರೆ. 88ನೇ ರ್‍ಯಾಂಕ್‌ನಲ್ಲಿದ್ದ ಅವರು ಕಳೆದ ವಾರವಷ್ಟೇ 34ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದರು. ಇದೀಗ 35ನೇ ಸ್ಥಾನಕ್ಕೆ ಜಾರಿದ್ದಾರೆ.

ಡಬ್ಲ್ಯುಟಿಟಿ ಫೀಡರ್‌ನಲ್ಲಿ ಪುರುಷರ ಡಬಲ್ಸ್ ಫೈನಲ್‌ಗೆ ತಲುಪಿದ್ದ ಮಾನವ್ ಠಕ್ಕರ್ 11 ಸ್ಥಾನ ಮೇಲೇರಿ 63ನೇ ಸ್ಥಾನಕ್ಕೆ ತಲುಪಿದ್ದರೆ, ಹರ್ಮೀತ್ ದೇಸಾಯಿ ಎರಡು ಸ್ಥಾನ ಕುಸಿದು 67ನೇ ಸ್ಥಾನದಲ್ಲಿದ್ದಾರೆ.

ಮಣಿಕಾ ಬಾತ್ರಾ ಮಹಿಳೆಯರ ಸಿಂಗಲ್ಸ್ ರ್‍ಯಾಂಕಿಂಗ್‌ನಲ್ಲಿ 38ನೇ ಸ್ಥಾನ ಕಾಯ್ದುಕೊಂಡರೆ, ಕರ್ನಾಟಕದ ಅರ್ಚನಾ ಕಾಮತ್ 13 ಸ್ಥಾನ ಮೇಲೇರಿ 99ನೇ ಸ್ಥಾನಕ್ಕೆ ಬಡ್ತಿ ಹೊಂದಿದ್ದಾರೆ.

ಭಾರತದ ಮಹಿಳಾ ಮತ್ತು ಪುರುಷರ ತಂಡಗಳು ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಈಗಾಗಲೇ ಅರ್ಹತೆ ಪಡೆದಿವೆ.

ಪುರುಷ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ತಲಾ ಇಬ್ಬರಿಗೆ ಅವಕಾಶವಿದ್ದು, ಮೇ 16ರ ಅವಧಿಯ ರ್‍ಯಾಂಕಿಂಗ್ ಆಧರಿಸಿ ಭಾರತ ಟೇಬಲ್ ಟೆನಿಸ್ ಫೆಡರೇಷನ್ ಇಬ್ಬರನ್ನು ಆಯ್ಕೆ ಮಾಡಲಿದೆ.

ಇಂದಿನಿಂದ ಬ್ಯಾಸ್ಕೆಟ್‌ಬಾಲ್ ಟೂರ್ನಿ

ಬೆಂಗಳೂರು: ರಾಜ್ಯ ಬ್ಯಾಸ್ಕೆಟ್ ಬಾಲ್ ಸಂಸ್ಥೆಯ ಆಶ್ರಯದಲ್ಲಿ ಇದೇ 27ರಿಂದ 30ರವರೆಗೆ ಕಂಠೀರವ ಕ್ರೀಡಾಂಗಣದ ಲ್ಲಿ ರಾಜ್ಯ ಪುರುಷರ ಕೆಬಿಎಲ್ ರೂರಲ್ ಲೀಗ್ ಅಂತಿಮ ಹಂತದ ಚಾಂಪಿಯನ್‌ಷಿಪ್ ಆಯೋಜಿಸಲಾಗಿದೆ.

ಪಂದ್ಯಗಳು ಲೀಗ್ ಮತ್ತು ನಾಕೌಟ್ ಮಾದರಿಯಲ್ಲಿ ನಡೆಯಲಿವೆ. ಒಟ್ಟು 14 ತಂಡಗಳು ಟೂರ್ನಿಯಲ್ಲಿ ಪಾಲ್ಗೊಳ್ಳಲಿವೆ.

ತಂಡಗಳು: ಬ್ರದರ್ಸ್ ವಿಜಯಪುರ, ಬಾಗಲಕೋಟ ಬಿ.ಸಿ, ಮಲ್ಲಸಜ್ಜನ ಬಿ.ಸಿ ಧಾರವಾಡ, ರೋವರ್ಸ್ ಬಿ.ಸಿ ಧಾರವಾಡ, ದಾವಣಗೆರೆ ಬಿ.ಸಿ, ವೈಸಿಬಿಸಿ ಬಳ್ಳಾರಿ, ರೈಸಿಂಗ್ ಸ್ಟಾರ್ ಬಿ.ಸಿ. ಮೈಸೂರು, ವಿಜಯನಗರ ಬಿ.ಸಿ ಮೈಸೂರು, ಆರ್ಯನ್ಸ್ ಬಿ.ಸಿ ಮೈಸೂರು, ವಿಬಿಸಿ ಮಂಡ್ಯ, ಕನಕ ಬಿ.ಸಿ ಕೋಲಾರ, ಪಿನಾಕಿನಿ ಬಿ.ಸಿ, ಗೌರಿಬಿದನೂರು, ಹೊಯ್ಸಲ ಬಿ.ಸಿ ಹಾಸನ, ಮಂಗಳೂರು ಬಿ.ಸಿ.

ಕೋಚ್ ಅವಧಿ ಮೇ ವರೆಗೆ ವಿಸ್ತರಣೆ

ಬಜರಂಗ್‌ಗೆ ಧನಸಹಾಯ: ಕ್ರೀಡಾ ಸಚಿವಾಲಯ ಸಮ್ಮತಿ



ಬಜರಂಗ್ ಪೂನಿಯಾ

ನವದೆಹಲಿ (ಪಿಟಿಐ): ಧನಸಹಾಯ ನೀಡುವಂತೆ ಮತ್ತು ತಮ್ಮ ಸ್ಟ್ರೆಂತ್ ಮತ್ತು ಕಂಡಿಷನಿಂಗ್ ಕೋಚ್ ಕಾಝಿ ಕಿರೊನ್ ಮುಸ್ತಾಫ ಹಸನ್ ಅವರ ಅವಧಿಯನ್ನು ಮೇ ತಿಂಗಳ ಕೊನೆಯವರೆಗೆ ವಿಸ್ತರಿಸುವಂತೆ ಅಂತರರಾಷ್ಟ್ರೀಯ ಕುಸ್ತಿಪಟು ಬಜರಂಗ್ ಪೂನಿಯಾ ಸಲ್ಲಿಸಿರುವ ಮನವಿಗೆ ಕೇಂದ್ರ ಕ್ರೀಡಾ ಸಚಿವಾಲಯ ಸಮ್ಮತಿ ನೀಡಿದೆ.

ಬಜರಂಗ್ ಈ ವರ್ಷದ ಒಲಿಂಪಿಕ್ ರೇಸ್‌ನಿಂದ ಹೊರಬಿದ್ದಿದ್ದಾರೆ.

ಪೂನಿಯಾ ಅವರು ಲೈಂಗಿಕ ಕಿರುಕುಳ ಆರೋಪ ಎದುರಿಸುತ್ತಿದ್ದ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ದೀರ್ಘ ಹೋರಾಟದ ಭಾಗವಾಗಿದ್ದರು.

ಇತ್ತೀಚೆಗೆ ಏಷ್ಯನ್ ಚಾಂಪಿಯನ್‌ಷಿಪ್ ಮತ್ತು ಏಷ್ಯನ್ ಒಲಿಂಪಿಕ್ ಕ್ವಾಲಿಫೈಯರ್ಸ್‌ಗೆ ನಡೆದ ಟೂರ್ನಿಯಲ್ಲಿ 30 ವರ್ಷದ ಬಜರಂಗ್. ಅಗ್ರ ನಾಲ್ಕರಲ್ಲಿ ಸ್ಥಾನ ಗಳಿಸಲು ವಿಫಲರಾಗಿದ್ದರು.

ಒಲಿಂಪಿಕ್ಸ್‌ಗೆ ಮೊದಲು ಚೀನಾ ತೈಪಿಯಲ್ಲಿ ತರಬೇತಿಗೆ ಹಣಕಾಸು ನೆರವು ನೀಡುವಂತೆ ಕಾಮನ್‌ವೆಲ್ತ್ ಟೇಬಲ್ ಟೆನಿಸ್ ಚಾಂಪಿಯನ್ ಶ್ರೀಜಾ ಅಕುಲಾ ಅವರ ವಿನಂತಿಗೂ ಸಚಿವಾಲಯದ 'ಮಿಷನ್ ಒಲಿಂಪಿಕ್ ಸೆಲ್' ಒಪ್ಪಿಗೆ ನೀಡಿದೆ. ಅವರು ಲಿಯು ಜುನ್–ಲಿನ್ ಅವರಿಂದ 12 ದಿನಗಳ ತರಬೇತಿ ಪಡೆಯಲಿದ್ದಾರೆ.

ಟರ್ಕಿಯ ಅಂಟಾಲ್ಯದಲ್ಲಿ ನಡೆಯಲಿರುವ ಗ್ರ್ಯಾಂಡ್‌ಸ್ಲಾಮ್ ಸ್ಪರ್ಧೆಯಲ್ಲಿ ಭಾಗವಹಿಸಲು ಆರ್ಥಿಕ ನೆರವು ನೀಡುವಂತೆ ತುಲಿಕಾ ಮಾನ್ ಅವರ ಕೋರಿಕೆಯನ್ನೂ ಮನ್ನಿಸಲಾಗಿದೆ.

ಮಯಾಮಿ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್

ಎಂಟರ ಘಟ್ಟಕ್ಕೆ ಬೋಪಣ್ಣ– ಎಬ್ಡೆನ್

ಭಾರತದ ರೋಹನ್ ಬೋಪಣ್ಣ (ಬಲ) ಮತ್ತು ಅವರ ಆಸ್ಟ್ರೇಲಿಯನ್ ಜೊತೆಗಾರ ಮ್ಯಾಥ್ಯೂ ಎಬ್ಡೆನ್

ಮಯಾಮಿ ಗಾರ್ಡನ್ಸ್ (ಅಮೆರಿಕ), (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಅವರ ಆಸ್ಟ್ರೇಲಿಯನ್ ಜೊತೆಗಾರ ಮ್ಯಾಥ್ಯೂ ಎಬ್ಡೆನ್ ಅವರು ಮಯಾಮಿ ಓಪನ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಡಬಲ್ಸ್ ಕ್ವಾರ್ಟರ್‌ಫೈನಲ್ ತಲುಪಿದರು.

ಅಗ್ರ ಶ್ರೇಯಾಂಕದ ಬೋಪಣ್ಣ– ಎಬ್ಡೆನ್ ಜೋಡಿ ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ 7–5, 7–6 (3) ರಿಂದ ಹ್ಯೂಗೊ ನಿಸ್ ಮತ್ತು ಯಾನ್ ಝಿಲಿನ್‌ಸ್ಕಿ ಅವರನ್ನು ಒಂದು ಗಂಟೆ 39 ನಿಮಿಷಗಳ ಹೋರಾಟದಲ್ಲಿ ಸೋಲಿಸಿದರು.

ಆಸ್ಟ್ರೇಲಿಯನ್ ಓಪನ್‌ನಲ್ಲಿ ವಿಜೇತರಾಗಿದ್ದ ಈ ಜೋಡಿ ನಾಲ್ಕು ಏಸ್‌ಗಳ ಜೊತೆಗೆ ಶೇ 84 ಮೊದಲ ಸರ್ವ್‌ನಲ್ಲಿ ಯಶಸ್ಸು ಕಂಡಿತು.

ಭಾರತ -ಆಸ್ಟ್ರೇಲಿಯನ್ ಆಟಗಾರರ ಜೋಡಿ ಮುಂದಿನ ಸುತ್ತಿನಲ್ಲಿ ಆಸ್ಟ್ರೇಲಿಯಾದ ಜಾನ್ ಪ್ಯಾಟ್ರಿಕ್ ಸ್ಮಿತ್– ನೆದರ್ಲೆಂಡ್ಸ್‌ನ ಸೆಮ್ ವೆರ್ಬ್ರೀಕ್ ಜೋಡಿಯನ್ನು ಎದುರಿಸಲಿದೆ.

ಶ್ವಾಂಟೆಕ್ ನಿರ್ಗಮನ: ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ಮತ್ತು ಅಮೆರಿಕ ಓಪನ್ ಚಾಂಪಿಯನ್ ಕೊಕೊ ಗಾಫ್ ಅವರು ಮಹಿಳೆಯರ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಹೊರಬಿದ್ದರು. ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ಎಕಟೆರಿನಾ ಅವರು ಸೋಲಿಸಿದರು.

ರಷ್ಯಾದ ಎಕಟೆರಿನಾ ಅಲೆಕ್ಸಾಂಡ್ರೋವಾ ಅವರು 6-4, 6–2 ರಿಂದ ಶ್ವಾಂಟೆಕ್ ಅವರನ್ನು ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿರು. ಇದಕ್ಕೆ ಕೆಲವೇ ಗಂಟೆಗಳ ಮೊದಲು ಮೂರನೇ ಶ್ರೇಯಾಂಕದ ಗಾಫ್ ಕೂಡ ನಿರ್ಗಮಿಸಿದ್ದರು. ಎಕಟೆರಿನಾ ಕ್ವಾರ್ಟರ್‌ಫೈನಲ್‌ನಲ್ಲಿ ಜೆಸ್ಸಿಕಾ ಪೆಗುಲಾ ವಿರುದ್ಧ ಆಡಲಿದ್ದಾರೆ.

23ನೇ ಕ್ರಮಾಂಕದ ಕೆರೊಲಿನ್ ಗಾರ್ಸಿಯಾ 6–3, 1–6, 6–2 ರಿಂದ ಅಮೆರಿಕದ ಗಾಫ್ ಮೇಲೆ ಜಯಗಳಿಸಿ ಎಂಟರ ಘಟ್ಟ ತಲುಪಿದರು. ಗಾರ್ಸಿಯಾ ಮೊದಲ ಸುತ್ತಿನಲ್ಲಿ ಜಪಾನ್‌ನ ನವೊಮಿ ಒಸಾಕ ಅವರನ್ನು ಪರಾಭವಗೊಳಿಸಿದ್ದರು.

ಹಾಕಿ ಇಂಡಿಯಾ ವಾರ್ಷಿಕ ಪ್ರಶಸ್ತಿ ಪ್ರದಾನ 31ಕ್ಕೆ

ಪಿ.ಆರ್.ಶ್ರೀಜೇಶ್

ನವದೆಹಲಿ (ಪಿಟಿಐ): ಹಿರಿಯ ಗೋಲ್‌ಕೀಪರ್‌ಗಳಾದ ಪಿ.ಆರ್. ಶ್ರೀಜೇಶ್ ಮತ್ತು ಸವಿತಾ ಪೂನಿಯಾ ಅವರು ಕ್ರಮವಾಗಿ ಹಾಕಿ ಇಂಡಿಯಾದ 'ವರ್ಷದ ಆಟಗಾರ', ವರ್ಷದ ಆಟಗಾರ್ತಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ. ನಾಮನಿರ್ದೇಶನ ಮಂಗಳವಾರ ಆರಂಭವಾಗಿದ್ದು, ಇದೇ 31ರಂದು ಪ್ರಶಸ್ತಿ ಪ್ರದಾನ ಸಮಾರಂಭ ಇಲ್ಲಿ ನಡೆಯಲಿದೆ.

ಮಾಜಿ ನಾಯಕ ಶ್ರೀಜೇಶ್ ಮತ್ತು ಅನುಭವಿ ಆಟಗಾರ್ತಿ ಪೂನಿಯಾ ಸ್ಥಿರ ಪ್ರದರ್ಶನ ನೀಡುತ್ತಿದ್ದು, 'ವರ್ಷದ ಗೋಲ್‌ಕೀಪರ್' ಪ್ರಶಸ್ತಿಗೂ ನಾಮನಿರ್ದೇಶನಗೊಂಡಿದ್ದಾರೆ.

ಭಾರತ ಪುರುಷರ ತಂಡದ ಕಪ್ತಾನ ಹರ್ಮನ್‌ಪ್ರೀತ್ ಸಿಂಗ್ ಅವರು ಎರಡು ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ. 'ವರ್ಷದ ಆಟಗಾರ' ಜೊತೆಗೆ 'ವರ್ಷದ ರಕ್ಷಣಾ ಆಟಗಾರ' ಗೌರವಕ್ಕೆ ರೇಸ್‌ನಲ್ಲಿದ್ದಾರೆ.

ವರ್ಷದ ಆಟಗಾರ ಪ್ರಶಸ್ತಿ ₹25 ಲಕ್ಷ ಬಹುಮಾನ ಹೊಂದಿದೆ. ಗೋಲ್‌ಕೀಪಿಂಗ್ ಟ್ರೋಫಿ ಗೆದ್ದವರಿಗೆ ₹5 ಲಕ್ಷ ಜೇಬಿಗಿಳಿಯಲಿದೆ.

ಎಂಟು ವಿಭಾಗಗಳಲ್ಲಿ 32 ನಾಮನಿರ್ದೇಶಗಳನ್ನು ಪಟ್ಟಿ ಮಾಡಲಾಗಿದ್ದು, ಒಟ್ಟಾರೆ ಬಹುಮಾನ ಮೊತ್ತ ₹7.56 ಕೋಟಿ ಇದೆ ಎಂದು ಹಾಕಿ ಇಂಡಿಯಾ ಪ್ರಕಟಣೆ ತಿಳಿಸಿದೆ.



ಲೈಂಗಿಕ ಸಮಸ್ಯೆಗೆ ವಿಶ್ವದ ನಂಬರ್ 1 ಪರಿಹಾರ

ಶಿಶ್ನ ಚಿಕ್ಕದಾಗಿದೆಯೆ?, ವಕ್ರವಾಗಿದೆಯೆ? ಸೆಕ್ಸ್ ಸಮಯ ಹೆಚ್ಚಿಸಬೇಕೆ? ಚಿಂತಿಸಬೇಡಿ. ವಿಶ್ವದ ನಂಬರ್ 1 ಆಯುರ್ವೇದಿಕ್ ಔಷಧಿಯಿಂದ ಶಿಶ್ನದ ಗಾತ್ರ 7 ರಿಂದ 8 ಇಂಚು ಉದ್ದ ದಪ್ಪ ಹಾಗೂ ಲೈಂಗಿಕ ಸಮಯವನ್ನು ಹೆಚ್ಚಿಸಿಕೊಳ್ಳಿ, ಯಾವುದೇ ಅಡ್ಡ ಪರಿಣಾಮ ಇಲ್ಲ, ಲಕ್ಷಾಂತರ ಮಂದಿ ಸಂತುಷ್ಟರಾಗಿದ್ದಾರೆ.

ಸಂಪರ್ಕಿಸಿ :
08037836183